MICROFILMED BY
NEHRU MEMORIAL MUSEU
AND LIBRARY
TEEN MURTI HOUSE
NEW DELHI

REEL-16

SWADESHA BHIMANI

CONTD FROM:

17 DECEMBER 1937

D.V
1.4.80

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ।

ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ' ಮತ್ತೆ ವಿಶ್ವವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ಕೆರದಿ ಕುಳಿತರೆ । ಕೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೩೧. ಮಂಗಳೂರು ತಾ ೧೭ನೇ ದಿಶೆಂಬರ ೧೯೩೭ (17 12-'37) ಸಂಚಿಕೆ ೫೦

The Bombay Life Assurance Company, Ltd.

ESTD: 1908

A RECORD OF PROGRESS.

YEAR	NEW BUSINESS COMPLETED	PREMIUM INCOME	LIFE FUND	BUSINESS IN FORCE
1926	32,08,000	5,94,466	15,14,855	1,16,58,706
1930	59,97,500	9,83,867	28,00,970	2,06,68,328
1933	94,16,500	15,12,692	50,04,871	3,07,98,434
1936	1,36,00,180	26,76,274	82,69,451	5,14,38,205

The Company offers all the up to-date schemes of Assurances Family Safe Guard Policy a special feature

Application for agencies will be received from honest and respectable gentlemen

Organisers appointed with pay and allowance

Gentlemen with organising ability and who can guarantee Business need apply

KOCHIKAR BROTHERS,

Madras Branch Secretaries.

Post Box 337, Mount Road, MADRAS

Phone No 8945

Apply to any of the following Offices:-

Ottapalam	Central Station Road Trivandrum	Visveshwarapuram Circle, Bangalore City	Soumyalayam Puthiyara Calicut	Car Street Mangalore	Udipi S India	Charni Road, Bombay No 4

(ರಿಜಿಷ್ಟರ್ಡ್)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ದೂಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು!!

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

-ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು-

ನೆಂಕಿಂಗ್: ಒಂದು ದೃಶ್ಯ

ಅದು ಜಪಾನಿನ ವಶವಾದರೆ ಇಂಡಿಯಕ್ಕೇನು?

ಉತ್ತರ ಚೀನದ ರಾಜಧಾನಿಯದು ಆದ ಕ್ಕೀಗ ಜಪಾನು ಮುತ್ತಿರುವುದು ಚೀನೀಯರಿಗೆ ಉಳಿಗಾಲವಿಲ್ಲ. ಎತ್ತೆತ್ತಲೂ ಶತ್ರುಗಳು ಟಂಡು, ಗೇಸು, ಹತ್ತಿರದ ಕೋಟೆಗಳೆಲ್ಲ ರವರ ಕೈವಶವಾಗಿವೆ. ಇತರ ಯಾವ ಜನಾಂಗವಾದರೂ ಇಷ್ಟರಲ್ಲೇ ಪಲಾಯನಮಾಡಬೇಕಾಗಿರುವಷ್ಟು ಕಠಿಣವಾಗಿ ತೋಪುಗಳು ಸಿಡಿಗುಂಡುಗಳನ್ನು ಊರಲ್ಲೆಲ್ಲ ಚೆಲ್ಲುತ್ತಿವೆ. ಒಂದಿಷ್ಟು ಅಂಶವನ್ನು ಜಪಾನಿನ ಸೇನೆ ನುಗ್ಗಿ ಹಿಡಕೊಂಡಿದೆ. ಆದರೆ, ಹೆಜ್ಜೆ ಹೆಜ್ಜೆಗೂ ಘೋರ ಯುದ್ಧ ನಡೆಯುತ್ತಲೇ ಇದೆ ಇವತ್ತೈದು ತಾಸು ಕಾದಾಡಿಯೂ ಒಂದು ಮಾರು ದೂರಕ್ಕೆ ಸಹ ಜಪಾನು ಮುಂದಾದಿಲ್ಲ ಇನ್ನೂ ಹೆಚ್ಚಿನ ಸೇನೆ ಜಪಾನಿನ ಸೇನೆಗಳ ಬೆಂಬಲಕ್ಕೆ ಅತ್ತ ಓಡುತ್ತ ಬರುತ್ತಲಿದೆ

ಊರೊಳಗೆ ನುಗ್ಗಿದ್ದಾಗಿದೆ ಆದರೆ, "ನಮ್ಮನ್ನು ಜಪಾನಿನವರು ಗೆಲ್ಲುವುದೇನೋ ನಿಶ್ಚಯವೇ ಮದ್ದುಗುಂಡುಗಳ ಇದಿರಲ್ಲಿ ತೋಳುಬಲದಿಂದ ಎಷ್ಟು ಹೋರಾಡಬಹುದು" ಎಂದೇ ಚೀನದ ಸೈನ್ಯಾಧ್ಯಕ್ಷನು ಬರೆದ ಸಂದೇಶ ಚೀನದ ಸೇನೆಗಳು ಒಕ್ಕಟ್ಟಾಗಿದ್ದು, ಇನ್ನು ಪ್ರಾಣಭಯದಿಂದ ಶಿಸ್ತನ್ನು ಮರೆವಂತಿಲ್ಲ' ಪುನಃ ಜಪಾನು ಬೆಳಗ್ಗೆ ೧೦ ಘಂಟೆಗೆ ಸಿಡಿಗುಂಡಿನಾಟಕ್ಕೆ ತೊಡಗಿತು. ಚೀನಿಯರಲ್ಲಿ ಮೃತರ ಸಂಖ್ಯೆ ಧಾರಾಳ, ನಿಜ ಆದರೂ ಜಪಾನಿಗೆ ಒಂದೇ ಹೆಜ್ಜೆ ಮುಂದೆ ಕಾಲಿಡಲಾಗಲಿಲ್ಲ ಎಲ್ಲಿ ನೋಡಿದರೂ ಬೆಂಕಿ ಗೋಡೆಗಳಿಂದಲೂ ಹೊಗೆಯೇಳುತ್ತಿರುವುದೆಂದರೆ, ಎಂಥ ಜಗೆಯ ಉರಿಯನ್ನು ಹೊತ್ತಿಸುವ ಸಿಡಿಗುಂಡುಗಳೋ ನೋಡಿರಿ ಆಗಾಗ ಜಪಾನು ಸುಮ್ಮನಾಗುವುದುಂಟು ಎಂದರೆ ಹೊಡೆದ ಪೆಟ್ಟಿಗೆ ತಗಲಿದ ಪೆಟ್ಟನ್ನು ತಡೆದು ಮುಂದೆ ನುಗ್ಗಬೇಕಾಗಿರುವುದೇ ಕಷ್ಟವಾಗಿದೆ ಎನ್ನಬಹುದು

ನೆಂಕಿಂಗಿನಿಂದ ಹಿಂದೆಯೂ ಚೀನಿಯರು ಓಡದಂತೆ, ಹಿಂದಣಿಂದಲೂ ಸೈನ್ಯಗಳ ಬಹಳ ವೇಗವಾಗಿ ಓಡಿಬರುತ್ತಲಿವೆ ರಾತ್ರಿಯಲ್ಲಿ ಹೊಳೆದಾಟಿ ಜಪಾನು ಸೈನಿಕರು ನೆಂಕಿಂಗಿಗೆ ನಾಲ್ಕು ಕಡೆಯಿಂದಲೂ ಮುತ್ತಿಗೆ ಹಾಕಿದ್ದಾರೆ ಅತ್ತ ಟೋಕಿಯೋದಲ್ಲಿ (ಜಪಾನಿನ ರಾಜಧಾನಿ) ಎಲ್ಲ ಸನ್ನಾಹಮಾಡಿದ್ದು ನೆಂಕಿಂಗನ್ನು ಸ್ವಾಧೀನಪಡಿಸಿದ ವಾರ್ತೆ ಪ್ರಕಟಿಸುವ ಮಹೋತ್ಸವಕ್ಕೆ ತಯಾರಾಗಿದೆ ಇನ್ನು ಚೀನದಲ್ಲಿ ಹೊಸ ರಾಜ್ಯಭಾರ ವ್ಯವಸ್ಥೆಯನ್ನು ಮಾಡಿಯೇ ತನ್ನ ಆಧಿಪತ್ಯವನ್ನು ಸಂಸ್ಥಾಪನೆಮಾಡಬೇಕೆಂದೇ ಈಗ ಜಪಾನು ನಿರ್ಧರಿಸಿದೆಯಂತೆ ಮೊದಲು ಉತ್ತರ ಚೀನವೇ ಮಾತ್ರ ತನ್ನ ಅಂಕೆಯಲ್ಲಿರಬೇಕಾಗಿ ಜಪಾನು ಹೇಳುತ್ತಿತ್ತು ಈಗ, ಇಡೀ ಚೀನವೂ ತನ್ನದಾಗಬೇಕೆಂದು ಜಪಾನಿನ ಆಸೆ ಅದಾಗದೆ ಇದುವರೆಗಣ ಖರ್ಚನ್ನೂ ಸಾಲವನ್ನೂ ತುಂಬಲು ಬೇರೆ ಉಪಾಯವಿಲ್ಲ

ಜಪಾನು, ಇಟಲಿ, ಜರ್ಮನಿ, ಮೊಂಚುಕುವೊ, ಚೀನಾ ಇವೆಲ್ಲವು ಒಂದಾಗಿ ರಷ್ಯದ ಎದುರಾಗಿ ಪ್ರಚಂಡ ಬಲಶಾಲಿಗಳಾಗಿ ನಿಲ್ಲುವ ಸಿದ್ಧತೆಮಾಡಿಕೊಳ್ಳುವುದಕ್ಕಾಗಿಯೇ ಇಷ್ಟು ಪರಾಕ್ರಮ ಅದಕ್ಕಾಗಿ ಸ್ವಾತಂತ್ರ ರಕ್ಷಣೆಗಾಗಿರುವ ಎಲ್ಲ ಚೀನೀಯ ಸಂಸ್ಥೆಗಳನ್ನು ದಮನ ಮಾಡುವುದೇ ಜಪಾನಿನ ಉದ್ದೇಶವಾಗಿದೆ

ನೆಂಕಿಂಗನ್ನು ಜಪಾನು ವಶಪಡಿಸಿಕೊಂಡದರಿಂದ ಇಂಡಿಯಾಕ್ಕೇನು?

ಇಂಡಿಯದಲ್ಲಿ ರಾಷ್ಟ್ರೀಯತೆ ಹೆಚ್ಚಿ, ಸರ್ವರೂ ಒಂದಾಗಿ, ಒಂದೇ ಸಂಯೋಜಿತ ರಾಷ್ಟ್ರವಾಗಬೇಕೆಂದು ಪ್ರಯತ್ನಗಳಾಗುವಾಗ ಜಪಾನಿನ ವಿಜಯದ ನೆರಳು ಇತ್ತ ಬೀರುತ್ತ, ಒಂದು ಹೊಸ ಅವಲಕ್ಷಣವು ವಿದ್ಯಮಾನಗಳಲ್ಲಿ ಕಾಣಬರುವಂತಾಗಿದೆ ಇದೇ ಪರಿಯಾಗಿ ಜಪಾನು ಮುಂದುವರಿಯುತ್ತಿದ್ದರೆ, ಫ್ರೆಂಚರಿಗೆ, ಪೋರ್ಚುಗೀಸರಿಗೆ ಇಂಡಿಯದಲ್ಲಿ ಸ್ವಾಮ್ಯಗಳು ಇರುವಂತೆಯೇ, ಜಪಾನಿಗೂ ಮುಂದೆ ಇರುವಂತಾದೀತೆಂದ ಊಹಿಸುವವರಿದ್ದಾರೆ

ಬ್ರಿಟನ್ನು ಮತ್ತು ಜಪಾನುಗಳೊಳಗೆ ಒಂದು ಯುದ್ಧವು ಸಂಭವಿಸುವಂತಾದರೆ,— ಅದಾಗದೆಂದೇನೂ ಹೇಳಬರುವುದಿಲ್ಲ—ಇಂಡಿಯವು ಏನುಮಾಡಬಹುದು? ನಮ್ಮ ಹತ್ತಿರದ ಸಾಗರಪ್ರದೇಶದಲ್ಲಿ ಈ ಯುದ್ಧದ ಅವಾಂತರಕ್ಕೆ ಆರಂಭವಾದರೆ,— ಮುಂದೇನು ಮಾಡಬೇಕಾಗುವುದು?

ಜನಾಂಗಗಳ ಮಹಾಮತ, ಜನಾಭಿಪ್ರಾಯ ಎಂಬಿವುಗಳಿಗೆ ಮಹತ್ವವನ್ನೇನೂ ಎಣಿಸುವುದು ಅಗತ್ಯವೇ ಇಲ್ಲ ಇದನ್ನು ಎಲ್ಲರೂ ಹೊಗಳುವರು. ಅಷ್ಟೆ ಅಮೇರಿಕದಲ್ಲಿ ಸ್ವಾತಂತ್ರ್ಯದೇವಿಯ ಪ್ರತಿಮೆಯಿದೆ, ಅದು ಅಮೇರಿಕದ ಸ್ವಾತಂತ್ರ್ಯದ್ದಲ್ಲದೆ, ಇತರರ ಸ್ವಾತಂತ್ರ್ಯದ ವಿಗ್ರಹವೇ ಅಲ್ಲವಾಗಿದೆ ಹಾಗಲ್ಲದಿದ್ದಲ್ಲಿ, ಅಬಿಸೀನಿಯಾ, ಚೀನಾಗಳ ಪಾಡು ಹೀಗಾಗುತ್ತಿತ್ತೆ? ಪ್ರತಿಯೊಂದು ಜನಾಂಗವು ಆತ್ಮರಕ್ಷಣೆಗಾಗಿ ಮಾತ್ರ ಹೋರಾಡುತ್ತಲಿದೆ ಹೀಗಾಗಿ ನೈತಿಕ ಬೆಂಬಲವೆಂಬುದರ ಪ್ರಸ್ತಾಪಕ್ಕೆ ಎಡೆಯಿಲ್ಲವಾಗಿದೆ ನಮ್ಮ ರಕ್ಷಣೆಯ ಭಾರವು ನಮ್ಮ ಮೇಲೆಯೇ ಇರಬೇಕು —ಎಂದು ನಾವು ರಾಕರರ ಹೇಳುವುದಕ್ಕೆ ಕಾರಣವಿದೇ

ಜನಾಂಗ ಸಂಘದಿಂದ

ಇಟಲಿಯು ತಾ ೧೧ (ಡಿಲ್ಲಿ ದರ್ಬಾರಿನ ದಿನ) ರಲಿ ರಾಜಿನಾಮೆ ಕೊಟ್ಟಿತು ಜೋಕ ಹಿತೇಚ್ಛುಗಳಾಗಿದ್ದರೆಂಬ ಕೆಲವರ ಒಂದು ಗಾಢಿಸಿಕೆಯ ಜನಾಂಗ ಸಂಘವಿದ ಇತ್ತೀಚಿಗೆ ಗ್ರೀವವಾಗಿ ಲೋಕಕಂಟಕಗಳಾವುವನ್ನು ನಿವಾರಿಸಲಾರದೆ ಬಿದ್ದುದು ಇದನ್ನು ಇದಿರಾಡಿ ಸ್ವಾರ್ಥಸಾಧಕರಾಗಿ ಮದೊತ್ತಿದರ್ಪದಿಂದ ಮೆರೆದವರಲ್ಲಿ ಇಟಲಿಯ ಒಂದು ರಾಷ್ಟ್ರ, ಜಪಾನು ಈಗ ಮತ್ತೊಂದು ಜರ್ಮನಿ ಮೊದಲೇ ಹೊರಬಿದ್ದಿದೆ ಸ್ವಯಂಪರಾಕ್ರಮದಿಂದ ಬೇಕಾದಂತೆ ಇವು ಮೂರೂ ರಾಷ್ಟ್ರಗಳು ಮಾಡುವ ದರ್ಪಪ್ರದರ್ಶನವನ್ನು ಯಾರೂ ತಡೆವವರಿಲ್ಲೆಂದು ಸ್ಪೈಯಿನಿನಲ್ಲಾಗುವ ಯುದ್ಧವನ್ನು ಕಂಡರೇ ತಿಳಿಯುವುದು ಹೀಗಾಗಿ, ಮುಸ್ಸೊಲಿನಿ ತನ್ನ ಲಕ್ಷ ಜನರ ಕೂಟಕೂಡಿಸಿ, "ಇನ್ನೂ ಇಟಲಿಯು ಜನಾಂಗಸಂಘದಲ್ಲಿರಬೇಕೆ?" ಎಂದ ಕೇಳುತ್ತಲೇ ಬೇಡ"ವೆಂದು ಗರ್ಜನೆಯ ಉತ್ತರ ದೊರೆಯಿತು ಬ್ರಿಟಿಷ ಮಂತ್ರಿಗಳ ಮಂತ್ರವಾದದಿಂದಲಾದರೂ,— ಮುಸೊಲಿನಿಯ ಬುಸುಗುಟ್ಟುವಿಕೆಯನ್ನು ತಡೆಯಲಾಗಲಿಲ್ಲ ಅವನು ಈ ಮಂತ್ರವಾದದ ಮಾಯೆ ತಿಳಿದವನಂತೆ, ಅಗತ್ಯ ತೋರಿದಲ್ಲಿ, ಒಂದಾನೊಂದು ರಾಷ್ಟ್ರವು ತಮ್ಮ ಕೈಯನ್ನು ಬಿಟ್ಟಿತೆಂದು ದೂರಿಯೂ, ಜನಾಂಗಸಂಘವನ್ನು ತ್ಯಜಿಸಿದನು ಇನ್ನು ಜನಾಂಗ ಸಂಘದಲ್ಲಿ ಚೀನವಿದೆ, ಕಾಪಾಡುವವರಿಲ್ಲ ಅಮೇರಿಕ (ಯುನೈಟೆಡ್ ಸ್ಟೇಟ್ಸ್) ಮೊದಲೇ ಇಲ್ಲ ಇಂಗ್ಲೆಂಡು, ಫ್ರಾನ್ಸು, ರಷ್ಯಗಳಿವೆ, ಇವರು ಮೂವರೊಳಗೆ ಸಂಪೂರ್ಣ ಐಕ್ಯಮತ್ಯವಿರುವಂತೆ ಪ್ರಕಟವಾಗುತ್ತದೆ ನಿಜವಾದರೂ, ಒಳಗೆಲ್ಲ ಒಳಕರಾರುಗಳ ಪ್ರಭಾವದಿಂದ ಎಷ್ಟೆಲ್ಲ ಕುಂಟುಪಂಕ್ತಿಗಳ ಕರಾರುಗಳುಂಟೋ ತಿಳಿಯದು. ಅಂತೂ, ಇಟಲಿ ಹೊರಟಿರುವುದೇ ಅಲ್ಲದೆ, ಹಿಂದೆ ಜರ್ಮನಿಗಿದ್ದು ಇಟಲಿಗೆ ಬಿಟ್ಟುಕೊಟ್ಟಿದ್ದ ಜರ್ಮನ್ ವಸಾಹತು ಜುಬಾಲೀಂಡನ್ನು ಇಟಲಿಯೇ ತನ್ನ ಪೂರ್ಣ ಸಂತೋಷದಿಂದ ಜರ್ಮನಿಗೆ ಕೈವರ್ತಿಸಿಕೊಡಲೊಪ್ಪಿರುವುದು ಜರ್ಮನಿಯು ತನ್ನ ವಸಾಹತುಗಳು ಪುನಃ ತನಗೆ ಸಿಕ್ಕಿದ್ದಲ್ಲಿ, ಆರು ವರ್ಷಗಳ ತನಕ ಸುಮ್ಮನಾಗಿರುವೆನು ಎಂದು ಹೇಳುತ್ತಾ ಇಂಗ್ಲೆಂಡು ಫ್ರಾನ್ಸುಗಳಿಗೆ ತಿಳಿಸಿದಯಷ್ಟೆ ಈಗ ಇದು ಆಫ್ರಿಕದಲ್ಲಿ ಜರ್ಮನಿಗೆ ಕಾಲೂರಲು ಆಸ್ಪದಕೊಟ್ಟಂತಾಗಿ, ಇನ್ನು ಇಟಲಿ—ಜರ್ಮನಿಗಳೊಳಗೆ ಭೇದಭಾವ ಉಂಟಾಗಲು ಎಡೆಯಿಲ್ಲದಂತಾಯಿತು ಇತರ ವಸಾಹತುಗಳನ್ನು ಕೇಳಲೂ, ಆಕ್ರಮಿಸಲೂ ನಿಲ್ದಾಣವೊಂದು ಸಿಕ್ಕಿದಂತಾಯಿತು ಜರ್ಮನಿ—ಇಟಲಿಗಳ ಕೆಲವು ದ್ವೀಪಗಳನ್ನು ಜಪಾನು ಪೆಸಿಫಿಕ್ ಸಾಗರದಲ್ಲಿ ಕೊಡಲಿದೆಯಂತೆ. ಹೀಗಾದರೆ ಯುದ್ಧವಾಗದೆ ಇದ್ದರೂ, ಯುದ್ಧದ ಚಿಂತೆ ಮುಗಿಯದಂತೆ ಯೂರೋಪಿಗಾಗಿದೆ.

ಸುಖವಾದ ನಿದ್ರೆಯ ವಿಷಯವಾಗಿ ಖಾತ್ರಿಯಾಗಿರಿ.

ಸುಖವಾದ ಆರಾಮವುಳ್ಳ ನಿದ್ರೆಗ ಖಾತ್ರಿಯಾದ ದಾರಿ ಮಲಗುವ ಮೊದಲು ಓವಲ್ಟಿನ್ನನ್ನು ನಿಮ್ಮ ದಿವ್ಯಪಾನವಾಗಿ ಉಪಯೋಗಿಸುವುದು ಅದು ವಿಶ್ರಾಂತಿಯನ್ನು ತರುತ್ತದೆ ನರಗಳಿಗೆ ಹೆಚ್ಚು ಪೌಷ್ಟಿಯ ಆಹಾರವನ್ನುಂಟುಮಾಡಿ ನಿಮಗೆ ಬೆಳಿಗ್ಗೆ ಏಳುವಾಗ ಚುರುಕಾಗಿ ಚೇತನವುಳ್ಳವರಾಗಿ ಮಾಡುವ ಗಾಢವಾದ ಶಾಂತ ನಿದ್ರೆಯನ್ನುಂಟುಮಾಡುತ್ತದೆ

ಓವಲ್ಟಿನನ್ನು ಪ್ರಕೃತಿಯಲ್ಲಿರುವ ಅಮೂಲ್ಯ ಪದಾರ್ಥಗಳಾದ ಪಕ್ವ ಬಾರ್ಲಿ ಸತ್ವದಿಂದಲೂ ದನದ ನವ ಕೆನೆಹಾಲಿನಿಂದಲೂ ಮಾಡಿದಾಗಿದ್ದು ಶ್ರೇಷ್ಠ ವಿಟಮಿನ್‌ಗಳಿಂದ ಕೂಡಿದ್ದಾಗಿರುತ್ತದೆ ಓವಲ್ಟಿನ್ ಪುಷ್ಟಿಯುಕ್ತ ಸಂಪೂರ್ಣ ಗುಣದ ಆಹಾರವಾದ್ದರಿಂದ, ನಿಮಗೆ ಆದ ಆರೋಗ್ಯ, ಶಕ್ತಿ, ಸ್ಥೈರ್ಯವನ್ನುಂಟುಮಾಡಲಿಕ್ಕೆ ಬೇಕಾಗುವ ಎಲ್ಲ ಶಕ್ತಿವರ್ಧಕಗಳನ್ನು ಒದಗಿಸುತ್ತದೆ

ಶುದ್ಧ ಓವಲ್ಟಿನ್ನನ್ನು ಪಡೆಯಿರಿ ಗುಣದಲ್ಲಿಯೂ ಕ್ರಮದಲ್ಲಿಯೂ ಇದರ ಸರಿಸಮಾನವಾದದ್ದು ಯಾವುದೂ ಇಲ್ಲ ಕೃತಕ ಬದಲಿಯುಗಳನ್ನು ತ್ಯಜಿಸಿರಿ

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ಇದು ತಯಾರಿಕೆಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ

ಏಜಂಟರು —ಜೇಮ್ಸ್ ರೈಟ್ ಲಿಮಿಟೆಡ್, ಕಲ್ಕತ್ತಾ, ಕರಾಚಿ,
ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ ಸಿಗುತ್ತದೆ

OV/476

THE
Undertakes a
2½% per annum
For 2 Years
Auct

ಶಿಕ್ಷಣ ಈ ದರು ಕೊಂಗ್ರೆಸನ್ನು ಕಾರ್ಯ ಸ್ಕೊಟ್ಲೆಂಡಿನ ಮ ಆತನು ಕಾಲದ ಸಿ. ಎಸ್. ಅಭಿಸ

ರರಲ್ಲೊಬ್ಬನು ಹೀಗೆ ಕಾಂಗ್ರೆಸೆಂದರೆ ಹ್ಯೂಮ್ ಕೊಂಗ್ರೆಸೆಂದರೆ ಮದ್ಯಪಾನ ನಿಷೇಧ; ಅದುದರಿಂದ ಸ್ಕೊಟ್ಲೆಂಡಿನವರೆಂದರೆ ಮದ್ಯಪಾನ ನಿಷೇಧ ಎನ್ನಬರುವುದೆ? ಅಸಂಗತ. ಸ್ಕೋಟರು ಕೊಂಗ್ರೆಸೆಂದರೂ ಒಪ್ಪುವ; ಕೊಂಗ್ರೆಸು ಮದ್ಯಪಾನ ನಿಷೇಧ ಎಂದರೂ ಒಪ್ಪುವ. ಸ್ಕೋಟರು ಮದ್ಯಪಾನ ನಿಷೇಧಕ್ಕಾರಂಭಿಸಿದರೆ? ಅಲ್ಲ. ಆದುದರಿಂದ ಸ್ಕೋಟರು ಅದರ ಜನ್ಮಕಾಲದಲ್ಲಿ ಸಹಾಯ ಮಾಡಿದರು. "ಈ ಭಾಷಣಕರ್ತರು ಭೋಜನಾನಂತರ ಮಾತಾಡುಕ್ತ ಹೀಗೆಂದುದರಲ್ಲಿ, ನ್ಯಾಯಾನ್ಯಾಯ ರೀತಿನೀತಿಗಳನ್ನು ವಿಚಾರಿಸಲೇ ಬಾರದು. ಭೋಜನದ ನಂತರವಲ್ಲವೆ?

ಚುಟುಕು ವಿನೋದ

ರಾಮು: 'ಇಷ್ಟು ಚಿಂತಾಕ್ರಾಂತರಾಗಿದ್ದೀರೇಕೆ ಡಾಕ್ಟರರೆ?'

ಡಾಕ್ಟರ್: 'ನಾನು ಇಬ್ಬರು ಗಿರಾಕಿಗಳನ್ನು ಕಳಕೊಂಡೆನು.

ರಾಮು: 'ಇಬ್ಬರೂ ಒಮ್ಮೆಯೇ ಸತ್ತರೇ?'

ಡಾಕ್ಟರ್: 'ಛೆ ಮೂಢ, ಇಬ್ಬರೂ ಗುಣ ಹೊಂದಿರುವರು!

ESTD. 1906.

The Canara Banking Corporation, Udipi, Ltd.

(INCORPORATED IN BRITISH INDIA.)

STATEMENT OF AFFAIRS AS ON 30TH NOVEMBER, 1937.

CAPITAL & LIABILITIES		Rs.	a.	p.
1. Paid up Capital	Rs.	2,88,975	0	0
2. Reserve & other Funds	Rs.	3,03,812	7	3
3. Deposits	Rs.	40,99,497	2	5
4. Due to Bankers	Rs.	6,17,977	2	4
5. Bills per Contra	Rs.	1,01,973	1	7
6. Sundries	Rs.	2,60,015	11	0
	Total...	56,72,250	8	7

PROPERTY & ASSETS		Rs.	a.	p.
1. Landed Property, Premises etc.	Rs.	3,61,827	7	2
2. Authorised Investments	Rs.	27,99,699	12	2
3. Government & other securities	Rs.	20,03,734	6	2
4. Bills for Collection	Rs.	1,01,973	1	7
5. Sundries	Rs.	28,220	12	9
6. Cash on Hand & with Bankers at call	Rs.	3,76,795	0	9
	Total...	56,72,250	8	7

Office of the Corporation,
UDIPI
Dated 18-11-1937.

V. R. Kamath, B. A., LL. B.,
Ag. Manager.

ಉಡುಪಿ ಪರ್ಯಾಯ ಮಹೋತ್ಸವ.

ಉತ್ಸವಾರಂಭ 8-1-1938 ಸಂಕ್ರಮಣ ಉತ್ಸವ 13-1-1938 ಚೂರ್ಣೋತ್ಸವ 14-1-1938

ಏಳುವವರ ಉತ್ಸವ 16-1-1938 ಪರ್ಯಾಯ ಪಟ್ಟವೇರುವ ಶ್ರೀ ಫಲಿಮಾರು ಸ್ವಾಮಿಗಳ ಪರ್ಯಾಯ ಉತ್ಸವ 17-1-1938

ಪರ್ಯಾಯ ಪಟ್ಟದಿಂದ ಏಳುವವರು:—

ಶ್ರೀ ಪೇಜಾವರಮಠದ ಶ್ರೀ ವಿಶ್ವಮಾನ್ಯ ತೀರ್ಥ ಶ್ರೀ ಪಾದಂಗಳವರು

ಶ್ರೀ ಕೃಷ್ಣನ ಸನ್ನಿಧಿಯಲ್ಲಿ ನಿಮ್ಮ ಭಕ್ತಿ
ಯನ್ನು ಅರ್ಪಿಸಲು ಅತ್ಯುತ್ತಮ
ಸಂದರ್ಭ. ಇಲ್ಲಿ ಸಮಗ್ರ
ಕರ್ನಾಟಕದ ಭಕ್ತಶಿರೋಮಣಿಗಳು
ಬಂದು ಸೇರುವರು.

ಯಾತ್ರಾರ್ಥಿಗಳಿಗೆ ಸರ್ವಾನುಕೂಲತೆಯು ವ್ಯವಸ್ಥೆಗೊಳಿಸಿರುವದೆ.

ಪರ್ಯಾಯ ಪಟ್ಟವೇರುವವರು:—

ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರು.

ಉಡುಪಿಯಲ್ಲಿ ಉಳಕೊಳ್ಳಲಿಕ್ಕೆ ನಮ್ಮ ವಿಶ್ರಾಂತಿಗೃಹವಲ್ಲದೆ, ಮಠಗಳಲ್ಲಿಯೂ ಉಪಾಸಕರಲ್ಲಿಯೂ ಉಳಕೊಳ್ಳುವ ವ್ಯವಸ್ಥೆ ಮಾಡಲಾಗುವುದು.

ಧರ್ಮಸ್ಥಳ ಸುಬ್ರಹ್ಮಣ್ಯ, ಕೊಲ್ಲೂರು ಮತ್ತು ಗೋಕರ್ಣಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಲ್ಲಿ ಯಾತ್ರೆಯನ್ನು ಪೂರೈಸಲಿಕ್ಕೆ ಅನುಕೂಲವಿದೆ. ಪ್ರಯಾಣಿಕರ ಸೌಕರ್ಯದ ಕಡೆಗೆ ವಿಶೇಷ ಗಮನ ಕೊಡಲಾಗುವುದು.

ಜೊಯಿಂಟ್ ಮೆನೇಜರ್ಸ್,

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.
ಮತ್ತು
ಜೋಯಿಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

Use only 515 Red 365 & 232 White bar soap & be satisfied.
They are the best and foremost in the Market.
They are the unique products of our Province.
Many have tried & found satisfied Buy now and you will also be convinced.

Manufactured by:
The West Coast Soap Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ.
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agent:
Panchmal Krishnaya Shenoy & Son,
Bunder, MANGALORE

ಏಜನ್ಸ್—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (ತ.

ಗಲ ಶ್ರೇಷ್ಠತನದಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗ

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಶಿಲ್ಪದ, ಮಿಶ್ರ).

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-0.

ಕಸ್ತೂರಿ ಪ್ರಿಂಣಾ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಬೇಕಾಗಿಲ್ಲ. ಬಾಟ್ಲಿ 1ಕ್ಕೆ ರೂ. 1-8-0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್
ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ. ಗಿರಿಗಾಂವ ಮುಂಬಯಿ 4. ಕೆ. ಶ್ರೀನಿವಾಸ ಹೆಗ್ಡೆ ಮಾರ್ಕೆಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—
The Kerala Tea Syndicate,
PONANI—(S. Malabar.)

ಡೋಂಗರೇ ಇವರ ಬಾಲಾಮೃತ
ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾಗಿದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ.

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ.

ಸಿಗುವ ಸ್ಥಳ:—

ಸಾ ಮತ್ತು ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

ಶಿಕ್ಷಣ ವಿಮರ್ಶೆ

ವಾರ್ಧಾ ಕಮಿಟಿಯವರ ಶಿಫಾರಸುಗಳು

ಸಪ್ತ ವಾರ್ಷಿಕ ಯೋಜನೆ

ಯಾವುದೊಂದು ವೃತ್ತಿಶಿಕ್ಷಣದ ಮೂಲಕವಾಗಿ, ಅಥವಾ ಫಲದಾಯಕವಾದ ಹಸ್ತಶಿಕ್ಷಣದ ಮೂಲಕವಾಗಿ ವಿದ್ಯಾಭ್ಯಾಸವು ನಡೆದರೆ ಮಾತ್ರ ಅದು ಉತ್ತಮ. ವಿದ್ಯಾಲಯದಲ್ಲಿ ಕಲಿಸಲಾಗುವ ಇತರ ಎಲ್ಲ ವಿಷಯಗಳಿಗೂ ಇದು ಕೇಂದ್ರ, ಮೂಲ. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಏಳು ವರ್ಷಗಳ ತನಕವೂ ಮೂಲಶಿಕ್ಷಣವೂ, ಉಪಾಧ್ಯಾಯರಿಗೆ ಮೂರು ವರ್ಷಗಳ ತರಬೇತೂ ಇರಬೇಕೆಂದಾಗಿ ಸೂಚಿಸುವ ವರದಿಯನ್ನು, ವಾರ್ಧಾ ಶಿಕ್ಷಣ ವಿಮರ್ಶಕ ಸಮಿತಿಯ ಅಧ್ಯಕ್ಷರು ಬರೆದು ಮುಗಿಸಿರುವರು.

ಜನಜೀವನದ ರೀತಿ ನೀತಿಗತಿಗಳಿಗೆ ಹೊರಗಾಗಿರುವ ಈಗಣ ಶಿಕ್ಷಣಕ್ರಮವನ್ನು ಆಕ್ಷೇಪಿಸಿ, ಸುಧಾರಣೆ ಹೊಂದುತ್ತ ಮುನ್ನಡೆವ ದೇಶೀಯ ವಿದ್ಯಮಾನಗಳನ್ನು ಯಾವ ರೀತಿಯಲ್ಲೂ ಈಗಣ ಕ್ರಮವು ಹೊಂದಿಕೊಂಡಿಲ್ಲವೆಂದು ಸಾರಿ, ನಿರ್ಮಾಣಬುದ್ಧಿಗೆ ಅವಕಾಶಕೊಡದ ಜೀವನದ ಧ್ಯೇಯಕ್ಕೆ ಮುಟ್ಟದಂತೆ ಕೈಬಿಡುವ ಈಗಣ ಕ್ರಮವು ನಿಷ್ಪ್ರಯೋಜಕವೆಂದು ಖಂಡಿತ ಬರೆಯಲಾಗಿದೆ. ಹಾಗೆಂದು, ಯಂತ್ರಗಳಂತೆ, ಬುದ್ಧಿಶಕ್ತಿಯ ಉಪಯೋಗವಿಲ್ಲದೆ ಇಷ್ಟು ಕೈಗಾರಿಕೆ ಮಾಡುವುದಕ್ಕೇನೂ ಈ ನವೀನ ಪದ್ಧತಿಯಲ್ಲ, ಕೈಕೆಲಸದಿಂದ ಉತ್ತಮ ಶಿಕ್ಷಣ ಕೊಡಲಾಗುವುದೇ ಇಲ್ಲವೇ ಎಂಬುವನ್ನು ವಿಚಾರಿಸತಕ್ಕ ರುಜುಪಡಿಸತಕ್ಕದಾಗಿದೆ. ಆದುದರಿಂದ ಇಂತಹ ಕೆಲಸವು ಶಿಕ್ಷಣದ ಒಂದು ಪ್ರತ್ಯೇಕವಾದ ಅಂಗವಾಗತಕ್ಕದು, ಇತರ ಅಂಗಗಳಲ್ಲಿಯ ಸಮಸ್ತ ಬಗೆಯ ಶಿಕ್ಷಣವನ್ನು ಮುಗಿಸುವುದಾಗಬೇಕು. ಹಾಗೆಯೇ, ಸಹಕಾರ ಬುದ್ಧಿಯಿಂದ ನಿರ್ಮಾಣ ಕಾರ್ಯಕ್ಕೆ ಮೊದಲು ಆಲೋಚನೆ ನಿರ್ಣಯ ಮಾಡಿ, ತಪ್ಪಿಲ್ಲದೆ, ಜವಾಬ್ದಾರಿಯಿಂದ ವೃತ್ತಿಗಳನ್ನು ಕೈಕೊಳ್ಳುವ ಹಾಗಿರಬೇಕು.

ಈ ಬಗೆಯ ಶಿಕ್ಷಣಕ್ಕೆ ಕೈಹಚ್ಚುವವರು, ನೂತನ ಶಿಕ್ಷಣವು ಮೂಲಾಧಾರವಾಗಿಟ್ಟುಕೊಂಡಿರುವ ನಾಗರಿಕ ಜೀವನದಲ್ಲಿ ವಿಶ್ವಾಸವುಳ್ಳವರಾಗಿರಬೇಕು. ಇದರಿಂದ ತಮ್ಮ ಯೋಗ್ಯತೆ, ಗೌರವ, ಚಾತುರ್ಯ ಮೊದಲಾದುವನ್ನು ಪ್ರತಿ ವಿದ್ಯಾರ್ಥಿಯೂ ಅರಿತುಕೊಳ್ಳುವಂತಾಗುವುದು. ತಾವು ಇನ್ನೂ ಮುಂದೆ ಬರಬೇಕೆಂಬ ಆತುರವೂ ಸಮಾಜ ಸೇವಾಬುದ್ಧಿಯೂ ಸಹಕಾರದಿಂದ ಜೀವಿಸಬೇಕೆನ್ನುವ ಲವಲವಿಕೆಯೂ ಅವರಲ್ಲಿ ಇದರಿಂದ ಉಂಟಾಗುವುವು.

ಏಳು ವರ್ಷದಲ್ಲಿ ಕಲಿಯಬೇಕಾಗಿರುವ ವೃತ್ತಿಪಾಠಗಳನ್ನು ಹೊಂದಿಕೊಂಡು,—ನೂಲುವುದು, ನೇಯುವುದು, ಬಡಗಿಯ ಕೆಲಸ, ಕೃಷಿ, ಫಲಕೃಷಿ, ತೋಟಗಾರಿಕೆ, ಚರ್ಮಗಾರಿಕೆ, ಊರಲ್ಲಿ ಉಪಯುಕ್ತವಾಗುವಂತೆ ತೋರಿಬರುವ ಇತರ ವೃತ್ತಿಗಳು ಇವನ್ನು ನಿರ್ದೇಶಿಸಲಾಗಿದೆ.

ದೇಶಭಾಷೆಯನ್ನು ಉತ್ತಮವಾಗಿ ಕಲಿಸಲೇ ಬೇಕೆಂಬ ನಿರ್ಬಂಧವನ್ನಿಟ್ಟು,—ಗಣಿತ, ಸಾಮಾಜಿಕ ಜ್ಞಾನ, ವಿಜ್ಞಾನ, ಕೃಷಿವಿಜ್ಞಾನ, ಕ್ಷೇಮಾಭ್ಯುದಯ, ವ್ಯಾಯಾಮ, ನಕ್ಷತ್ರಜ್ಞಾನ, ರಸಾಯನ ಶಾಸ್ತ್ರ, ಚಿತ್ರಾಂಕನ, ಹಿಂದುಸ್ಥಾನಿ, ಗಾಯನ—ಇವುಗಳ ಮೂಲಜ್ಞಾನವಿರುವಂತಾಗಬೇಕೆಂದು ಶಿಫಾರಸು ಇದೆ.

ಶಿಕ್ಷಕರನ್ನೂ ಇವೇ ವಿಷಯಗಳಲ್ಲಿ ತರಬೇತು ಮಾಡುವರು.

ಬ್ರಿತಿಷ ವಾಣಿಜ್ಯ ಸಂಧಾನ

ಇಂಗ್ಲೆಂಡಿನಲ್ಲಿ ಎಲ್ಲ ಮುಗಿಯಿತು. ಸರ್ ಜಫ್ರುಲ್ಲಾ ಖಾನರು ಅಲ್ಲೇ ಉಳಿದು ನೋಡಿದರು. ಮಾತುಕತೆ ಮುಕ್ತಾಯ ಹೊಂದಲಿಲ್ಲ. ಖಾನರು ಪುನಃ ತಮ್ಮ ಕೆಲಸಕ್ಕೆ ಹಾಜರಾಗಲು ಹಿಂದೆ ಬಂದರು. ಇಂಡಿಯದಲ್ಲೇ ಮಾತು ಮುಂದರಿಸುವುದಾಗ ಆಲೋಚನೆಯಾಯಿತು. ಇಂಗ್ಲೆಂಡಿನಿಂದ ಅಲ್ಲಿನ ವರದಿ ಬಂತು. ಇತ್ತ ಡಾ. ಸುಬ್ಬರಾಯನರು ಮಂತ್ರಿಗಳಾದ ಬಳಿಕ, ಒಬ್ಬ ಬಿನ್ ಸರಕಾರೀ ಮೆಂಬರರು ಕಡಿಮೆ, ಈ ವಿಚಾರವನ್ನು ಮದ್ರಾಸು ಸರಕಾರಕ್ಕೆ ತಿಳಿಸಿದೆ, ಪಾರ್ಲಿಕಿಮಿಡಿಯ ಮಹಾರಾಜರನ್ನು ಮೆಂಬರರನ್ನಾಗಿ ಮಾಡಲಾಯಿತು. ಇತರ ಬೊಂಬಾಯಿ ಮೆಂಬರರೂ ಸೇರಿ, ಅಭಿಪ್ರಾಯ ಕೊಟ್ಟರು. ಒಟ್ಟಾವಾ ಕರಾರಿನ ಪಕ್ಷಪಾತಿಗಳು ಸಹ ಬ್ರಿತಿಷ ವಾಣಿಜ್ಯ ಇಲಾಖೆಯೊಡನೆ ಇಂಡಿಯದ ವಿಷಯ ಈ ಶರ್ತಗಳಿಗೆ ಒಪ್ಪುವ ಹಾಗಿಲ್ಲ. ಬ್ರಿತಿಷ ಇಲಾಖೆಯ ಅಭಿಪ್ರಾಯದಲ್ಲಿ ಇನ್ನು ಇಂಡಿಯವು ಬ್ರಿತಿಷರ ದಯಾ ದಾಕ್ಷಿಣ್ಯಗಳ ಮೇಲೆಯೆ ಆಧರಿಸಿದೆ ಎಂದೇ ಇದೆ ಎಂದು ತೋರುತ್ತದೆ. ಹಿಂದೀ ರೈತರ ಪರವಾಗಿ, ರೊಬರ್ಟ್ಸರೆಂಬ ಪಂಜಾಬಿನ ಯುರೋಪಿಯನರನ್ನು ನೇಮಿಸಿದ್ದರು. ಅವರೂ ಹಿಂದೀಯರ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದುದು ಇನ್ನೂ ವಿಚಿತ್ರವೆಂದು ಯುರೋಪಿಯನರಿಗೆ ತೋರಿತು! ಇದಕ್ಕೆಲ್ಲ ಕಾರಣವೇನು? ಬ್ರಿತಿಷರಿಗೆ ಒಟ್ಟಾವಾ ಕರಾರಿನಕ್ಕಿಂತಲೂ ಅಧಿಕವಾಗಿರುವ ರಿಯಾಯಿತಿಗಳು ಬೇಕಾಗಿವೆ! ಹೀಗಾಗಿ ಯಾರೂ ಹೊಸ ಬಗೆಯ ಶರ್ತಗಳಿಗೆ ಒಪ್ಪುವ ಹಾಗಿಲ್ಲ. ಸರಕಾರವು ಇದಕ್ಕೆ ವಿರುದ್ಧವಾಗಿ ಅಭಿಪ್ರಾಯ ಕೊಡಲಾರದು. ಸಂಪೂರ್ಣವೆಂದ ನಾಲ್ಕು ದಿನಕ್ಕೆ ಸಭೆ ನಡೆಯಿಸಿದ್ದಾರೆ. ಅಷ್ಟು [illegible] ಇನ್ನು ಬ್ರಿತಿಷ ಪ್ರತಿನಿಧಿಗಳು ಇಂಡಿಯಕ್ಕೆ ಒಪ್ಪುವರಂತೆ. ಏಕೆಂದರೆ, ಇಂಡಿಯದ [illegible] ಪ್ರತಿನಿಧಿಗಳ ಇಂಗ್ಲೆಂಡಿಗೆ ಯಾತ್ರೆ ವಿಫಲವಾಯಿತಲ್ಲ. ಆದರೆ, ಏಸೆಂಬ್ಲಿಯು ಇನ್ನು ಒಪ್ಪಂದ ಕಾಲ ಇವರ ವಿರೋಧವನ್ನು ಕಾದು ನೋಡಲಾರದು. ಇನ್ನೆಷ್ಟು ದಿನಕ್ಕೆ ಹೀಗೆಯೇ ಒಟ್ಟಾವಾ ಕರಾರನ್ನು ರದ್ದು ಮಾಡದೇ ಇರಬಹುದು? ಹೀಗಿನ ಒಂದು ಕರಾರು ಮಾಡಿರಿ ಇಲ್ಲವೆ ಕರಾರೇ ಬೇಡ ಎಂದು ಎಲ್ಲ ವಾಣಿಜ್ಯ ಸಂಘಗಳು ಸರಕಾರಕ್ಕೂ ತಿಳಿಸಿವೆ.

ಕ್ಷಯರೋಗ ನಿವಾರಣೆ

ನಮ್ಮ ವೈಸ್ರಾಯರ ಧರ್ಮಪತ್ನಿಯವರು ಕ್ಷಯರೋಗ ನಿವಾರಣೆಗಾಗಿ ಮಹಾಜನರ ಸಹಾಯವನ್ನು ಕೋರಿ ಪ್ರಕಟಿಸಿರುವ ಸಂದೇಶವು ತುಂಬಾ ಪರಿಣಾಮಕಾರಿಯಾಗುತ್ತಿರುವುದು ಸಂತೋಷಕರವೇ ಆಗಿದೆ. ಬೊಂಬಾಯಿ ಶಹರಿನಲ್ಲಿ 19000 ಕ್ಷಯರೋಗಿಗಳಿರುವರು! ಅವರಲ್ಲಿ ಒಬ್ಬೊಬ್ಬನು ಸಾಯುತ್ತಿರುವಂತೆ, ಹತ್ತು ಮಂದಿ ಹೊಸಬರಿಗೆ ಈ ರೋಗವು ಅಂಟುತ್ತಲಿದೆ. ಹತ್ತೊಂಬತ್ತು ಜಿಲ್ಲೆಗಳಲಿ (ಬೊಂಬಾಯಿ ಇಲಾಖೆ) ಆರು ಮಂದಿರಗಳು ಈ ರೋಗಿಗಳಿಗೆ ವಿಶ್ರಾಂತಿ (ಚಿಕಿತ್ಸೋಪಚಾರ)ಗಾಗಿವೆ! 20000 ಜನಸಂಖ್ಯೆಯುಳ್ಳಲ್ಲೆಲ್ಲ ಒಂದೊಂದು ಕ್ಷಯರೋಗ ಚಿಕಿತ್ಸಾಲಯವಿರಬೇಕಾಗಿದೆ. ಬೊಂಬಾಯಿ ಮುನಿಸಿಪಾಲಿಟಿಯು ಒಂದು ಕಾಲು ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷವೂ ಈ ರೋಗಿಗಳಿಗಾಗಿ ವ್ಯಯಿಸುತ್ತದೆ. ಇನ್ನು ಇಂಡಿಯದಲ್ಲಿ, ಕಳೆದ ಆರು ವರ್ಷಗಳಲ್ಲಿ ಕ್ಷಯರೋಗಿಗಳ ಸಂಖ್ಯೆ ಬಹಳ ಭಯಂಕರವಾಗಿ ಏರುತ್ತ ಬಂದಿದೆ. ಸೇಕಡಾ 25ರಂತೆ ಒಂದೇ ವರ್ಷದಲ್ಲಿ ಕ್ಷಯರೋಗದಿಂದ ಮರಣಗಳು ಹೆಚ್ಚಿವೆ. ರೋಗಕ್ಕೆ ಚಿಕಿತ್ಸೆ ಮಾಡುವುದಕ್ಕಿಂತ ರೋಗನಿವಾರಿಸಲೆತ್ನಿಸುವುದೇ ಮಹತ್ವದ ವಿಷಯವಾಗಿದೆ. ಹಿಂದೀಯರಿಗೆ ಹಿಡಿದಷ್ಟು ಬೇಗನೆ ಈ ರೋಗವು ಇತರರಿಗೆ ಸೋಂಕುವುದಿಲ್ಲವಂತೆ. ಎಷ್ಟೋ ಕಡೆ ಅದು ನಿತ್ಯಾರ್ಜಿತವಾಗುವುದು.—ಪರದಾಪದ್ಧತಿ, ಗಾಳಿಯ ಸಂಚಾರಕ್ಕೆ ಎಡೆಸಿಗದಂತಹ ಕೋಣೆಗಳಲ್ಲಿ ವಸತಿ, ವ್ಯಾಯಾಮಕ್ಕೂ ವಿನೋದಾದಿ ವಿಹಾರಕ್ಕೂ ಅವಕಾಶವಿಲ್ಲದಿರುವಿಕೆ—ಇವುಗಳಿಂದ ಸ್ತ್ರೀಯರನ್ನು ಈ ರೋಗವು ಬಲಿಗೊಳ್ಳುವಷ್ಟು ಧಾರಾಳವಾಗಿ ಪುರುಷರನ್ನು ನುಂಗುತ್ತಿಲ್ಲ. ಆದದರಿಂದಲೇ ಪ್ರತಿ ಜಿಲ್ಲೆಯೂ ಈ ವಿಷಯಕ್ಕೆ ಉತ್ತಮ ವ್ಯವಸ್ಥೆ ಮಾಡಲೇ ಬೇಕಾಗಿದೆ. ಆದುದರಿಂದ, ಯಾವುದೊಂದೇ ಪ್ರಾಂತ್ಯದ ಸಲುವಾಗಿ ದಾನಗಳೆಂದು ಕೊಡದೆ, ಭಾರತವಾಸಿಯರ ಕ್ಷೇಮಾಭಿವೃದ್ಧಿಗಾಗಿ ಶ್ರೀಮಂತರು ಈ ಸಂದೇಶವನ್ನು ತಿಳಿದು ಲೇಡಿ ಲಿನ್ಲಿತ್‌ಗೋರವರ ಉದ್ದೇಶವನ್ನು ಅಗತ್ಯವಾಗಿಯೂ ಪೂರಯಿಸುವವರಾಗಬೇಕು.

ವಿಮಾನಗಳಿಂದ ಸಿಡಿಗುಂಡುಗಳು

ರೈತರಿಗೆ ಇನ್ನು ಸಾಲಕೊಡುವವರ್ಯಾರು?

ವಿಮಾನಗಳಿಂದ ಸಿಡಿಗುಂಡುಗಳು

ಇಂಡಿಯದ ಮುಖ್ಯ ಬಂದರುಗಳಮೇಲೆ ಮಳೆಗರೆಯಬಹುದಾಗಿ ಭಾವಿಸಿ, ಎಲ್ಲೆಲ್ಲಿಯೂ ಎಚ್ಚರ ತೆಗೆದುಕೊಳ್ಳಲಾಗುತ್ತದೆಂದು ವಾರ್ತೆ. ಇದಕ್ಕೆ ಇಂಗ್ಲೆಂಡಿನ ಯುದ್ಧ ಮಂತ್ರಿಗಳ ಆಫಿಸಿನಿಂದಲೇ ಸೂಚನೆಯು ಇಲ್ಲಿಗೆ ತಲುಪಿ, ಹೀಗೆಲ್ಲ ವ್ಯವಸ್ಥೆ ನಡೆದು, ಜನಗಳಲ್ಲಿ ಗಾಬರಿಗೆ ಕಾರಣವಾಗಿದೆಯೋ ಎಂದೂ ಕೆಲವು ಪತ್ರಿಕೆಗಳು ಪ್ರಶ್ನಿಸಿವೆ. ಬ್ರಿಟಿಷ ಸರಕಾರವು ಎಂದಾದರೂ ಇತರ ರಾಜ್ಯಗಳೊಡನೆ ಯುದ್ಧ ಪ್ರಸಕ್ತವಾದಲ್ಲಿ, ಹಗೆಗಳು ಇಂಡಿಯದ ಮೇಲೆ ಗುಂಡು ಚೆಲ್ಲಬಹುದೆಂಬುದು ಊಹಿಸಲೇ ಬೇಕಾಗಿರುವ ವಿಷಯ. 'ಕಲ್ಕತ್ತವನ್ನು ನೋಡಿರಿ. ಬಂಗಾಳ ಆಖಾತವನ್ನು ದಾಟಿ ಯಾವ ಹಗೆಯೂ ಕಲ್ಕತ್ತವನ್ನು ಸುಲಭವಾಗಿ ಸುಟ್ಟು ಹಾಕಬಹುದಾಗಿದೆ. ಇದಕ್ಕೂ ಬಹಳ ಸಮಯಬೇಡ, ಕೆಲವೇ ನಿಮಿಷಗಳು ಸಾಕು. ಆದುದರಿಂದ, ಸಿಡಿಗುಂಡು ಬೆಂಕಿ ವಿಷವಾತಗಳಿಂದ ಜೀವರಕ್ಷಣೆ ಮಾಡುವ ಸುಲಭೋಪಾಯಗಳನ್ನು ಸರ್ವರಿಗೆ ಬೋಧಿಸಬೇಕು' ಎಂದು ಬಂಗಾಳ ಸರಕಾರದ [illegible] ಹೇಳಿರುವರು. ಎಂದರೆ ಎಷ್ಟು ಶಾಂತಿಗಾಗಿ ಪ್ರಯತ್ನಿಸಿದರೂ, ಯುದ್ಧವು ದೂರದಲ್ಲಿಲ್ಲ [illegible] ತಿಳಿದುಕೊಳ್ಳಬೇಕಾಗಿದೆ. ಇಟಲಿಯೂ ಜರ್ಮನಿಯೂ ಒಂದಾದಂದಿನಿಂದಲೂ ಈ [illegible] ಹೆಚ್ಚಿರಬಹುದು. [illegible] ಇಂಡಿಯದ ಬಂದರುಗಳಲ್ಲಿ ಹಗೆಗಳ ವಿಮಾನಗಳು [illegible] ಬಂದರುಗಳಿಂದ ಜನ ಮತ್ತು [illegible] ಸಹಾಯ ಏನೂ [illegible] ಸಿಗದಂತೆ [illegible] ಆಗಿದೆ.

ರೈತರಿಗೆ ಇನ್ನು ಸಾಲಕೊಡುವವರ್ಯಾರು?

ಎಂದು ಕೇಂದ್ರ ಮದ್ರಾಸು ಸಂಸ್ಥೆಗಳು ಹೊರಡಿಸಿರುವ ಮಸೂದೆಗೆ ಆಕ್ಷೇಪವೆತ್ತುತ್ತಿರುವರು. ಹಣವುಳ್ಳವನು ರೈತನಿಂದಲ್ಲದೆ ಅಧಿಕ ಲಾಭವನ್ನು ಎಂದಾದರೂ ಹಿಂದೆ ಪಡೆದದ್ದುಂಟೆ? ಪಡೆದ ನಷ್ಟವುಂಟೆ? ಧನಿಕನ ಹಣ, ಹೂಗಿದೆಯೋ? ಯಾರಾದರೂ ಸಾಲಕೊಡುವವನು ಇಲ್ಲವೆ? ರೈತರಿಂದ ಆತನಿಗೆ ಬಡ್ಡಿ ತಪ್ಪಿ ದೊರೆವುದಿಲ್ಲವೆಂದ ಬಳಿಕ, ಪಾತ್ರರು ಹೆಚ್ಚಿನ ಬಡ್ಡಿಗೆ ಅವನಿಂದ ಸಾಲ ಪಡೆಯುವರು? ಖಂಡಿತವಾಗಿ ದುಬಾರಿಯಷ್ಟಾದರೂ ಹಣ ವಸೂಲಾಗುವ ತನಕ ಜಮೀನಿನ ಭದ್ರತೆಯಿದೆ ಎಂದು ತಿಳಿದವನು, ಎಂತಹ ಭದ್ರತೆಯೋ ಇರಲಿ, ಅಸಲೂ ಸಿಗಲಾರದೆಂಬ ಭಯವಿರುವ ತನಕ, ಮತ್ತಾರಿಗೆ ಹಣ ಸಾಲಕ್ಕೆ ಕೊಡುವನು? ಮಾತ್ರವಲ್ಲ ಕೀರ್ತಿಯನ್ನು ಇಳಿಸಲೂ ಸರಕಾರವು ಆಲೋಚಿಸುತ್ತಿರುವಾಗ, ರೈತನಿಗೆ ಉಳಿತಾಯವು ಹೆಚ್ಚಿನ ಕಾರಣ, ಅವನು ಅಷ್ಟು ಸಾಲ ಮಾಡುವ ಅಗತ್ಯವೂ ಇರದು. ಕೆಲವರ್ಷಗಳಲ್ಲಿಯೆ ಶ್ರೀಮಂತರು ರೈತರನ್ನು ಕೂಡಿಸಿ, ಹೊಸ ಬಗೆಯ ಸಹಕಾರ ಸಂಘಗಳನ್ನು ಸ್ಥಾಪಿಸಿ, ತಮ್ಮ ಹಣತೆಯ ಸದ್ವಿನಿಯೋಗ ಮಾಡದೆ ಇರಲಾರರದಷ್ಟು ಅವಿವೇಕಿಗಳೇನೂ ಅಲ್ಲ.

ಸಿಂಗಾಪುರ ನೌಕಾಠಾಣ್ಯ

ನಿರ್ಮಾಣ ಮಾಡುವಾಗ, ಜಪಾನಿಗೆ ಇತ್ತ ಬರಲು ಎದುರಿಸುವುದಕ್ಕೆಂದು ರಚಿಸಲಾಗಿತ್ತು. ಅದಕ್ಕಾಗಿ ವ್ಯಯಿಸಿದ ಹಣವು ಅಪಾರ. ಈಗ? ಅದು ಜಪಾನಿನ ಇದಿರಲ್ಲಿ ಏನೇನೂ ಪ್ರಯೋಜನವಾಗುವಂಥದಲ್ಲವೆಂದೇ ಅಭಿಪ್ರಾಯವಾಗಿದೆ. ಸಿಯಾಮ್ ರಾಜ್ಯವು ಅಗಲ ಕಿರಿದಾದಲ್ಲಿ, ಸುಲಭವಾಗಿ ಜಪಾನಿನ ವಾಯುನಾವೆಗಳು ದಾಟಿದರೆ, ಸಿಂಗಾಪುರವು 300 ಮೈಲಿಗೆ ಕಡಿಮೆಯಿಲ್ಲದ ದೂರದಲ್ಲಿ ನಿಂತು ನೋಡಬೇಕಾಗುವುದು. ರಂಗೂನ್, ಕಲ್ಕತ್ತ, ಮದ್ರಾಸುಗಳನ್ನು ನಿರಾತಂಕವಾಗಿ ಸುಡಬಹುದು. ಈಗ, ಆದೇ ಸಿಯಾಮಿನ ಇಕ್ಕಟ್ಟಿನ ಭೂಕಂಠವನ್ನು ಜಪಾನಿನ ಹಣದಿಂದ ಕಡಿದು ಕಾಲುವೆ ತೋಡುತ್ತಾರೆಂದೂ ತಿಳಿದು ಬರುತ್ತದೆ. ಹಾಗಾದರೆ, ಹಡಗುಗಳೂ ಇತ್ತ ಸುಲಭವಾಗಿ ಬರಲು ಶಕ್ಯವಾಗುವುದು. ಸಿಂಗಾಪುರದ ಅಪಾರ ಖರ್ಚಿನಿಂದಾದ ನೌಕಾಠಾಣ್ಯವು ವ್ಯರ್ಥವಾಯಿತು. ಅದಕ್ಕಾಗಿ, ಸಿಲೋನಿನ ಉತ್ತರದಲ್ಲಿರುವ ತ್ರಿಕೋಮಲ ಬಂದರನ್ನು ಈಗ ಬಲಪಡಿಸುತ್ತಾರೆ. ಅಲ್ಲಿಂದ ವಿಮಾನಗಳು ನಡೆಯುತ್ತವೆ. ಇದಕ್ಕೆ ಪುನಃ ಎರಡನೆ ಸಿಂಗಾಪುರವಾಗುವ ಭಾಗ್ಯ ಬರಬೇಕಾದದ್ದರಿಂದ, ಇದರ ಖರ್ಚಿಗೆ ಹಣವೆಲ್ಲಿಂದ? ಕರಾಚಿ ಕಲ್ಕತ್ತಗಳಲ್ಲಿ / ಸಾರತಮ್ಯ, ಸಿಡಿಗುಂಡುಗಳ [illegible], ಆ ಬಹುದೊಡ್ಡ ಹಣವನ್ನು ಸುಲಭವಾಗಿ ಕೊಡಿಸಬಹುದು [illegible] ಎಂದು ಕೆಲ ಪತ್ರಿಕೆಗಳು ಬರೆಯುತ್ತಲಿವೆ. ಇದೂ ಅಲ್ಲದೆ [illegible] ಕಲ್ಕತ್ತದಿಂದ 200 ಮೈಲು ದೂರದಲ್ಲಿ ಕೆಲವು ಕಿರಿದಾದ ದ್ವೀಪಗಳು ಅಲ್ಲಲ್ಲಿ ಇವೆ. ಅಲ್ಲಿ ಹಗೆಗಳ ವಿಮಾನಗಳು ಠಾಣ್ಯ ರಚಿಸಿಕೊಂಡು, ಅಲ್ಲಿಂದ ಒಂದು ತಾಸಿನೊಳಗಾಗಿ ಸಾಗರ ದ್ವೀಪಕ್ಕೆ ಹಾರಿ, ಬಂದು, 2½ ತಾಸುಗಳೊಳಗೆ ಕಲ್ಕತ್ತವನ್ನು ಮುಗಿಸಿ ಹೋದರೂ ಹೋಗಬಹುದಾಗಿದೆ.

ನೀಲಪ್ರತಿಮೆಯ ನಂತರ

ಕರ್ನೆಲ್ ನೀಲನ ಪ್ರತಿಮೆಯ ವಿಚಾರದಲ್ಲಿ ಪತ್ರಿಕೆಗಳು ಬರೆಯುತ್ತವೆ. ಈ ಪ್ರತಿಮೆಯ ಬುಡದಲ್ಲಿ ಟಿಪ್ಪುಸುಲ್ತಾನನ ಮಕ್ಕಳನ್ನು ಸೆರೆ ಹಿಡಿದಿರುವ ಚಿತ್ರವಿದೆ. ಅದು ಮೊದಲು ಬಹಿರಂಗವಾದೊಂದು ಸ್ಥಳದಲ್ಲಿತ್ತು, ಆಗ ಮುಸ್ಲಿಮರು ಆಕ್ಷೇಪವೆತ್ತಿದರು. ಪ್ರತಿಮೆಯು ಅಂತರಂಗ ಪ್ರದೇಶಕ್ಕೆ ವರ್ಗವಾಯಿತು. ನೀಲಪ್ರತಿಮೆಯು [illegible] ಘುಮ್ಮಿನಲ್ಲಿ ಬಹುಮಾನ ಹೊಂದಿ ಬಾಳುವುದು. ನೀಲನು ಲಕ್ನೌಗೆ ಸಿಪಾಯಿಯರ ದಂಗೆ ನಿಲ್ಲಿಸಲು ಹೋದವನು. ಅವನು ದಂಗೆ ನಿಲ್ಲಿಸಲು ಮಾಡಿದ ಸಾಹಸವು ಅಗಾಧ, ಯುರೋಪಿಯ ಇತಿಹಾಸಜ್ಞರ ಲೇಖನಗಳಲ್ಲೇ ಅವನ ವಿಷಯ ಬರೆದ ವೃತ್ತಾಂತವನ್ನೋದಿದರೆ ಕೆಲವು ದಿನ ನಿದ್ದೆ ಬಾರದಾಗಿದೆ. ಇಂಗ್ಲೆಂಡಿನಿಂದ ಈ ಪ್ರತಿಮೆಯು ಮದ್ರಾಸು ಬಂದರಕ್ಕೆ ಬಂದಾಗ ಕೂಲಿಗಳು ಬಂದರದಲ್ಲಿ ಅದನ್ನು ಮುಟ್ಟಲೊಪ್ಪಲಿಲ್ಲ. ಅಷ್ಟು ಪರಿಶುದ್ಧವಾದುದದು!

ದೇವಾಲಯಗಳಲ್ಲಿ ಸಾಂಪ್ರದಾಯ ಇರುವುದೇ?

'ದೇವಾಲಯಗಳಿಗೆಸಂಭಂದಪಟ್ಟ ಪ್ರತಿಯೊಂದು ವಿಧಿಯಲ್ಲಿ ಬದಲಾವಣೆಗಳಾಗಲಿಲ್ಲವೆಂದು ಕೆಲವರ ನಂಬಿಕೆ. ಆದರೆ ಅದು ಅವರ ಅಜ್ಞಾನವನ್ನು ಸೂಚಿಸುತ್ತದೆ.

'ದೇವಾಲಯದಲ್ಲಿ ಪ್ರತಿದಿನವೂನೈವೇದ್ಯಕ್ಕಾಗಿ ಉಪಯೋಗಿಸಲಾಗುವ ಪರದೇಶಿ ಸಕ್ಕರೆಯು ಎಲುಬಿನ ಸಹಾಯದಿಂದ ಸಿದ್ಧವಾದುದಾಗಿರುತ್ತದೆ ದನಕರುವಿನ ರಕ್ತದಿಂದ ತೆಗೆಯಲಾದ ಒಂದು ಪದಾರ್ಥವನ್ನು ಕೆಲವು ಬಾರಿ ಉಪಯೋಗಿಸುವುದುಂಟು. ಪರದೇಶಿ ನೂಲಿಗೆ ಪ್ರಾಣಿಯ (ದನದ) ಕೊಬ್ಬನ್ನು ಹಚ್ಚುವ ಪದ್ಧತಿಯಿದೆ

'ಹೀಗಿರುವಾಗ ಪ್ರಾಣಿಯ ಕೊಬ್ಬನ್ನು ಸ್ವೀಕರಿಸುವ ವಿಗ್ರಹಗಳುಳ್ಳ, ಕೊಬ್ಬಿನಿಂದ ಕೂಡಿದ ವಸ್ತ್ರಗಳನ್ನು ಧರಿಸಿದ ವಿಗ್ರಹಗಳುಳ್ಳ ದೇವಾಲಯಗಳಲ್ಲಿ ಪವಿತ್ರತೆಯಿರುವುದೆ?'' ಎಂಬುದಾಗಿ ಡಾ| ಸಿ ನಾರಾಯಣ ಮೆನೆನ್ ರೆಂಬ ಮಹನೀಯರು ಹರಿಜನ ಪತ್ರಿಕೆಯಲ್ಲಿ ಒಂದು ಲೇಖನದಲ್ಲಿ ಪ್ರಶ್ನಿ

ರೈತರಿಗೆ ವಿಶ್ವಕವಿ ರಾಗೂರರ ಭೋದನೆ

ಬಂಗಾಳದ ಬೊಲ್ಪುರದಲ್ಲಿ ಜರ... ಜಿಲ್ಲಾ ಪರಿಷತ್ತಿಗೆ ಬಂದ ಅನೇಕ ... ರೈತರು, ಮಜೂರರು, ಹತ್ತಿರವಿರುವ ಶಾಂತಿನಿಕೇತನಕ್ಕೆ ತೆರಳಿ ವಿಶ್ವಕವಿ ರವೀಂದ್ರರ ಭೇಟಿ ಮಾಡುವವರಾದರು. ಅವರನ್ನು ಸಂಭೋಧಿಸಿ, ಕವಿಗಳು ಈ ಕೆಳಗಿನ ಭೋದನೆಯನ್ನು ಮಾಡಿದರು.

"ರಾಜಕೀಯ ಪರಿಷತ್ತುಗಳಲ್ಲಿ ನೀವು ಭಾಗಿಗಳಾಗುವಾಗ್ಗೆ, ನೀವು ರಾಷ್ಟ್ರದ ಬಲವೆಂಬುದು ನಿಮ್ಮ ಸ್ಮರಣೆಗೆ ಬರಲಿ ಒರೆ ಭಾಷಣಗಳನ್ನು ಲಾಲಿಸದಿರಿ ನಿಮಗೆ ಅಲ್ಲಿ ಹೆಚ್ಚು ಅರುಹಲಿದೆ ನೀವು ಅರುಹಿದುದನ್ನು ಅಲ್ಲಿ ನೆರೆದ ನಾಯಕರು ಲಾಲಿಸಬೇಕು ನಿಮ್ಮ ಮಾತುಗಳಿಗೆ ಮನ್ನಣೆಯು ದೊರಕಬೇಕು ನಿಮಗೆ ತಿಳಿಯಲು ಅಸಾಧ್ಯವೆನಿಸುವ ಭಾಷೆಯಲ್ಲಿ ನಾಯಕರು ಮಾತನಾಡಿದರೆ, ನೀವು ಒಡನೆ ನಿಂತ ಅವರ ಭಾಷಣವು ತಿಳಿಯಲಿಲ್ಲವೆಂಬುದ್ದಾಗಿ ಅವರಿಗೆ ತಿಳಿಸಬೇಕು, ನಿಮ್ಮ ಸರಳ ಭಾಷೆಯಲ್ಲೆ ಅವರು ಮಾತನಾಡುವಂತೆ ಅವರಿಗೆ ಭೋಧಿಸಿರಿ ನಿರ್ಭಯವಂತರಾಗಿರಿ''

ರಶ್ಯಾದ ಮಹಾ ಚುನಾವಣೆ ಕಾಲದಲ್ಲಿ

ಸೊವಿಯಟ್ ರಶ್ಯಾದ ಮಹಾಚುನಾವಣೆಯು ಈಗ ನಡೆಯುತ್ತಿದೆ ತಾಯಂದಿರು ಮತವೀಯಲು, ತಮ್ಮ ಮಕ್ಕಳನ್ನು ಬಿಟ್ಟು ಹೋಗುವರೆ ದಾದಿಯರಿಂದ, ಆಟದ ಸಾಮಾನು ಇತ್ಯಾದಿಗಳಿಂದ ಕೂಡಿದ ಒಂದು ಸೌಕರ್ಯದ ಏರ್ಪಾಡುಮಾಡಲಾಗಿದೆ



ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ' ಸೇವನೆ ಬಿಟ್ಟರೆ ಬೇರೆದಾರಿಯಿಲ್ಲ ಗರ್ಭಾಶಯ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಜೀವಿಸುವಂತೆ ಮಾಡುವುದೆಂದರೆ

'ಲೋಧ್ರ

ಕೇಸರಿಕುಟೀರಂ ರಾಯಪೇಟೆ ಮದ್ರಾಸು

ಮಂಗಳೂರು ಪ್ರತಿನಿಧಿ: ಪೋಪ್ಯುಲರ್ ಸ್ಟೋರ್ಸ್ ರಥಬೀದಿ

'DILROZ' Regd

'Dil Roz' is a sure cure for Oriental sores (local) sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE.

ಆರೋಗ್ಯಕ್ಕೆ ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ
ಇವುಗಳು ಇರಬಲ್ಲವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ
ವೀರ್ಯವೃದ್ಧಿಗೆ,
ಖಂಡಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ—

ಜೀವಾಮೃತ

ಆಯುರ್ವೇದಾಶ್ರಮಂ,
೧೫೧, ಗೋವಿಂದಪ್ಪನಾಯಕ್ ಬೀದಿ,
ಜಿ ಟಿ ಮದ್ರಾಸು

ದ ಕ ಜಿಲ್ಲಾ ಏಜಂಟರು.
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

Ready for sale !

SHARADA DIARY 1938

ARE ISSUED IN THREE SIZES

Big size 0-8-0. Small size 0-4-0.

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

Interleaved big size DIARIES useful for Banks & Lawyers

ARE AVAILABLE AT 1-2-0 PER COPY

Sharada Press, Mangalore, S. Canara.

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

Use the soaps
KNOWN ALL OVER
WISICO'S,
MINAR
&
TAJAMAHAL 'Red'
Bar Soaps.
POPULAR IN THE MARKET
Sole Distributer-
P. G. KAMATH,
Kashmir House,
Marnamikatta, MANGALORE

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0(ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P O. Peridepi (ನೆಲ್ಲೂರು ಜಿ.)

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವ ಸೇವೆಯನ್ನು ಮಾಡುತ್ತಿದೆ ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದಲ್ಲ ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ಬಡಬಡಿಕೆ, ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ ... ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲೆ ನಿಲ್ಲುವುವು ... ಇಲ್ಲದಿರುವಿಕೆ, ಅಪಸ್ಮಾರ ಒಮ್ಮೆಲೆ 10 ನಿಮಿಷಗಳಲ್ಲಿ ಗುಣಯವಾಗುತ್ತದೆ ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ

C L Namawala,
Palace Road, BARODA

ಚಿತ್ರಮಯ ಜಗತ್ತು

ಲೇಖಕ:— ಬಿ. ರಾಘವೇಂದ್ರರಾವ್, ಮಂಗಳೂರು

ಈ ಕಥೆಯನ್ನು ವೈಯ್ಯುಕ್ತಿಕ ಸಮಾಜ ದೃಷ್ಟಿಯಿಂದ ಬರೆದದ್ದಲ್ಲ. ಹಿಂದೂ ಸಮಾಜದ ಉಚ್ಚನೀಚವೆಂಬ ಬೇಧಾಬೇಧಗಳನ್ನು ಹೋಗಲಾಡಿಸಲು ಇದು ಸಹಾಯಕವಾದ ಕಾರಣವನ್ನು ಪ್ರತಿ ಒಬ್ಬರಲ್ಲಿಯೂ ಮೂಡಿಸುವಂತೆ ಮಾಡುತ್ತದೆಂದು ದೃಢವಾಗಿ ನಂಬಿ ಬರೆದದ್ದಾಗಿರುತ್ತದೆ. ಪ್ರತಿ ಸಮಾಜದ ಆಗುಹೋಗುಗಳದೊಂದು ಚಿತ್ರ:—

ಮಿಸ್ಟರ್ ಕಿಚಾಪತಿ ಭಟ್ಟರೆಂದರೆ ಅವರು ವಾಸಮಾಡುವ ಸಿದ್ಧಾಪುರ ಗ್ರಾಮ ನಿವಾಸಿಗಳೆಲ್ಲರಿಗೂ ಗೊತ್ತು. ಬಾಡಿಗೆ ಮನೆಯಲ್ಲಿ ವಾಸಮಾಡುತ್ತಿರುವ ಅವರು, ಕೆಲವು ವರ್ಷಗಳ ವರೆಗೆ ಮನೆ ಧನಿಯರಿಗೆ ಬಾಡಿಗೆಯನ್ನು ಆಗಾಗ್ಗೆ ಸಲ್ಲಿಸುವ, ಬಾಡಿಗೆಯನ್ನು ಬರುವ ತಿಂಗಳಲ್ಲಿ, ಬರುವ ವಾರದಲ್ಲಿ, ಬರುವ ಸೋಣ, ಕನ್ಯೆ, ಆ ಸಂವತ್ಸರ, ಈ ಸಂವತ್ಸರ ಮುಗಿದೊಡನೆ, ಮಾವಿನ ಮರಕ್ಕೆ ಹಣ್ಣಾದೊಡನೆ, ಎಂದು ಮುಂತಾಗಿ ನೆವನಗಳನ್ನು ಕೇಳಿದ ಆ ಧನಿಯರು ಬೇಸರಪಟ್ಟು, ನಮ್ಮ ಈ ಮಿಸ್ಟರ್ ಕಿಚಾಪತಿ ಭಟ್ಟರಿಗೆ ಬುದ್ಧಿ ಕಲಿಸುತ್ತೇನೆಂದು ಅವರನ್ನು ಕೋರ್ಟಿಗೆ ಎಳೆತಂದರು. ಮಿಸ್ಟರ್ ಕಿಚಾಪತಿ ಭಟ್ಟರು ಇದಕ್ಕೆ ಬೆದರಲಿಲ್ಲ. ನನ್ನ ಪೂರ್ವಿಕರು ಇವರ ಪೂರ್ವಿಕರಿಗೆ ಒಂದಾನೊಂದು ಕಾಲದಲ್ಲಿ, ಒಂದಾನೊಂದು ಸಮಯದಲ್ಲಿ ಒಂದಾನೊಂದು ಸಹಾಯ ಮಾಡಿದ ಕಾರಣದಿಂದಾಗಿ ನಾನು ವಾಸಮಾಡುತ್ತಿರುವ ಈ ಮನೆಯನ್ನು ನಮ್ಮ ಕೀಳಿಗೆಯವರು ವಂಶ ಪಾರಂಪರ್ಯವಾಗಿ ಧರ್ಮಾರ್ಥ ಅನುಭವಿಸಬಹುದೆಂದು ತಾಮ್ರಶಾಸನದ ಆಧಾರದಿಂದ ಮನೆಯನ್ನು ತಪ್ಪುದಾರಿಯಿಂದ ಅನುಭವಿಸುತ್ತಿರುವ ಕಿಚಾಪತಿ ಭಟ್ಟರು. ಅಂದಿನಿಂದ ಬಳಿಕ ಶ್ರೀಪತಿ ಭಟ್ಟರೆಂಬ ಅವರ ಹೆಸರು ಕಿಚಾಪತಿ ಭಟ್ಟರೆಂದು ಕರೆಯುವಂತಾದದ್ದೊಂದು ವಿಶೇಷವೆ?

ಶ್ರೀಪತಿ ಭಟ್ಟರ ಕಿಚಾಪತಿಗಳು ಅಷ್ಟಿಷ್ಟಲ್ಲ. ಎಂತಹ ಬುದ್ಧಿವಂತ ವಕೀಲರಾದರೂ ಇವರಿಗೆ ಹೆದರುತ್ತಿದ್ದರು. ದಸ್ತಾವೇಜು ಬರೆಯುವದರಲ್ಲಿ ಅಗ್ರಗಣ್ಯರು. ಒಬ್ಬರ ಹೆಸರನ್ನು ಇನ್ನೊಬ್ಬರಿಗೆ ವರ್ಗಾಯಿಸುವದರಲ್ಲಿ ಪರಿಣತರು. ನೋಡಿದವರ ಕನ್ನೆಯು ಮದುವೆಯಾಗದೆ ಉಳಿದಿದ್ದಳು ಮಂತ್ರ ಹೇಳುವಾಗಲೂ ನೋಡುವ ಬ್ರಾಹ್ಮಣರು ಕನ್ಯಾದಾನದ ಮಂತ್ರ ಸೇರಿಸೇನು? ಎಂದೊಡನೆ ಕೂಡಲೆ ಪಾಪ ಎಂದು ಉತ್ತರ ಕೊಡುವ ಬುದ್ಧಿ ಅವರದು. ಕಾಫಿ ಹೋಟ್ಲುಗಳಲ್ಲಿ ಹಣ ತಾನು ಕೊಡುತ್ತೇನೆಂದು ಎಲ್ಲರೂ ಕಾಫಿ ಕುಡಿದು ಹೊರಟು ಹೋದ ಮೇಲೆ ತನ್ನೊಬ್ಬನ ಹಣಕೊಟ್ಟು ಬಾಕಿಯವರು ಕಾಫಿ ಕುಡಿದ ಹಣವನ್ನು ತಾನು ಕೊಡುವದೇಕೆ? ನನ್ನದು ಕೊಡುತ್ತೇನೆಂದು ಮಾತ್ರ ಹೇಳಿದ್ದು ತಾನು ಎಂದು ವಾದಿಸುವವರು ಅವರು. ನಾಟಕ ಗೃಹಗಳಲ್ಲಿ ಟಿಕೇಟು ಯಾ ಪಾಸುಗಳಿಲ್ಲದೇನೇ ಇವರಿಗೆ ಮತ್ತು ಇವರ ತಂಡದವರಿಗೆ ಪ್ರವೇಶ ಸಿಗದಿದ್ದರೆ ಅಭಿನಯಕರು ... ಅಷ್ಟೆಲ್ಲ ಚಾತುರ್ಯವು ಅವರಲ್ಲಿತ್ತು.

ಸಿದ್ಧಾಪುರದಲ್ಲಿಯೊಂದು ಮಠ. ಮಠದಲ್ಲೊಬ್ಬ ಸ್ವಾಮಿಗಳು. ಮಠಕ್ಕೆ ಆಸ್ತಿಪಾಸ್ತಿಗಳೇನೂ ಕಡಮೆಯಿರಲಿಲ್ಲ. ಭೂರಿಬ್ರಾಹ್ಮಣ ಸಂತರ್ಪಣೆಯು ಮಠವೆಂದಾದ ಮೇಲೆ ಹೇಗೂ ನಿರಾತಂಕವಾಗಿ ನಡೆಯುತ್ತಿತ್ತು. ಸ್ವಾಮಿಯವರಿಗೆ ಸುಲಭದ ಹೊರೆಯು ಇಲ್ಲವೆಂದಿರಲಿಲ್ಲ. ಸ್ವಾಮಿಯವರ ವೈಭವಗಳು ಎಷ್ಟು ಮೀರಿ ವಿಜೃಂಭಿಸಿ ನಡೆಯುತ್ತಲಿದ್ದವೋ ಅಷ್ಟಷ್ಟು ಭಕ್ತವೃಂದವು ಕಿಕ್ಕಿರಿಯುತ್ತಿತ್ತು. ಕಪ್ಪಕಾಣಿಕೆಗಳು ಕಡಮೆಯಾದರೂ ಲೆಕ್ಕಮಾಡಿ ...

ಸ್ವಾಮಿಯವರ ಸ್ವಹಸ್ತದಿಂದ ದೊರಕುವ ತೀರ್ಥ ಪ್ರಾಶನದ ಸಲುವಾಗಿ ಪ್ರತೀ ದಿನ ಸಾಯಂಕಾಲ ಹೆಂಗಸರು ಮಕ್ಕಳ ಸೇರುವಿಕೆಯಿಂದ ಸ್ವಾಮಿಗಳ ವೈಭವಕ್ಕೆ ದ್ವಿಗುಣವಾಗುತ್ತಿತ್ತು. ಪುರಾಣಿಕರ, ಆಚಾರ್ಯರ, ಜೋಯಿಸರ ಬಲು ಹೆಮ್ಮೆಯ ಸ್ಥಳವು ಅದಾಗಿತ್ತು. ಹೊರಗ್ರಾಮಗಳ ಭಟ್ರು ಬ್ರಾಹ್ಮಣರ ತಂಡಗಳು ಅಲ್ಲಿ ಒಂದರ ಹಿಂದೊಂದು ಬಂದು ಬೀಡುಮಾಡಿಕೊಂಡಿದ್ದುವು. ದಿನಕ್ಕೊಂದರಂತೆ ಊಟಕ್ಕೆ ಹೇಗೂ ಅಭಾವವಾಗುತ್ತಿದ್ದಿಲ್ಲ.

ಮಠದಲ್ಲಿ ಬ್ರಾಹ್ಮಣರಿಗೆ ಮಾತ್ರವೇ ಪುಕ್ಕಟೆಯಾಗಿ ಊಟ ದೊರೆಯುವುದಲ್ಲ, ಪರಿಚಾರಿಕೆಯತನವನ್ನು ವಹಿಸಿಕೊಂಡು ಮುಸುರೆ ಪಾತ್ರೆಗಳನ್ನು ತೊಳೆಯುವುದಕ್ಕೂ ಎಂಜಲೆಲೆಯ ವ್ಯವಸ್ಥೆಗೊಳಿಸುವುದಕ್ಕೂ ನೇಮಿಸಿದ ಅಬ್ರಾಹ್ಮಣ ಸ್ತ್ರೀಯರ ಪರಿವಾರವು ಇದಕ್ಕೆ ಬಾಹಿರವಾಗಲಾರದು. ಅಲ್ಲದೆ ಹರಿಜನರ ಕಾಯಂ ವಸತಿಯು ಎಂಜಲೆಲೆ ಬೀಳುವಲ್ಲಿ ಹಾತೊರೆದು ನಿಲ್ಲುತ್ತದೆಂಬುವುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ನಮ್ಮ ಮಿಸ್ಟರ್ ಕಿಚಾಪತಿ ಭಟ್ರು ಮತ್ತು ಇನ್ನಿತರ ಕೆಲವು ಆಚಾರ್ಯ ವರ್ಗದವರು ಈ ಕೆಲಸವು ಸಾಂಗವಾಗಿ ನೆರವೇರುವಂತೆ ಮುತುವರ್ಜಿಯನ್ನು ವಹಿಸಿ ಅನ್ನ ಪಲ್ಯಗಳನ್ನು ಬಡಿಸಿ ಕೊಡುವುದರಲ್ಲಿಯೂ, ಬಳಸುವುದರಲ್ಲಿಯೂ, ಅಗ್ರಗಣ್ಯರಾಗಿದ್ದರು. ಈ ಕೆಲಸಕ್ಕೆ ಮಿಸ್ಟರ್ ಕಿಚಾಪತಿ ಭಟ್ಟರಲ್ಲದೆ ಬೇರೆಯವರಿಗೆ ಪ್ರವೇಶವು ದೊರೆಯುತ್ತಿದ್ದಿಲ್ಲ. ಕಿಚಾಪತಿ ಭಟ್ಟರ ಉಪಕಾರಕ್ಕಾಗಿ ಅವರ ಸ್ನೇಹ ಒಳಸದೆ ಈ ಕಾರ್ಯದಲ್ಲಿ ಸ್ಪರ್ಧಿಸುವವರಾಗುವ ಹಾಗಿರಲಿಲ್ಲ. ಅದೂ ಒಂದು ದೊಡ್ಡ ವಿಜಯಿಯಾಗಿತ್ತು ಆ ಸ್ಪರ್ಧೆ.

ಕಿಚಾಪತಿ ಭಟ್ರಿಗೆ ಮದುವೆಯಾಗಿರಲಿಲ್ಲ. ಮದುವೆಯ ಪ್ರಸ್ತಾಪವನ್ನೆತ್ತಿದರೆ 'ನನಗೇ ಆ ಹಾಳು ಮದುವೆ' ಎಂದು ಉಸ್ಸೆಂದು ಭಾಷಣವನ್ನೇ ಬಿಗಿಯುತ್ತಿದ್ದ ಕಿಚಾಪತಿ ಭಟ್ಟರು, ತಾವು ಗರ್ಭವಾಸದ ಯಾತನೆಯನ್ನು ಅನುಭವಿಸುತ್ತಿರುವಾಗಲೇ ಅವರ ತಂದೆಯವರ ಇಹಲೋಕ ಯಾತ್ರೆಯು ಪೂರ್ಣವಾದಂತಾಗಿತ್ತು. ಇಂದಿಗೂ ಅವರ ಪತ್ತೆಯಿಲ್ಲ. ಕೇಳಿದವರಿಗೆ ಗುರುಶಾಪ ... ಎಂಬ ಉತ್ತರವು ದೊರಕುತಿತ್ತು. ಅನಾಥರಾದ ಒಡ ತಾಯಿಯ ಆವಸ್ಥೆಯಾದರೋ ಪಾಪ. ಕಿಚಾಪತಿ ಭಟ್ಟರಿಗೆ ಎರಡು ತಿಂಗಳುಗಳು ತುಂಬಬೇಕಾದರೆ ಮೊದಲೇ ಸ್ವಾಮಿಯವರ ಅಂಗರಕ್ಷಕರಾಗಿ ಮೆರೆಯುತ್ತಿದ್ದ ಆಚಾರ್ಯರೊಬ್ಬರ ಮುಖಾಂತರ ಅವರ ಆವಸಾನವಾಗಿತ್ತು. ಅದರ ಕಾರಣವೂ ಕೂಡ ಬಲವತ್ತರವಾದ ತೀರ್ಥಪಾದಂಗಳವರ ಕೃಪಾಕಟಾಕ್ಷದಿಂದೆಂದು, ವದಂತಿಯಿತ್ತು. ಅನಂತರ ಶ್ರೀಪಾದಂಗಳವರೇ ಕನಿಕರದಿಂದ ಆಬಾಲಕನನ್ನು ಕಾಪಾಡಿ ಸಂರಕ್ಷಿಸಿದ್ದರು. ಕಿಚಾಪತಿ ಭಟ್ಟರ ... ವನ್ನು ಹೋಲುತಿತ್ತೆಂಬುದೊಂದ ಹೆಮ್ಮೆಯು ಅವರಲ್ಲಿ ಸದಾ ಮೂಡುತ್ತಿತ್ತು.

ಕಿಚಾಪತಿ ಭಟ್ರ ತಂಡದವರಿಗೆ ಉಳಿಕೊಳ್ಳಲು ಪಾಳಯವೊಂದಿತ್ತು. ಭಟ್ರೂ, ಆಚಾರ್ಯರೂ, ಪುರಾಣಿಕರೂ, ಜೋಯಿಸರೂ ಮುಂತಾದ ಪ್ರಮುಖ ಬ್ರಾಹ್ಮಣರೇ ಅದರಲ್ಲಿ ಪ್ರವೇಶಿಸಬೇಕಲ್ಲದೆ ಅನ್ಯಥಾ ಜನರಿಗೆ ಅದರಲ್ಲಿ ಪ್ರವೇಶವಿರಲಿಲ್ಲ. ಮುಸರೆ ತಿಕ್ಕುವ ಹೆಂಗಸರೇ ಮೊದಲಾದ ಮತ್ತು ಎಂಜಲೆಲೆಗಳನ್ನು ತೆಗೆದು ಸ್ಥಳ ಸ್ವಚ್ಛಗೊಳಿಸುವ ಕೀಳ ಜಾತಿಯವರಿಗೆ ಪ್ರತೀ ದಿನದ ಸಂಬಳ ಕೊಡುವ ಆಕ್ಷೇಪವು ಅಧಿಕವಿತ್ತು. ಆ ದರದಲ್ಲಿ ರಾತ್ರಿ ಪೂಜೆಯಾಗುವ ವರೆಗೆ ಯಾರಿಗೂ ದಿನಮಜೂರಿ ದೊರಕುತ್ತಿರಲಿಲ್ಲ. ರಾತ್ರೆ ಪೂರೈಯಾಗಿ ದೇವರ ಕೋಣೆಯು ಬೀಗ ಮುದ್ರೆಯಾದ ಬಳಿಕ ಮಂತಾನದ ದೊಡ್ಡ ದೊಡ್ಡ ವೈದೀಕರೆಲ್ಲರೂ ಮಿಸ್ಟರ್ ಕಿಚಾಪತಿ ಭಟ್ರ ಪಾಳಯದಲ್ಲಿ ಶಯ್ಯಾಸುಖದ ಸಲುವಾಗಿ ತೆರಳುವುದು ರೂಢಿ. ಅನಂತರವೇ ಪರಿಚಾರಿಕೆಯ ಹೆಂಗುಸರಿಗೆ ಮತ್ತು ಇನ್ನಿತರ ಕೀಳು ಜಾತಿಯವರಿಗೆ ದಿನಗೂಲಿ ಕೊಡುವ ವಾಡಿಕೆ. ಆ ಸಮಯ ತಪ್ಪಿದವರಿಗೆ ಅವರವರ ಕೂಲಿಯು ಜುಲ್ಮಾನೆಯಾ ದಂಡನೆ ವಿನಹ ದೊರಕುತಿರಲಿಲ್ಲ. ಅಲ್ಲಿ ಕೂಡುವ ಮಂತಾನದ ಶ್ರೇಷ್ಠ ವೈದಿಕ ಬ್ರಾಹ್ಮಣರೆಲ್ಲರೂ ನೆರೆ ಗ್ರಾಮದಿಂದ ಬಂದು ಅಲ್ಲಿ ಕಾಲಕ್ಷೇಪ ಕಳೆಯುವವರೆಂದು ಬೇರೆ ಹೇಳಬೇಕಾಗಿಲ್ಲ. ಇವರ ದೊಡ್ಡ ದೊಡ್ಡ ವೈಭವದ ಮನೆಗಳು ನೆರೆ ಹಳ್ಳಿಗಳಲ್ಲಿದ್ದುವು. ಕೆಲಸವಿಲ್ಲದೆ ದೊರಕುವ ಊಟದ ರುಚಿಯು ಮನಗಂಡವರು ಮನೆಯ ಯೋಚನೆಯಿಂದ ಬಳಲುವರೇ?

ಪಾಪ! ಈ ಶ್ರೇಷ್ಠ ಮನೆತನದ ಬ್ರಾಹ್ಮಣರಲ್ಲಿ ಕೈ ಹಿಡಿದ ಸ್ತ್ರೀ ಸಮಾಜಕ್ಕೆ ಗಂಡಂದಿರರ ಮುಖಾವಲೋಕನದ ಭಾಗ್ಯವು ವರುಷಕ್ಕೊಮ್ಮೆಯಾದರೂ ದೊರಕುವುದು ಕಷ್ಟವಾಗುತಿತ್ತು. ಈ ಪುರುಷ ಸಮಾಜವು, ಆ ಸ್ತ್ರೀ ಸಮಾಜಕ್ಕೆ ಪ್ರಾಯಶ್ಚಿತ್ತ ರೂಪವಾಗಿ ದೊರಕಿತೋ ಎಂಬುದೊಂದು ಭ್ರಾಂತಿಯು ಆ ಸ್ತ್ರೀಯರಿಗೆ ಸದಾ ಪೀಡಿಸುತಿತ್ತು. ಯಜಮಾನರು ಮನೆಯಲ್ಲಿಲ್ಲದೆ ಪೈರು ಒಣಗಿ ಹೋಗಿರುತ್ತವೆ. ಗದ್ದೆಯು ನೀರು ... ಮನೆಯ ಮಾತು ... ಯಜಮಾನರಿಗೆ ಕರೆಯು ... ಧರ್ಮದ ... ಪೂಜಾ ನಿರತರಾದ ಬ್ರಾಹ್ಮಣ ವರ್ಗವು ... ಕಿವಿಗೊಡುವರೇ? ... ಕಷ್ಟವಾಗುತಿತ್ತು. ... ಹೆಂಗುಸರು ಸಮಯ ಸಾಧಿಸಿ ... ನವ ನವನದಿಂದ ಗಂಡಂದಿರರ ಮುಖಾವಲೋಕನದ ಕೆಲಸವನ್ನು ಹಗಲಿರುಳು ಪೂರೈಸಿ ರಾತ್ರಿಯಾಗಬೇಕಾದರೇ ಸ್ವಂತ ಮನೆಗಳನ್ನು ಸೇರಬೇಕಾಗಿತ್ತು. ಕಾಡಿನ ದುಷ್ಟ ಮೃಗಗಳ ಭಯ ನಿವಾರಣೆಗಾಗಿ ಕೊಡುತ್ತಿದ್ದ ಮಠದ ಭೋಜನದ ಸವಿಯುಣ್ಣುವಂತೆ ಮಾಡುತಿತ್ತು. ಕಾಡುಮೃಗಗಳ ಚಲನವಲನಗಳ ಸದ್ದನ್ನು ಆಲೈಸಿ ಭಯ ಭೀತಿ ಗ್ರಸ್ತಳಾದ ಆ ಹೆಣ್ಣು ಹೆಂಗಸಿಗೆ ಭಯಪಡಬೇಡಿ, ಅಮ್ಮಾ ನಾನಿರುವೆನು ಎಂದು ಉಪಚರಿಸಿ ಕೈಹಿಡಿಯುವ ಸಂದರ್ಭವು ಕೂಸಕಿಮ್ಮನಿಗೆ ನಡುಕಾಡಿನಲ್ಲಿ ಒದಗುತ್ತಿರಲಿಲ್ಲ. ... ದೂಡುತಿದ್ದರು ದಿನಗಳನ್ನು ಆ ಹೆಣ್ಣು ಹೆಂಗುಸರು.

ಇದೀಗ ಮೂವತ್ತು ಮೂವತ್ತೆರಡು ವರುಷಗಳ ಹಿಂದಿನ ಕಥೆ. ಮಿಸ್ಟರ್ ಕಿಚಾಪತಿ ಭಟ್ರಿಗೆ ಐವತ್ತರ ಮೇಲೆ ವರುಷ ಪ್ರಾಯ. ಇಂದಿಗೂ ಶುದ್ಧ ಬ್ರಹ್ಮಚಾರಿಗಳೇ. ಬಾಯಲ್ಲಿ ಕೆಲವು ದಾಡೆಗಳು ಮಾತ್ರ ಇವೆ. ಹಲ್ಲುಗಳು ಎಂದೋ ಮಾಯವಾಗಿದ್ದುವು. ಪಾಳೆಯದಲ್ಲಿ ಬೀಡು ಮಾಡಿಕೊಂಡಿದ್ದ ಕೆಲವು ಶ್ರೇಷ್ಠ ಬ್ರಾಹ್ಮಣರ ವಿಧವೆಯರು ಮಾತ್ರ ಜೀವಿಸಿರುವರು. ದಿನಗೂಲಿ ಪಾರುಪತ್ಯವು ಅವರಿದೀಗ ಸಾಗುತ್ತಿರಲಿಲ್ಲ. ಆ ಸ್ಥಾನವನ್ನು ಬೇರೊಬ್ಬ ಬ್ರಾಹ್ಮಣನು ಅಲಂಕರಿಸಿದ್ದನು. ದಿನಗೂಲಿಯನ್ನು ಪಡೆಯಲು ಕಿಚಾಪತಿ ಭಟ್ರ ಮುಂಚಿನ ಪರಿವಾರವಿಲ್ಲ. ಆದರೆ ಇತ್ತಂಡ ಪರಿವಾರದ ಸಂಸಾರದ ನಿಮಿತ್ತ ಇತ್ತೀಚೆಗಲ್ಲಿಯೂ ಹುಟ್ಟಿ ಬೆಳೆದ ಮಕ್ಕಳು ಪ್ರಾಯಕ್ಕೆ ಬಂದು ಸಮಾಜದ ದ್ವಾರದ ಕಾರ್ಯದಲ್ಲಿ ನಿರತರಾಗಿರುವರು. ಹೆಣ್ಣು ಮಕ್ಕಳಿಗೆ ಮದುವೆಯಾಗಿ ಅವರು ಗಂಡನ ಮನೆಯ ಸವಿಯನ್ನು ಉಣ್ಣುತ್ತಿರುವರು. ಗಂಡುಮಕ್ಕಳಲ್ಲಿ ಕೆಲವರಿಗೆ ಮದುವೆಯಾಗಿದೆ. ಕೆಲವರು ವರಾನ್ವೇಷಣಕ್ಕಾಗಿ ಬಂದವರಿಗೆ ವರದಕ್ಷಿಣೆಯ ಭಾರವನ್ನು ಹೊರಿಸುತ್ತಿರುವರು. ಕೆಲವರು ಕನ್ಯಾವಿಕ್ರಯವೆಲ್ಲಿ ಆಗುವುದೋ ಎಂದು ಹಾತೊರೆಯುತ್ತಿರುವರು. ಇನ್ನು ಕೆಲವರು ಕನ್ಯಾನ್ವೇಷಣದ ಕಾರ್ಯದಲ್ಲಿ ತೊಡಗಿರುವರು.

ಕಿಚಾಪತಿ ಭಟ್ರು ತಮ್ಮ ಕಿಚಾಪತಿಗಳನ್ನು ಇಲ್ಲಿಯೂ ಆಡದಿರಲಿಲ್ಲ. ಮದುವೆಯ ದಲಾಲಿ ಕೆಲಸವು ಅವರ ಹುಟ್ಟುಕಸಬಾಗಿತ್ತು. ಈಗಲೇನು ಚಿಲ್ಲರೆಯೇ? ವ್ಯಕ್ತಿಸಂಬಂಧವು ಪರಿಪೂರ್ಣ ಅವರಿಗೆ ಅರಿತಿತ್ತು. ಕನ್ಯಾದಾನದ ಸಮಯ ತಿರುಗಿ ಪರಿಣಯದ ಮಂತ್ರಗಳನ್ನು ಹೇಳಿ ದಕ್ಷಿಣೆಯನ್ನು ಬಗಲಿಗೆ ಹಾಕಿದ ಅವರಿಗೆ ಸಂಸಾರವು ಹೇಗೆ ಸಾಗಿತ್ತೆಂದು ಅವರ ಸ್ವಂತ ಪರಿವಾರದವರ ದಲಾಲಿಯು ದೆಸೆಯಿಂದಾಗಿ ಪರಿಪೂರ್ಣ ಮನಗಾಣುತಿತ್ತು. ಇತ್ತಂಡದವರ ರಕ್ತಸಂಬಂಧದ ಜೀವಕಳೆಯು ಪೈಶಾಚಿಕ ಮನೋವ್ಯಾಕುಲತೆಯು ಪರಿವರ್ತನಾ ರೂಪಾಂತರದಿಂದ ಕಾರ್ಯರಂಗಕ್ಕಿಳಿದಿರುವ ಅದೊಂದು ಚೇತನದ ಅರುಹನ್ನು ಅರಿಯುವಂತಿರುವ ಕಿರುನಗೆಯು ಅವರ ಮುಖದಲ್ಲಿ ಮೂಡುತಿತ್ತು.

ಜಾತಕಗಳನ್ನು ಒದಗಿಸಿಕೊಂಡು ಮೇಳಾಮೇಳಿಗಳನ್ನು ಹೋಲಿಸುವ ಕೆಲಸವು ಕಿಚಾಪತಿ ಭಟ್ರ ಅಮೂಲ್ಯವಾದ ಒಂದು ವಿಷ್ಯವಾಗಿತ್ತು. ವರಾನ್ವೇಷಣಕ್ಕಾಗಿ ಜಾತಕವನ್ನು ತೋರಿಸುವವರ ಸಂಖ್ಯೆಯು ಕಡಮೆಯಾಗಿದೆ. ಸುಂದರತ್ವವನ್ನೇ ಅನ್ವೇಷಣ ಮಾಡುವವರು ... ನಮ್ಮ ಕಿಚಾಪತಿ ಭಟ್ಟರಿಗೆ, ಕಿಚಾಪತಿ ಭಟ್ಟರ ಪಾಳೆಯದ ಶ್ರೇಷ್ಠ ಬ್ರಾಹ್ಮಣರ ಮಕ್ಕಳಿಗೆ ಕನ್ಯಾನ್ವೇಷಣ ಕಾರ್ಯವೇ ಕಷ್ಟಕರವಾಗಿರುವುದು. ಎಲ್ಲಿ ನೋಡಿದರೂ ಸುಂದರ ಸಮಾಜವೇ ಇಲ್ಲದಂತಾಗಿದೆ. ಕೀಳು ಸಮಾಜವೆಂದು ಯಾರನ್ನು ಇವರ ಹಿರಿಯರು ಬಹಿಷ್ಕರಿಸುತ್ತಿದ್ದರೋ ಅವರ ರೂಪಾಕೃತಿಯು ಬುದ್ಧಿ ಚಾತುರ್ಯಗಳ ಸಹಿತವಾಗಿ ಆಕರ್ಷಣೀಯವಾಗಿದೆ. ಸ್ವಸಮಾಜದಲ್ಲಿ ... ತಿದೆ. ಸ್ವಸಮಾಜದ ಯುವಕರಿಗೆ, ಕಣ್ಣು ಒರೆಸುವ ... ಉದ್ದಂಡ, ಕಾಲು ... ಹೊರಗಾದ ಯುವತಿಯರೇ ದೊರಕುವಂತಾಗಿದೆ. ದಕ್ಷಿಣೆಯು ... ಸಂಖ್ಯೆಯಲ್ಲಿ ಸಂಧ್ಯಾವಂದನೆಯು ... ಜನಿವಾರಧಾರಿಗಳ ಸಾಲಿಗೆ ಕಿಚಾಪತಿ ಭಟ್ಟರಿಗೆ ತೋರಿಬರುತ್ತಿದೆ.

(ಕಿಚಾ) ಸ್ಪರ್ಧಿಸಿದ ... ಒಂದೆ ಮದುವೆಯು ಹುಟ್ಟೆಂದು ಕಿಚಾಪತಿ ಭಟ್ಟರ ತಲೆಯಲ್ಲಿ ಮೂಡಹತ್ತಿತು. ಸಾಯುವ ಕಾಲದಲ್ಲಿಯಾದರೂ ತನ್ನ ಅಮೋಘ ಹುಟ್ಟು ಸ್ವಭಾವದ ಕಿಚಾಪತಿಯ ಆಟವೊಂದನ್ನು ಆಡಬೇಕೆಂಬ ಸದೃಢವಾದ ಆಸ್ತಿವಾರವಿರುವ ಯೋಚನೆಯು ಕಾರ್ಯದಲ್ಲಿ ಯಶಸ್ವಿಯಾಗಿ ಮೆರೆಯಬೇಕೆಂಬ ಆಶಾವರಿಸಮಾಪ್ತಿ ... ನಮ್ಮ ಈ ಕಿಚಾಪತಿ ಭಟ್ಟರು ಮುದಿಪ್ರಾಯದಲ್ಲಿ ನೋಡುವವರಿಲ್ಲ, ಮೊದಲೇ ನಮ್ಮ ಭಟ್ಟರಿಗೆ, ಆಗುಹೋಗುಗಳ ಪರಿವೆಯಿಲ್ಲದೆ ನಡೆಯುತ್ತೆಂದು ಮದುವೆಯ ಸಂಭ್ರಮ. ಯಾರೊಡನೆ ಬಲ್ಲಿರಾ? ಮಠದ ಪಾಳೆಯದಲ್ಲಿ ಭಟ್ಟರು ಪಾರುಪತ್ಯ ನಡಿಸುವಾಗ ಪರಿಚಾರಿಕೆಯ ಕಾರ್ಯನಿರತಳಾದವಳು ಆ ಸಮಯ ಹೆತ್ತ ಶಿಶು ಈಗ ಸುಮಾರು 30 ವರುಷದ ಜವ್ವನೆ, ಗಂಡನಿಂದ ಪರಿತ್ಯಜಿಸಲ್ಪಟ್ಟವಳಾದವಳು.

ಬಹಿಷ್ಕಾರದ ಮೇಲೆ ಬಹಿಷ್ಕಾರ ನಮ್ಮ ಭಟ್ಟರಿಗೆ ಎಲ್ಲೆಲ್ಲಿಯೂ ಪ್ರವೇಶವಿಲ್ಲ. ಮಠದ ... ಮಿಗಳ ಭಟ್ಟರನ್ನು ಕರೆಯಿಸದಿರಲಿಲ್ಲ. ಭಟ್ಟರೂ ಉತ್ತರಿಸದಿರಲಿಲ್ಲ. ಭಟ್ಟರೀಗ ನವಸುಧಾರಣಾ ಕಾರ್ಯರಂಗದಲ್ಲಿರುವರು. ಎಲ್ಲೆಲ್ಲಿಯೂ ಕಿಚಾಪತಿ ಭಟ್ಟರ ಭಾಷಣಗಳು ... ಭೂತವೂ ನಿಲ್ಲದು. ರಕ್ತಬಲವೇ ಆತ್ಮಬಲ. ಬ್ರಾಹ್ಮಣರ ದೇವಪೂಜಾ ಶಕ್ತಿಯು ಕುಂದಿದೆ. ಅವರ ರಕ್ತ ಶಕ್ತಿಯೇ ನನಗೆ ಹಕ್ಕಿಲ್ಲ. ದೇವರನ್ನು ಪೂಜಿಸಬೇಡ'ವೆನ್ನುತ್ತಿದೆ. ಇನ್ನಿತರ ಭಾರತದ ಪ್ರತೀ ಪ್ರತಿಯೊಂದು ಸಮಾಜಕ್ಕೆ ನಿನಗೆ ಹಕ್ಕಿದೆ. ಪ್ರವೇಶಿಸು, ದೇವಪೂಜಾ ನಿರತನಾಗು' ಎಂದು ಸಾರುತ್ತಿದ ಎಂದು.

ಕಾಡುಮನುಷ್ಯನೂ ಮುಸಲೀನಿಯೂ

ಯೂರೋಪು ಒಂದು ಉನ್ಮಾದ ಗೃಹ; ಆದರೆ ಈ ಉನ್ಮಾದದ ಭೀಕರ ದೃಶ್ಯಗಳೇ ಆದರ ಕ್ರಮ.

ಮಾನವ ಚರಿತ್ರೆಯೆಂಬುದು ಹಸಿದ ಪ್ರಾಣಿಯ ಆಹಾರ ಸಂಪಾದನೆಯ ಅಲೆದಾಟಗಳ ಬರೆಹ. ಹಿಂದಿನ ದಿನಗಳನ್ನೂ ಇಂದಿನ ದಿನಗಳನ್ನೂ ಪರಿಶೀಲಿಸಿ ನೋಡಿ. ಹೊಟ್ಟೆಯೊಂದಲ್ಲದಿದ್ದರೆ ಕಾಡಿನಲ್ಲಿ ವಾಸಮಾಡಿಕೊಂಡಿದ್ದ ನಾವು ಎಂದೂ ನಾಡಿಗೆ ಬರುತ್ತಿರಲಿಲ್ಲ. ತನ್ನ ಮೋಟು ಆಯುಧಗಳನ್ನು ತೆಗೆದುಕೊಂಡು ಸಂಚರಿಸುತಿದ್ದ ಆ ಪ್ರಾಚೀನ ಬ್ರಿಟನ್ ನಿವಾಸಿಯ ಕುರಿತೂ, ಇಂದು ತನ್ನ ರೋಲ್ಸ್ ರೋಯ್ಸ್ ಕಾರನ್ನೂ ಟಲಿವೀಜನ್ ಸೆಟ್ಟನ್ನೂ ಉಪಯೋಗಿಸುತ್ತಿರುವ ಆಧುನಿಕ ಮನುಷ್ಯನ ಕುರಿತೂ ನಾವು ಆಲೋಚಿಸಿದರೆ, ಬರೆ ಇಪ್ಪತ್ತು ಶತಮಾನಗಳಲ್ಲಿ ನಡೆದ ಸುಧಾರಣೆಗಳ ಕುರಿತು ನಮಗೇ ಆಶ್ಚರ್ಯವಾಗದಿರದು. ಅಷ್ಟೇಕೆ, ಇಂದಿಗೆ ೧೫೦ ವರ್ಷಗಳ ಹಿಂದ ಬ್ರಿಟನಿನಲ್ಲಿ ಒಂದು ತುತ್ತು ಅನ್ನವನ್ನು ಕದ್ದವನನ್ನು ಗಲ್ಲಿಗೇರಿಸುತಿದ್ದರು, ಎಳೆಯ ಬಾಲಕರನ್ನು ಟೂಲಿಗಳಿಗೆ ಕಟ್ಟಿ, ಹೊಡೆದ ಆ ಗಾಡಿಯನ್ನು ಎಳೆಯುವಂತೆ ಮಾಡುತಿದ್ದರು, ಇಂದು ಇಂತಹ ನೈತಿಕ ವಿಚಾರಗಳಲ್ಲಿ ಬಹಳ ಸುಧಾರಣೆಗಳಾಗಿರುವುವು

ಇತ್ತೀಚೆಗೆ ಫಾಸಿಝಂ ಎಂಬ ಶಬ್ದ ಎಲ್ಲೆಲ್ಲಿಯೂ ಕೇಳಿ ಬರುತ್ತದ ಪತ್ರಿಕೆಗಳಲ್ಲಿ ಅದರ ಕುರಿತು ಅಗಣ್ಯ ವರ್ತಮಾನಗಳು ಪ್ರಕಟವಾಗುತ್ತಿವೆ ಚೀನದಲ್ಲಿ ಜಪಾನಿನ ಧಾಳಿ, ಸ್ಪೈನಿನಲ್ಲಿ ಇಟಲಿಯ ದ ಎತಿಹಾಸಿ ಯಲ್ಪಟ್ಟ ದಂಗೆಖೋರರ ಹಾವಳಿ ಆ ದಂಗೆಖೋರರಿಗೆ ಇಟಲಿ ಜರ್ಮನಿಗಳ ಸಹಾಯ ನಿಷ್ಕಾರಣವಾಗಿ ವ್ಯಾಪಾರಿ ಹಡಗಗಳನ್ನು ಮುಳುಗಿಸಿದ ಅಮಾನುಷ ಕಡಲ್ಗಳ್ಳತನ, ರೋಮ್ ಬರ್ಲಿನ್ ಒಪ್ಪಂದದಿಂದಾಗಿ ಬೋಲ್ಶೆವಿಝಂ ವಿನ ಮೇಲೆ ಎರಡು ದೇಶಗಳು ಎತ್ತಿದ ಕೆಂಪಲಿ, ಇವುಗಳೆಲ್ಲವೂ ಫಾಸಿಸ್ಟ್ ನೀತಿಯ ಇತ್ತೀಚೆಯ ಗಳು ಈ ನೀತಿಯ ಇದ ಯುರೋಪಿನ ಹೆಚ್ಚಿನ ಭಾಗವನ್ನು ಆಕ್ರಮಿಸಿರುವುದಲ್ಲದೆ, ಪೂರ್ವದಲ್ಲಿ ಜಪಾನಿನ ... ನಡೆದ ... ಒಂದೇ ಮಾತಿನಲ್ಲಿ ಹೇಳ ಮಾಡಬೇಕಾದರೆ ಫಾಸಿಝಂ ಅಂದರೆ ಶಕ್ತಿಯ ನೀತಿ ... ಇದೇ ಮನುಷ್ಯನ ವಂಶ್ಯ ಪತಿಭೆಯ ಒಂದಂಗ ಚಾರಿತ್ರಿಕ ಪುಸ್ತಕಗಳಲ್ಲಿ ... ಉಲ್ಲೇಖಿಸಲ್ಪಟ್ಟಿದೆ ... ಜಗತ್ತೇ ಒಗ್ಗಿಕೊಂಡ ಈ ಫಾಸಿಸ್ಟ್ ನೀತಿಯಿಂದಾಗಿಯೇ ಮಾನವನ ಪ್ರತಿಯೊಂದು ಕೃತ್ಯವು ಕಳೆಗೊಡುವಂತೆ ಹೇಳಲ್ಪಟ್ಟಿದೆ

ನಾವು ಜಗತ್ತಿನ ಇತಿಹಾಸವನ್ನು ತೆರೆದು ನೋಡೋಣ ಅನೇಕ ವರ್ಷಗಳಿಂದ ಉನ್ನತ ಸ್ಥಿತಿಯಲ್ಲಿದ್ದ ಯಾವುದೊಂದು ಜನಾಂಗವಾದರೂ, ಅದೇ ಸ್ಥಿತಿಯಲ್ಲಿ ಯಾವಾಗಲೂ ಇರುವುದೆಂದು ಹೇಳಲಾಗುವುದಿಲ್ಲ. ಕಾಲಕ್ರಮದಲ್ಲಿ ಅದು ವೃದ್ಧಾಪ್ಯವನ್ನು ಹೊಂದಿ ಶಕ್ತಿಹೀನವಾಗುವುದು ಮನುಷ್ಯನ ಸಪ್ತವಯೋವಸ್ಥೆಗಳಂತೆ ಅದರ ಪರಿಸ್ಥಿತಿಯೂ ಆಗುವುದು. ಒಂದು ಜನಾಂಗವು ವೃದ್ಧಾಪ್ಯವನ್ನು ಹೊಂದಿದ ಸಮಯದಲ್ಲಿ ಶಕ್ತಿಸಂಪನ್ನವಾದ ಇನ್ನೊಂದು ಶಾಖೆಯು ದಿಗಂತದಲ್ಲಿ ಕಾಣಿಸಿಕೊಂಡು, ಶಕ್ತಿಹೀನರನ್ನು ಹಿಂದಕ್ಕೆ ತಳ್ಳಿ, ತಾನು ಮುಂದೆ ಬರುವುದು. ಯಾವುದೊಂದು ವಸ್ತುವಾದರೂ ಹಳತಾದೊಡನೆ ಅದು ಅಪ್ರಯೋಜಕವಾಗುವುದು. ನಾವು ಅದನ್ನು ಮೂಲೆಪಾಲು ಮಾಡುವೆವು. ಆದರೆ ಒಂದು ವಸ್ತುವು ಹಳತಾಗುವಾಗ, ಇನ್ನೊಂದು ವಸ್ತುವು ಅಥವಾ ಜನಾಂಗವು ಅದರ ಸ್ಥಾನವನ್ನು ಆಕ್ರಮಿಸಲು ಸಿದ್ಧವಾಗಿಯೇ ಇರುವುದು. ಇದೇ ನಾಝಿಗಳ ಇಂದಿನ ಉನ್ನತಿಯ ಮತ್ತು ನೀತಿಯ ಮೂಲ ಇಂದು ಅವರದು ದಿಗಂತದಲ್ಲಿರುವ ಉತ್ಸಾಹಭರಿತ ನವಜನಾಂಗ,

ಈ ಫಾಸಿಝಂವಿನ ಉತ್ಪತ್ತಿ ಮತ್ತು ಬೆಳವಣಿಗೆಯು ಹೇಗಾಯಿತು? ಮುಸಲೀನಿಯವರು ಅಧಿಕಾರಕ್ಕೆ ಬಂದಂದಿನಿಂದ ಫಾಸಿಝಂ ಹುಟ್ಟಿತೆಂದು ನೀವು ಅನ್ನಬಹುದು. ಆದರೆ ಪ್ರಥಮ ಕಾಡುಮನುಷ್ಯನು ತನ್ನ ನೆರೆಯವನ ತಲೆಯನ್ನು ಬಡಿದು ಆತನ ಮಡದಿ, ಆಸ್ತಿಪಾಸ್ತಿಗಳನ್ನು ಅಪಹರಿಸಿದ ದಿನವೇ ಅದು ಹುಟ್ಟಿತೆನ್ನಬೇಕು. ಆದುದರಿಂದ ಫಾಸಿಝಂ ಎಂಬುದು ಮನುಷ್ಯನಷ್ಟೇ ಪ್ರಾಚೀನದಾಗಿರುವುದು. ಪರಂತು, ಇಂದಿಗೆ ಹದಿಮೂರು ವರ್ಷಗಳ ಹಿಂದೆ ಮುಸಲೀನಿಯವರು ತನ್ನ ಅನುಯಾಯಿಗಳೊಡನೆ ಮುಂದೊತ್ತಿ ಬಂದು, ತಮ್ಮ ವೈರಿಗಳನ್ನು ಮುತ್ತಿ, ಹೊಡೆದು—ಬಡಿದು—ಅವರನ್ನು ಸೆರೆಹಿಡಿದು ತುರಂಗಗಳಲ್ಲಿ ದೊಬ್ಬಲಿಕ್ಕೆ ಮೊದಲು ಮಾಡಿದ ದಿನ ಅದು ರಾಜಕೀಯ ಪ್ರಶಸ್ತಿಯನ್ನು ಪಡೆಯಿತು. ಈ ಶಕ್ತಿಯ ಉಪಾಸನೆಯು ಜಯಪ್ರದವಾದೊಡನೆ ಅದರ ಹಿಂದೆಯೇ ಗುಪ್ತಚಾರರ ಸಂಘದ ನಿರ್ಮಾಣವೂ, ಪುಸ್ತಕ ಪರೀಕ್ಷಣವೂ (Censorship) ಪ್ರಚಾರಕ್ಕೆ ಬಂದವು ... ಮುಸಲೀನಿಯವರು ಇಟಲಿಯ ಪುನರುಜ್ಜೀವನದ ಕಡೆಗೆ ತನ್ನ ಮನಸ್ಸನ್ನು ... ದರು. ಅವರು ಇಟಲಿಯ ಗತವೈಭವಗಳ ಚಿತ್ರಗಳನ್ನು ಜನರ ಮುಂದೆ ಒಡ್ಡಿ ... ಪರಾಕಾಷ್ಠೆ ... ಹೊಸ ... ಹೇಳಿ ಪ್ರಜೆಗಳ ಚಿತ್ತಾಕರ್ಷಣ ಮಾಡಿದರು. ಇದರಿಂದಾಗಿ ಅವರಿಗೆ ... ಮಾತ್ರವಲ್ಲ ... ಪಡೆದರೂ ಅತ್ಯಲ್ಪ ಕಾಲದಲ್ಲಿಯೇ ಅಣಗಿ ಹೋದವರ ... ಹಾಕಿ ಶಕ್ತಿ ಬಂದಾಕ್ಷಣ ಮೊದಲಾದ ಯುದ್ಧೋಪಕರಣಗಳನ್ನು ಹಿಡಿದುಕೊಂಡು ... ನರಕ ... ಆಪರೇಷನ್ ... ಪ್ರಾರಂಭವಾಯಿತು ... ಇಷ್ಟರಲ್ಲಿಯೇ ... ವೈಭವವನ್ನು ಪಡೆದಿರುವ ... ಮಾರನ್ನೂ ಲೆಕ್ಕಿಸದೆ ... ನಮ್ಮ ... ಗಳಲ್ಲುಂಟಾಗಿದೆ

ಇಂದು ಜರ್ಮನಿ, ಇಟಲಿ ಮತ್ತು ರಷ್ಯಾ ಈ ಮೂರು ದೇಶಗಳು ಸರ್ವಾಧಿಕಾರಿಗಳ ಆಡಳಿತಕ್ಕೆ ಒಳಪಟ್ಟಿರುವುವು. ಅಲ್ಲಿಯ ಜನರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲ. ಮಾತ್ರವಲ್ಲ, ಅವರ ರಾಜಕೀಯ ಸ್ವಾತಂತ್ರ್ಯವೂ ದಿನೇ ದಿನೇ ನಿರ್ನಾಮ ಮಾಡಲ್ಪಡುತ್ತಿದೆ. ಆದರೂ ಅವರ ಸ್ಟೇಲಿನ್ ಹಿಟ್ಲರ್ ಮತ್ತು ಮುಸಲೀನಿಯನ್ನು ಆದರ್ಶ ಪುರುಷರೆಂದು ಪೂಜಿಸುತ್ತಿರುವರು. ಇದಕ್ಕೆ ಕಾರಣವು ಜನರೆಲ್ಲರೂ ಭಯಚಕಿತರಾಗಿರುವರು ಇಲ್ಲವೆ ಮೋಹಿಸಲ್ಪಟ್ಟಿರುವರೆಂದು ಹೇಳುವುದು ಸರಿಯಲ್ಲ. ಇದು ಆ ಕಾರಣಗಳಲ್ಲಿ ಒಂದಂಶ. ವೀರಕೃತ್ಯಗಳನ್ನು ಮೆಚ್ಚುವುದು ಮನುಷ್ಯನ ಸ್ವಭಾವ. ವೀರರಾದ ಚಾರಿತ್ರಿಕ ಪುರುಷರಂತೆ ಆಗಬೇಕೆಂದು ಪ್ರಯತ್ನಿಸುತ್ತಿರುವೆವು. ಕೊಲೆ, ದಾಳಿಗಳನ್ನು ಮಾಡದವನು ವೀರನೆನಿಸುವುದಿಲ್ಲ. ಅದರಂತೆ ಮೇಲೆ ಹೇಳಿದ ಮೂರು ಮಂದಿ ಸರ್ವಾಧಿಕಾರಿಗಳು ಅತಿಪ್ರವೀಣ ಅಭಿನಯಗಾರರು. ಅವರು ಜನರ ಮನಸ್ಸನ್ನು ಸೆಳೆಯುವಂತೆ ಮಾತನಾಡಬಲ್ಲರು. ತಮ್ಮ ಜೀವಕ್ಕೆ ಅಪಾಯಕರವಾದ ಸಂಗತಿಗಳಿದ್ದರೂ, ಅವುಗಳ ರೂಪ ಬದಲಾಯಿಸಿ, ಇಲಿ ಓಡಿತಾದರೆ ಹುಲಿ ಓಡಿತೆಂದು ಹೇಳಿ, ತಮ್ಮ ಕ್ರೂರ ಕೃತ್ಯಗಳಿಂದ ಜನರ ಮನಸ್ಸಿನಲ್ಲಿ ಭೀತಿಯನ್ನು ಹುಟ್ಟಿಸಿ, ಪ್ರಜೆಗಳ ಸಹಾಯವನ್ನು ಪಡೆಯುವ ಶಕ್ತಿಯುಳ್ಳವರು. ತಮ್ಮ ದೇಶಕ್ಕಾಗಿ ತಾವು ಗೈದ ಮಹತ್ಕಾರ್ಯಗಳ ಕುರಿತು ಭಾಷಣ ಮಾಡುವಾಗ ಮುಸಲೀನಿ, ಹಿಟ್ಲರ ಮತ್ತು ಸ್ಟೇಲಿನರ ಮಾತುಗಳನ್ನು ಕೇಳ

ಇನೋಸ್ ಫ್ರುಟ್ ಸಾಲ್ಟ್



ನಡೆ ನಡೆ ನೆಗಡ್ಕೆ ಮಂದ
ಮತ್ತು ಚಟುವಟಿಕೆ ಇಲ್ಲ
ಮುಂಗೋಪಿ

ಯೋಗ್ಯತೆ
ಒಳ್ಳೆಯ ಹಸಿವು
ಚ ರ ಕು ಮತ್ತು ಆನಂದ

ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ

ನೀವು ಆರೋಗ್ಯದಲ್ಲಿರುವಿರಿ ಇನೋಸ್ ಫ್ರುಟ್ ಸಾಲ್ಟ್ 'Eno's Fruit Salt' ಇದು ಹೊಟ್ಟೆಯ ಅವ್ಯವಸ್ಥೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ ... ತಲೆನೋವು ... ಮುಂತಾದ ... ಬೇಗ ... ತೆಗೆದು ಹಾಕುವುದು

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ... ಗಳಲ್ಲಿ ... ನೀವು ಈ ... ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆ ... ಇದೇ ... ಇನೋ ENO ... ಗಳಿವೆ

... ಇನೋಸ್ ಫ್ರುಟ್ ಸಾಲ್ಟ್ Eno's Fruit Salt ...

ಇದೆ ನ್ ಫ್ರುಟ್ ಸೋಲ್ಟನಲ್ಲಿ Eno's Fruit Salt ಒಳ್ಳೆ ... ಗಳಲ್ಲಿ ... ಸೇರಿಸಿರುವ ... ವಸ್ತುಗಳು ಸೇರಿವೆ

E N 14

Eno's 'Fruit Salt'

... ಉಪಾಸನಾದರ ಒಮ್ಮೆ ... ತತ್ವ ಫಲಿತ ...

... ಸರ್ವಾಧಿಕಾರಿಗಳ ... ಸಂಗಠಣೆಯ ... ಗಳನ್ನು ... ಯೂರೋಪಿನ ದೇಶಗಳೆಲ್ಲವೂ ... ಫಲವಾಗಿ ... ಗಾಳಿಯನ್ನು ಪಡೆಯುತ್ತಿರುವುವು ... ಯೂರೋಪು ... ಒಂದು ಉನ್ಮಾದಗೃಹದಂತಾಗಿದೆ. ಆದರೆ ಈ ಉನ್ಮಾದದ ಭೀಕರತೆಯೇ ಅದರ ಕ್ರಮ ... ದಲ್ಲಿ ... ಪ್ರಮುಖರೆಲ್ಲರೂ ... ಸ್ಥಗಳಲ್ಲಿ ವೂ ಹೆಚ್ಚಿನ ಪಕ್ಷಗಳೂ ಫಾಸಿಸ್ಟ್ ರಾಜ್ಯ ಸ್ಥಾಪನೆಯ ಕಡೆಗೆ ಒಲಿದಿರುವರು. ಭಯೋತ್ಪಾದಕವಾದ ಫಾಸಿಸ್ಟ್ ಹುಚ್ಚುತನದಲ್ಲಿಯೂ ಪ್ರಚಾರಕಾರ್ಯದಲ್ಲಿಯೂ ಅದೊಂದು ಬಗೆಯ ... ಪ್ರವಾಹವು ಹರಿಯುತ್ತಿದೆ

ಇತ್ತೀಚೆಗೆ ಜರ್ಮನಿಯು ನೂರೆಂಬರ್ಗದಲ್ಲಿ ಅದೊಂದು ದೊಡ್ಡ ನಾಟಕವನ್ನಾಡಿ ತೋರಿಸಿತು. ಮುಸಲೋನಿಯವರು ಜರ್ಮನಿಯನ್ನು ಸಂದರ್ಶಿಸಿದ ಸಮಯದಲ್ಲಿ ಇನ್ನೊಂದು ದೇಖಾವೆಯು ಜರುಗಿತು. ನಿಯೋನ್ ಪರಿಷತ್ತಿನ ಸಮಯದಲ್ಲಿ ಮುಸಲೀನಿಯವರು ಅದರಲ್ಲಿ ಭಾಗವಹಿಸದಿದ್ದರೂ, ಅವರ ಯಶಸ್ಸು ಇನ್ನೂ ಬೆಳೆಯಿತು. ಸ್ಪೈನಿನ ಕುರಿತು ನಡೆಯುತಿದ್ದ ತಾಟಸ್ಥ್ಯದ ಮಾತುಕತೆಗಳ ಅಲ್ಲಿಗಲ್ಲಿಯೇ ನಿಲ್ಲಿಸಲ್ಪಟ್ಟವು. ಪೋಲೆಂಡಿನಲ್ಲಿ ನಾಝಿಗಳ ಅತ್ಯಾಚಾರದ ಕಿಡಿಯು ಇನ್ನೊಮ್ಮೆ ಸಿಡಿದಿರುವುದು. ಯೂರೋಪಿನ ಈ ಪರಿಸ್ಥಿತಿಯೂ, ಚೀನಾ ದೇಶದ ಮೇಲೆ ಜಪಾನಿನವರು ನಡೆಸಿರುವ ದಾಳಿಯೂ ಜಗತ್ತಿನ ದೃಷ್ಟಿಯನ್ನು ಫಾಸಿಝಂವಿನ ಕಡೆಗೆ ಸೆಳೆದಿರುವುವು. ನಾಝಿ ನೀತಿಗಳು ಮಾತುಯಂತ್ರ (Reich) ... ಜಗತ್ತಿನಲ್ಲಿ ಪ್ರಚಾರಪಡಿಸಲ್ಪಡುತ್ತಿವೆ ... ಹೇಳಿಯನ್ನು ... ಆದ ... ಶಕ್ತಿಯ ... ಮೇಲೆ ... ಬಿಸಿದ ... ಕೇಳಿದವರು ತಾನು ... ರಕ್ಷಿಸಿದ ... ಮುಂದೇವು ... ಜರ್ಮನ್ ... ಅರಾಜಕ ಸ್ಥಿತಿಯಲ್ಲಿದೆಯೆಂದು ... ಹಿಟ್ಲರರ ಇತರ ಜನಾಂಗಗಳಿಗ ... ಹಾನಿಯನ್ನು ... ಕೊಡುತ್ತಿರುವರು. ತನ್ನ ... ಸ್ವರ್ಗಸುಖ ಸಮಾನವೆಂದೂ, ಯೂರೋಪಿನಲ್ಲಿ ಶಾಂತಿ ಸ್ಥಾಪನೆಯಾಗಬೇಕಾದರೆ ಎಲ್ಲರೂ ತನ್ನನ್ನು ಹಿಂಬಾಲಿಸಬೇಕೆಂದೂ ತಾನೇ ಯೂರೋಪಿನ ಜೀವಾಳವೆಂದೂ ಅವರು ಹೇಳುತ್ತಿರುವರು. ಇಟಲಿ, ಜರ್ಮನಿ, ಜಪಾನು, ಇವುಗಳು ತಮ್ಮದೇ ಆದ ಹೊಸತೊಂದು ಸೃಷ್ಟಿಯ ಸವಿಗನಸುಗಳನ್ನು ಹೆಣೆಯುತ್ತಿರುವುವು

ಹೀಗಿರುವಾಗ ಯೂರೋಪಿನ ಪ್ರಜಾಧಿಪತ್ಯ ರಾಜ್ಯಗಳೆನಿಸುವ ಫ್ರಾನ್ಸ್, ಝೆಕೊಸ್ಲೊವೇಕಿಯಾ, ಬೆಲ್ಜಿಯಮ್ ಮತ್ತು ಬ್ರಿಟನ್ ಇವುಗಳ ಪರಿಸ್ಥಿತಿಯು ಏನು? ಪ್ರಜಾಧಿಪತ್ಯದ ಅಳಿವು ಅಥವಾ ಉಳಿವು, ಝೆಕೊಸ್ಲೊವೇಕಿಯದ ಅಳಿವು ಉಳಿವುಗಳನ್ನು ಹೊಂದಿಕೊಂಡಿದೆ ಎಂದು ಫ್ರಾನ್ಸಿನ ಅಭಿಪ್ರಾಯ. ಝೆಕೊಸ್ಲೊವೇಕಿಯವು ನಾಶವಾದರೆ, ಜರ್ಮನಿಯ ಅಧಿಕಾರವು ಪ್ರಥಮ ಪೂರ್ವ ಅನಂತರ ಮಧ್ಯ ಯೂರೋಪಿನಲ್ಲಿ ಪ್ರತಿಷ್ಠಿಸಲ್ಪಡುವುದು. ಪ್ರೇಗನ್ನು ಯಾರಾದರೂ ನುಗ್ಗಿದರೆ, ಅದು ತನ್ನನ್ನು ಕೆಣಕಿದಂತೆಯೇ ಸರಿಯೆಂದು ಫ್ರಾನ್ಸು ತಿಳಿಯುತ್ತದೆ.

ಪ್ರಜಾಧಿಪತ್ಯ ರಾಜ್ಯಗಳ ರಕ್ಷಣೆಯ ಕುರಿತು ಇನ್ನಿತರ ರಾಷ್ಟ್ರಗಳಲ್ಲಿ ಆಶೆಯ ಕಿರಣಗಳು ತೋರುತ್ತಿದ್ದರೂ, ಬ್ರಿಟನ್ನಿನ ದಿಗಂತದಲ್ಲಿ ಬಂದುಗೂಡುತ್ತಿರುವ ಕಾರ್ಮೋಡಗಳಿಂದ ಅದು ಹೊರಮೊನ್ನುವಂತಿಲ್ಲ

ಶಾಂತಿಗೆ ಆತಂಕ.

ಜರ್ಮನಿ ಇಟೆಲಿ ಜಪಾನುಗಳ ಒಂದು ಪಂಗಡದ ಉದ್ದೇಶ.

ಇಟೆಲಿಯು ಜನಾಂಗಸಂಘ ತ್ಯಜಿಸಿದುದು ವಿಶೇಷದ ಮಾತಲ್ಲ. ಅದೊಂದು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾಗಿರುವ ವಿಷಯವೇ ಅಲ್ಲ. ಮಾತಿಗೆ ಬೆಲೆಯಿಲ್ಲ. ಸಹಿಗೆ ಮೌಲ್ಯವಿಲ್ಲ, ಕರಾರೆಂದರೆ ತಕರಾರೇ ಎಂದು ನಂಬುವ ಮಹಾರಾಷ್ಟ್ರಗಳೂ ಕೆಲವು ಇರುವಾಗ, ನೈತಿಕ (ಅದು ರಾಜನೈತಿಕವೇ ಇರಲಿ) ವಾಯುವೇ ದುರ್ಗಂಧಮಯವಾಗಿರುವಾಗ,—ಇದೊಂದು ಆಡಂಬರದ ಅಟ್ಟಹಾಸವಲ್ಲದೆ ಈ ವಿಷಯವನ್ನೇನೂ ಬಹಳವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳುವ ಅಗತ್ಯವೇ ಇಲ್ಲ.

ನ್ಯಾಯವಾಗಿ ಸ್ಥಾಪಿತವಾದ ಸರಕಾರವನ್ನು ಮುರಿಯುವುದಕ್ಕೆ ದೇಶದ್ರೋಹಿಗಳನ್ನು ಪ್ರೋತ್ಸಾಹಿಸಿ ಅವರಿಂದಲೇ ದಂಗೆಯೆಬ್ಬಿಸಿ, ತನ್ನ ಸಂಪೂರ್ಣ ಸಹಾಯವಿತ್ತು, ಯಾವ ಶಾಂತಿಗೂ ಆತಂಕವನ್ನು ಸ್ಪೈಯಿನಿನಲ್ಲಿ ಉಂಟು ಮಾಡಿದ ಇಟೆಲಿಯು ಜಗತ್ತಿನಲ್ಲಿ ಯಾವ ಧ್ಯೇಯವುಳ್ಳದ್ದಾಗಬಹುದು? ಸ್ವಗೃಹದಲ್ಲಿ ನೆಲಸಿದ್ದ ನಿರಾಯುಧರನ್ನು ಕೆಡೆದಪ್ಪಳಿಸಿ, ತನ್ನ ರಾಜ್ಯವನ್ನು ಅಲ್ಲಿಗೆ ವಿಸ್ತರಿಸಿದ ಇಟೆಲಿಗೆ, ಅಬಿಸೀನಿಯವನ್ನು ಕಾದಾಡಿಯಂತೆ ನುಂಗಿದ ಇಟಲಿಗೆ, ಎಂತಹ ದೊಡ್ಡ ಧ್ಯೇಯವಿದ್ದೀತು?

ಕಳೆದ ಮಹಾಯುದ್ಧಾಂತ್ಯದಲ್ಲಿ ತನಗೆ ದೊರೆತ ಕೊಳ್ಳೆಯ ಅಂಶವು ಕಡಿಮೆಯಾಯಿತೆಂದು, ಇಟೆಲಿಯು ನಂಬಿದಂದಿನಿಂದ, ಜನಾಂಗ ಸಂಘದಲ್ಲಿ ಯಾವ ಸತ್ಕಾರ್ಯಕಲಾಪಗಳಲ್ಲಿ ಸೇರಿದ್ದಿಲ್ಲ. ಹಾಗೆಂದು, ಅಬಿಸೀನಿಯ ಸ್ಪೈನುಗಳ ವಿಷಯವಾಗಿ ಕಾಸಿನ ವಿಚಾರ ಪೂರ್ಣ ಸಹಾಯವನ್ನು ಮಾಡದ ಈ ಸಂಘವನ್ನು, ಅದು ಸಾಯಲಿದೆ ಎಂದಾದರೂ ಯಾರೂ ಅಳುವಂತಿಲ್ಲ. ಜನಾಂಗಸಂಘದ ಹಿತೇಚ್ಛುಗಳಾದರೂ, ಅದಕ್ಕೆ ಈ ಗತಿ ಒದಗಿದೆಂದು ಹಿಗ್ಗಬೇಕು. ಜೀರ್ಣಶೀರ್ಣವಾಗಿ ಕೊಳೆವ ಬದಲಾಗಿ, ಯಥಾಕಾಲದಲ್ಲಿ ಮೃತಿಹೊಂದುವುದು ಈ ಸಂಘಕ್ಕೆ ಕೀರ್ತಿ.

ಮುಂದರಿದು ಆಕ್ರಮಿಸಿ ಹರಡಬೇಕೆನ್ನುವ ಇಟೆಲಿಗೆ, ಲೀಗಿಂದ ಪುನಃ ವಿಚಾರ ನಡೆವ ಸಂದರ್ಭವುಂಟಾಗುವುದು. ಒಪ್ಪದ ವಿಷಯ. ಹೀಗಾಗಿ ಇಟಲಿ ಹೊರಬಿದ್ದಿದೆ. ಲೀಗ್ ಅಭಿಪ್ರಾಯಗಳಿಗೆ ಬೆಲೆಯಿಲ್ಲವಾದರೂ, ಅವು ಅಭಿಪ್ರಾಯಗಳಾದರೂ ಹೌದಷ್ಟು, ಅವನ್ನು ಸಹ 'ಕೇಳುವ ಇಚ್ಛೆಯಿಲ್ಲ'.

ಇನ್ನು ಫೆಸಿಸ್ಟರ ಬಲವು ಹೆಚ್ಚಾಗುವುದು, ಈಗ ಸೇರಿರುವ ಮೂರು ರಾಷ್ಟ್ರಗಳು—ಯೋಗ್ಯ ಒಡನಾಡಿಗಳು. ಇದರಲ್ಲಿ ಇತರರು ತಿಳಿಯಬೇಕಾದುದೇನೆಂದರೆ, ಇನ್ನು ಮುಂದೆ ಇವು ಮೂರೂ ಒಂದಾಗಿ ಮುಂದಾಗುವುವು. ಪ್ರಜಾಸತ್ತೆಯೆಂದರೆ ಇವು ಮೂರಕ್ಕೂ ಆಗದು. ಹೀಗಾಗಿ ತಮಗೆ ಬೇಕಾದುದನ್ನು ಒತ್ತಾಯದಿಂದ ಇವು ಸೆಳೆದೇ ಕೊಳ್ಳೆ ಹೊಡೆವುವು, ನಿಶ್ಚಯ. ಹೀಗಿರುವುದರಿಂದ, ಇವನ್ನು ಎದುರಿಸಬೇಕಾದರೆ, ಉಳಿದೆಲ್ಲ ಪ್ರಜಾಸತ್ತೆಯ ರಾಷ್ಟ್ರಗಳು ಒಂದಾಗಲೇ ಬೇಕಾಗಿದೆ. ಇವುಗಳೊಳಗೇ ಧ್ಯೇಯಗಳಲ್ಲಿ ಐಕ್ಯವಿಲ್ಲವಾದರೂ, ಇತರರನ್ನು ಸದೆಬಡಿದು, ಅವರ ಕಳೇಬರವನ್ನು ತಿನ್ನಲು ಇವು ಮೂರೂ ಸಿದ್ಧವೇ ಆಗಿವೆ.

ಬ್ರಿಟನ್, ಫ್ರಾನ್ಸ್, ರಷ್ಯ—ಇವು ಮೂರು ಜಮೀನುಳ್ಳವು, ಇವರ ಸಂಘವೇ ಜನಾಂಗ ಸಂಘ, ಎಂದು ಜನರಲ್ ಗೇರಿಂಗರ ಮಾತು. ಈ ಮಾತು ಸುಳ್ಳಲ್ಲ, ಆದರೆ ಇದಕ್ಕೆ ಬೆಲೆ ಮಾತ್ರ, ಜರ್ಮನಿ, ಇಟೆಲಿಗಳ ಬಾಯಿಂದ ಆದಿದರೆ ಬಾರದು. "ಇವರೊಳಗೆ ಮಸಲತ್ತು ಒಂದೇ,—ನಮಗೂ ಬೇಕು. ಅದನ್ನು ಪಡೆವುದಕ್ಕೆ ಇವರು ಶಕ್ತಿ ಬಲಾತ್ಕಾರಗಳನ್ನು ಪ್ರಯೋಗಿಸುವವರು. ಶ್ರೀಮಂತರನ್ನಾದರೂ ಕದ್ದು ಜೀವಿಸಲೆಳಸುವವರು ಸಜ್ಜನರಾಗಬಹುದೆ? ಹೀಗೆ ಕೊಬ್ಬಬೇಕೆನ್ನುವವರು ಸಾಧುಗಳಲ್ಲ.

ಇರಲಿ, ಇಟೆಲಿಯು ಹೀಗೆ ಸ್ಥಾನತ್ಯಾಗ ಮಾಡಿದುದರ ಪರಿಣಾಮವೇನಾದೀತು? ಮುಸಲೀನಿಯೋ ಹೇಳುವನು "ಯಾರು ಹೇಳಲಾರರು" ರಾಜೀನಾಮೆಗೆ ಬೆಲೆಯಿಲ್ಲ, ಇನ್ನು ಮಾಡಲಿಕ್ಕಿದೆಯೇನೋ ಅದರ ಬೆಲೆ ಕಟ್ಟಬರುತ್ತಿಲ. ಪ್ರಜಾಸತ್ತೆಯಲ್ಲಿರುವ ಹಿಂಡುಗಳು ಎಂದು ಮುಸಲೀನಿ ಎನ್ನುವಾಗ, ಅಂತರ ರಾಜ್ಯಗಳಲ್ಲಿ ಕುರಿಗಳೇ ಇರುವುವೆಂದು ಸೂಚಿಸುವನು, ತೋಳಗಳೇ ಇದನ್ನು ನುಂಗಬಲ್ಲವು ಡಿಕ್ಟೇಟರರೇ ತೋಳಗಳು. ಜಗತ್ತೆಲ್ಲವನ್ನು ಹೀಗೆ ಎರಡು ಭಾಗಗಳಲ್ಲಿ ವಿಂಗಡಿಸಬಹುದು ಕುರಿಹಿಂಡುಗಳಂತೆ ಬಾಳುವ ಪ್ರಜೆಗಳುಳ್ಳ ದೇಶಗಳು, ತೋಳಗಳೇ ಬೆಳೆದು ಕೊಳ್ಳೆಗಾಗಿ ಜೊಲ್ಲು ಸುರಿದು ಆಕ್ರಮಣ ಮಾಡುವವರಿರುವ ದೇಶಗಳು, ತುಂಬ ಜಮೀನುಳ್ಳ ದೇಶಗಳು, ಜಮೀನಿಗಾಗಿ ಹಸಿವುಳ್ಳ ದೇಶಗಳು ಇವೆರಡು ಪಂಗಡಗಳೊಳಗೆ ವಿವಾದವೆದ್ದು ಭೂಮಿಗೊಂದು ಅಪಾಯವುಂಟು.

"ತನ್ನ ಆಸ್ತಿಯ ಮೇಲೆ ಪೂರ್ಣಾಧಿಕಾರವನ್ನು ಇಟ್ಟುಕೊಂಡು, ಇತರರಿಗೆ ಅವರ ಜೀವನದ ಹಕ್ಕನ್ನು ಕೊಡಬಾರದೆನ್ನುವ ಅಭಿಪ್ರಾಯಗಳ ದಿನಗಳು ಮುಗಿದುವು" ಇವು ಜನರಲ್ ಗೇರಿಂಗನ ಉದ್ಗಾರಗಳು!

ಜರ್ಮನಿ ಇಟಲಿಯನ್ನು ಪ್ರತ್ಯೇಕಿಸುವುದಕ್ಕಾಗಿ ಲೋರ್ಡ ಹೆಲಿಫೆಕ್ಸರು ಜರ್ಮನಿಗೆ ತೆರಳಿದ್ದರೆ? ಆದೇನೆಂದು ಭಾವಿಸಿಯೆ, ಮುಸೋಲಿನಿಯು ಜರ್ಮನಿಗೆ ಜುಬಾಲೇಂಡನ್ನು ಒಪ್ಪಿಸಿರಬಹುದು.

ಫ್ರೆಂಚ್ ಮತ್ತು ಬ್ರಿಟಿಷ ನಾಯಕರಲ್ಲಿ, ರಷ್ಯದ ನೂತನ ರಾಜ್ಯಭಾರ ತತ್ವಗಳಿಗೆ ಒಲ್ಲದ ಶ್ರೀಮಂತರಿರುವರು. ಇದು ಕಾರಣವೇ, ಈ ಮೂರು ರಾಷ್ಟ್ರಗಳಲ್ಲಿ ಸಂಪೂರ್ಣ ಐಕ್ಯತೆಯುಂಟಾಗುವುದು ಕಷ್ಟವಾದೀತು. ಮೊದಲೇ ರಾಜ್ಯ ಕಡಮೆ ಇರುವವರು ಕಳಕೊಳ್ಳಲಿಕ್ಕೇನಿದೆ? ರಾಜ್ಯವಿಸ್ತಾರವಿದ್ದವರಿಗ ಮಾತ್ರ ಮೋಸವುಂಟು.

ಈ ಸಂದಿಗ್ಧ ಸಮಯದಲ್ಲಿ, ಭಾರತ ವರ್ಷಕ್ಕೆ ಸ್ವರಾಜ್ಯ ಕೊಡಲು ಬ್ರಿಟಿಷರು ಸಿದ್ಧ ಹಸ್ತರೇ?—ಈ ವಿಷಯವನ್ನು ಮುಂದಿನ ಹರಿಪುರ ಕಾಂಗ್ರೆಸಿನಲ್ಲಿ ರಾಷ್ಟ್ರಸಭೆಯೂ ಯಾವ ಸೂಚನೆ ಮಾಡುವುದೋ ನೋಡಬೇಕ.

Canara Bank Limited,
PUTTUR.
ಕೆನರಾ ಬೇಂಕ್ ಲಿಮಿಟಡ್,
ಪುತ್ತೂರು

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲ್ಕೆ ಪಡೆದ ಸಾಲದ ಮೊಬಲಗನ್ನಾಗಲೀ, ವ ಅದರ ಮೇಲಣ ಬಡ್ಡಿಯನ್ನಾಗಲೀ ಸರಿಯಾಗಿ ವ್ಯಾದೆಗೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಅವರಿಗೆ ಕ್ರಮವಾಗಿ ಬಿಟ್ಟ ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದಂತೆಯೂ ಕೆಲವರು ಸಿಕ್ಕಲಿಲ್ಲವಾಗಿ ಪರತು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ—ಸದ್ರಿಯವರಿಂದ ಬ್ಯಾಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ, ರಜಿಸ್ಟ್ರಿನೋಟೀಸು ಖರ್ಚು ಸಹ ಇದೇ ಬರುವ ಜನವರಿ ತಾರೀಕು 7ರ ವಳಗೆ ಸದ್ರಿಯವರು ಬ್ಯಾಂಕಿಗೆ ತಂದು ಸಲ್ಲಾಸಿ ಅಡವಿಟ್ಟ ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯಿಟ್ಟ ಪಕ್ಷದಲ್ಲಿ ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 12—1—1938ರಲ್ಲು ಮಧ್ಯಾಹ್ನ ಗಂಟೆ 2ಕ್ಕೆ ಯಾ ಆದರ ನಂತರ ವ್ಯಾಂಕಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹ ಯಾವ ತರದ ನೋಟೀಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು.

S L 100/35 ಗೋವಿಂದ ಭಟ್ಟ, ಸುಬ್ರಹ್ಮಣ್ಯ ಭಟ್ಟ ಮಗ, ಪುಣಚ ಗ್ರಾಮದ ಇನತ್ತೋಡಿ, ವಿಟ್ಲ ಪೋಸ್ಟು ಅಸ್ಲು ರೂ 10

S L 169/35 ಶಂಕರನಾರಾಯಣ ಭಟ್ಟ, ಗಣಪತಿ ಭಟ್ಟ ಮಗ, ಕರೋಪಾಡಿ ಗ್ರಾಮ, ವಿಟ್ಲ ಪೋಸ್ಟು ಅಸ್ಲು ರೂ 19

S L 89/36 ಕಂಬ್ಳಿ ಯಾನೆ ನಾರ್ಣಪ್ಪ ಕನ್ನಯ್ಯರವರ ಮಗ, ಬೆಳ್ವಾರೆ ಗ್ರಾಮ, ಬೆಳ್ವಾರೆ ಪೋಸ್ಟು, ಅಸ್ಲು ರೂ 15

Office of the Bank Puttur 13—12—37 — M. Anantha Bhandary, Agent

7 O'CLOCK

SLOTTED BLADE,

ಸೆವೆನೋಕ್ಲೋಕ್ ಮಾರ್ಕಿನ ಬ್ಲೇಡುಗಳು ಅತಿ ಅಗ್ಗವಾದ ಅತ್ಯುತ್ತಮ ಬ್ಲೇಡುಗಳು ಅವುಗಳ ಬಾಯಿ ಒಳ್ಳೆ ಹರಿತವಾಗಿದ್ದು ಚೊಕ್ಕಟವಾದ ಉರಿಯಿಲ್ಲದ ಕ್ಷೌರಗಳನ್ನು ಕೊಡಬಲ್ಲುವು ಅವುಗಳ ಬಾಳಿಕೆ ಬಹಳ ಹಳೆ ತರದ ಬ್ಲೇಡುಗಳಿಗಿಂತ ಇವು ಉತ್ತಮವಾದುವುಗಳು



8 ಆಣೆಗಳಿಗೆ ಬ್ಲೇಡುಗಳು 10

707

ಪೆಲೆಸ್ಟೀನ.

ಲಂಡನಿನಲ್ಲಿ ಮಹಾಸಭೆ: ಮುಸ್ಲಿಮ ಪ್ರತಿನಿಧಿಗಳ ಅಭಿಪ್ರಾಯ

ಬ್ರಿಟಿಷರು ಮಾತು ಮುರಿಯಬಾರದು.

ಬ್ರಿಟಿಷ, ಹಿಂದೀ, ಇರಾಕೀ ಇಜಿಪ್ಶಿಯನ್ ಸಿರಿಯನ್ ಮೊದಲಾದ ಯಾವತ್ತು ಮುಸ್ಲಿಮರ ಒಂದು ಸಭೆ ಲಂಡನಿನಲ್ಲಿ ಸೇರಿತ. ಸರ್ ಅರ್ನೆಸ್ಟ್ ಬೆನ್ನಟ್ ಲೋರ್ಡ್ ಲೆಮಿಂಗ್ಟನ್ ಮೊದಲಾದವರು ಅಧ್ಯಕ್ಷಸ್ಥಾನದಲ್ಲಿದ್ದರು.

ಅರಬ ಪತ್ರಗಳಿಂದ ಬಂದ ಚಾರ ವರ್ತಮಾನ ಅಥವಾ ಅಭಿಪ್ರಾಯಗಳು ಲಂಡನಿನಲ್ಲಿ ಪ್ರಕಟವಾಗ ತಿಲ್ಲವೆಂದು ಮಾದಬಿನೆ ದೂರು. ಯೆಹೂದ್ಯರ ಪತ್ರಿಕಾ ಹಿಪಾಲಯ[illegible]ವನ್ನು ಎಲ್ಲೆಲ್ಲಿಯೂ [illegible] ಒತ ಅರಬ [illegible] ಮೇಲೆ ಚೆಲ್ಲಿ ಅವರನ್ನು ಮ[illegible] ಯೆಹೂದ್ಯ ಮತದ [illegible]ವಾಗಿ [illegible] ದ್ಯರು ಧರ್ಮ[illegible] ಮಾತ್ರ [illegible] ವನ್ನೂ ಪಡೆದು ತಾವೇ ಅಧಿಕ ಅಧಿಕಾರಿ[illegible] ಗವೇಕೆನ್ನುವುದ ತಪ್ಪು ದಾಮಿ[illegible] ಎಲ್ಲೆಲ್ಲಿರುವ ಯೆಹೂದಿಯರ ಮಾತು ಕೇಳಿ ಇಂಗ್ಲೀಷರು ಹಣವನ್ನು ಜೀವಗಳನ್ನು ಕಳೆದುಕೊಂಡ ಪೆಲೆಸ್ತೀನವೊಂದು ರಣರಂಗವಾಗಿ ಮಾರ್ಪಡಿಸಿಕೊಂಡು [illegible] ಇವರೇಕೆ?

ಹಿಂದುಸ್ಥಾನದಲ್ಲಿ ಮುಸ್ಲಿಮರ ಮನಸ್ಸಿನಲ್ಲಿ ಬಹಳ [illegible] ಈ ಜಗದಲ್ಲಿ [illegible] ಹಿಂದೀಯರ ಸಹಾನುಭೂತಿಯೂ ಇದ ಪೆಲೆಸ್ತೀನದಲ್ಲಿ ಇಂಗ್ಲೀಷರು ಈಗ ಕೈಕೊಂಡಿರುವ ರಾಜ್ಯತಂತ್ರವನ್ನು ಕೊಂಗ್ರೆಸ್ಸು ನಿಷೇಧಿಸಿದೆ. ಬ್ರಿಟಿಷರು ಈಗ ಮಾಡುತ್ತಿರುವ ಅನ್ಯಾಯವನ್ನು ದೂರದು, ಉತ್ತಮವಾದ ನ್ಯಾಯಮಾರ್ಗವನ್ನು ಕೈಕೊಂಡರೆ, ತಂಟೆ ತಕರಾರುಗಳು ಉಂಟಾಗುವುವು. ಬ್ರಿಟಿಷರು ನ್ಯಾಯವನ್ನು ಸಾಧಿಸಬೇಕು [illegible] ಮುಸ್ಲಿಮರು.

ಬ್ರಿಟಿಷರ ವಿಷಯವಾಗಿ ಅರಬರ ಅಭಿಪ್ರಾಯಗಳಲ್ಲಿ ಅಫ್ಘಾನ ಕವನಸ್ತದರೂ ಇಂಗ್ಲಿಷರು ತಿಳಿದಿದ್ದರೆ [illegible] ಸರಕಾರದ ಕೈತಡೆಯುತ್ತಿದ್ದರು ಎಂದು ಶ್ರೀ ಯುಸಫ್ ಅಲಿಯವರು ಹೇಳಿದರು.

ಇಜಿಪ್ತಿನ ದೆಸ್ಸೂಕಿಯವರು—ಪೆಲೆಸ್ತೀನದಲ್ಲಿರುವ ಅರಬರಿಗೆ ಇಜಿಪ್ತದ ಮುಸ್ಲಿಮರ [illegible] ಇಜಿಪ್ತದ ಪೂರ್ವ[illegible]ದಲ್ಲಿ ಯೆಹೂದ್ಯ ರಾಜ್ಯವಾಗ [illegible] ಇಜಿಪ್ತಿ[illegible] ಇದಲ್ಲದ [illegible] ಬ್ರಿಟಿಷರ [illegible] ಬ್ರಿಟಿಷರಿಗೆ ಇಜಿಪ್ತಿನಲ್ಲಿ [illegible] [illegible] ಬ್ರಿಟಿಷರ [illegible] [illegible] [illegible] ಎಂದರು.

ಇರಾಕ್ [illegible] ಪ್ರತಿನಿಧಿಗಳು, ಪೆಲೆಸ್ತೀನದಲ್ಲಿ [illegible] [illegible] ಎಂದು ತಿಳಿಸಿದರು.

ಅನಂತರ ಇಸ್ಮಾಯಿಲ್ [illegible] ಈ ನಿರ್ಣಯವನ್ನು ಮುಂದಿಟ್ಟರು. ಅದು [illegible]—

ಬ್ರಿಟಿಷ ಸಾಮ್ರಾಜ್ಯದ ಎಲ್ಲ ದೇಶಗಳ ಮುಸ್ಲಿಮ ಪ್ರತಿನಿಧಿಗಳು ಈ ಕೆಳಗಿನ ನಿರ್ಣಯವನ್ನು ಮಂಜೂರುಮಾಡಿರುವರು. ಮಹಾಯುದ್ಧದ ಕಾಲದಲ್ಲಿ ಅರಬರಿಗೆ ಬ್ರಿಟಿಷರ ಕೊಟ್ಟಿರುವ ವಾಗ್ದಾನವನ್ನೆ ಮುರಿಯುವಂತಹದಾದ ವಾಲ್ಫೂರ್ ಸಾಹೇಬರ ನಿರ್ಣಯವನ್ನು ರದ್ದುಪಡಿಸಬೇಕು. ಅರಬರ ಹಕ್ಕುಗಳನ್ನೂ ವಿಶ್ವಾಸವನ್ನೂ ನಿರಾಕರಿಸಿದರು ಬ್ರಿಟಿಷ ನೀತಿಯನ್ನು ತ್ಯಜಿಸಬೇಕು. ತಪ್ಪಾದ ನೀತಿಯಿಂದ ಬ್ರಿಟಿಷರೂ ಅರಬರ ಹವನ್ನು ಪ್ರತೀ ದಿನ ಕಳೆದುಕೊಳ್ಳುತ್ತಿರುವುದು ಶೋಚನೀಯವಾಗಿದೆ. ಪೆಲೆಸ್ತೀನವ ವಿಭಾಗಿಸಿ ಪವಿತ್ರ ಸ್ಥಳಗಳನ್ನು ಮುಸ್ಲಿ ಕೈಯಿಂದ ಮುಸ್ಲಿಮರಲ್ಲದವರ ಕೈಗೊಪ್ಪುವುದು ಅನ್ಯಾಯವಾಗಿದೆ. ಅರಬರಲ್ಲಿ ಉಂಟಾಗಿರುವ ವೈಮನಸ್ಸನ್ನು ದೂರಗೊಳಿಸಿ ಯೆಹೂದ್ಯರೂ ಬ್ರಿಟಿಷರೂ ಸೇರಿ ಉಯೋಜನೆಗಳನ್ನು ಮಾಡತಕ್ಕದಾಗಿದೆ.

(ಮುಸ್ಲಿಮ ಸೊಸಾಯಿಟಿ ಆಫ್ ಗ್ರೇಟ್ ಬ್ರಿ)

ಮದ್ರಾಸಿನಲ್ಲಿ ನೈಲರ ಪ್ರತಿಮೆಗೆ ವಿಶ್ರಾಂತಿಗ್ರಹ ಮ್ಯೂಜಿಯಮ್.

ನೈಲರು ನಡೆಸಿದ ಭಯಂಕರ ಅತ್ಯಾಚಾರ

“ಇಂತಹ ಪ್ರತಿಮೆಗಳೆಂದರೆ ಅವಚಿಹ್ನೆಗಳು! ಬ್ರಿಟಿಷ್ ಸರಕಾರದ ದಬ್ಬಾಳಿಕೆಯ ಮತ್ತು ಅಸತ್ಯದ ಆಚ್ಛೀಯದ ಪ್ರಮಾಣಗಳವು” ಎಂದು ಹತ್ತು ವರ್ಷಗಳ ಹಿಂದೆ ನೈಲ್ ಪ್ರತಿಮೆಯ ಸತ್ಯಾಗ್ರಹದಸಮಯದಲ್ಲಿ ಮಹಾತ್ಮಾಜಿಯವರು ಬರೆದಿದ್ದರು. ಈಗ ಮದ್ರಾಸ್ ಮಂತ್ರಿಮಂಡಲದವರು ಅದನ್ನು ಸ್ಥಾನಚ್ಯುತಿಪಡಿಸಿ ಮ್ಯೂಜಿಯಮ್ಮಿಗೆ ಕೊಂಡೊಯ್ದು ಇರಿಸಿರುವರು ಮುಂದಿನ ಜನಾಂಗದವರಿಗೆ ನೈಲದೊರೆಗಳ ಅತ್ಯಾಚಾರದ ನೆನಪನ್ನು ಮಾಡಿಕೊಳ್ಳಲು ಅದು ಅಲ್ಲಿ ಇರುವುದು

ಬ್ರಿಟಿಷರ ಹಿಂದೂದೇಶದ ಆಳ್ವಿಕೆಯಲ್ಲಿ ಜನರಲ್ ನೈಲರ ಕ್ರೂರತನವನ್ನು ಮೀರುವಂತಹ ಇನ್ನೊಂದು ಪ್ರಸಂಗವು ಇರದು ಜಾಲ್ಯಿನ್‌ವಾಲಾಭಾಗಿನಲ್ಲಿ ನಡೆಸಿದ ಜನರಲ್ ಡಾಯರರ ಅತ್ಯಾಚಾರಗಳೂ ಇದಕ್ಕೆ ಸರಿಗಟ್ಟಲಾರವು. ಶಿಪಾಯಿ ದಂಗೆಯ ಸಮಯದಲ್ಲಿ ಕಾನಪುರದಲ್ಲಿ ನೈಲರು ಅಂತಹ ಅಮಾನುಷ ಕೃತ್ಯಗಳನ್ನು ನಡೆಸಿರುವರು ಅವರು ಜನರಿಗೆ ಹಾವುಗಳಂತೆ ನೆಲದ ಮೇಲೆ ತೆವಳುತ್ತ ಹೋಗಬೇಕೆಂದು ಹೇಳಿದುದಲ್ಲದೆ ನೆಲದ ಮೇಲೆ ಬಿದ್ದ ಆಂಗ್ಲೇಯನ ಪ್ರತಿಯೊಂದು ರಕ್ತದ ಬಿಂದುವನ್ನು ನೆಕ್ಕಿ ತೆಗೆಯುವಂತೆ ಮಾಡಿದ್ದರು

ಶಿಪಾಯಿ ದಂಗೆಯ ದಿನಗಳಲ್ಲಿ ನೈಲರು ಮದ್ರಾಸಿನಲ್ಲಿರುವ ಸೈನ್ಯದ ಅಧಿಕಾರಿಗಳಾಗಿದ್ದರು ಅಲ್ಲಿಂದ ಬಂಗಾಳಕ್ಕೆ ಹೋಗುವಂತೆ ಅವರಿಗೆ ಅಪ್ಪಣೆಯು ಬಂತು ಬನಾರಸಿನಲ್ಲಿನ ದಂಗೆಯನ್ನು ಅಡಗಿಸಿ, ಅಲಹಾಬಾದಿಗ ಹೋಗಿ, ಅಲ್ಲಿಂದ ಅವರು ಕಾನಪುರಕ್ಕೆ ಹೋದರು ಕಾನಪುರ ಕೋಟೆಯಲ್ಲಿ ಸಾಧಾರಣ 200 ಮಂದಿ ಆಂಗ್ಲೇಯರು ಸೆರೆಯಲ್ಲಿದ್ದರು ಬ್ರಿಟಿಷರ ಸೈನ್ಯವೊಂದು ಬರುತ್ತಿರುವುದೆಂಬ ವರ್ತಮಾನವನ್ನು ಕೇಳಿದೊಡನೆ, ದಂಗೆಖೋರರ ನಾಯಕರಲ್ಲೊಬ್ಬನಾದ ನಾನಾ ಎಂಬಾತನು ಸೆರೆಯಾಳುಗಳೆಲ್ಲರನ್ನೂ ಗುಂಡಿಕ್ಕಿ ಕೊಲ್ಲುವಂತೆ ಆಜ್ಞೆಯಿತ್ತನು.

ಕಾನಪುರವು ಬ್ರಿಟಿಷರ ವಶವಾದ ನಂತರ ನಾನಾ ಸಾಹೇಬನು ಪಲಾಯನಮಾಡಿದನು ನಂತರ ಪ್ರತೀಕಾರಕ್ಕೆ ಮೊದಲಾಯಿತು ಈ ಕುರಿತು ನೈಲ ಸಾಹೇಬರೇ ಬರೆದುದನ್ನು ಓದಿರಿ—‘ಇಂತಹ ದಂಗೆಖೋರರಿಗೆ ಕೊಡುವ ಶಿಕ್ಷೆಯು ಎಂದೆಂದೂ ಮರೆಯಲಾಗದ ಕಠಿಣವಾದ ಶಿಕ್ಷೆಯೆಂದು ನಾನು ಹಿಂದೂದೇಶದ ನಿವಾಸಿಗಳಿಗೆ ತಿಳಿಸಲು ಅಪೇಕ್ಷಿಸುತ್ತೇನೆ ನಾನು ಮಾಡಿದ ಕೃತ್ಯಗಳು ಮುಗ್ಧರಾದ ಬ್ರಾಹ್ಮಣರಿಗೆ ಸಹಿಸಲಸಾಧ್ಯವೂ, ಅಸಹ್ಯವೂ ಆಗಿ ತೋರಬಹುದು ಆದರೆ ಇಂತಹ ಪ್ರಸಂಗಗಳಲ್ಲಿ ಇದು ತಕ್ಕದೆಂದು ನಾನು ನಂಬುತ್ತೇನೆ’ ಎಂಬುದಾಗಿ ಅವರು ಒಂದು ಪತ್ರದಲ್ಲಿ ಬರೆದಿದ್ದರು

ನಂತರ 25ನೇ ಜುಲಾಯಿ 1857ರಲ್ಲಿ, ಬ್ರಿಟಿಷರನ್ನು ಕೊಲೆಮಾಡಿದ ಆ ಕೋಣೆಯಲ್ಲಿ ಬಿದ್ದ ರಕ್ತವೆಲ್ಲವನ್ನೂ ಅಪರಾಧಿಗಳಿಂದ ನೆಕ್ಕಿಸಿ ತೆಗೆಸುವಂತೆ ಕಟ್ಟಪ್ಪಣೆಯು ಹೊರಟಿತು. ಅಲ್ಲದೆ ಈ ಕೃತ್ಯವನ್ನು ಮಾಡಿಸುವ ಸಮಯದಲ್ಲಿ ಅದು ಅವನ್ನು ಅಸಹ್ಯವಾಗಿ ತೋರುವಂತೆ ಮಾಡಬೇಕಾಗಿಯೂ, ಹಾಗೆ ಮಾಡಲು ಕೇಳದವರನ್ನು ಹೊಡೆದು ಒಡೆದಾದರೂ ಒಪ್ಪಿಸುವಂತೆಯೂ, ಈ ರೀತಿ ಕೋಣೆಯೆಲ್ಲವೂ ಸ್ವಚ್ಛಮಾಡಲ್ಪಟ್ಟ ನಂತರ ಅಪರಾಧಿಗಳೆಲ್ಲರನ್ನೂ ಕೂಡಲೆ ಗಲ್ಲಿಗೇರಿಸುವಂತೆಯೂ ಆ ಅಪ್ಪಣೆಯಲ್ಲಿ ನಿರೂಪಿಸಲ್ಪಟ್ಟಿತ್ತು

‘ಈ ರೀತಿಯ ವಿಚಿತ್ರ ಶಿಕ್ಷೆಗೆ ಗುರಿಮಾಡಲ್ಪಟ್ಟವರಲ್ಲಿ ಒಬ್ಬ ಬೊಜ್ಜುಬೆಳೆದ ಬ್ರಾಹ್ಮಣನೇ ಮೊದಲಿಗನು ನೈಲರರ ಹೇಳಿಕೆಯಿದು—ಒಂದು ಕಸಬರಿಕೆಯನ್ನು ಆತನ ಕೈಯಲ್ಲಿ ಕೊಟ್ಟು ತನ್ನ ಕಾರ್ಯವನ್ನು ಪ್ರಾರಂಭಿಸುವಂತೆ ಆತನಿಗೆ ಹೇಳಲಾಯಿತು ಆತನು ಪ್ರತಿಭಟಿಸಿದನು, ಆಗಲೇ ಚಬುಕಿನ ಪೆಟ್ಟು ಬಿತ್ತು ಸಾಧಾರಣ ಅರ್ಧ ಅಡಿ ಚದರಳತೆಯಷ್ಟು ನೆಲವನ್ನು ನೆಕ್ಕಿ ಆತನು ಸ್ವಚ್ಛಗೊಳಿಸಿದ ನಂತರ ಆತನನ್ನು ಗಲ್ಲಿಗೇರಿಸಲಾಯಿತು

ಕೆಲವು ದಿನಗಳ ನಂತರ ಇನ್ನೂ ಅನೇಕ ಮಂದಿಯನ್ನು ಕರೆಲಾಯಿತು ಇವರಲ್ಲಿ ನಮ್ಮ ಸಿವಿಲ್ ಕೋರ್ಟಿನ ಅಧಿಕಾರಿಗಳಲ್ಲೊಬ್ಬನಾದ ಮುಸಲ್ಮಾನ ಶಿಂರನೊಬ್ಬನಿದ್ದನು ಆತನು ಪ್ರತಿಭಟಿಸಿದೊಡನೆ ದಂಡನೆಯು ನಡೆದು ನಂತರ ಆತನಿಂದಲೂ ನೆಕ್ಕುವ ಕೆಲಸವು ಸಾಂಗವಾಗಿ ನಡಿಸಲಾಯಿತು ಈ ಬಗೆಯ ದಂಡನೆಯು ವಿಚಿತ್ರವೆಂದು ತೋರಿದರೂ ನನಗೆ ಇದರಲ್ಲಿ ದೈವಸಹಾಯವಿದೆಯೆಂದು ನಾನು ನಂಬುತ್ತೇನೆ.’

ಇದಲ್ಲದೆ ತಂಡತಂಡವಾಗಿ ಬಹುವಿಧದ ಪೀಡನೆಯನ್ನು ಕೊಟ್ಟು ಜನರ ಕೊಲೆಗಳು ನಡೆದುವು

ಇಂತಹ ಅನಾಚಾರ ಅಕೃತ್ಯಗಳನ್ನು ನಡೆಸಿದ ನರರಾಕ್ಷಸನ ಸ್ಮಾರಕಾರ್ಥವಾಗಿ ಅವನದೊಂದು ಪ್ರತಿಮೆಯು ಮಾಡಲ್ಪಟ್ಟು ಮದರಾಸಿನಲ್ಲಿ ಇಡಲಾಯಿತೆಂದರೆ ಬಹಳ ಶೋಚನೀಯವಾದ ಮಾತು ಇಂದಿನ ನಾಗರಿಕತೆಯ ವೇಳೆಗೊಂದು ಅತ್ಯಾಚಾರ ಇಂದು ಆ ಮೂರ್ತಿಯನ್ನು ತೆಗೆಸಿದ ಕಾಂಗ್ರೆಸ್ ಮಂತ್ರಿಮಂಡಲದವರ ಪ್ರತಿಯೊಬ್ಬನ ವನ್ನನೆಗೆ ಪಾತ್ರರಾಗದಿರರ

ದೇಹವು ನಡುಗುವುದೇಕೆ?

ದೇಹದ ಶಾಖವು 90 ಡಿಗ್ರಿ ಗೆ ಇಳಿದ್ದರೆ ಚಳಿ ಬರುವುದು ಶರೀರದಲ್ಲಿ ರಕ್ತದ ಸಂಚಲನವು ಹೆಚ್ಚಾಗಿ ದೇಹದ ಸಹಜ ಶಾಖಕ್ಕಿಂತಲೂ ಐದಾರು ಪಾಲು ಶಾಖವು ಹುಟ್ಟಿ ಅದನ್ನು ಹೊರಗೆ ದಬ್ಬುವ ಸಮಯದಲ್ಲಿ ದೇಹವು ಬೆವರುವುದು

83ರಿಂದ 90 ಡಿಗ್ರಿಗಳ ತನಕ ದೇಹದ ಪರಿಸ್ಥಿತಿಯು ಯಥಾವಸ್ಥಿತವಾಗಿದ್ದು ಮನುಷ್ಯನ ಇನ್ನಿತರ ಕೆಲಸಗಳನ್ನು ಮಾಡಲು ಯಾವ ತೊಡಕೂ ಉಂಟಾಗುವುದಿಲ್ಲ

83 ಡಿಗ್ರಿಗಳಿಗಿಂತ ದೇಹದ ಶಾಕವು ಕಡಿಮೆಯಾದ್ದರೆ ಸೂಕ್ಷ್ಮರಕ್ತನಾಳಗಳು ಕುಗ್ಗಿ ದು ಬಿಕೊಂಡು, ರಕ್ತಸಂಚಲವು ತಡೆಗಟ್ಟಿದಂತಾಗಿ ಶಾಖದ ಪ್ರಸಾರಕ್ಕೆ ತೊಡಕುಂಟಾಗಿ ನಡುಗಲು ಪ್ರಾರಂಭವಾಗುವುದು

ಇಂಡಿಯದ ಹತ್ತಿಯೂ ಜಪಾನೂ.

ಚೀನಾ ಜಪಾನು ಯುದ್ಧದಿಂದಾಗಿಯೂ ಜಪಾನಿನವರು ಆಮದುಮಾಡುವ ಸಾಹಿತ್ಯಗಳನ್ನು ಕಮ್ಮಿಮಾಡಿರುವುದರಿಂದಲೂ ಹಿಂದೂದೇಶದಿಂದ ಜಪಾನಿಗೆ ಹೋಗುತ್ತಿನ ಹತ್ತಿಯು ಬಹಳ ಕಮ್ಮಿಯಾಗಿದೆ ಅನೇಕ ಹತ್ತಿಯ ವ್ಯಾಪಾರಿಗಳಿಗೆ ವ್ಯಾಪಾರವನ್ನು ಮಾಡುವುದೇ ಕಷ್ಟವಾಗಿದೆ ಕಾರಣ ತಮ್ಮ ಹತ್ತಿಯ ಬದಲು ಜಪಾನಿನ ಸಾಹಿತ್ಯಗಳನ್ನು ಪಡಕೊಳ್ಳಬೇಕೆಂದು ಜಪಾನೀಯರು ಹೇಳುತ್ತಿರುವರು ಇನ್ನು ಕೆಲವು ದಿನಗಳ ತನಕ ಹಾಗೆಯೇ ನಡೆದರೆ ಪರಿಸ್ಥಿತಿಯು ಬಹಳ ಕೆಟ್ಟುಹೋಗಬಹುದೆಂಬ ಬೆದರಿಕೆಯು ಇದೆ

ಜಪಾನಿನವರು ನಮಗೆ ಅನುಕೂಲವಾಗಿ ನಡೆದರೆ, ಹತ್ತಿಯ ಬೆಲೆಯು ಏರಬಹುದೆಂದೂ ಊಹಿಸಲಾಗಿದೆ

ಚಿತ್ರವಿಚಿತ್ರ.

ಬಣ್ಣಬಣ್ಣದ ಹೊಗೆ.

ಸಿಗರೇಟಿನಿಂದ, ಸೇದುವ ಸಮಯದಲ್ಲಿ ಬಗೆಬಗೆಯ ಬಣ್ಣದ ಹೊಗೆಯು ಹೊರಡುವಂತೆ ಮಾಡುವ ಒಂದು ಶೋಧನೆಯು ಮಾಡಲಾಗಿದೆ

ಇನ್ನು ಸಿಗರೇಟುಭಕ್ತರ ಬಾಯಿಯಿಂದ ಬಣ್ಣಬಣ್ಣದ ಹೊಗೆಯು ಹೊರಡುವುದನ್ನು ನಾವು ಕಾಣಬಹುದಲ್ಲವೇ?

ನೊಣಗಳ ಮೇಲೂ ನೇಗಿರುವರು

ಜಪಾನೀಯರು ಚೀನದ ಮೇಲೆ ರೇಗಿರುವುದೇನಾಶ್ಚರ್ಯ! ನೊಣಗಳ ಮೇಲೂ ಅವರು ರೇಗಿರುವರು ಅವುಗಳನ್ನು ಕೊಲ್ಲುವಂತೆ ಅಲ್ಲಿಯ ಜನರಿಗೆ ಪ್ರೋತ್ಸಾಹವು ಕೊಡಲಾಗುತ್ತದೆ ಪ್ರಾಮುಖ್ಯವಾಗಿ ಜಪಾನ ಮಕ್ಕಳಿಗೆ ನೊಣಗಳನ್ನು ಕೊಲ್ಲುವ ವಿವಿಧ ಕ್ರಮಗಳನ್ನು ಕಲಿಸುತಿದ್ದಾರೆ ವಾರಕ್ಕೊಮ್ಮೆ ಕೊಲ್ಲಲ್ಪಟ್ಟ ನೊಣಗಳ ಖಾನೇಸುಮಾರಿಯು ತೆಗೆಯಲಾಗುತ್ತದೆ

ಕಳೆದ ವಾರದಲ್ಲಿ 98,704,706 ನೊಣಗಳು ವಧೆ ಮಾಡಲ್ಪಟ್ಟುವು ಕಿತಿಯಾ ಎಂಬ ಪ್ರದೇಶದ ನೊಣಗಳ ಶಿಕಾರಿಯೊಬ್ಬನೇ 220,191ನ್ನು ಕೊಂದಿರುವರು ಆತನಿಗೆ ಪ್ರಥಮ ಬಹುಮಾನವು ಸಿಕ್ಕಿರುವುದು

ಮಂಗಳೂರಿನಲ್ಲಿ ಸೊಳ್ಳೆಗಳ ಉಪಟಳವನ್ನು ನಿವಾರಿಸಲು ಮುನಿಸಿಪಾಲಿಟಿಯವರು ಇಂತಹುದೇ ಏನಾದರೊಂದು ಆಲೋಚನೆಯನ್ನು ಮಾಡಬಾರದೆ?

ರೇಡಿಯೋ ಜ್ವರ

ಕಳೆದ ಮಹಾ ಯುದ್ಧದ ನಂತರ ವಿಜ್ಞಾನಶಾಸ್ತ್ರಜ್ಞರ ಜ್ವರದಿಂದಲೂ ಒಂದು ಉಪಯೋಗವಿದೆಯೆಂದು ಕಂಡುಹಿಡಿದಿದ್ದರು ದೇಹದ ಶಾಖವು ಹೆಚ್ಚಾಗುವುದೆಂದರೆ ಕ್ಷೀಣವಾದ ಮತ್ತು ಕೆಟ್ಟದಾದ ದೇಹವನ್ನು ಕಾಪಾಡಲು ಪ್ರಕೃತಿಯ ಉಪಾಯವೆಂದು ಅವರ ಅಭಿಪ್ರಾಯವಾಗಿತ್ತು ಕೆಲವೊಮ್ಮೆ ರೋಗಗಳನ್ನು ಕೃತಕ ಜ್ವರವನ್ನು ಬರಿಸಿ ಗುಣಪಡಿಸಿರುವರು ಈ ವಿಧ ಚಿಕಿತ್ಸೆಯು ಪಕ್ಷವಾತದ ಮೇಲೆ ಬಹಳ ಫಲಕಾರಿಯಾಗಿರುವುದು

ರೇಡಿಯೋವು ದೇಹದ ಶಾಖವನ್ನು ಹೆಚ್ಚಿಸಬಲ್ಲುದೆಂದೂ, ರಕ್ತದ ಒತ್ತಾಟವನ್ನು ಹೆಚ್ಚಿಸಬಲ್ಲುದೆಂದು, ಅವರು ಈಗ ಕಂಡುಹಿಡಿದಿರುವರು ಶಾಖವನ್ನು ಹೆಚ್ಚಿಸುವ ಬೇರೆ ವಿಧಾನಗಳು ಬಹಳ ತೊಡಕಿನವುಗಳಾದ ಕಾರಣ ಇನ್ನು ಮುಂದೆ ದೇಹದ ಶಾಖವನ್ನು ಹೆಚ್ಚಿಸಲು ರೇಡಿಯೋಗಳು ಉಪಯೋಗಿಸಲ್ಪಡಬಹುದು ಈ ಕುರಿತು ಪ್ರಯೋಗಗಳು ನಡೆಯುತ್ತಿವೆ

ಕರುವಿನ ಹೊಟ್ಟೆಯಲ್ಲಿ ಬಂಗಾರದ ಗಡಿಯಾರ

ನಮ್ಮಲ್ಲೊಂದು ಕಥೆಯಿದೆ ಒಬ್ಬ ಬಡಗಿಯು ಒಂದು ಮರದ ಗೊಂಬೆಯನ್ನು ಮಾಡಿದನು ದರ್ಜಿಯು ಅದಕ್ಕೊಂದು ಅಂಗಿಯನ್ನು ಹೊಲಿದು ಹಾಕಿದನು ಅಕ್ಕಸಾಲಿಗನು ಬಂಗಾರವನ್ನು ಮಾಡಿ ತೊಡಿಸಿದನು ಸನ್ಯಾಸಿಯು ಅದಕ್ಕೆ ಜೀವಕಳೆಯನ್ನು ಕೊಟ್ಟನು ನಂತರ ಪ್ರತಿಯೊಬ್ಬನೂ ಅದು ತನ್ನದೆಂದು ಹೇಳಿ ತಮ್ಮ ತಮ್ಮೊಳಗೆ ಜಗಳ ಮಾಡ ತೊಡಗಿದರು ಕಡೆಗೆ ಯಾವ ಮರದ ತುಂಡಿನಿಂದ ಆ ಗೊಂಬೆಯನ್ನು ಮಾಡಿದ್ದರೋ, ಆ ಮರವೇ ಅದನ್ನು ನುಂಗಿ ಅವರ ಜಗಳವನ್ನು ತೀರ್ಮಾನಿಸಿತು

ಇದೇ ಬಗೆಯದೊಂದು ಕಥೆಯು ಈಗ ಬುಡಾಪೆಸ್ತಿನಲ್ಲಿ ನಡೆದಿದೆ ಕಟುಕರ ಅಂಗಡಿಯಲ್ಲಿ ಒಂದು ಕರು ಕೊಲ್ಲಲ್ಪಟ್ಟಿತು ಅದರ ಹೊಟ್ಟೆಯಲ್ಲಿ ಒಂದು ಬಂಗಾರದ ಗಡಿಯಾರ ಸಿಕ್ಕಿತ್ತು ಕೊಂದವನು ಅದು ತನಗೆ ಸಿಕ್ಕಿದುದರಿಂದ ತಾನು ಇಟ್ಟುಕೊಂಡನು ಆಗ ಆ ಕರುವನ್ನು ವಧೆಮಾಡಲು ಕಳುಹಿದವನು, ಕರುವು ತನ್ನದಾದುದರಿಂದ ಗಡಿಯಾರವೂ ತನಗೆ ಸಲ್ಲಬೇಕೆಂದನು ಆತನಿಗೆ ಆ ಕರುವನ್ನು ಮಾರಿದರೈತನು, ತಾನು ಕರುವನ್ನಲ್ಲದೆ ಗಡಿಯಾರವನ್ನು ಮಾರಿಲ್ಲವಾದ್ದರಿಂದ, ಅದು ತನ್ನ ಪಾಲಿನದೆಂದಿರುವನು ಆ ಕರುವು ಮೇಯಲು ಇನ್ನೊಬ್ಬನ ಹುಲ್ಲುಗಾವಲಿಗೆ ಹೋಗುತ್ತಿತ್ತು. ಆ ಹುಲ್ಲುಗಾವಲಿನ ಯಜಮಾನನು, ಕರುವು ತನ್ನ ಮೈದಾನಿನಲ್ಲಿಯೇ ಯಾವಾಗಲೂ ಮೇಯುತ್ತಿದ್ದುದರಿಂದ, ಅಲ್ಲಿಯೇ ಆ ಗಡಿಯಾರವನ್ನು ಅದು ನುಂಗಿರಬಹುದಾದ್ದರಿಂದ, ಗಡಿಯಾರವು ತನ್ನ ಹಕ್ಕಿನದೆಂದಿರುವನು

ರಾಜಿಯಲ್ಲಿ ಈ ಪಂಚಾಯಿತಿಯ ತೀರ್ಮಾನವಾಗದಿದ್ದರೆ ಭಾಗವಂದಿಗರು ಕೋರ್ಟಿಗೆ ಹೋಗಲಿರುವರು

ಆಕೆಯ ತಲೆಯು ಸೀಸದ ತಲೆಯಂತೆ ಭಾರವಾಗಿತ್ತು

ಬಾಲ್ಯದಿಂದ ಶಿರೋವೇದನೆಯಿದ್ದಿತು ದಿನನಿತ್ಯ ಕ್ರುಶನ್ ಸೇವನೆಯಿಂದ ಆಕೆಯ ಆರೋಗ್ಯವು ನೆಟ್ಟಗಾಗಿರುವುದು

ಇಪ್ಪತ್ತು ವರ್ಷಗಳ ಸಮಯ ಅತಿ ಕಠಿಣ ತರದ ಶಿರೋವೇದನೆಯನ್ನು ಅನುಭವಿಸಿ, ಕೊನೆಗೆ ಕ್ರುಶನ್ ಲವಣಗಳ ಸೇವನೆಯಿಂದ ಒಳ್ಳೆ ಗುಣಲಾಭವನ್ನು ಹೊಂದಿದ ಈ ಸ್ತ್ರೀಗೆ ಈಗ ಸ್ವರ್ಗ ಕಂಡಂತಾಗಿದೆ ಈಗ ಅವಳು ನಿಶ್ಯವೂ ಕ್ರುಶನ್ ಲವಣವನ್ನು ಸೇವಿಸಲ ಮರೆಯುವುದಿಲ್ಲ ಆಕೆಯು ಹಿಂದಿನ ಸಂಕಟಾನುಭವಗಳನ್ನು ವಿವರಿಸುವ ಆಕೆಯ ಪತ್ರವು ಇಲ್ಲಿ ಕೊಡಲಾಗಿದೆ —

‘ಅನೇಕ ವರ್ಷಗಳ ತನಕ ಶಿರೋವೇದನೆಯನ್ನು ಅನುಭವಿಸಿದವಳು ನಾನು ನನ್ನ ೧೧ನೇ ವಯಸ್ಸಿನಲ್ಲಿ ಪ್ರಾರಂಭವಾದ ಅದು ಮೊನ್ನೆಯ ತನಕ ನನ್ನನ್ನು ಪೀಡಿಸುತಿತ್ತು ಈಗ ನನ್ನ ಪ್ರಾಯವು ೩೦ ಎಲ್ಲೆಲ್ಲೂ ಕ್ರುಶನ್ ಲವಣಗಳ ಕುರಿತು ಜಾಹೀರು ಆಗುವುದನ್ನು ಕಂಡು, ಅದನ್ನ ಸೇವಿಸಬೇಕಾಗಿ ಅಪೇಕ್ಷಿಸಿ, ಒಂದು ಬಾಟ್ಲಿಯನ್ನು ಪಡಕೊಂಡೆ ಒದೆ ಎರಡು ತಿಂಗಳ ಸೇವನೆಯಿಂದ ನನಗೆ ವಿಚಿತ್ರ ತರದ ಫಲವು ದೊರಕಿರುತ್ತದೆ ನನ್ನಲ್ಲಿರುವ ಶಿರೋವೇದನೆಯು ಮಾಯವಾಗಿರುತ್ತದೆ ಕ್ರುಶನ್ ಔಷಧಿಯು ನಿಜವಾಗಿಯೂ ವಿಚಿತ್ರ ತರದ್ದು’’ ಮಿ। ಇ ಡಿ

ಹೊಟ್ಟೆಯ ಹಾಳು ಸ್ಥಿತಿಯು ತಲೆನೋವಿನ ಕಾರಣವೆಂದು ಅನೇಕ ಸಂದರ್ಭಗಳಲ್ಲಿ ಕಂಡುಹಿಡಿಯಲಾಗಿದೆ ದೇಹದೊಳಗೆ ಉಂಟಾಗುವ ಕಶ್ಮಲಗಳನ್ನು ರಕ್ತವು ಹೀರಿಕೊಂಡಿರುವುದರಿಂದಲೆ, ಶಿರೋವೇದನೆಯುಂಟಾಗುವುದು ಈ ವಿಷಕಶ್ಮಲಗಳನ್ನು ತೆಗೆದುಬಿಡಿರಿ ಅವುಗಳು ಇನ್ನೊಮ್ಮೆ ಉಂಟಾಗದಂತೆ ನೋಡಿಕೊಳ್ಳಿರಿ ಆಗ್ಯೆ ನೀವು ಸಂಕಟದಿಂದ ಪಾರಾಗುವಿರಿ ನಿಮ್ಮ ಅಂಗಾಂಗಗಳನ್ನು ಪರಿಶುದ್ಧವಾಗಿಡಲು ಕ್ರುಶನ್ ಲವಣಗಳು ನಿಸರ್ಗದೊಡನೆ ಸಹಕರಿಸುತ್ತದೆ ಅದು ನಿಮ್ಮ ದೇಹದೊಳಗಿರುವ ವಿಷಕಶ್ಮಲಗಳನ್ನು ಹೊರಡಿಸುತ್ತದೆ ಅವರಿಂದಲೆ ಕ್ರುಶನ್ ಲವಣಗಳಿಂದ ಖಾತ್ರಿಯಾದ ಗುಣವು ದೊರಕುತ್ತದೆ



ಎಲ್ಲಾ ಸ್ಟೋರುಗಳಲ್ಲೂ ಬಜಾರುಗಳಲ್ಲಿ ಕ್ರುಶನ್ ಲವಣವು ಮಾರಲ್ಪಡುತ್ತದೆ

ಕೊಂಗ್ರೆಸ್ಸನ್ನು ಸೇರಿ ಸತ್ತರೆ ಲೇಸು!

ತಿಲಕ ವಿದ್ಯಾಲಯ ನಿಧಿಯ ಹಣವು ಮರಳು ಕೊಡಲ್ಪಡುವುದು

ಗಾಂಧಿಟೊಪ್ಪಿಯನ್ನು ಇಡಲೇಬೇಕು.

ಆಗ್ರದಲ್ಲಿರುವ ಬೆಪ್ಟಿಸ್ಟ್ ಮಿಶನ್ ಹ್ಯಾಸ್ಕೂಲಿನ ಅಧಿಕಾರಿಗಳು ಹುಡುಗರೆಲ್ಲರೂ ಗಾಂಧಿಟೊಪ್ಪಿಯನ್ನು ಇಟ್ಟುಕೊಂಡೇ ಶಾಲೆಗೆ ಬರಬೇಕಾಗಿ ಅವರಿಗೆ ತಿಳಿಸಿರುವರು. ಆಂಗ್ಲ ಉಪಾಧ್ಯಾಯರೂ ಇದಕ್ಕೆ ಸಮ್ಮತಿಯಿತ್ತಿರುವರು ಮುಸ್ಲಿಮರು ಬೇಕಾದರೆ ತಮ್ಮ ಫೆಜ್ ಟೋಪಿಯನ್ನು ಧರಿಸಬಹುದಾಗಿಯೂ ತಿಳಿಸಲ್ಪಟ್ಟಿದೆ.

ಕೊಂಗ್ರೆಸ್ಸನ್ನು ಸೇರಿ ಸತ್ತರೇ ಲೇಸು

ಮುರದಾಬಾದಿನ ಉಪಚುನಾವಣೆಯ ಸಮಯದಲ್ಲಿ ಮುಸ್ಲಿಂ ಲೀಗಿನ ಹುರಿಯಾಳಿನ ಪರವಾಗಿ ಮಾತನಾಡುತ್ತಾ ಮೌ। ಜಾಫರ್ ಆಲಿಖಾನರವರು, ಕೊಂಗ್ರೆಸ್ಸನ್ನು ಸೇರುವುದೆಂದರೆ ಮರಣವು ಪ್ರಾಪ್ತವಾಗುವುದೆಂದೂ, ಲೀಗಿಗೆ ಸೇರಿದರೆ ಪ್ರಾಣವು ಉಳಿಯುವುದೆಂದೂ ಹೇಳಿ, "ನಿಮಗೆ ಯಾವುದು ಬೇಕು? ಮರಣವೆ, ಇಲ್ಲವೆ ಪ್ರಾಣ" ಎಂದು ಸಭಿಕರನ್ನು ಪ್ರಶ್ನಿಸಿದರು. ಸಾವಿರಾರು ಜನರು 'ನಮಗೆ ಮರಣ ಬೇಕು' ಎಂದು ಕೂಗಿದರು ಖಾನರ ಮುಖಭಂಗವನ್ನು ಹಚ್ಚಿದಂತಾಯಿತಲ್ಲವೆ? ಅವರಾದರೂ ಆ ಸಭೆಯಿಂದ ತಪ್ಪಿ ಪ್ರಾಣದೊಡನೆ ಹೋದರಲ್ಲವೆ, ಅದೇ ಪುಣ್ಯ!

ಸಂಯುಕ್ತ ಪ್ರಾಂತ್ಯದಲ್ಲಿ 250 ಮಂದಿ ಕೈದಿಗಳನ್ನು ಬಿಟ್ಟುಬಿಡುವರು

ಸಂಯುಕ್ತ ಪ್ರಾಂತ್ಯದ ಸರ್ಕಾರದವರ ತಮ್ಮ ಜೈಲುಸುಧಾರಣೆಯ ಕೆಲಸದ ಸಂಬಂಧವಾಗಿ ಜೈಲಿನಲ್ಲಿರುವ ಸಾಧಾರಣ ೧೫೦ ಕೈದಿಗಳನ್ನೂ, ಜಿಲ್ಲಾ ಜೈಲಿನಲ್ಲಿರುವ ೧೦೦ ಜನರನ್ನು ಬಿಟ್ಟುಬಿಡುವರಾಗಿ ತಿಳಿದುಬಂದಿದೆ

ಸುಭಾಸ್ ಬೋಸರು ತಮ್ಮ ಆತ್ಮಕಥೆಯನ್ನು ಬರೆಯುವರು

ಸೆಕ್ಕರ್ ವಾರ್ ಬರ್ಗ್ ಎಂಬ ಪುಸ್ತಕ ವ್ಯಾಪಾರಿಗಳು ಸುಭಾಸ್ ಬೋಸರಿಗೆ ತನ್ನ ಆತ್ಮಕಥೆಯನ್ನು ಬರೆಯುವಂತೆ ಕೇಳಿಕೊಳ್ಳುವರಂತೆ. ಮೊದಲು ಬೋಸರು ಇದಕ್ಕೆ ಒಪ್ಪಲಿಲ್ಲವಾದರೂ, ನಂತರ ತನ್ನ ಸಮ್ಮತಿಯನ್ನು ಕೊಟ್ಟಿರುವರು ಕೂಡಲೆ ಕಾರ್ಯಾರಂಭವಾಗಿ, ಹಿಂದೂದೇಶಕ್ಕೆ ಬರಬೇಕಾದರೆ ಪುಸ್ತಕದ ಹೆಚ್ಚಿನಂಶವನ್ನು ಅಚ್ಚಿಗೆ ಕೊಟ್ಟೇ ಬರುವರಂತೆ

ತಿಲಕವಿದ್ಯಾಲಯ ನಿಧಿಯ ಹಣವು ಮರಳು ಕೊಡಲ್ಪಡುವುದು

ಸತ್ಯಾಗ್ರಹ ಚಳವಳಿಯ ಸಮಯದಲ್ಲಿ ಸರಕಾರದವರಿಂದ ಅಪಹರಿಸಲ್ಪಟ್ಟ ನಾಗಪುರದ ತಿಲಕ ವಿದ್ಯಾಲಯದ ಸೊತ್ತುಗಳನ್ನು ಮಾರಿಬಂದ ರೂ ೫೪೬—೧೧—೦ನ್ನು ಆ ವಿದ್ಯಾಲಯಕ್ಕೆ ಕೊಡಬೇಕಾಗಿ ಮಧ್ಯಪ್ರಾಂತದ ಸರಕಾರದವರು ನಿಶ್ಚೈಸಿರುವರು

ಲೋರ್ಡ್ ಲೋಥಿಯನ್ – ಗಾಂಧಿಜಿಯವರ ಭೇಟಿ

ಲೋರ್ಡ್ ಲೋಥಿಯನರು ಹಿಂದೂದೇಶಕ್ಕೆ ಬಂದಿದ್ದಾಗ, ಬೊಂಬಾಯಿಯಲ್ಲಿ ಬ್ರೋಡ್ ಕಾಸ್ಟ್ ಮಾಡುವಾಗ "ಯೂರೋಪಿನ ದೇಶಗಳೊಡನೆ ಹೋಲಿಸಿ ನೋಡಿದರೆ ಹಿಂದೂದೇಶವು ಅತಿ ಶಾಂತಿ ಪ್ರಿಯ ದೇಶವೆಂದು ಹೇಳಬೇಕು ಯೂರೋಪಿನಲ್ಲಿ ಪ್ರತಿಯೊಂದು ಪಟ್ಟಣದ ೧೦೦ ಮೈಲು ವಿಸ್ತೀರ್ಣದೊಳಗೆ ೫೦೦ರಷ್ಟು ಬೊಂಬುಗಳಿಂದ ಕೂಡಿದ ವಿಮಾನಗಳಿರಲು, ಬೊಂಬಾಯಿಯಲ್ಲಿ ಒಂದೇ ಒಂದು ಇಲ್ಲದಿರುವುದನ್ನು ನೋಡಿ ನನಗೆ ತುಂಬಾ ಆನಂದವಾಗಿರುವುದು" ಎಂದು ಹೇಳಿರುವರು

ಹಿಂದೂದೇಶದ ಪ್ರಮುಖರನ್ನು ಮಹಾತ್ಮಾಜಿಯವರನ್ನೂ ಭೇಟಿಮಾಡಿ ಅವರು ಮಾತಾಡಬೇಕೆಂದಿರುವರಂತೆ

ಹ್ಯಾಸ್ಕೂಲು ಮುಖ್ಯೋಪಾಧ್ಯಾಯರ ಪರಿಷತ್ತು.

ಮದ್ರಾಸು ಪ್ರಾಂತ್ಯದಲ್ಲಿರುವ ಎಲ್ಲಾ ಹೈಸ್ಕೂಲುಗಳ ಮುಖ್ಯೋಪಾಧ್ಯಾಯರ ಪರಿಷತ್ತೊಂದು ಇದೇ ತಾ ೨೨, ೨೩ ಮತ್ತು ೨೪ರಲ್ಲಿ ಮದ್ರಾಸಿನಲ್ಲಿ ಜರಗಲಿರುವುದು ವಿದ್ಯಾಇಲಾಖೆಯ ಮಂತ್ರಿಗಳಾದ ಡಾ। ಸುಬ್ಬರಾಯನರು ಪರಿಷತ್ತನ್ನು ತೆರೆಯುವರು [illegible] ಮುಂಬಯಿ ಸೆಕಂಡರಿ ಬೋರ್ಡಿನ [illegible] ಅಧ್ಯಕ್ಷಸ್ಥಾನವನ್ನು ವಹಿಸಲೊಪ್ಪಿರುವರು.

(ಡಾ ಸುಬ್ಬರಾಯನ್)

ಲೋರ್ಡ್ ನಫೀಲ್ಡರ ದಾನದ ಒಂದು ಲೆಕ್ಕ

ನಫೀಲ್ಡರು ಮಾಡಿದ ದಾನವನ್ನು ಪೌನ್ಸುಗಳಲ್ಲಿ ಎಣಿಸಿ ಅವನ್ನು ಒಂದರ ಮೇಲೊಂದು ಇಟ್ಟರೆ ಆ ಹಣವು ಗೌರೀ ಶಂಕರ ಪರ್ವತದ ಶಿಖರದಷ್ಟು ಎತ್ತರವಾಗುವುದು ಒಂದರ ಪಕ್ಕದಲ್ಲೊಂದರಂತೆ ಇಟ್ಟರೆ ಅಟ್ಲಾಂಟಿಕ್ ಸಾಗರವನ್ನು ೧೫ ಬಾರಿ ದಾಟುವುದೆಂದು ಒಂದು ಲೆಕ್ಕವು ಮಾಡಲ್ಪಟ್ಟಿದೆ? ಇನ್ನು ಮುಂದೆ ಹನುಮಂತನ ಬಾಲದಷ್ಟು ಎನ್ನುವ ಬದಲು ನಫೀಲ್ಡರ ದಾನದಷ್ಟು ಎಂಬ ಮಾತು ವಾಡಿಕೆಗೆ ಬರಬಹುದಲ್ಲವೆ?

ಮೊಟ್ಟೆಯ ಒಳಗೆ ಮೊಟ್ಟೆ!

ಬ್ರಿಟನ್ನಿನ ಸಸೆಕ್ಸ್ ಎಂಬ ಪ್ರದೇಶದಲ್ಲಿ ಒಂದು ಹೇಂಟೆಯು ೯ ಇಂಚು ಉದ್ದವೂ ೭। ಇಂಚು ಉರುಟೂ ಇರುವ ಒಂದು ಮೊಟ್ಟೆಯನ್ನಿಟ್ಟಿತ್ತು ಅದನ್ನು ಒಡೆಯಲಾಗಿ, ಅದರೊಳಗೊಂದು ಮೊಟ್ಟೆಯಿತ್ತು ಅದನ್ನೂ ಒಡೆಯಲಾಗಿ ಮತ್ತೆ ಒಳಗೆ ಇನ್ನೊಂದು ಮೊಟ್ಟೆಯು ದೊರಕಿತು

ವಿಚಿತ್ರ ಶಿಕ್ಷೆ!

ಅಮೇರಿಕದಿಂದ ಬಂದ ಕಥೆಯಿದು ಜಮೀನ್ದಾರನೊಬ್ಬನು ತನಗೆ ಬರಬೇಕಾದ ೧೫ ಪವನುಗಳನ್ನು ಕೊಡದೆ ಇದ್ದುದಕ್ಕಾಗಿ ಎಥೆಲ್ ಡೇವಿಸ್ ಎಂಬ ನಿಗ್ರೋ ಸ್ತ್ರೀಯನ್ನು ಒಂದು ಮುಂಚದ ಕಾಲಿಗೆ ಕಟ್ಟಿಹಾಕಿ ಒಂದು ಪಾತ್ರೆಯಲ್ಲಿ ನಾಯಿಗೆ ಹಾಕುವ ಆಹಾರವನ್ನು ಸುರಿದು, ಅವಳ ಬಾಯಿಯ ಬಳಿಯಲ್ಲಿಟ್ಟನು ಆ ದಾರಿಯಾಗಿ ಹೋಗುತ್ತಿದ್ದ ಆ ಊರ ಪಟೇಲನು ಇದನ್ನು ಕಂಡು ಆಕೆಯನ್ನು ಬಿಡಿಸಿದನು

ವಿಚಿತ್ರ! ಆದರೂ, ಸತ್ಯ!!

ಕುಳ್ಳರೂ ಗುಮ್ಮಟನಂತೆ ಬೆಳೆಯಬಹುದು! ಅಡಿಗೆಮಾಡುವ ಗಡಿಯಾರ!

ವಿಚಿತ್ರ ವಿಮಾನ.

ಜರ್ಮನಿಯು ಅದೇಒಂದು ಬಗೆಯ ವಿಚಿತ್ರ ವಿಮಾನವನ್ನು ತಯಾರಿಸಿರುವುದು ಅದು ನೆಲದಿಂದ ಎದ್ದು ಹಾರಬಲ್ಲುದಲ್ಲದೆ, ನೇರಾಗಿ ಕೆಳಗಿಳಿಯಲೂ, ಆಕಾಶದಲ್ಲಿ ತಟಸ್ಥವಾಗಿ ನಿಲ್ಲಲೂ ಬಲ್ಲುದು ಬ್ರೆಮೆನ್ ಎಂಬಲ್ಲಿ ಕರ್ನಲ್ ಲಿಂಡ್ ಬರ್ಗರ ಸಮ್ಮುಖದಲ್ಲಿ ಇದರ ಪ್ರದರ್ಶನವೊಂದು ನಡೆಯಿತು ಅದನ್ನು ಬಹಳ ಸಮಯದ ತನಕ ನೆಲದಿಂದ ೧೮ ಇಂಚುಗಳಷ್ಟು ಎತ್ತರ ನಿಲ್ಲಿಸಿ, ಅದರ ಚಾಲಕನು ಲಿಂಡಬರ್ಗರಿಗೆ ಹಸ್ತಲಾಘವನ್ನು ಕೊಟ್ಟನು ಲಿಂಡಬರ್ಗರಿಗೆ ಇದನ್ನು ನೋಡಿ ಆಶ್ಚರ್ಯಕರವಾಯಿತು

ಅಡಿಗೆ ಮಾಡುವ ಗಡಿಯಾರ!

ಕಳ್ಳರು ಬಂದರೆ ಎಚ್ಚರಿಸುವ ಗಡಿಯಾರದ ಕುರಿತು ನಾವು ಕೇಳಿರುವೆವು ಈಗ ಇನ್ನೊಂದು ಬಗೆಯ ಗಡಿಯಾರವು ಕಂಡುಹಿಡಿಯಲ್ಪಟ್ಟಿದೆ – ಅದೇ ಅಡಿಗೆಮಾಡುವ ಗಡಿಯಾರ ಅಡಿಗೆಯೆಲ್ಲವೂ ಸಿದ್ಧವಾದೊಡನೆ ಅದರ [illegible] ಒಡೆಯನಿಗೆ [illegible] ಊಟಮಾಡ [illegible] ಬೇಕೆಂದು [illegible]

ನವೀನ ತರದ ಗೇಸ್ ಮಾಸ್ಕ್ ಗಡ್ಡವಿರಿಸಿ ಬೆಳಸುವವರಿಗಾಗಿ

[illegible] ಗಡ್ಡವಿರುವವರು ಗೇಸ್ ಮಾಸ್ಕ್ [illegible] ಇಟ್ಟುಕೊಳ್ಳ [illegible] ಇಷ್ಟರ ತನಕ ಗಡ್ಡವಿರಿಸಿಗಳಿಗೆ [illegible] ಈ ಬಗೆಯ ಆವರಣಗಳನ್ನು ಇಟ್ಟುಕೊಳ್ಳಬಹುದಾಗಿತ್ತು ಆದರೆ, ಈಗ ಹೊಸ ಬಗೆಯ ಆವರಣಗಳನ್ನು ಕಂಡುಹಿಡಿದಿದ್ದಾರೆ – ಜರ್ಮನಿಯವರು. ಗಡ್ಡವಿರುವನೆಕ್ಕಗಿಂತ ಹೆಚ್ಚು ಉದ್ದಕ್ಕೆ ಬೆಳೆದಿಲ್ಲವಾದರೆ, ಯಾರೂ ಈ ಹೊಸ ಮುಖಾವರಣಗಳನ್ನು ಇಟ್ಟುಕೊಳ್ಳಬಹುದು ಒಂದೊಂದರ ಕ್ರಯ ೩ ಶಿಲ್ಲಿಂಗ್ ಆರು ಪೆನ್ಸ್, ಅಂದರೆ ಸುಮಾರು ೧೦ ರೂಪಾಯಿ ಸರ್ವಸಾಧಾರಣ ಜನರಿಗೆ ಇದನ್ನು ಕೊಂಡುಕೊಳ್ಳುವುದಕ್ಕೆ ಈ ಕ್ರಯವನ್ನು ಕಡಿಮೆಮಾಡುವ ಆಲೋಚನೆಯಲ್ಲಿದ್ದಾರೆ— ಅವರು ಯುದ್ಧದ ಭಯದಿಂದ ಕಾತರರಾದವರು ಇದನ್ನು ನೋಟ್ ಮಾಡಿಕೊಳ್ಳಲಿ

ಅವಳಿಜವಳಿ ಮಕ್ಕಳು—ಆದರೆ, ಒಂದು ಇನ್ನೊಂದಕ್ಕಿಂತ ೩ ತಿಂಗಳಿಗೆ ಕಿರಿದು!

ಇಂಗ್ಲಾಂಡಿನಲ್ಲಿ ಒಂದು ವಿಚಿತ್ರ ಘಟನೆ ಘಟಿಸಿದೆ ಒಬ್ಬ ತಾಯಿಗೆ ಇಬ್ಬರು ಅವಳಿಜವಳಿ ಮಕ್ಕಳು ಹುಟ್ಟಿದ್ದಾರೆ ಒಂದು ಗಂಡು, ಇನ್ನೊಂದು ಹೆಣ್ಣು ಆದರೆ, ಈ ಇಬ್ಬರು ಮಕ್ಕಳ ಪ್ರಾಯ ಒಂದೇ ಅಲ್ಲ

ಆ ತಾಯಿ ಅದಕ್ಕೆ ಮೊದಲು ಮೂರು ಬಾರಿ ಹೆತ್ತಿದ್ದಳು ಒಂದೊಂದು ಬಾರಿಯೂ ಇಬ್ಬರಿಬ್ಬರು ಅವಳಿಮಕ್ಕಳನ್ನು ಹೆತ್ತಿದ್ದಳು ಆದರೆ ಒಂದೂ ಬದುಕಿರಲಿಲ್ಲ ನಾಲ್ಕನೆ ಸಲ ಅವಳು ಮೊದಲು ಒಂದು ಗಂಡು ಮಗುವನ್ನು ಹೆತ್ತಳು ಮಗುವಿನ ತೂಕ ೬ ರಾತ್ತಲ್ಲು ಇದ್ದಿತು ಹೆತ್ತು ೩ ತಿಂಗಳಾಗುವ ತನಕ ತಾಯಿ ಮಗು ಕ್ಷೇಮದಲ್ಲಿದ್ದರು ಅನಂತರ ಅಕಸ್ಮಾತ್ ಒಂದು ದಿನ ತಾಯಿಗೆ ಹೊಟ್ಟೆನೋವು ಕಾಣಿಸಿತ ಡಾಕ್ಟರರಿಂದ ಪರೀಕ್ಷೆ ನಡೆಯಿತು ಒಂದೆರಡು ದಿನಗಳಲ್ಲಿ ಪುನಃ ಅವಳು ಹೆರಬಹುದಾಗಿ ಅವರು ಅಭಿಪ್ರಾಯ ಪಟ್ಟರು ಡಾಕ್ಟರರ ಮಾತ ನಿಜವಾಯಿತ ಮೂರು ದಿನಗಳಲ್ಲಿ ತಾಯಿ ಇನ್ನೊಂದು ಹೆಣ್ಣು ಮಗುವನ್ನು ಹೆತ್ತಳು ಅದ ೭ ರಾತ್ತಲ್ಲು ಭಾರವಾಗಿದೆ ತಾಯಿ [illegible] ದಲ್ಲಿದ್ದಾರೆ ಮಕ್ಕಳು ಅವಳಿಜವಳಿಗಳಾಗಿದ್ದಾರೆ ಆದರೆ ಒಂದಕ್ಕಿಂತ ಇನ್ನೊಂದ [illegible] ತಿಂಗಳಿಗೆ ಕಿರಿದು

ಕುಳ್ಳರೂ ಗುಮ್ಮಟನಂತೆ ಬೆಳೆಯಬಹುದು!

[illegible] ಇದರ [illegible] ಬೆಳವಣಿಗೆಯು [illegible] ಗ್ರಂಥಿಯಿಂದ ಒಸರುವ [illegible] ಕಾರಣವಾಗಿದೆ [illegible] ರಸವು [illegible] ದಲ್ಲಿ ಒಸರುವಂತಾದರೆ [illegible] ಎತ್ತರಕ್ಕೆ ಬೆಳೆಯಲು ಅವಕಾಶವಿದೆ ಅವನ ಭೀಮಕಾಯನಾಗಲೂಬಹುದು

ಅಮೇರಿಕದ ಡಾ। [illegible] ಎಂಬವರು ಈಗ ಒಂದು ಹೊಸ ಶೋಧವಮಾಡಿದ್ದಾರೆ ಅದರ ಪ್ರಯೋಗದಿಂದ ಕುಳ್ಳನೂ ಗುಮ್ಮಟನಂತೆ ಬೆಳೆಯುವನೆಂದು ಅವರು ಹೇಳುತ್ತಾರೆ ಹೀಗೆ ಅವರು ಹೇಳುವಂತೆ ನಿಜಕ್ಕೂ ಆಗುವುದಾದರೆ, ಕಳ್ಳರಲ್ಲಿ ಕಂಡು ಬರುವ ಕುಂದುಕೊರತೆಗಳೆಲ್ಲ ದೂರವಾಗುವುವು ಅವರು ಹೆಚ್ಚು ಯೋಗ್ಯತೆಯುಳ್ಳವರಾಗುವರು ಅವರ ಶಾರೀರಿಕ ಮಾನಸಿಕ ಶಕ್ತಿಗಳು ಪೂರ್ಣ ವಿಕಾಸವಾಗುವವು

**A BANKING ACCOUNT——
A NECESSITY OF MODERN LIFE.**

The only way to safe-guard your savings is to bank them Besides payment by cheque ensures a permanent and accurate record of your money matters, while your pass-book or statement of account tells you exactly where you stand There are also many kinds of service that a bank provides and many men are missing a real opportunity in not availing themselves of it

MEMBER Reserve Bank of India
MEMBER Clearing House Bombay

ESTD 1906
CANARA BANK, LIMITED.

ಸುತ್ರಮಣಿಕೆ.

ಸೋಟಿಗಳು	೧೪
ಶಿಕ್ಷಣ ವಿಮರ್ಶೆ .	೩
ಚಿತ್ರಮಯ ಜಗತ್ತು	೫
ಶಾಂತಿಗೆ ಆತಂಕ	೬
ಚಿತ್ರವಿಚಿತ್ರ	೮
ಕಾಂಗ್ರೆಸ್ಸನ್ನು ಸೇರಿ ಸತ್ಕರಿ ಲೇಸು	೯
ವರ್ತಮಾನ ಸಂಗ್ರಹ	೩
ವಿವಿಧ ಸಮಾಚಾರಗಳು.	
ಅಗ್ರಲೇಖ.	
ಋಣವಿಮೋಚನಾ ಶಾಸನ	೧೦
ಸ್ಫುಟವಿಚಾರಗಳು	೧೧
ಯೂನಿಯನ್ ಜೇಕಿನಿಂದ	೧೨
ತಾಲೂಕುಗಳಿಂದ	೧೩
ಅಮೇರಿಕಾ ಮಹಿಳೆಯರು	೧೪

ಸ್ವದೇಶಾಭಿಮಾನಿ.

ತಾ.೧೭ನೇ ಶುಕ್ರವಾರ ದಶಂಬರ ೧೯೩೭

ಋಣವಿಮೋಚನಾ ಶಾಸನ

ಈವ ಸೂದೆಯ ವಿಷಯವನ್ನೆಲ್ಲ ಹಿಂದಣ ಸಂಚಿಕೆಯಲ್ಲಿ ಒರೆದೆವು ಪ್ರಜಾಸತ್ತೆಯಲ್ಲಿ ಯಾವಾಗಲೂ ಜನಾಭಿಪ್ರಾಯವನ್ನು ತಿಳಿದೇ ಶಾಸನಗಳನ್ನು ನಿರ್ಮಾಣಗೊಳಿಸಬೇಕಾಗುತ್ತದೆ ಜನಾಭಿಪ್ರಾಯವು ಮಾತ್ರ ಸುಲಭವಾಗಿ ದೊರೆವಂಥದೂ ಅಲ್ಲ ಅದರ ಎಣಿಕೆಯೂ ಸ್ಪಷ್ಟವಾಗುವಂತಿಲ್ಲ ಮೊದಲನೆ ಅಭಿಪ್ರಾಯವನ್ನು ಹಿಂಬಾಲಿಸಿ ಬೀಸುವ ಅಭಿಪ್ರಾಯಗಳು ಒಂದು ಕಡೆ ಪ್ರಬಲವಾಗುವುದುಂಟು , ಏನೊಂದು ಹುಳಿ ಕನ್ನ ಒಬ್ಬರು ತೋರಿಸಿಕೊಟ್ಟ ಕೂಡಲೆ ಅದನ್ನ ಇತರರೂ ಎತ್ತಿಕೊಳ್ಳುವುದುಂಟು ಹೀಗಾಗಿ ಚರ್ಚೆ ಜರಡುತ್ತ ಹೋಗುವುದೇ ಪ್ರಜಾಸತ್ತೆಯ ಜನಾಭಿಪ್ರಾಯ ರಚನೆಯ ರೀತಿ

ಈ ಮಸೂದೆಗೆ ಅನುಕೂಲವಾಗಿ ಎಷ್ಟೋ ಸಾರ್ವಜನಿಕ ಕೂಟಗಳಾದುದುಂಟು, ವ್ಯಕ್ತಿಶ ಬರವಣಿಗೆಗಳಲ್ಲಿ ಆಕ್ಷೇಪಿಸಿ ಅಭಿಪ್ರಾಯ ಪ್ರಕಟಿಸಿದವರೂ ಪತ್ರಿಕೆಗಳನ್ನ ತುಂಬಿಸಿಯೆ ಇರುವರು ಇತರ ಪ್ರತ್ಯೇಕ ಹೇಳಿಕೆಗಳ ವಿಸ್ತಾರದಿಂದ, ಒಮ್ಮತವಾಗಿ ದೊರೆತ ಸಂಘಾಭಿಪ್ರಾಯಗಳು ಮರೆಯಬಹುದು ವೋಟರರ ಅಭಿಪ್ರಾಯ ಕೇಳಿ, ಮತ ತೆಗೆದುಕೊಂಡರೆ, ಈ ಮಸೂದೆಗೆ ಅಧಿಕಮತವು ಅಧಿಕ ಪರಿಮಾಣದಲ್ಲಿ ದೊರೆವುದು ಏಕೆಂದರೆ ಮತದಾನಾಧಿಕಾರವುಳ್ಳವರಲ್ಲಿ ಬಹುಸಂಖ್ಯಾತರಿಗೆ ಬೇಕಾದ ಕಾನೂನೇ ಇದು

ಮಂತ್ರಿಗಳು ಈ ಮಸೂದೆಯನ್ನು ಮುಂದರಿಸಬೇಕು, ಸದ್ಯಕ್ಕೆ ತಡೆಯಬೇಕು ಎನ್ನುವವರಿದ್ದಾರೆ ಆದರೆ, ಮುನ್ನಡೆವ ಅನುಕೂಲತೆ ಇರುವಾಗ— ದಾನಬುದ್ಧಿಯುಳ್ಳಾತನು ನಾಳೆ ನೋಡುವ ಎಂದರೆ ಮತ್ತೆ ತಪ್ಪುವಂತೆ—ಮುನ್ನಡೆಯದಿದ್ದಲ್ಲಿ, ಕೊನೆಗೆ ಸಿಗೆ ಇನ್ನು ಇಂತಹ ಅನುಕೂಲ ಮುಹೂರ್ತವು ದೊರೆಯದು. ಗಾಂಧಿಜೀಯವರೂ ಅವಸರ ಮಾಡುತ್ತಾರೆಂದು ಹತ್ತು ಹದಿನೈದು ವರ್ಷಗಳ ಹಿಂದೆ ಹೇಳಿದವರಿದ್ದರು; ಅವರು ಮುಂದರಿದ ಕಾರಣವೇ ಈಗ ಕಾಂಗ್ರೆಸು ಅಧಿಕಾರ ಪಡೆವಂತಾಯಿತು ಮಸೂದೆಗಳನ್ನು ಪ್ರಕಟಿಸುವುದು, ಮತ್ತು ಹಿಂದಿಡುವುದು ಇದೊಂದು ಕಾಂಗ್ರೆಸ್ ಮಂತ್ರಿಗಳ ವಿಶೇಷ ಲಕ್ಷಣವಾದರೆ ಅಲ್ಲಿಗೆ ಅವರ ಅಧಿಕಾರಕ್ಕೆ ಗೆದ್ದಲು ಹಿಡಿದಂತಾದೀತು.

ಸಾಲದ ಪಾವತಿಗೀ ಕೆಲವರ್ಷಗಳ ಅವಧಿಯನ್ನು ಕೊಡುವಂತೆ ಮಸೂದೆ ತಂದು, ಕೆಲವರ ಅಭಿಪ್ರಾಯದಂತೆ, ಅದನ್ನು ಬಾಕಿಯಿಡಲಾಯಿತು. ಈಗ ಈ ಮಸೂದೆ ಇದೆ ಇದನ್ನು ಇನ್ನೂ ಸ್ಪಷ್ಟವಾಗಿ ಹೇಳಲಿಕ್ಕೇನೂ ಉಳಿದಿಲ್ಲ. ಬೇಕಾದರೆ, ಒಪ್ಪಬಹುದು, ಬೇಡವಾದರೆ, ಬಿಡಬಹುದು,—ಹಾಗಿದೆ ಎಲ್ಲ ಸೂಚನೆ ಇದರಲ್ಲೇನೂ ಬದಲಾವಣೆ ಎಂದರೆ, ಅಲ್ಲಿಗೆ ಕಾನೂನು ಮುಗಿಯಿತು ನೂರರಲ್ಲಿ ತೊಂಭತ್ತು ಮಂದಿ ಅಪೇಕ್ಷಿಸಿದ ಮಸೂದೆಗೆ ಅಲ್ಲೇ ನಿರಾಶೆ

ಆಕ್ಷೇಪಗಳು ಮಹತ್ವದುವು ನಿಜ, ಅವನ್ನು ಕೇಳಲೆಬೇಕು, ಅದೇ ವಿವೇಕ ಆದರೆ, ಈ ಆಕ್ಷೇಪಗಳನ್ನು ಚುನಾವಣೆಗೆ ನಿಂತಾಗಲೆ ಕಾಂಗ್ರೆಸ್ಸು ವಿವರಿಸಿ ಮುಗಿಸಿ, ಚುನಾವಣೆಯಲ್ಲಿ ಗೆದ್ದಿದೆ ಪುನಃ ವಿವರಣೆಗೆ ಅಗತ್ಯ ತೋರುವುದಿಲ್ಲ

ಇತರ ಸರಕಾರಗಳು ಹಾಗೆ ಹೀಗೆ ಮಾಡಿವೆಯೆಂದು ನಾವು ಹಾಗೆ ಮಾಡಲು ಶಕ್ತರಲ್ಲೆಂದು ಕಾಂಗ್ರೆಸಿಗೆ ಗೊತ್ತೇ ಇದೆ ನಮ್ಮ ಸರಕಾರದ ಅಧಿಕಾರಕ್ಕೊಂದು ಮಿತಿಯಿದೆ ಕೆಲವು ಸಂದರ್ಭಗಳಲ್ಲಿ ಹೀಗಾಗಬಹುದೆಂದು, ಮಿಕ್ಕ ಎಲ್ಲ ಸಂದರ್ಭಗಳನ್ನು ತ್ಯಜಿಸಬೇಕೆನ್ನುವುದು ಕುಚೋದ್ಯ ಗವರ್ನರರು ಈ ಬಿಲ್ಲನ್ನು ತಡೆಯಬೇಕೆಂದು ಸೂಚಿಸಿರುವವರೂ ಇದ್ದಾರೆ, ಗವರ್ನರರು ವಿವೇಕಿಗಳು, ಈ ಬಿಲ್ಲನ್ನಲ್ಲದೆ, ಪಾವತಿಗೆ ರಿಯಾಯಿತಿಯ ಬಿಲ್ಲನ್ನು ಅವರು ಹೊರಡಿಸಿದರೆ ಉತ್ತಮವಾಗುವುದು ಹಾಗೇ ಮಾಡುವರಲ್ಲದೆ, ಇದನ್ನು ಮುರಿಯರೆಂದು ನಂಬಿದ್ದೇವೆ

ವಾರ್ಧಾ ಶಿಕ್ಷಣ ಯೋಜನೆ

[ಈ ವಿಷಯವಾಗಿ ಮತ್ತೊಂದು ಪುಟದಲ್ಲಿ ಒರೆಯಲಾಗಿದೆ ಈಗ ಹರಿಜನ ಪತ್ರಿಕೆಯಲ್ಲಿ ಇದೀ ವಾದಿ ಪ್ರಕಟವಾಗಿದೆ ಅದರಿಂದ ಮುಖ್ಯ ವಿಷಯಗಳನ್ನು ಟಿಪ್ಪಣಿರೂಪವಾಗಿ ಬರೆವೆವು]

ಇತರ ರಾಜ್ಯಗಳ ಶಿಕ್ಷಣಕ್ರಮ ಇಲ್ಲಿ ರೂಢಿಗೆ ತರಲಾಗುವುದಿಲ್ಲ ಇಲ್ಲಿ ಅಹಿಂಸೆಯೇ ಮುಖ್ಯ ತತ್ವವಾಗಿ ಪ್ರಚಾರ ಹೊಂದಿದೆ

ಇಡೀ ಜನಾಂಗದ ಶಿಕ್ಷಣವಾಗಬೇಕೆಂಬ ಆಸೆಯಿಂದ ಮಹಾತ್ಮಾಜಿಯವರ ಏಕಪಕ್ಷವಾಗಿ ಈ ಕಡೆ ಮನಸ್ಸು ಕೊಟ್ಟಿರ ತ್ತಾರೆ ಆಗುವಷ್ಟು ಕಡಿಮೆ ಅವಧಿಯಲ್ಲಿ ಎಷ್ಟು ಪ್ರಚಾರಕ್ಕೆ ಒರಬಹುದೋ ಅದನ್ನು ಆಲೋಚಿಸಬೇಕಾಗಿದೆ ಜನಜೀವನಕ್ಕೆ ಸಂಬಂಧಪಟ್ಟುದಾಗಿ ಆವಶ್ಯಕತೆಯನ್ನು ಅನುಸರಿಸಿ ಶಿಕ್ಷಣಕೊಡಬೇಕಾಗಿದೆ ಅದಕ್ಕಾಗಿ ಕೃತಿಯ ಮೂಲವಾಗಿ ಅದನ್ನು ಅದರಿಂದಲೇ ಎಲ್ಲ ಶಿಕ್ಷಣ ನಡೆಯಬೇಕು ಈ ಕೈಗೆಲಸದಿಂದ ಮಗುವಿನ ಶಿಕ್ಷಣದ (ಶಾಲೆಯ) ಖರ್ಚು ಸಹ ಪೂರಯಿಸಬೇಕಾಗುವುದು ಇದಲ್ಲದಿದ್ದರೆ ಮುಂದೆ ಕಡ್ಡಾಯವಾಗಿ ಶಿಕ್ಷಣಕೊಡಲು ಇನ್ನಾವ ಉಪಾಯವೂ ಇಲ್ಲ

ಬರೀ ಪುಸ್ತಕಪಾಟದ ಬದಲಾಗಿ, ಹೀಗೆ ಕಲಿಸುವುದರಿಂದ ಮಗುವಿಗೆ ಬೇಸರವಾಗದು ಮಗುವಿನ ಚಟುವಟಿಕೆಯೇ ಪಾಠಗಳಿಗೆ ಮೂಲ, ಅದೇ ಕೈಗೆಲಸಕ್ಕೂ ಮೂಲಾಧಾರ ಶರೀರ ಶಿಕ್ಷಣವೂ ಮಾನಸಿಕ ಶಿಕ್ಷಣವೂ ಹೀಗಾದಲ್ಲಿ ಏಕಪ್ರಕಾರವಾಗಿ ಸಾಗುವುದು ಒಂದೇ ಹೊಸ ನಿರ್ಮಾಣಕಾರ್ಯಕ್ಕೆ ದೇಹವನ್ನೂ ಮನಸ್ಸನ್ನೂ ವಿನಿಯೋಗಿಸಲು ಮಗು ಹೀಗೆ ಕಲಿತುಕೊಳ್ಳುವುದು

ಕೈಗೆಲಸದ ಮೂಲದಿಂದ,—ಈಗ ಮಾನಸಿಕ ಮತ್ತು ಕೈಯ ಕೆಲಸವನ್ನು ಮಾಡುವವರೊಳಗೆ ಇರುವ ಗೌರವಭೇದವನ್ನು ನಿರ್ಮೂಲಿಸಬರುವುದು ಈ ಭೇದವು ಇತ್ತಂಡಕ್ಕೂ ಹಾನಿಕರ ದೇಹಪರಿಶ್ರಮದಿಂದ ವಿದ್ಯಾಭ್ಯಾಸ ನಡೆವುದು ನಿಜವಾಗಿಯೂ ದೇಶಕ್ಕೂ ಜನಾಂಗಕ್ಕೂ ಒಂದು ಲಾಭವೇ ಸರಿ

ಸಾಂಪತ್ತಿಕ ವಿಚಾರದಲ್ಲಿ ಸಹ, ಈ ಬಗೆಯ ಶಿಕ್ಷಣದಿಂದ, ಕೆಲಸಗಾರರು ನಿಪುಣರಾಗಿರುವರು ಅವಕಾಶದ ಸದುಪಯೋಗವು ಅವರಿಗೆ ಆಗಲೆ ತಿಳಿದುಬರುವುದು

ಶಿಕ್ಷಣಶಾಸ್ತ್ರದ ಪ್ರಕಾರವೂ, ಪ್ರತ್ಯಕ್ಷ ಬೋಧೆಯೇ ಉತ್ತಮವಾಗಿದೆ ಜೀವನಕ್ಕೂ ಜ್ಞಾನಸಂಪಾದನೆಗೂ, ಸಂಬಂಧವನ್ನು ಮಗುವು ತಿಳಿದುಕೊಳ್ಳುವುದುತ್ತಮ

ಎರಡು ಶರ್ತಗಳು

ಅಲ್ಲಲ್ಲಿ ಮಕ್ಕಳಿಗೆ ಕಲಿಸಲು ಚುನಾಯಿಸಿದ 'ವೃತ್ತಿ'ಯು, ಶಿಕ್ಷಣದ ಸಮಸ್ತ ಅಂಗಗಳನ್ನೂ ಬೋಧಿಸಲು ಯುಕ್ತವಾದುದಾಗಬೇಕು. ಶಾಲಾ ಪಾಠಗಳಲ್ಲಿ, ಎಲ್ಲ ಜೀವನದಲ್ಲಿ ಒದಗುವ ನಾನಾ ಬಗೆಯ ವ್ಯವಹಾರಗಳಿಗೆ ಅನುಕೂಲತೆ ಇರಬೇಕು. ಏಕೆಂದರೆ, ಇಷ್ಟು ಮಂದಿ ಕೂಲಿಯವರನ್ನು ತರಬೇತು ಮಾಡುವುದು ಈ ಶಿಕ್ಷಣದ ಉದ್ದೇಶವೇ ಅಲ್ಲ. ಹೀಗಾಗಿ ವೃತ್ತಿಪಾಠವು ಕೇಂದ್ರವಾಗಿ ಇತರ ಎಲ್ಲ ಪಾಠಗಳಿಗೆ (ನಾನಾ ಬಗೆಯ ಜ್ಞಾನವನ್ನು ಬೋಧಿಸಲು) ಉಪಯುಕ್ತವಾಗಬೇಕು ಎಲ್ಲ ಪಾಠಗಳೂ ಶಾಸ್ತ್ರೀಯವಾಗಿ ಬೋಧಿಸಬರುವಂತಾಗಬೇಕು ಇದಕ್ಕಾಗಿ, ನೂಲುವುದು, ನೇಯಿಗೆ, ಮರದ ಕೆಲಸ ಇವನ್ನು ಆರಿಸಲಾಗಿದೆ

ಎರಡನೆಯದಾಗಿ, ನಾಗರಿಕನಾಗಿ ಮಗು ಬಳೆಯಬೇಕೆಂದೂ, ತನ್ನ ಸ್ಥಾನದ ಗೌರವವನ್ನೂ ಜವಾಬ್ದಾರಿಯನ್ನೂ ಸಮಾಜದಲ್ಲಿ ಪಾಲಿಸಿ ಬರುವಂತಾಗಬೇಕೆಂದೂ, ವೃತ್ತಿ ಶಿಕ್ಷಣವನ್ನು ನಿರ್ವಹಿಸಿಕೊಳ್ಳಬೇಕಾಗಿದೆ ಸಾಮಾಜಿಕ, ರಾಜಕೀಯ, ಸಾಂಪತ್ತಿಕ ಮತ್ತು ಸಾಂಸ್ಕೃತಿಕ ಜೀವನಕ್ಕೂ ಈ ಶಿಕ್ಷಣಕ್ಕೂ ಸಂಬಂಧವಿರುವ ಕಾರಣ, ಮುಂದೆ ನಾನಾ ಸಮಸ್ಯೆಗಳು ಉದ್ಭವಿಸಿದಾಗ, ಪ್ರತಿ ವ್ಯಕ್ತಿಯೂ ಹೇಗೆ ನಡೆದುಕೊಳ್ಳಬೇಕೋ ಅದನ್ನು ತಾನಾಗಿ ಗೊತ್ತುಪಡಿಸುವಂತಾಗಬೇಕು ಇಷ್ಟನ್ನು ತಿಳಿದುಕೊಳ್ಳುವುದಕ್ಕೆ ಅಗತ್ಯವಾಗಿರ [illegible] ಈ ಶಿಕ್ಷಣದಿಂದ ದೊರೆಯಬೇಕು

ಸಮಾಜದಲ್ಲಿ ಸೇರಿರುವ ಪ್ರತಿಯೊಬ್ಬನೂ ತನ್ನ ಸ್ಥಾನವನ್ನು ಪಾಲಿಸಿ ಒರುವ ಸಮಾಜಕ್ಕೆ ತನ್ನಿಂದ ಸಲ್ಲಬೇಕಾಗಿರುವ [illegible] ಸಮಾಜದಲಿ [illegible] ಭಾರವ [illegible] ಜನರಿಗೆ ಸ್ಥಾನವಿಲ್ಲ ಅದಕ್ಕಾಗಿ [illegible] ತನ್ನ ಭಾರವನ್ನು [illegible] ಸಿದ್ಧನಾಗುವ ಯೋಗ್ಯತೆ [illegible] ನಡೆಯಬೇಕು

ಹೊರಗಣ ಜೀವನಕ್ಕೂ ಶಾಲೆಯ [illegible] ಕ್ಕೂ ಸಂಬಂಧವಿರುವ ಕಾರಣ, ವಿದ್ಯಾರ್ಥಿಗಳ ತಮ್ಮ ಪಾಠಗಳಲ್ಲಿ ಹೆಚ್ಚಿನ ಆಸಕ್ತಿಯನ್ನೂ ಪ್ರಯೋಜನವನ್ನು [illegible]

ಶಾಲೆಯಲ್ಲಿ ಕಲಿಯುತ್ತಿರುವಾಗಲೂ ತಾವು ಸಮಾಜದಲ್ಲಿ ಸೇರಿ ಕಾರ್ಯಮಾಡುತ್ತಿರುವಂತೆ ಆ ಮಕ್ಕಳು ತಿಳಿದುಕೊಳ್ಳುವಂತಾಗಬೇಕು

ಸ್ವಯಂಪೋಷಕವಾದ ಶಿಕ್ಷಣ

ಶಾಲಾ ಖರ್ಚಿನಲ್ಲಿ ಆಗುವಷ್ಟನ್ನು ಪೂರಯಿಸುವುದಕ್ಕಾಗಿಯೆ ಈ ಬಗೆಯ ಶಿಕ್ಷಣದ ಯೋಜನೆ ಹೊರತು, ಮಕ್ಕಳಿಂದ ದುಡಿಯಿಸಿ ಲಾಭ ಪಡೆವುದಕ್ಕಾಗಿಯಲ್ಲ ಜನಾಂಗದ ಸಾಂಪತ್ತಿಕ ಅಭ್ಯುದಯಕ್ಕೂ ಇದರಿಂದ ಪ್ರಯೋಜನವುಂಟು, ಶಾಲೆಗಳಲ್ಲಿ ತಯಾರಾಗುವ ಒಡವೆಗಳನ್ನು ಸರಕಾರವು ಕ್ರಯಕ್ಕೆ ಕೊಂಡುಕೊಳ್ಳಬೇಕಾಗಿದೆ ಎಂದು ಶಿಫಾರಸು ಇದೆ

ಕೈಗೆಲಸಕ್ಕೆಯೆ ಪ್ರಾಮುಖ್ಯತೆ ಕೊಟ್ಟು, ಮಾನಸಿಕವೇ ಮೊದಲಾದ ಶಿಕ್ಷಣವನ್ನು ಮೂಲೆಗೆ ತಳ್ಳದಂತೆ ತುಂಬಾ ಜಾಗ್ರತೆ ತೆಗೆದುಕೊಳ್ಳಬೇಕಾಗಿದೆ ಉಪಾಧ್ಯಾಯರನ್ನು ತರಬೇತು ಮಾಡುವುದೂ ಸುಪರ್‌ವೈಸರರು ಎಚ್ಚರ ನೋಡುವುದು ಇದಕ್ಕಾಗಿಯೆ

ರಾಷ್ಟ್ರಪತಿ ನೆಹರುಗಳವರು ಅಸ್ವಾಮಿ ನಿಂದ ಸಂಯುಕ್ತಪ್ರಾಂತ್ಯಕ್ಕೆ ಹಿಂತೆರಳಿರುವರು ಹಾದಿಯಲ್ಲಿ ಲಕ್ನೋ ನಗರದಲ್ಲಿ, ಸಂಯುಕ್ತ ಪ್ರಾಂತ್ಯದಲ್ಲಿ ಈಗ ಉಂಟಾಗಿರುವ ಮುಷ್ಕರಗಳ ಕುರಿತು ಪ್ರಧಾನ ಮಂತ್ರಿ ಪಂತರೊಡನೆ ವಿಚಾರಿಸಿದರು.

ಜಪಾನಿನ ವಿಜಯಯಾತ್ರೆ!

ಯಾವ ಜನಾಂಗವೂ ನೀತಿಯಂತೆ ನಡೆಯಬೇಕಾಗಿರುವಲ್ಲಿ ಯುದ್ಧಗಳನ್ನು ಹೇಗೆ ಮಾಡಬೇಕೋ ಆ ಕ್ರಮವನ್ನ ಧರ್ಮವನ್ನ ತ್ಯಜಿಸಿ, ಮಾನವ ಧರ್ಮ ನಾಗರೀಕತೆಗಳನ್ನೂ ಬದಿಗೊತ್ತಿ, ವಿಜಯಕ್ಕೆಂದು ಹೊರಟ ಜಪಾನು ವಿಜಯಯಾತ್ರೆಯನ್ನು ಶಾಂಘಾಯಿಯಲ್ಲಿ ದೊಡ್ಡದೊಂದು ಆಡಂಬರದ ಮೂಲಕವಾಗಿ ಪೂರಯಿಸಿದುದು ತಪ್ಪಲ್ಲ. ಕಾಲು ಓರೆಯಾದ ಬಳಿಕ ಎಲ್ಲ ನಡಿಗೆಯೂ ಓರೆಯಾಗಿರಲೇ ಬೇಕು, ಅದು ಸ್ವಭಾವದ ರೀತಿ ಈ ಮೆರವಣಿಗೆಯಿಂದ ಚೀನೀಯರ ಮೇಲೆ ಎಂತಹ ಗಡಿಬಿಡಿಯನ್ನು ಮಾಡಬೇಕಾಗಿ ಎಣಿಸಿತ್ತೋ ಅದು ನಡೆಯಲಿಲ್ಲ. ಈಗ ಅಭಿಪ್ರಾಯವೆಂದರೆ,—ಜಪಾನಿನ ವಿರುದ್ಧ ಅಲ್ಲಿರುವ ಭಾವನೆಗಳನ್ನು ಕೀಳಬೇಕೆಂಬ ಆಸೆಯಾಗಿದೆ ಜಪಾನಿನ ಪೋಲೀಸರನ್ನೆ ಅಲ್ಲಿಡಿಸಬೇಕಾಗಿ ಈಗ ಆಲೋಚನೆಯಾಗಿದೆ ಫ್ರೆಂಚ, ಅಮೇರಿಕ ಸರಕಾರಗಳು ಏನೆನ್ನುವುವೋ ಕಾಯಬೇಕಾಗಿದೆ ಆಕ್ಷೇಪಗಳನ್ನು ಮಾತ್ರ ಇವು ಸೂಚಿಸಿವೆ ಇಂತಹ ಆಕ್ಷೇಪಗಳನ್ನು ಪ್ರತಿಬಾರಿಯೂ ಮೆಟ್ಟಿ ನಡೆಯುವುದೇ ಜಪಾನಿನ ಕ್ರಮವಾಗಿದೆ .ಸರಕಾರಗಳು ಸ್ವಾತಂತ್ರ್ಯವುದಿಲ್ಲವೆಂದೂ ಅದಕ್ಕೆ ಗೊತ್ತಿರುತ್ತದೆ ಏಕೆಂದರೆ, ಸರಿಯಾಗಿ ವಿಚಾರಮಾಡಿದರೆ, ಶಾಂಘಾಯಿ ಚೀನೀಯರದು ಅಲ್ಲಿರುವುದಕ್ಕೆ ಪರರಾಷ್ಟ್ರೀಯರಿಗೆ ಎಷ್ಟು ಹಕ್ಕು ಉಂಟೋ ಅಷ್ಟೇ ಹಕ್ಕು ಜಪಾನಿಗೂ ಉಂಟು ಆದರೆ ಇವೆಲ್ಲ ಪರರಾಷ್ಟ್ರಗಳು ಒಂದಾದರೆ ಜಪಾನಿಗೆ ಅಲ್ಲಿ ತನ್ನದೊಂದೇ ಹಕ್ಕೆಂಬುದು ಸಲ್ಲದೆಂದು ತೋರುವ [illegible] ಜಪಾನ ತನ್ನ ಬಲ [illegible] ಹೀನದಲ್ಲಿ ಪ್ರಯೋಗಿಸಿ [illegible] ರಷ್ಯ ಇದರಿಂದಾಗಿ [illegible] ಹೀನವಾಗಬಹುದೂ ಎಂದೇ ಜರ್ಮನಿ ಜಪಾನನ್ನ ಎಚ್ಚರಿಸಿ ಚೀನಕ್ಕೂ ಜಪಾನಿಗೂ ತಾನೇ ಸಂಧಿ [illegible] ಕೊಂಡಿದೆ ಈ ಶಾಂಘಾಯಿ ಮೆರವಣಿಗೆಯಿಂದ [illegible] ಬುದ್ಧವಾ [illegible] ಏನಿನ್ನು, ಅಮೇರಿಕಾ [illegible] ಒಟ್ಟಾಗಿ ಜಪಾನಿನ ಈ ಅಡ್ಡ [illegible] ತಡೆದರೆ, ಅದರ ಅನ್ಯಾಯ ಪ್ರಭಾವವನ್ನು ಸ್ವಲ್ಪ ಇಳಿಸಬಹುದು ಆದರೆ ಇವು ಹಾಗೆ ಮಾಡುವುವೆ? ಒಕ್ಕಟ್ಟುಂಟೆ?

ಪ್ರಕಟಣೆ.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 762/1937

ಗುರ್ಪುರ ವೈಕುಂಠರಾಯ ಪೈ ಬಂಟವಾಳ ವಿಶ್ವನಾಥದಾಸ ಪೈ ಎಂಡ್ ಕೋ ,— ಇದರ ಪಾರ್ಟ್ನರ ಗುರ್ಪುರ ವೈಕುಂಠರಾಯ ಪೈ— ವಾದಿರು ಮತ್ತು

ಹುಸೇನಬ್ಬ ಬ್ಯಾರಿ, ಪೇಜಾವರ ಅಬ್ದುಲ್ ಕಾದಿ, ಬ್ಯಾರಿಗಳ ಮಗ, ಮಂಗಳೂರು ತಾಲೂಕು ಸುರತ್ಕಲ್ ಗ್ರಾಮದಲ್ಲಿರುವವ—ಪ್ರತಿವಾದಿ

ಪ್ರತಿವಾದಿ ಹುಸೇನಬ್ಬ ಬ್ಯಾರಿಗೆಳಿಗೆ

ಮೇಲ್ಕಂಡ ವಾದಿರು ನಿಮ್ಮಿಂದ ತಾರೀಕ 16—8—1937ರ ವರೆಗೆ ಬರತಕ್ಕ ಅಸ್ಲು ಒಡ್ಡಿ ರೂಪಾಯಿ 59-9-8 ನಂತ್ರದ ಬಡ್ಡಿ ಕೋರ್ಟು ಖರ್ಚು ಕೂಡಾ ಬರಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲು ಮಾಡಿದ ಮೇಲಣ ದಾವೆಯು ತಾ 10-1-1938ಕ್ಕೆ ತನಿಖೆಗೆ ಇಡೋಣಾಗಿಯದೆ ಅದ್ರಿಂದ ಸದ್ರಿ ದಾವೆಗೆ ನೀವು ಉದಾಹರಣೆ ಕೊಡುವುದಾದರೆ ತಾ 10-1-1938ನೇ ದಿವಸ ಹಗಲು 11 ಗಂಟೆಯ ಒಳಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜವಾಬು ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಾಣುವ ರೀತಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ

By order of the Court.

Mangalore, **P. Ramanath Pai**
9—12—'37 ADVOCATE FOR PLFF

ಮಂಗಳೂರು.

ರೈತ ಸಾಲನಿವಾರಣೆಯ ಬಿಲ್ಲು.

ಇದು ೫೦೦ ಪ್ಲಾಟು ವಲ್ಲಿಗಳಿಗಿಂತ ಕಡಿಮೆ ಸದಸ್ಯವರ್ಗವಿರುವ ಜ್ವಾಯಿಂಟ್‌ಸ್ಟಾಕ್ ಕಂಪೆನಿಗಳ ವಿಚಾರ ದುಷ್ಪರಿಣಾಮಕಾರಿಯಾಗಿರುವುದೆಂದೂ, ಅದನ್ನು ಬಿಡ ಸ್ತಬೇಕು, ಯಾ ರೈತ ಸಾಲನಿವಾರಣೆಗಾಗಿ ಬೇರೆ ತರದ ಉಪಾಯಗಳನ್ನು ಮಾಡಬೇಕೆಂದೂ ಲೋನ್, ಬ್ಯಾಂಕಿಂಗ್ ವಹಿವಾಟುಗಳನ್ನು ಮಾಡುವ ನಮ್ಮ ಜಿಲ್ಲೆಯ ಜ್ವಾಯಿಂಟ್‌ಸ್ಟಾಕ್ ಸಂಸ್ಥೆಗಳ ಸಭೆಯೊಂದು, ಕಳೆದ ಶನಿವಾರ ಸ್ಥಳೀಯ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಸದನದಲ್ಲಿ ಶ್ರೀಯುತರಾದ ಬಿ. ಎಲ್. ನಾರಾಯಣ ರಾಯರ ಅಧ್ಯಕ್ಷತನದಲ್ಲಿ ಕೂಡಿ ಒಂದು ಠರಾವನ್ನು ಮಾಡಿತು.

ನಮ್ಮೂರಿನ ಪ್ರಸಿದ್ಧ ವಕೀಲರಾದ ರಾ। ವೈಕುಂಠ ಬಾಳಿಗರು, ಈ ಬಿಲ್ಲಿನಿಂದ ವ್ಯಕ್ತಿಗಳ ಖಾಸಗಿ ಹಕ್ಕುಗಳ ಮೇಲೆ ಆಕ್ರಮವಾಗುತ್ತದೆಂದೂ, ಇಂದು ಆ ತರದ ಬಿಲ್ಲಿನ ಅವಶ್ಯವಿರುವುದಿಲ್ಲವೆಂದೂ, ಹಳ್ಳಿಗರ ಸಾಲ ನಿವಾರಣೆಗೆ ಇದೊಂದೇ ಹಾದಿಯಲ್ಲವೆಂದೂ, ಕಾಂಗ್ರೆಸ್ ಚುನಾವಣಾ ವಾಗ್ದಾನಗಳ ಪ್ರಕಾರ ಭೂಕಂದಾಯವು ಕಡಿಮೆಯಾಗಬೇಕೆಂದೂ, ಸರಕಾರವು ರೈತರ ಜಿನಸುಗಳನ್ನು ಮಾರ್ಕೆಟು ಮಾಡುವ ವ್ಯವಸ್ಥೆ ಮಾಡಬೇಕೆಂದೂ, ಈ ಬಿಲ್ಲಿನ ಕುರಿತು ರೈತನಿಗೆ ಶಮನ ದೊರಕುವ ಕುರಿತು ತನಗೆ ಸಂದೇಹವಿರುವುದೆಂದೂ, ಈ ಬಿಲ್ಲಿನ ದೆಸೆಯಿಂದ ರೈತನಿಗೆ ಮುಂದಕ್ಕೆ ಸಾಲಗಳೇ ದೊರೆಕವೆಂದೂ, ೧—೧೦—೩೭ರ ವರೆಗಿನ ಒಪ್ಪಿಗೆ ಮಾಡುವ ಕುರಿತು ಬಿಲ್ಲಿನ ಶರ್ತವು ಅನ್ಯಾಯವಾದುದೆಂದೂ, ಜ್ವಾಯಿಂಟ್ ಸ್ಟಾಕ್ ಕಂಪೆನಿಗಳನ್ನು ಈ ಬಿಲ್ಲಿನೊಳಗೆ ಸೇರಿಸಿದುದರಿಂದ ಅವರ ಮೂಲಧನವು ಇತರ [illegible]ಗಳಿಗೆ ಸಹಾಯವಾಗುವು ದೆಂದೂ, ಸರಕಾರವು ರೈತರಿಗೆ ಸಾಲವನ್ನು ಕೊಟ್ಟು ಅವರ ಸಾಲಸಂದಾಯ ಗೊಳಿಸುವುದು ಉತ್ತಮವೆಂದೂ ಈ ಬಿಲ್ಲಿನಿಂದ ಶೇ. ೯೦ರ ಸಲ ಅನ್ಯಾಯಗಾರರಿಗೆ ಸಹಾಯ ಒದಗುವುದೆಂದೂ, ಅಭಿಪ್ರಾಯಪಟ್ಟು ಭಾಷಣ ವಿತ್ತರು. ನಂತರ ಅನೇಕ ಊರ ಪ್ರಮುಖರ ಭಾಷಣಗಳು ನಡೆದವು.

ನಂತರ ಈ ಸಭೆಯಲ್ಲಿ ಕೆಳಗಿನ ಠರಾವುಗಳು ಮಂಜೂರಾಗಿ, ಈ ಬಿಲ್ಲನ್ನು ಸವಿವರವಾಗಿ [illegible] ಇದೇ ತಾ ೧೫ರಲ್ಲಿ ಸಭೆ ಸೇರಬೇಕೆಂದು ನಿರ್ಣಯವಾಗಿ ಅಂದಿನ ಸಭೆಯು ಮುಕ್ತಾಯವಾಯಿತು. ತಾ ೧೫ರಲ್ಲಿ ಈ ಸಭೆಯು ಡಾ। ಎಲ್. ಪಿ. ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಕೂಡಿತು. [illegible] ಭೂಮಿಗಳನ್ನು ಈ ಬಿಲ್ಲಿನೊಳಗೆ ಸೇರಿಸಬೇಕೆಂದೂ ವ್ಯವಸಾಯದ ಬಗ್ಗೆ [illegible] ಮಾತ್ರ ಈ ಬಿಲ್ಲು ಅನ್ವಯಿಸಬೇಕೆಂದೂ, ದೂ ೫೦೦ಕ್ಕೆ ಮಿಕ್ಕಿ ಭೂ ಕಂದಾಯ ತೆರುವ ಈಗಿನ ಮಿತಿಯನ್ನು ದೂ ೧೦೦ ಯಾ ೫೦ಕ್ಕೆ ಇಳಿಸಬೇಕೆಂದೂ, ಸಹಕಾರ ಸಂಘ ಮತ್ತು ಭೂಮಿ ಆಧಾರದ ಮೇಲೆ ಸಾಲ ಕೊಡುವ ಸಂಸ್ಥೆಗಳನ್ನು ಇತರ ಜ್ವಾಯಿಂಟ್ ಕಂಪೆನಿಗಳ ಸಾಲಿಗೆ ಸೇರಿಸಬೇಕೆಂದೂ ಜ್ವಾಯಿಂಟ್ ಸ್ಟಾಕ್ ಕಂಪೆನಿಗಳನ್ನು ಈ ಬಿಲ್ಲಿನಿಂದ ಹೊರ ಮಾಡಬೇಕೆಂದೂ ಬಡ್ಡಿ ದರದ ಮೇಲೆ ಸರಕಾರವು ಕೈ ಹಾಕಬಾರದೆಂದೂ ಇತ್ಯಾದಿ ಅನೇಕ ಬದಲಾವಣೆಗಳು ಈ ಬಿಲ್ಲಿನಲ್ಲಾಗಬೇಕೆಂದೂ ಈ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿತು.

ವಕೀಲ ಸಂಘದ ವಿರೋಧ

ಸ್ಥಳೀಯ ವಕೀಲ ಸಂಘದ ಸಭೆಯೊಂದು ಕಳೆದ ಸೋಮವಾರ ಶ್ರೀ। ವ್ಯಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿಬಂದು, ರೈತರ ಸಾಲನಿವಾರಣಾ ಬಿಲ್ಲಿನ ಕುರಿತು ಚರ್ಚೆ ನಡೆದು ರೈತನ ಸಾಲನಿವಾರಣೆಯು ಅವಶ್ಯವು ಆದಗ್ಯೂ ಈ ಬಿಲ್ಲು ಆ ಬಗ್ಗೆ ಅತ್ಯಂತ ಫಲಕಾರಿಯಾಗದು ಎಂದೂ, ಇದರಿಂದ ಕೆಟ್ಟದೇ ಆಗುವ ಸಂಭವಗಳು ಹೆಚ್ಚು ಇರುವುದರಿಂದ ಸರಕಾರವು ಈ ಬಿಲ್ಲನ್ನು ಹಿಂತೆಗೆಯಬೇಕಾಗಿಯೂ ಒಂದು ಠರಾವು ಬಹುಮತದಿಂದ ಮಂಜೂರಾಯಿತು.

ಸಾರಸ್ವತರಲ್ಲಿ ಸುಧಾರಣಾ ವಿವಾಹ.

ಕಲೆಕ್ಟರರ ಕಚೇರಿಯ ಶ್ರೀ। [illegible] ಇವರ ಮಗಳಾದ ಶ್ರೀಮತಿ [illegible]ಯವರಿಗೂ ರಾಘವೇಂದ್ರ ಟಿಂಬರ್ ಡಿಪೋವಿನ ಮಾಲೀಕರಾದ ಶ್ರೀ ಬೆನೆಗಲ್ ಸುಬ್ಬರಾಯರಿಗೂ, ನಿವೃತ್ತ ಡಿಪ್ಯುಟಿ ಕಲೆಕ್ಟರ್ ಶ್ರೀ। [illegible]ಪ್ಪನವರ ಸಮಕ್ಷಮದಲ್ಲಿ ರಿಜಿಸ್ಟ್ರಿ ವಿಧಿ ಪ್ರಕಾರ ವಿವಾಹವು ಇದೇ ತಾ. ೧೭ರಲ್ಲಿ ನಡೆಯಿತು. ಈ ತರದ ಮದುವೆಯು ಸಾರಸ್ವತರಲ್ಲಿ ನಡೆದುದು ಇದೇ ಪ್ರಥಮಬಾರಿ. ಅಂದು ಸಾಯಂಕಾಲ ವಿವಾಹ ನಿಮಿತ್ತ ಊರ ಪ್ರಮುಖರಿಗೂ ವಧೂವರರ ಇಷ್ಟಮಿತ್ರರಿಗೂ ಒಂದು ಸತ್ಕಾರಕೂಟವು ಕೊಡಲಾಯಿತು.

ನಗರ ಸಭೆ.

ಸ್ಥಳೀಯ ನಗರ ಸಭೆಯ ಸಾಮಾನ್ಯ ಸಭೆಯು ಇದೇ ತಾ. ೨೦ನೇ ಸೋಮವಾರ ದಿನ ಅಪರಾಹ್ನ ಘಂಟೆ ೫.೩೦ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗಲಿರುವು ದೆಂದು ನಗರ ಸಭಾಧ್ಯಕ್ಷರು ತಿಳಿಸುತ್ತಾರೆ.

ದ. ಕ. ಜಿ. 8ನೇ ರಾಜಕೀಯ ಪರಿಷತ್ತು—

ಮೂಲ್ಕಿಯಲ್ಲಿ ಇದೇ ಡಿಸೆಂಬರ ತಾ. ೨೪, ೨೫ ರಲ್ಲಿ ಶ್ರೀ। ಟಿ. ಎ. ರಾಮಲಿಂಗಂ ಚೆಟ್ಟಿಯಾರ್, ಎಂ. ಎಲ್. ಸಿ., ಇವರ ಅಧ್ಯಕ್ಷತೆಯಲ್ಲಿ ಜರಗಲಿರುವದು. ಪರಿಷತ್ತಿನ ಕಾರ್ಯಕ್ರಮವು ಈ ಕೆಳಗಿನಂತೆ ನಿರ್ಣಯಿಸ ಲ್ಪಟ್ಟಿದೆ. ತಾ. ೨೪ನೇ ಬೆಳಿಗ್ಗೆ ಗಂಟೆ ೫-೩೦ಕ್ಕೆ ಪ್ರಭಾತ ಫೇರಿ, ೬.೩೦ಕ್ಕೆ ಧ್ವಜವಂದನೆ— ಮದ್ರಾಸಿನ ಕಾರ್ಪೊರೇಶನ್ ಮೆಂಬರು ಸೆಕ್ರೆಟರಿಗಳಾದ ಶ್ರೀ। ಎಂ. ಮರಿಕ್ಕೇರರು ಧ್ವಜ ವನ್ನು ಏರಿಸುವರು. ಗಂಟೆ ಆಕ್ಕೆ ಪ್ರದರ್ಶನ ಉದ್ಘಾಟನಾಸಮಾರಂಭ—ಶ್ರೀ ಸಾಮುವೇಲ್ ಆರಾನ್, ಎಮ್. ಎಲ್. ಎ. (ಕೇಂದ್ರ) ಇವರಿಂದ. ಗಂಟೆ ೯ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ. ೧೧.೩೦ಕ್ಕೆ ವಿಷಯ ನಿಯಾಮಕ ಮಂಡಳಿಯ ಸಭೆ. ಮಧ್ಯಾಹ್ನ—ಗಂಟೆ ೩—೪ ಅಧ್ಯಕ್ಷರ ಮೆರವಣಿಗೆ ಗಂಟೆ ೪ಕ್ಕೆ ಪರಿಷತ್ತನ್ನು ತೆರೆಯುವುದು—ಮಾನ್ಯ ಶ್ರೀ। ಕೆ ರಾಮನ್ ಮೆನೋನ್— ಮದ್ರಾಸು ಸರಕಾರದ ಕೋರ್ಟ್ ವ ಜೈಲು ಇಲಾಖೆಗಳ ಮಂತ್ರಿಗಳು ಇವರಿಂದ ಆರಂಭ ಭಾಷಣ ಮತ್ತು ಪರಿಷ ತ್ತಿನ ಅಧಿವೇಶನ. ರಾತ್ರೆ ಗಂಟೆ ೧೦ಕ್ಕೆ ಯಕ್ಷಗಾನ ತಾಳಮದ್ದಳೆ—'ಕರ್ಣಪರ್ವ' ತಾ ೨೫ನೇ ಬೆಳಿಗ್ಗೆ ಗಂಟೆ ೫-೩೦ಕ್ಕೆ ಪ್ರಭಾತಫೇರಿ ೮ಕ್ಕೆ ವಿಷಯನಿಯಾಮಕ ಸಭೆ ಮಧ್ಯಾಹ್ನ ಗಂಟೆ ೩ಕ್ಕೆ ಪರಿಷತ್ತಿನ ಎರಡನೆ ದಿನದ ಅಧಿವೇಶನ ರಾತ್ರಿ ೬—೯ ವ್ಯಾಯಾಮ ಪ್ರದರ್ಶನ. ಪರಿಷತ್ತಿಗೆ ಬರಲಿರುವ ಪ್ರತಿನಿಧಿಗಳು ವ ಅತಿಥಿಗಳು ತಮ್ಮ ಊಟದ ವ್ಯವಸ್ಥೆ ಬಗ್ಗೆ ಸ್ವಾಗತ ಮಂಡಳಿಗೆ ಮುಂದಾಗಿ ತಿಳಿಸಬೇಕಾಗಿಯೂ, ಸ್ವಾಗತ ಮಂಡಲಿಯ ಸದಸ್ಯರಾಗಲಿಚ್ಛಿಸುವ ಮಂಗಳೂರು ತಾಲೂ ಕಿನ ಮಹಾಜನರು ಬೇಗನೇ ಸದಸ್ಯರಾಗಿ ಸೇರಬೇಕಾಗಿಯೂ [illegible] ಅಧ್ಯಕ್ಷರು [illegible] ಪ್ರಾರ್ಥನೆ ವಿನಂತಿಸುತ್ತಾರೆ.

ದ. ಕ. ಜಿಲ್ಲಾ ಪ್ರೆಸ್‌ಕೆಲಸಗಾರರ ಸಂಘ ಮಂಗಳೂರು

— ಈ ಸಂಘದ ಪ್ರತಿ ವರ್ಷ [illegible] ನಡೆಯುವ ಜರಗುವ ಮಹಾಸಭೆಯು ಇದೇ ಡಿಸೆಂಬರ ೨೬ನೇ ಆ ಸ್ವವಾರ ಸಂಜೆ ಗಂಟೆ ೩ಕ್ಕೆ [illegible] ಕೊಡಿಯಾಲ್ಬೈಲಿನ ಪತ್ರಿ ಸಂಘದ ಆಫೀಸಿನಲ್ಲಿ ಜರಗಲಿ[illegible] ಪ್ರಯುಕ್ತ ಎಲ್ಲಾ ಪ್ರೆಸ್ ಕೆಲಸಗಾರರೂ ಆ ಸಭೆಯಲ್ಲಿ ಸೇರಬೇಕೆಂದು ಸಂಘದ ಕಾರ್ಯದರ್ಶಿಗಳಾದ ಶ್ರೀ [illegible] ಇವರು ತಿಳಿಸುತ್ತಾರೆ.

ಶವಸಂಸ್ಕಾರಕ್ಕೆ ಪಾದ್ರಿಗಳ ಅಡ್ಡಿ

ಕಳೆದ ಶನಿವಾರ ಸ್ಥಳೀಯ ಕಂಕನಾಡಿ [illegible] ಕ್ರೈಸ್ತ ಪಾದ್ರಿಗಳು [illegible] ಕ್ರೈಸ್ತ [illegible] ಶವಸಂಸ್ಕಾರಕ್ಕೆ ಅಡ್ಡಿ [illegible] ಬರಲು ಕೊಡದೆ [illegible] ಟುಮಾಡಿದರು. ಈ ಪಾದ್ರಿಗಳು ಶವಸಂಸ್ಕಾರ ನಡೆಸಲು ಅನುಮತಿ ಕೊಡದೆ ಸಮಾಧಿ ಸ್ಥಳದ ಗೇಟಿಗೆ ಬೀಗ ಹಾಕಿದರಂತೆ.

ಮಂಗಳೂರಿನಲ್ಲಿ ಅಖಿಲ ಭಾರತ ಸ್ತ್ರೀ ಪರಿಷತ್ತಿನ ಶಾಖೆಯು ತೆರೆಯಲಾಯಿತು

ಕಳೆದ ವಾರ ತಿಳಿಸಿದಂತೆ ಅ. ಭಾ. ಸ್ತ್ರೀ ಪರಿಷತ್ತಿನ ಮಿ। ಮ ಗೇರೆಟ್ ಕಸಿನ್ಸರು ಕಳೆದ ಶನಿವಾರ ಸ್ಥಳೀಯ ಅನೇಕ ಸ್ತ್ರೀಯರ ಸಮ್ಮುಖದಲ್ಲಿ ಅ. ಭಾ. ಸ್ತ್ರೀ ಪರಿಷತ್ತಿನ ಶಾಖೆಯನ್ನು ತೆರೆದರು.—ಫೆಲಿಕ್ಸ್ ಪೈ ಕಟ್ಟಡದ ವಿಶಾಲ ಹಾಲಿನಲ್ಲಿ ಅಂದು ಶ್ರೀಮತಿ ಲೀಲಾಬಾಯಿಯವರು ದೇಶದ ರಾಜಕೀಯದಲ್ಲಿ ಸ್ತ್ರೀಯರ ಚಟುವಟಿಕೆಗಳ ಕುರಿತೂ ಇಲ್ಲಿ ನಡೆವ ಮುಷ್ಕರಗಳ ಕುರಿತೂ, ಸ್ತ್ರೀ [illegible] ಘದ ಅವಶ್ಯವನ್ನೂ ಸೂಚಿಸಿಯೂ ಭಾಷಣವಿತ್ತರು.

ಮಂಗಳೂರಲ್ಲಿ ಮಾರ್ಗರೆಟ್ ಕಸಿನ್ಸರು

ಕಳೆದ ಶನಿವಾರ ಮಂಗಳೂರಿಗೆ ಚಿತ್ತೈಸಿದ ಅಖಿಲ ಭಾರತ ಸ್ತ್ರೀಪರಿಷತ್ತಿನ ಅಧ್ಯಕ್ಷಿಯರಾದ ಮಾರ್ಗರೆಟ್ ಕಸಿನ್ಸರು ಸ್ಥಳೀಯ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಟೈನ್ ಮೈದಾನಿನಲ್ಲಿ ಒಂದು ಸಾರ್ವಜನಿಕ ಭಾಷಣವನ್ನಿತ್ತರು. ವಿದ್ಯಾರ್ಥಿಗಳು ರಾಷ್ಟ್ರಾಭ್ಯುದಯಕ್ಕೆ ಹೇಗೆ ಗೆಯ್ಯಬೇಕೆಂಬುದರ ಕುರಿತು, ಅನೇಕ ಬೋಧಪರ ಸೂಚನೆಗಳನ್ನು ಕೊಟ್ಟರು.

ಅಂದು ಸಾಯಂಕಾಲ, ಸ್ಥಳೀಯ ಬೆಸೆಂಟ್ ಬಾಲಿಕಾ ಶಾಲೆಯಲ್ಲಿ ಮಿ। ಕಸಿನ್ಸರಿಗೆ ಒಂದು ಬಿನ್ನಹವು ಕೊಡಲಾಯಿತು. ಹಿಂದೂ ದೇಶಕ್ಕೆ ಒಂದು ಸರ್ವ ಸಾಮಾನ್ಯವಾದ ಭಾಷೆಯು ಅವಶ್ಯವಿರುವದೆಂದು, ಈ ಅಭಿಪ್ರಾಯಪಟ್ಟು ಈ ಬಿನ್ನಹಕ್ಕೆ ಉತ್ತರವಾಗಿ ಭಾಷಣ ವಿತ್ತರು.

ಸ್ಟೀಮರು ಚಲಾವಣೆ.

ದಿ ಬೊಂಬೇ ಸ್ಟೀಮ್ ನೇವಿಗೇಶನ್ ಕಂಪೆನಿಯ 'ದಯಾವತಿ' ಎಂಬ ಸ್ಟೀಮರು ಇದೇ ಡಿಸೆಂಬರ ತಾ. ೧೯ ನೇ ಆದಿತ್ಯವಾರ ಅಪರಾಹ್ನ ಗಂಟೆ ೪ಕ್ಕೆ ಮಂಗಳೂರಿಗೆ ತಲ್ಪಿ, ತಾ. ೨೦ನೇ ಮಂಗಳವಾರ ಬೆಳಿಗ್ಗೆ ಗಂಟೆ ೯ಕ್ಕೆ ಬೊಂಬಾಯಿಗೆ ಹೊರಡುವುದು. ಇದ್ರ ಕಂಪೆನಿಯ 'ಜಾವ್ಹರ್'ಎಂಬ ಇನ್ನೊಂದು ಸ್ಟೀಮರು ಇದೇ ತಾ. ೨೩ ನೇ ಗುರುವಾರ ಮಂಗಳೂರಿಗೆ ತಲ್ಪಿ, ತಾ. ೨೪ನೇ ಶುಕ್ರ ವಾರ ಬೆಳಿಗ್ಗೆ ಗಂಟೆ ೮ಕ್ಕೆ ಬೊಂಬಾಯಿಗೆ ಹೊರಡುವುದು.

ತಾ. 12—12—1937ರಲ್ಲಿ, ಗಣಪತಿ ಹ್ಯಾಸ್ಕೂಲಿನಲ್ಲಿ ಜರಗಿದ ಮೊಗವೀರ ವ್ಯಾಸಭಾಗರ ಜಿಲ್ಲಾ ಸಂಘದ ಪರಿಷತ್ತಿನ ಪ್ರೊಸಿಡಿಂಗ್ಸು:—

ಈ ಪರಿಷತ್ತಿಗೆ ಮ. ರಾ. ರಾ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಮ್. ಎಲ್. ಸಿ., ಇವರನ್ನು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು ೧ ಸಂಘದ ಕಾರ್ಯದರ್ಶಿಯವರು ಓದಿದ ಭಾಷಣವನ್ನು ರೆಕಾರ್ಡು ಮಾಡಲಾಯಿತು. ೨ ಈ ಮೊದಲು ತಾರೀಕು ೧೫—೮—೩೭ರಲ್ಲು ಜಿಲ್ಲಾ ಪರಿಷತ್ತಿನ ಕಡೆಯಿಂದ ಎಸೆಂಬ್ಲಿಗೆ ಕಳುಹಿಸಿದ ಮನವಿಯ ವಿಷಯ ಯಾವದೊಂದು ಉತ್ತರಬಾರದೆ ಇದ್ದದ್ದಕ್ಕೆ ಈ ಪರಿಷತ್ತು ಪೆಟ್ಟಿನ ಸಂತಾಪಪಡುತ್ತದೆ. ೩. ಜಿಲ್ಲಾ ಸಂಘದ ರಚನೆ ಮತ್ತು ನಿಯಮಗಳನ್ನು ಸಭೆ ಮುಂದೆ ಓದಿ ಮಂಜೂರು ಮಾಡಿ ಅದನ್ನು ರಿಜಿಸ್ಟ್ರಿ ಮಾಡಿಸುವ ದೆಂತಲೂ ನಿರ್ಣಯಿಸಲಾಯಿತು. ೪ ವ್ಯಾಸಭಾಗರಿಗೆ ತಿಂಗಳು ೧೮ ರೂಪಾಯಿ ೩೫—೧—೦ ಆದರೂ ತಲಬು, ತರ್ಫ ಡೆಪ್ಯುಟಿ ಹೆಡ್‌ಕ್ವಾರ್ಟರ ವಗೈರೆ ಸ್ಥಳಗಳಿಗೆ ಹೋ ದರೆ ದಿನ ೧೮ ಆಣೆ ೦—೧೦—೦ರಂತೆ ಭತ್ತೆ, ಸ್ಟೇಶನರಿ ಬಗ್ಗೆ ನಗದಿನಿಂದ ತಿಂಗಳಿಗೆ ರೂ ೧—೦—೦ರಂತೆ ಕೂಡಾ ಕೊಡಿಸಬೇಕಾ. ಪಡಂಗಡಿ ತರ್ಫ ವ್ಯಾಸಭಾಗ ರಾ. ರಾಮರಾಯರು ಸೂಚಿಸಿದ್ದನ್ನು ಅರ್ಕುಳ ತರ್ಫ ವ್ಯಾಸಭಾಗ ರಾ ಭವಾನಿಶಂಕರರಾಯರು ಅನುಮೋದಿ ಸಿದ್ದನ್ನು ಸರ್ವಾನುಮತದಿಂದ ಮಂಜೂರಾಯಿತು ೫. [illegible] ವಾಪಸಿ ಹಕ್ಕನ್ನು ಈ ಜಿಲ್ಲೆಯಲ್ಲಿ [illegible] ವ್ಯಾಸಭಾಗ ರಾ [illegible] ಸುಂದರರಾಯರು ಸೂಚಿಸಿದ ಸೂಚನೆಗೆ ಸಂಗಬೆಟ್ಟು [illegible] ರಾ [illegible] ಸುಂದರರಾಯರು ಸೂಚಿಸಿದ ಸೂಚನೆಗೆ ಸಂಗಬೆಟ್ಟು ವ್ಯಾಸಭಾಗ ರಾ [illegible] ಅನುಮೋದಿಸಿ ಸರ್ವಾನುಮತದಿಂದ ಮಂಜೂರಾಯಿತು. [illegible] ವ್ಯಾಸಭಾಗರ [illegible] ರಾತ್ರಿ [illegible] ಕೇಳ [illegible] [illegible] ವ್ಯಾಸ [illegible] ರಾ [illegible] ಸರ್ವಾನು ಮತದಿಂದ ಮಂಜೂರಾಯಿತು. ೬ [illegible] ರಾ [illegible] ಅನುಮೋದಿಸಿ ಸರ್ವಾನು ಮತದಿಂದ ಮಂಜೂರು ಮಾಡಲಾಯಿತು. ೮. ಕಾರ್ಯದರ್ಶಿಯವರ ಭಾಷಣ ವ ಈ ಪರಿಷತ್ತಿನ ಪ್ರೊಸಿಡಿಂಗ್ಸನ್ನು ಇಂಗ್ಲೀಷ್ ತರ್ಜುಮೆಯಿಂದ ಮದ್ರಾಸ್ ರೆವಿನ್ಯೂ ಇಲಾಖಾ ಮಾನ್ಯ ಮಂತ್ರಿಯವರಿಗೂ, ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೂ ರವಾನಿಸಬೇಕಾ ಗಿಯೂ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಕೂಡಾ ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಡಿ. ಕ. ಜಿಲ್ಲಾ ಗೌಡ ವಿದ್ಯಾ ಸಂಘ.

ಈ ಸಂಘದ ವಾರ್ಷಿಕ ಮಹಾಸಭೆಯು ಇದೇ ಡಿಸೆಂಬರ ತಾ. ೩೧ನೇ ಶುಕ್ರವಾರ ಹಗಲು ಗಂಟೆ ೧ಕ್ಕೆ ಸುಬ್ರಹ್ಮಣ್ಯದಲ್ಲಿ ಜರಗುವುದಾಗಿ ನಿರ್ಣಯಿಸಿರುತ್ತದೆ. ಆದುದರಿಂದ ಸಂಘದ ಮೆಂಬರರೂ ಹಿತಚಿಂತಕರೂ ಸಭೆಗೆ ದಯಮಾಡಿ ಬರಬೇಕಾಗಿ ವಿನಂತಿಯಿದೆ.

ಕಾಸರಗೋಡು.

ಇಲ್ಲಿನ ಮುಸಲ್ಮಾನರ [illegible] ಇಸ್ಲಾಂ ಸಂಘದ ೧೯ನೇ ವಾರ್ಷಿಕೋತ್ಸವವು ಜಿಲ್ಲಾ ಜಡ್ಜರಾದ ಮಿ। ಮೀರ್ ಅಮೀರುದ್ದಿನ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ ೧೨ನೆ ದಿನ ವಿಜೃಂಭಣೆಯಿಂದ ಜರಗಿತು ಈ ಸಂಘವು, ಧಾರ್ಮಿಕ, ನೈತಿಕ ವಿದ್ಯಾಭ್ಯಾಸವನ್ನು ಕೊಡುವ ಒಂದು ಪ್ರೌಢಶಾಲೆಯನ್ನು ನಡೆಸುತ್ತದೆ. ಮುಸ್ಲಿಮರ ಹಿಂದಿನ ಕೀರ್ತಿಗೆ ಕಾರಣ, ಮುಸ್ಲಿಮರು ತಮ್ಮ ಅಭ್ಯುದಯದ ಸಾಧನೆಗೆ ಏನು ಮಾಡಬೇಕು ಇತ್ಯಾದಿಗಳನ್ನು ಸೂಚಿಸಿ, ಕುರಾನಿನ ಮಹತ್ವವನ್ನು ಚಿತ್ರಿಸಿ ಅಧ್ಯಕ್ಷರು ಅತ್ಯಂತ ಸುರಸಮಯ ಭಾಷಣವಿತ್ತರು. ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಪಾಣೆಮಂಗಳೂರು.

ಇಲ್ಲಿಯ ಎಸ್. ವಿ. ಎಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಈ ವರ್ಷವೇ ತೆರೆಯಲಾದ ಎಂಟನೇ ತರಗತಿಗೆ ಪರ್ಮನೆಂಟ್ ರೆಕೊಗ್ನೇಶನ್ ದೊರಕಿರುತ್ತದೆ. ಈ ಶಾಲೆಯ ೧ನೇ ತರಗತಿಗೆ ೩ ಮಂದಿ ಹರಿಜನ ಹುಡುಗರನ್ನೂ ದಾಖಲು ಮಾಡಿರುವರು.

ತಾಲೂಕುಗಳಿಂದ

ಉಡುಪಿ

ತಾ. ೧೧ನೇಗೆ ಉಡುಪಿ ತಾಲೂಕಿನ ರೈತರ ಹಾಗೂ ನಾಡೂರಿನ ಸಂಘದ ವತಿಯಿಂದ ಮದ್ರಾಸು ಸರಕಾರದವರು ಕೃಷಿಕರ ಸಾಲ ರಿಯಾಯತಿಯ ಮಸೂದೆಯ ಕುರಿತು ಆಲೋಚಿಸುವರೆ ಮಹಾಸಭೆಯೊಂದು ಜರಗಿತು. ಡಾ। ವೆಸ್. ಶ್ರೀಪಾದರಾಯರು ಅಧ್ಯಕ್ಷರಾಗಿ ಶ್ರೀಯುತರಾದ ಟಿ. ವಿ. ಶೆಣೈ, ಕೆ. ರಾಮ ಕೃಷ್ಣಯ್ಯ, ಎಸ್. ಯು. ಪಣಿಯಾಡಿಯವರು ಮಾತನಾಡಿದರು. ಸದ್ರಿ ಮಸೂದೆಯು ರಾಷ್ಟ್ರಹಿತದ ದೆಸೆಯಿಂದ ಹೂಡಲ್ಪಟ್ಟದ್ದೆಂದೂ ಇದಕ್ಕೆ ಜನಮತವನ್ನು ಸಂಗ್ರಹಿಸಬೇಕೆಂದೂ ಕೊಂಗ್ರೆಸ್ ಕಮಿಟಿಯವರು ಈ ಮಸೂದೆಯನ್ನು ಜನರಿಗೆ ತಿಳಿಸುವ ಪ್ರಚಾರ ಮಾಡಬೇಕೆಂದೂ ವಿವರಿಸಲಾಯಿತು ಸಭೆಯಲ್ಲಿ ಚರ್ಚೆ ಬಂದಿದ್ದರೂ, ಸದ್ರಿ ಮಸೂದೆಯ ಬಗ್ಗೆ ಸರಕಾರವನ್ನು ಅಭಿನಂದಿಸಿ ಠರಾವು ಮಂಜೂರಾಗಿ ಸಭಾಂತ್ಯವಾಯಿತು.

ಅಂದೇ ಸ್ಥಳೀಯ ಬೇಂಕುಗಳ ಆಡಳಿತೆದಾರರು ಸದ್ರಿ ಮಸೂದೆಯಿಂದ ತಮಗುಂಟಾಗುವ ಸಾಧಕ ಬಾಧಕಗಳ ಕುರಿತು ಚರ್ಚಿಸಿದರು ಈ ಬಗ್ಗೆ ತಮ್ಮ ಹೇಳಿಕೆಗಳನ್ನು ಮಾನ್ಯ ಸರಕಾರದವರಿಗೆ ನಿವೇದಿಸಿಕೊಳ್ಳಬೇಕೆಂದು ನಿಶ್ಚಯಿಸಿರುತ್ತಾರಂತೆ.

ತಾ ೧೨ಕ್ಕೆ ವಾಡಿಕೆಯಂತೆ ಪ್ರತಿ ಆದಿತ್ಯವಾರದ ಸಭೆಯು ಮುನಿಸಿಪಲ್ ಸರಕಸ್ಸ ನಿವಾರಣೆ ಸಮಿತಿಯವರಿಂದ ಜರಗಿ ಭಾಷಣಗಳಾದ್ದುವು.

ತಾ ೧೪ನೇಗೆ ಅಪರಾಹ್ನ ಶ್ರೀಕೃಷ್ಣ ದೇವಳದ ವಸಂತ ಮಂಟಪದಲ್ಲಿ ಶ್ರೀಗೀತಾ ಜಯಂತಿಯೋತ್ಸವವು ಜರಗಲ್ಪಟ್ಟಿತು.

ನಮ್ಮ [illegible] ಉಡುಪಿ ಸಹಕಾರ ಸಂಘದ ರಜತೋತ್ಸವವು ಇದೇ ತಾ ೧೯ನೇ ಆದಿತ್ಯವಾರ ಸ್ಥಳೀಯ [illegible] ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿಕ್ಕಿದೆ.

ಕಾರ್ಕಳ

[illegible] ಹಿಂದೇ ಪಟ್ಟಿಗಳ ಬಗ್ಗೆ ಈ ತಾಲೂಕಿನ [illegible] ಒಂದು ಕೇಂದ್ರ ವಾಗುವ[illegible] ಆದರ [illegible] ಭಾಷಾಭ್ಯಾಸಿಗಳ [illegible] ಕಾರಾದ ಶ್ರೀ [illegible] ಶ್ರೀನಿವಾಸ ಶೆಣೈಯವರು ಒಪ್ಪಿ ತಿಳಿಸುತ್ತಾರೆ

[illegible] ಉಪಾಧ್ಯಾಯ ಸಂಘದ ಕಮಿಟಿಯ ಸಭೆಯು [illegible] ದಿನ ನಡೆದು ಪ್ರಕೃತ [illegible] ಗಂಥವನ್ನು ಗುಜರಾತದಲ್ಲಿ [illegible] ಸಂಘದ ಕಾರ್ಯದರ್ಶಿಗಳು [illegible] ಈ [illegible] ಅಪ್ಪಣೆಕೊಟ್ಟು ರವಾನಿಸಬೇಕೆಂದು [illegible]ವಾಗಿರುವದು.

ಬಂಟ್ವಾಳ

ಮಹಾಲಿಂಗೇಶ್ವರ ದೇವಸ್ಥಾನವು ಜೀರ್ಣೋದ್ಧಾರವಾದಂದಿನಿಂದ ನಡೆದುಬರುತ್ತಿದ್ದ ಲಕ್ಷದೀಪೋತ್ಸವವು ಈ ವರ್ಷ ಹೊಸ ಆಡಳಿತೆದಾರರ ಆಡಳಿತೆಯಲ್ಲಿ ನಿಂತು ಹೋದುದು ವಿಷಾದಕರ.

ಇದೇ ಬರುವ ಡಿಸೆಂಬರ ತಾ. ೧೮ನೇ ಶನಿವಾರ ದಿನ ಮೂಲ್ಕಿಯಲ್ಲಿ ಜರಗಲಿರುವ ಜಿಲ್ಲಾ ರಾಜಕೀಯ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಿ ಕಳುಹಲು, ಬಂಟ್ವಾಳದಲ್ಲಿರುವ ತಾಲೂಕು ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಮಹಾಸಭೆಯು ಜರಗಲಿರುವದೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಒಂಟ್ವಾಳ ಎಸ್. ವಿ. ಎಸ್. ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದವರ ಶಾಲೆಯ ಸಹಾಯಾರ್ಥವಾಗಿ ಶೀಘ್ರದಲ್ಲಿಯೇ ಒಂದು ನಾಟಕವನ್ನು ಮಂಗಳೂರಿನಲ್ಲಿ ಅಭಿನಯಿಸಲಿರುವರು. ಮಂಗಳೂರಿನವರು ಪ್ರೋತ್ಸಾಹಿಸುವರೆಂದೂ ನಂಬಲಾಗಿದೆ.

ಪುತ್ತೂರು:

ಈಗ ಹೊಸತಾಗಿ ಏರ್ಪಡಿಸುವ ಸಾಲ ನಿವಾರಣೆಯ ಕಾನೂನಿನ ಮಸೂದೆಯ ಮತ್ತು ನಮ್ಮ ತಾಲೂಕಿನ ಕಾಡಿನ ಸಂಕಷ್ಟಗಳ ಕುರಿತು ಸರಕಾರದೊಡನೆ ಹೇಳಿಕೊಳ್ಳುವ ಬಗ್ಗೆ ಆಗತ್ಯವುಳ್ಳ ಏರ್ಪಾಡು ಮಾಡುವರೆ ಈ ತಿಂಗಳ ತಾ. ೧೯ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಪುತ್ತೂರು ಕೋ-ಓಪರೇಟಿವ್ ಸಂಘದ ಕಟ್ಟೋಣದಲ್ಲಿ ಪುತ್ತೂರು ತಾಲೂಕಿನ ಮಹಾಜನರ ಸಭೆ ಸೇರಬೇಕೆಂತ ನಿರ್ಣಯಿಸಿರುವದರಿಂದ ಎಲ್ಲರೂ ದಯಮಾಡಿ ಆ ಸಭೆಗೆ ಸಂಬಂಧಪಟ್ಟ ಅನುಭವಗಳ ಸಮೇತ ಬಂದು ಸಭೆ ಕೆಲಸ ಪೂರೈಸಬೇಕಾಗಿ ಬಿ. ಮಂಗೇಶರಾವ್, ಪುತ್ತೂರು ತಾಲೂಕು ವರ್ಗದಾರರ ಸಂಘದ ಕಾರ್ಯದರ್ಶಿ, ಇವರು ವಿನಂತಿಸುತ್ತಾರೆ.

ಯೂನಿಯನ್ ಜೇಕಿನಿಂದ ಮುಸೊಲಿನಿಯು ಬೂಟಸನ್ನು ತಿಕ್ಕುತ್ತಿದ್ದಾನೆ!

"ಕಳೆದ ವರ್ಷದ ತನಕ ನನ್ನ ದೇಶದ ಧ್ವಜವನ್ನು ನಾನು ಮನ್ನಿಸುತಿದ್ದೆ. ಆದರೆ ಅದರ ನಂತರ ಆ ಧ್ವಜವನ್ನು ಹಾರಿಸುತ್ತಿದ್ದ ಹಡಗಗಳು ಹಿಡಿಯಲ್ಪಟ್ಟು, ಕಡಲ್ಗಳ್ಳರಿಂದಲೂ, ವಿಮಾನಗಳಿಂದಲೂ ಮುಳುಗಿಸಲ್ಪಟ್ಟವೆ. ಆದರೂ ನನ್ನ ನೌಕಾ ಸೈನ್ಯವು ಈ ಕುರಿತು ಏನೂ ಮಾಡಿದುದಿಲ್ಲ.

ಇಂದು ಯಾರಾದರೂ, ಯುನಿಯನ್ ಜೇಕೆಂದರೆ ಏನೆಂದು ನನ್ನನ್ನು ಕೇಳಿದರೆ— "ಮುಸಲೀನಿಯವರ ಬೂಟ್ಸುಗಳನ್ನು ಉಜ್ಜಲು ಉಪಯೋಗಿಸಲ್ಪಡುವ ವಸ್ತ್ರವೆಂದೇ" ನನ್ನ ಉತ್ತರವಾಗಿರುವುದು ಎಂಬುದಾಗಿ ಪ್ರೊ। ಜೆ ಬಿ ಎಸ್ ಹಾಲ್ಡೇನರೆಂದಿರುವರು

ಕೈದಿಗಳಿಗೆ ವಿದ್ಯಾದಾನ.

ವಿದ್ಯಾ ಪ್ರಚಾರಕ್ಕಾಗಿ ಹೊಸತೊಂದು ಯೋಜನೆಯನ್ನು ತಯಾರಿಸಿದ ಶ್ರೀ ಸಂಗಮ ಲಾಲ ಅಗರವಾಲರೂ, ಸಂಯುಕ್ತ ಪ್ರಾಂತ್ಯದ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಗೋಪಿನಾಥ ಶ್ರೀವತ್ಸರೂ ಅಲಹಾಬಾದಿನಲ್ಲಿ ಬಹಳ ಚರ್ಚೆ ನಡೆದ ನಂತರ, ಅಗರವಾಲರ ಮೇಲ್ವಿಚಾರಣೆಯಲ್ಲಿ ನಯನಿ ಜೈಲಿನಲ್ಲಿರುವ ಕೈದಿಗಳಿಗಾಗಿ ಒಂದು ಕ್ಲಾಸನ್ನು ತೆರೆಯುವುದಾಗಿ ನಿಶ್ಚೈಸಿರುವರು. ಅಗರವಾಲರು ತಮ್ಮ ಯೋಜನೆಯ ಪ್ರಕಾರ ಜನರಿಗೆ ಆರು ವಾರಗಳಲ್ಲಿ ಓದ ಬರಹವನ್ನು ಕಲಿಸಬಹುದಾಗಿ ಭರವಸೆಯನ್ನಿತ್ತಿರುವರು

ಅಲ್ಲದೆ, ಹಿಂದಿ ವಿದ್ಯಾಪೀಠದಲ್ಲಿರುವ ಕಾಂಗ್ರೆಸ್ ಕೆಲಸಗಾರರಿಗೆ ತಮ್ಮ ಯೋಜನೆಯನ್ನು ವಿವರಿಸಿ ಹೇಳುವಂತೆ ಶ್ರೀ ಅಗರವಾಲರನ್ನು ಕೇಳಿಕೊಳ್ಳಲಾಗಿದೆ

ಸಂಸ್ಥಾನಗಳಲ್ಲಿ ಕಾಂಗ್ರೆಸ್ಸಿನ ಹೆದರಿಕೆ.

ಮೈಸೂರು ಸಂಸ್ಥಾನವು ಕಾಂಗ್ರೆಸ್ ಪ್ರಚಾರ ವಿರೋಧವಾಗಿ ದಬ್ಬಾಳಿಕೆಯನ್ನು ನಡೆಸುತ್ತಿದೆ ಎಂಬ ಸಂಗತಿಯು ಜನಜನಿತವಾಗುತ್ತಿರಲು, ಅತ್ತ, ಪಾಟಿಯಾಲದಲ್ಲೂ ಇದೇ ತೆರನಾಗಿದೆಯೆಂಬ ಸುದ್ದಿ ಬಂದಿದೆ ಮಾತ್ರವಲ್ಲ, ದಸ್ತಗಿರಿ ಮಾಡಲ್ಪಟ್ಟ ಕಾಂಗ್ರೆಸ್ ಪ್ರಮುಖರಿಗೆ ಎದುರಾಗಿ ಸಾಕ್ಷಿಯನ್ನು ಹೇಳಬೇಕಾಗಿ ಸರಕಾರಿ ಅಧಿಕಾರಿಗಳು ಪ್ರಜೆಗಳನ್ನು ಬಲಾತ್ಕರಿಸುತ್ತಿರುವರಂತೆ

ಇನ್ನು ರಾಮಪುರ ಸಂಸ್ಥಾನದಲ್ಲಂತು ಕಾಂಗ್ರೆಸ್ ಕಮಿಟಿಯೊಂದನ್ನು ಸ್ಥಾಪಿಸಿ ಕಾಂಗ್ರೆಸ್ ತತ್ವಗಳನ್ನುಪದೇಶಿಸಿದುದಕ್ಕಾಗಿ ಮೂರು ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು

ಸಂಸ್ಥಾನಗಳಿಗೆಲ್ಲ ಕಾಂಗ್ರೆಸ್ ವಿರೋಧದ ಹುಚ್ಚು ಹಿಡಿದಂತೆ ತೋರುತ್ತದೆ

ಮೊಸ್ಕೋದಲ್ಲಿ ಮದ್ಯನಿಷೇಧ

ಮೊಸ್ಕೊ ನಗರದ ಹೆಚ್ಚಿನ ಭಾಗದಲ್ಲಿ ಮದ್ಯಪಾನ ನಿಷೇಧವು ಜ್ಯಾರಿಗೆ ಬಂದಿರುವುದು ಶರಾಬು ಸುರೆಯನ್ನು ವಿಕ್ರಯಿಸುವ ಅಂಗಡಿಗಳು ಮುಚ್ಚಲ್ಪಟ್ಟು, ಅಲ್ಲಿ ತರಕಾರಿಗಳನ್ನು ಮಾರಾಟಕ್ಕೆ ಇಟ್ಟಿರುವರು ಅದಲ್ಲದೆ ಮಾದಕ ದ್ರವಗಳನ್ನು ಮಾರ್ಕೆಟುಗಳಲ್ಲೂ, ಹೊಟೇಲುಗಳಲ್ಲೂ, ಇನ್ನಿತರ ಅಂಗಡಿಗಳಲ್ಲೂ, ಶಾಲೆಗಳ ಬಾಗಿಲಿನಲ್ಲಿರುವ ಹೊಟೇಲುಗಳಲ್ಲೂ ಮದ್ಯವನ್ನು ವಿಕ್ರಯಿಸಬಾರದಾಗಿ ಕಾನೂನು ಜ್ಯಾರಿಗೆ ಬಂದಿರುವುದು.

ಹದಿನಾರು ವರ್ಷದ ಕೆಳಗಿನವರಿಗೆ ಸಿಗರೇಟು ಮೊದಲಾದ ಹೊಗೆಬತ್ತಿಗಳನ್ನು ವಿಕ್ರಯಿಸಬಾರದಾಗಿಯೂ ಇತ್ತೀಚೆಗೆ ಒಂದು ಕಾನೂನು ಅಲ್ಲಿ ಜ್ಯಾರಿಗೆ ಬಂದಿರುವುದು

ಯಾರಾಗಬಹುದು?

ಹಿಂದೂದೇಶಕ್ಕೆ ಮುಂದಿನ ವ್ಯಾಸರಾಯರು ಯಾರಾಗಬಹುದೆಂಬ ಪ್ರಶ್ನೆಯು ಇಂಗ್ಲಾಂಡಿನಲ್ಲಿ ಈಗಾಗಲೇ ಜನರ ಮನಸ್ಸನ್ನು ಸೆಳೆದಂತೆ ತೋರುತ್ತದೆ. ಈಗಿನ ಸಾರ್ವಭೌಮರ ತಮ್ಮ, ಡ್ಯೂಕ್ ಒಫ್ ಕೆಂಟರ ಪರವಾಗಿ ಪ್ರಚಾರಕಾರ್ಯವು ನಡೆಯುತ್ತಿದೆ.

ರಾಜಮನೆತನದವರೊಬ್ಬರನ್ನು ವ್ಯಾಸರಾಯರಾಗಿ ಹಿಂದೂದೇಶಕ್ಕೆ ಕಳುಹಿಸಬೇಕೆಂದು ಆಗಾಖಾನರು ಒಮ್ಮೆ ದಿವಂಗತ ಪಂಚಮ ಜಾರ್ಜರಿಗೆ ಹೇಳಿದ್ದರು ಈಗ ಆ ಪ್ರಶ್ನೆಯು ಪುನಃ ಚಿಗುರಿದಂತೆ ತೋರುತ್ತದೆ ಅರಸು ಮನೆತನದವರೊಬ್ಬರನ್ನು ಹಿಂದೂದೇಶಕ್ಕೆ ವ್ಯಾಸರಾಯರಾಗಿ ಕಳುಹಿದರೆ ಸಂಸ್ಥಾನಾಧಿಪತಿಗಳಿಗೆ ತುಂಬಾ ಸಂತೋಷವಾಗಬಹುದೆಂದು ಊಹಿಸಲಾಗಿದೆ

ಇನ್ನು ಡ್ಯೂಕ್ ಒಫ್ ವಿಂಡ್ಸರರನ್ನೂ ವ್ಯಾಸರಾಯರಾಗಿ ಕಳುಹಿಸಲೂ ಬಹುದಂತೆ ಅಂತು ಫೆಡರೇಶನಿನ ಅವತರಣಿಕೆಯು ಈ ಸಂದಿಗ್ಧ ಸಮಯದಲ್ಲಿ ಸಂಸ್ಥಾನಾಧಿಪತಿಗಳನ್ನು ಒಲಿಸಿಕೊಳ್ಳುವುದು ಅತ್ಯಾವಶ್ಯಕವೆಂದು ಬ್ರಿಟಿಷರು ತಿಳಿದುಕೊಂಡಂತೆ ತೋರುತ್ತದೆ

ಬಂಗಾಳದ ಪ್ರಖ್ಯಾತ ವಕೀಲರೊಬ್ಬರು ಬೌದ್ಧಮತ ಪ್ರೇಮಿಗಳಾಗಿದ್ದವರು ಈಗ ಬೌದ್ಧ ಸನ್ಯಾಸಿಗಳಾಗಿ ಮತಾಂತರ ಹೊಂದಿದರಾಗಿಯೂ, ಅವರು ಇನ್ನು ಬೌದ್ಧ ಮತ ಪ್ರಚಾರಕಾರ್ಯದಲ್ಲಿ ತೊಡಗಲಿರುವರೆಂದು ತಿಳಿದು ಬರುತ್ತದೆ

ಆಸ್ಸಾಮಿನಲ್ಲಿ ಅಫೀಮು ಸೇವನೆಯ ದುಶ್ಚಾಳಿಯು ಬಾರಿ ಹಾವಳಿಯನ್ನು ನಡೆಸುತ್ತಿರುವುದೆಂದೂ ಅದನ್ನು ನಿವಾರಿಸಲು ಯತ್ನಗಳು ನಡೆಯಬೇಕೆಂದು ರಾಷ್ಟ್ರಪತಿಯವರ ಸೂಚನೆ

ಕಲ್ಕತ್ತಾದಿಂದ ಗೋಣಿ ವಗೈರೆ ಸರಕು ಕೊಂಡೊಯ್ಯುತ್ತಿದ್ದ ಒಂದು ಬ್ರಿಟಿಷ್ ಹಡಗವು ಕೆಂಪು ಸಮುದ್ರದಲ್ಲಿ ಮುಳುಗಿತು

ಜರ್ಮನಿಯಲ್ಲಿ ಬಾಡೆಡೆಯಲ್ಲಿ ಇಗರ್ಜೆಯ ಆಸ್ತಿಗಳನ್ನೆಲ್ಲಾ ಮುನ್ಸಿಪಾಲಿಟಿಯು ವಶ ಮಾಡಿಕೊಂಡಿತು

ವಾರ್ತಾವರದಿ

ಸದ್ಯದಲ್ಲಿ, ಈಗ ಜಿಲ್ಲಾ ಬೋರ್ಡು ಮುನ್ಸಿಪಾಲಿಟಿ ಇತ್ಯಾದಿ ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿರುವ ಶಾಲೆಗಳು ಸರಕಾರದ ಆಡಳಿತಕ್ಕೆ ಒಳಪಡಿಸಲಾಗುವವೆಂದು ತಿಳಿದು ಬರುತ್ತದೆ

ಪ್ರಾಂತ್ಯದ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಮುಂದಕ್ಕೆ ಗಿರಣಿ ಅಕ್ಕಿಯ ಬದಲಾಗಿ ಕುಟ್ಟಿದ ಅಕ್ಕಿಯು ಉಪಯೋಗಿಸಲಾಗುವಂತೆ ಮದ್ರಾಸಿನ ಕಾಂಗ್ರೆಸ್ ಸರಕಾರವು ಏರ್ಪಾಡು ಮಾಡಿರುವುದು.

ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲುಗಳನ್ನು ರದ್ದು ಪಡಿಸಿ, ಗ್ರಾಂಟು ಇತ್ಯಾದಿಗಳನ್ನು ಕೊಡುವ ಅಧಿಕಾರಗಳನ್ನು ಜಿಲ್ಲಾ ವಿದ್ಯಾ ಆಫೀಸರರಿಗೆ ಕೊಡಲಾಗುವುದೆಂದು ವದಂತಿಯಿದೆ

ಮಹಾತ್ಮಾಜಿಯವರ ವಾರ್ಧಾ ವಿದ್ಯಾಯೋಜನೆಗೆ ಪ್ರಾಂತ್ಯದಲ್ಲೆಲ್ಲಾ ಹೆಚ್ಚಿನ ಸಹಾನುಭೂತಿಯಿರುವುದೆಂದು, ವಿದ್ಯಾ ಸೆಕ್ರೆಟರಿಯವರಾದ ಸಿ ಜೆ ವಾರ್ಕಿಯವರ ಪ್ರವಾಸದ ಅನುಭವ

ವಿದ್ಯಾಭ್ಯಾಸದ ಪುನರ್ವ್ಯವಸ್ಥೆಯು ಹೆಚ್ಚಾಗಿ ಮಹಾತ್ಮಾಜಿಯವರ ಸೂಚನೆಗಳನ್ನೆ ಅನುಸರಿಸಿ ಮಾಡಲಾಗುವುದೆಂದು, ವಿದ್ಯಾ ಮಂತ್ರಿ ಡಾ ಸುಬ್ಬರಾಯನರು ಒಂದು ಭಾಷಣದಲ್ಲಿ ಸೂಚಿಸಿರುವರು

ಕಾಂಗ್ರೆಸ್ ಮಂತ್ರಿಗಳಾದ ಮಾನ್ಯ ನಂ[illegible]ದ, ಈ ವೇದಿಕೆ[illegible] ಸರಕಾರ ಅಧೀನದಲ್ಲಿ [illegible] ಅಹಮ್ಮದಾಬಾದಿನ [illegible] [illegible]ಗಳಲ್ಲಿ [illegible] ಮೇಜಿಗೆ [illegible]

ಮಧ್ಯ ಪ್ರಾಂತ್ಯದ ಕಾಂಗ್ರೆಸ್ ಸರಕಾರವನ್ನನುಸರಿಸಿ, ಮದ್ಯ ಪ್ರಾಂತ್ಯದ ಕಾಂಗ್ರೆಸ್ ಸರಕಾರವು ತನ್ನ ಕೆಲವು ಜಿಲ್ಲೆಗಳಲ್ಲಿ ಮದ್ಯ ನಿಷೇಧ ಕ್ರಮಗಳನ್ನು ಜ್ಯಾರಿಯಾಗಲಿದೆ.

ಪೂನೆಯಲ್ಲಿ ಮುಸ್ಲಿಮರ ಪರಿಷತ್ತೊಂದು ಜರಗಿ, ಜಿನ್ನಾರ ಕ್ರಮಗಳ ಕುರಿತ ಅವಿಶ್ವಾಸ ಸೂಚಿಸಿದಲ್ಲದೆ, ಕೋಮುವಾರು ಭಾವದ ನಿವಾರಣೆ ಬಗ್ಗೆ ಹಿಂದೂ-ಮುಸ್ಲಿಮರಲ್ಲಿ ಐಕ್ಯವುಂಟಾಗುವಂತೆ, ಅಫೀಖಾನ-ಗಾಂಧಿಜಿ ಭೇಟಿಯಾಗುವಂತೆ ಕೇಳಿಕೊಳ್ಳಬೇಕಾಗಿಯೂ ಠರಾವುಗಳಾಗಿರುತ್ತವೆ

ಅಂಡಮಾನದಿಂದ ಹಿಂದೆ ಕರೆತರಲಾದ ಕೈದಿಗಳನ್ನು ಬೇಗನೆ ವಿಮೋಚನೆಗೊಳಿಸುವಂತೆ ಸಾರ್ವಜನಮತದ ಒತ್ತಾಯ ಉಂಟಾಗುವಂತೆ, ಕಲ್ಕತ್ತಾದಲ್ಲಿ ಮೊನ್ನೆದಿನ ನಾಗರೀಕರ ಸಭೆಯೊಂದು ನಡೆಯಿತು.

ಬಂಗಾಳಕ್ಕೆ ಅಂಡಮಾನದಿಂದ ಹಿಂದೆ ಕರೆತರಲಾದ ರಾಜಕೀಯ ಕೈದಿಗಳು ತಾ. ೧೬ ರಿಂದ ಹಸಿವಿನ ಮುಷ್ಕರವನ್ನು ಹಿಡಿಯುವರಾಗಿ ಎಚ್ಚರಿಕೆಕೊಟ್ಟಿರುವರು.

ರಷ್ಯಾದಲ್ಲಿ ನೂತನ ಪ್ರಜಾಧಿಪತ್ಯ ಶಾಸನ ಪ್ರಕಾರ ಮಹಾಚುನಾವಣೆಯು ನಡೆಯುತ್ತಿದೆ. ಸರ್ವಾಧಿಕಾರಿ ಸ್ಟೇಲಿನನು, ಸಮಸ್ತ ದೇಶಕ್ಕೆ ಚುನಾವಣಾ ಸಂದೇಶವನ್ನು ಕೊಟ್ಟನು.

ಅಖಿಲ ಭಾರತ ವಿಜ್ಞಾನ ಪರಿಷತ್ತಿನ ರಜೋತ್ಸವ ಅಧಿವೇಶನವು ಜನವರಿಯಲ್ಲಿ ಕಲ್ಕತ್ತೆಯಲ್ಲಿ ಅತಿವಿಜೃಂಭಣೆಯಿಂದ ಜರಗುವುದು. ಈ ಸಮಾರಂಭಕ್ಕೆ ಪೌರ್ವಾತ್ಯದಿಂದ ನೂರು ಮಂದಿ ಪ್ರಸಿದ್ಧ ವಿಜ್ಞಾನಿಗಳು ಬರಲಿದ್ದಾರೆ

ವಿಜ್ಞಾನಾಚಾರ್ಯ ಡಾ। ಸಿ ವಿ. ರಾಮನ್‌ರವರು ತಾತಾ ಸಂಘದ ಹುದ್ದೆಗೆ ರಾಜೀನಾಮೆ ಕೊಟ್ಟು, ಪರಿಶೋಧನಾ ಕಾರ್ಯಕ್ಕಾಗಿ ಐರೋಪ್ಯಕ್ಕೆ ತೆರಳುವರು. ಮುಂದಕ್ಕೆ ಅವರು ಅಲ್ಲಿ ನೆಲೆನಿಲ್ಲುವರಂತೆ

ಆರೋಗ್ಯ ಸಮಸ್ಯೆಗಳ ಕುರಿತು ಆಲೋಚಿಸಲು ಎಲ್ಲಾ ಪ್ರಾಂತ್ಯಗಳ ಆರೋಗ್ಯ ಸಚಿವರ ಪರಿಷತ್ತು ಮದ್ರಾಸಿನಲ್ಲಿ ಜರಗುವುದಂತೆ

ಸ್ಪೈನಿನಲ್ಲಿ ಯುದ್ಧವು ನಡೆಯುತ್ತಿದೆ ಇಕ್ಕಡೆಯವರೂ ವಿಜಯಿಗಳಾಗಿರುವವೆಂದು ಹೇಳಿಕೊಳ್ಳುತ್ತಿದ್ದಾರೆ.

ಮುಂಬಾಯಿ ಅಸೆಂಬ್ಲಿಯ ಕಾಂಡಿಶ್ ವರ್ಗದ ಸದಸ್ಯತನವು ಖಾಲಿ ಬಿದ್ದುದಕ್ಕೆ ಚುನಾವಣೆ ನಡೆದ [illegible] ಕಾಂಗ್ರೆಸ್ ಉಮೇದುವಾರರು ಗಳ ಬಹುಮತದಿಂದ ಆರಿಸಿ ಬಂದಿರುವರು

ಸಾಮ್ರಾಜ್ಯದಲ್ಲಿ ಸರ್ವಾಧಿಕಾರ ವ್ಯವಸ್ಥಾಪಿಸುವ ಒಂದು ಒಳಸಂಚು ನಡೆಯಿತು. ೧೨ ಜನರನ್ನು ಸೆರೆಹಿಡಿದಿರುವರು

ಶ್ರೀ ಸುಭಾಷ್‌ಚಂದ್ರ ಬೋಸರ ಇಂಗ್ಲಾಂಡಿನಲ್ಲಿ ಕಾಲಿಡಬಹುದಾಗಿ ಇದ್ದ ನಿರ್ಬಂಧವು ತೆಗೆದು ಹಾಕಲಾಯಿತು

ಇಟೆಲಿಯ ಜನಾಂಗ ಮಂಡಳದಿಂದ ಹೊರನಡೆದಿರುತ್ತದೆ ಜನಾಂಗ ಮಂಡಳದ ಮೇಲೆ ಮುಸಲೀನಿಗೆ ವಿಶ್ವಾಸವಿರುವುದಿಲ್ಲವಂತೆ

ಹರಿಜನ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಶಿಕ್ಷಣ ಕೊಡಬೇಕಾಗಿ ಅಲ್ಲಹಾಬಾದಿನ ವಿಶ್ವವಿದ್ಯಾನಿಲಯದ ಠರಾವಾಗಿರುತದೆ

ಮಹಾತ್ಮಾಜಿಯವರ ಆರೋಗ್ಯವು ದಿನೇ ದಿನೇ ಉತ್ತಮಗೊಳ್ಳುತ್ತಿದೆ

ಮಹಾತ್ಮಾಜಿಯವರ ಸೂಚನೆಗಳ ಪ್ರಕಾರ ಮುಂಬಾಯಿ ಪ್ರಧಾನಮಂತ್ರಿ ಮಾನ್ಯ ಖೇರರು, ತನ್ನ ಪ್ರಾಂತ್ಯಕ್ಕೊಂದು ವಿದ್ಯಾಯೋಜನೆಯನ್ನು ಕಲ್ಪಿಸಿರುವರು

ಜಪಾನು, ಉತ್ತರ ಚೀನಾದೇಶದ ರಾಜಧಾನಿಯಾದ ನಾಂಕಿಂಗ್ ನಗರವನ್ನು ಸುತ್ತಿರುವುದು ಚೀನಿಯರು ಅತ್ಯಂತ ಸಾಹಸಪಟ್ಟು ಅದನ್ನು ರಕ್ಷಿಸಲು ಯತ್ನಗೊಳ್ಳುತ್ತಿದ್ದಾರೆ

ಚೀನಾದೇಶದ ನಾಯಕರಾದ ಚಿಯಾಂಗ್-ಕೈ ಶೇಕರು ತನ್ನ ಪತ್ನಿಯೊಡನೆ ನಾಂಕಿಂಗ್ ನಗರದಿಂದ ಬೇರೊಂದು ಕಡೆಗೆ ವಿಮಾನ ಮೂಲಕ ತೆರಳಿರುವರಂತೆ

ಮದ್ರಾಸು ಸರಕಾರದಿಂದ ಕಲ್ಪಿಸಲಾದ ಸಾಗುವಳಿಗಾರರ ಸಾಲ ವಿಮೋಚನೆ ಬಿಲ್ಲಿನ ಕುರಿತು ಹೆಚ್ಚಿನವರಿಗೆ ಅಸಮಾಧಾನವಿರುವುದರಿಂದ, ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗಿ ಸೂಚನೆಗಳು ಆಗಿವೆ.

ಸಾಗುವಳಿಗಾರರ ಸಾಲವಿಮೋಚನೆಯ ಕುರಿತು ಜಗತ್ತಿನ ಎಲ್ಲಾ ಕಡೆಗಳಲ್ಲಿ ಸರಕಾರದ ವ್ಯವಸ್ಥೆಗಳಾಗಿವೆ ಬಡ್ಡಿ ದರವನ್ನು ಇಳಿಸುವುದು, ಸಾಲಮಾಫಿ ಮಾಡುವುದು, ಅಲ್ಲದೆ ದವಸಧಾನ್ಯಗಳ ಧಾರಣೆಯನ್ನು ಏರಿಸುವುದು, ಇವೇ ಮೊದಲಾದವುಗಳು ರೈತನ ಸಾಲ ವಿಮೋಚನೆ ಬಗ್ಗೆ ಪಾಶ್ಚಾತ್ಯದ ದೇಶಗಳಲ್ಲಿ ಆಚರಿಸಲ್ಪಟ್ಟ ಉಪಾಯಗಳು.

ಕೆಮ್ಮು ಮತ್ತು ಶೀತವು ಇಂದ್ರಜಾಲದಂತೆ ಗುಣಹೊಂದುವುದು.

ಕೆಮ್ಮು ಶೀತ ಮತ್ತು ಚಳಿಜ್ವರ ಇವುಗಳನ್ನು ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಹೋಗಲಾಡಿರಿ ಅದರಿಂದ ನೀವು ನಿಮೋನಿಯಾ ಇತ್ಯಾದಿ ಮಹಾ ರೋಗಗಳಿಂದ ಸುರಕ್ಷಿತವಾಗುವಿರಿ ಪೆಪ್ಸ್‌ಮಾತ್ರೆಗಳ ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ, ಅದರಿಂದೇಳುವ ಔಷಧೀಯ ಧೂಮವು ನಿಮ್ಮ ಶ್ವಾಸಕೋಶ ಗಂಟಲುಗಳನ್ನು ಪ್ರವೇಶಿಸಿ, ಅಲ್ಲಿರುವ ರೋಗಾಣುಗಳನ್ನು ನಾಶಪಡಿಸುವುದು ಶ್ವಾಸ ಕೋಶ, ಗಂಟಲು ಇತ್ಯಾದಿ ಸಂಬಂಧದ ಪೀಡೆಗಳಿಗೆ ಪೆಪ್ಸ್‌ಮಾತ್ರೆಗಳು ಶ್ರೇಷ್ಠ ಗುಣಕಾರಿ ಔಷಧಿಯು



ಪೆಪ್ಸ್‌ಮಾತ್ರೆಗಳು ಬಾಟ್ಲಿ 1ಕ್ಕೆ ರೂ 1ರಂತೆ ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲಿ ದೊರೆಯುತ್ತದೆ

ಏಜಂಟರು - ಮೆಸರ್ಸ್ ದಾಥಾ ಎಂಡ್ ಕೋ. ಪಿ. ಟಿ ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್‌ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

ಮಹಿಳೆಯರು ಅಮೇರಿಕಾವನ್ನು ಆಳುವರು!

ಸತ್ತವರ ಕಣ್ಣುಗಳು ಬದುಕಿದವರಿಗೆ ದೃಷ್ಟಿಯನ್ನು ಕೊಡುತ್ತವೆ.

ಫೆಸಿಜಮ್, ಬೊಲ್ಶೆವಿಜಂ ಇವುಗಳಿಂದ ಲೋಕವು ಗಂಡಾಂತರಕ್ಕೆ ಗುರಿಯಾಗಿದೆಯೆಂದು ಕೆಲಕೆಲವರು ಹೇಳುವದಿದೆ. ಆದರೆ ಅಮೇರಿಕದಲ್ಲಿ ಮಹಿಳೆಯರು ಬೆಳೆಯುವ ಪ್ರಭಾವವನ್ನು ನೋಡಿದರೆ, ಫೆಸಿಜಂ ಬೊಲ್ಶೆವಿಜಂಗಳಿಗೆ ಮಿಕ್ಕಿದ ಇನ್ನೊಂದು ಗಂಡಾಂತರಕ್ಕೆ ಆ ದೇಶವು ಗುರಿಯಾಗುವದೆನ್ನಬೇಕು.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸಂಪತ್ತೆಲ್ಲವೂ ಅಲ್ಲಿನ ಮಹಿಳೆಯರ ವಶಕ್ಕೆ ಬರುತ್ತ ಇದೆ. ಅವರೇ ಆ ವಿಪುಲ ಸಂಪತ್ತಿನ ಯಜಮಾನಿಯರಾಗುತ್ತಿದ್ದಾರೆ. ಈಗಾಗಲೇ ಶೇಕಡಾ ೭೦ರಷ್ಟು ಸಂಪತ್ತು ಅಂದರೆ ೨೦೦ ಬಿಲಿಯ (ಮಿಲಿಯ ಅಲ್ಲ) ಡಾಲರುಗಳಷ್ಟು ಸಂಪತ್ತಿಗೆ ಮಹಿಳೆಯರೇ ಒಡತಿಯರಾಗಿದ್ದಾರೆ. ಇಷ್ಟು ಮಾತ್ರವಲ್ಲ, ಮೂರನೇ ಎರಡು ಪಾಲಿನಷ್ಟು ಜಮೀನೂ, ಶೇಕಡಾ ೮೦ರಷ್ಟು ವಿಮೆಯ ಬಲಗೂ ಈ ಮಹಿಳೆಯರಿಗೆ ಸಲ್ಲಬೇಕೆಂದು ಪುರುಷರು ವೀಲುನಾಮೆಗಳನ್ನು ಬರೆಯುತ್ತಿದ್ದಾರೆ. ಹೀಗೆ ಜಗತ್ತಿನ ಇತರ ಯಾವ ದೇಶದ ಸ್ತ್ರೀಗೂ ಈ ವರೆಗೆ ಪ್ರಾಪ್ತವಾಗದ ಸ್ಥಾನಮಾನಗಳು ಅಮೇರಿಕದ ಮಹಿಳೆಗೆ ದೊರಕುತ್ತಿದೆ.

'ದುಡ್ಡುರ್ಬ್ರಹ್ಮ ದುಡ್ಡುರ್ವಿಷ್ಣು ದುಡ್ಡುರ್ದೇವೋ ಮಹೇಶ್ವರ' ಎಂದು ಮೊದಲಾಗಿ ಒಬ್ಬ ಕವಿಯು ಹೇಳಿದ್ದಾನೆ. ಈಗಿನ ಪ್ರಪಂಚದ ವ್ಯವಹಾರಗಳೆಲ್ಲ ನಡೆಯುವದು ದುಡ್ಡಿನ ಬಲದಿಂದ. ಪುರುಷರು ಉಚಿತ ಅಥವಾ ಅನುಚಿತ ಏನಾದರೊಂದು ಉಪಾಯದಿಂದ ಕಷ್ಟಪಟ್ಟು, ಬೆವರಿಳಿಸಿ ದುಡಿದ ದುಡ್ಡು ಹೀಗೆನೇ ಸ್ತ್ರೀಯರ ಪಾಲಾಗುವುದಾದರೆ, ಮುಂದಿನ ಪರಿಣಾಮವೇನು ಎಂಬ ಚಿಂತೆಯು ಎಲ್ಲರಿಗೆ ಹತ್ತುವದು ಸಹಜವಾಗಿದೆ. ಈ ಹಳೆಯುತ ಬೆಳೆಯುತ್ತಿರುವ ಪ್ರಭಾವದಿಂದಲೇ ಅವರು ಪುರುಷರ ಪ್ರಬಲ ವಿರೋಧವಿದ್ದೂ ಮದ್ಯಪಾನ ನಿಷೇಧ ಕಾಯದೆಯನ್ನು ಅಮೇರಿಕದಲ್ಲಿ ಜ್ಯಾರಿಯಲ್ಲಿ ತರಲಿಕ್ಕೆ ಸಮರ್ಥರಾದರು. ಪ್ರತಿಯೊಂದು ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಚಳವಳಗಳಲ್ಲಿ ಅವರ ಪ್ರಭಾವವೇ ಅಮೇರಿಕದಲ್ಲಿ ಒಡೆದುಕಾಣುತ್ತದೆ. ಹೀಗಿರುತ್ತಾ, ಒಂದು ದಿನ ಅವರೇ ಅಮೇರಿಕದ ಸಂಯುಕ್ತ ಸಂಸ್ಥಾನಗಳನ್ನು ಆಳುವರಾದರೆ ಆಶ್ಚರ್ಯವಿಲ್ಲ.

ಹೆಣಗಳಿಂದ ರಕ್ತವನ್ನು ಹೀರುವರು!

ರಕ್ತದ ಕೊರತೆಯುಂಟಾದರೆ ಕೆಲವು ರೋಗಿಗಳ ರಕ್ತನಾಳಗಳಲ್ಲಿ ನಿರೋಗಿಗಳಾದವನ ರಕ್ತವನ್ನು ತುಂಬಿಸುವ ಚಿಕಿತ್ಸಾ ಕ್ರಮವೊಂದಿದೆ. ಹಾಗೆ ತುಂಬಿಸಬೇಕಾದ ನಿರೋಗಿಯಾದವನ ರಕ್ತವನ್ನು ಹೀರಿ ರೋಗಿಯ ದೇಹದೊಳಗೆ ಇಂಜೆಕ್ಟಮಾಡುವರು. ಆದರೆ ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ರಕ್ತವನ್ನು ಹೀರಬಿಡುವ ನಿರೋಗಿಗಳು ದೊರೆಯುವದೇ ಇಲ್ಲ. ಅದಕ್ಕೋಸ್ಕರ ಇತರ ಮದ್ದು—ಔಷಧಗಳನ್ನು ಮುಂದಿನ ಉಪಯೋಗಕ್ಕೆ ಎಂಬಂತೆ ಬಾಟಲಿಗಳಲ್ಲಿ ತುಂಬಿಸಿಡುವ ಪ್ರಕಾರ, ನಿರೋಗಿಗಳ ರಕ್ತವನ್ನೂ ಬಾಟಲಿಗಳಲ್ಲಿ ತುಂಬಿಸಿ ಸಂಗ್ರಹಿಡುವದು ಸಾಧ್ಯವಲ್ಲವೇ? ಎಂಬ ಸಂದೇಹವೂ ಹಲವು ಶೋಧಕರಿಗೆ ಬಂದಿತು. ಈಗ ಇದೂ ಸಾಧ್ಯವೆಂದಾಗಿದೆ. ಒಬ್ಬನ ರಕ್ತವನ್ನು ಶಾಸ್ತ್ರೀಯ ಕ್ರಮದಲ್ಲಿ ೧೫—೧೮ ದಿನಗಳ ತನಕ ಸಂಗ್ರಹಿಸಿಟ್ಟು, ಮೇಲೆ ಹೇಳಿದಂತೆ ಉಪಯೋಗಿಸುವದು ಸಾಧ್ಯವೆಂದು ತೋರಿಬಂದಿದೆ. ಸ್ಪೈನ ಮತ್ತು ರಷ್ಯ ದೇಶಗಳಲ್ಲಿ ಚಿಕಿತ್ಸೋಪಯುಕ್ತವಾದ ರಕ್ತವನ್ನು ಬಾಟಲಿಗಳಲ್ಲಿ ಸಂಗ್ರಹಿಸಿದುವರು ಯುದ್ಧಕಾಲದಲ್ಲಿ ಅದರಿಂದ ಬಹಳ ಪ್ರಯೋಜನವಾಗಿದೆ. ಇದಕ್ಕೂ ಹೆಚ್ಚಿಗೆ ಕಾಲ ಸಂಗ್ರಹಿಸಿಡುವ ನಾನಾ ಪ್ರಯೋಗಗಳು ಈಗ ಅಲ್ಲಲ್ಲಿ ನಡೆಯುತ್ತಿವೆ. ಇಷ್ಟೇ ಅಲ್ಲ, ಈ ಕಾರ್ಯಕ್ಕಾಗಿ ಈಗ, ಈಗ ತಾನೇ ಸತ್ತವರ ಹೆಣಗಳಿಂದಲೂ ರಕ್ತವನ್ನು ಹೀರಿ ಸಂಗ್ರಹಿಸಿಡುತ್ತಿದ್ದಾರೆ. ಈ ನವೀನ ಕ್ರಮವನ್ನು ಪ್ರೊ॥ ಸರ್ಜಂಡಿನ ಎಂಬವರು ಕಂಡುಕೊಂಡಿರುವರು. ಯೂರೋಪದಲ್ಲಿ ಈ ಕ್ರಮದ ಬಹಳ ಪ್ರಚಾರವಾಗುತ್ತಿರುವದು.

ನಿಗ್ರೋ ಜನರ ನಾಮಕರಣ

ನಿಗ್ರೋ ಜನರು ಅನಾಗರಿಕರೆಂದೇ ಪ್ರಸಿದ್ಧರಾಗಿರುವದಿಲ್ಲ. ಅವರ ರೀತಿ ನೀತಿ, ಆಚಾರ ವಿಚಾರ, ನಡೆನುಡಿ, ಪ್ರತಿಯೊಂದೂ ವಿಚಿತ್ರವಾಗಿರುವದು. ನಾಮಕರಣದ ಒಂದೇ ವಿಷಯವನ್ನು ತೆಗೆದುಕೊಂಡರೆ ಸಾಕು, ಆ ವೈಚಿತ್ರ್ಯವು ತಾನಾಗಿ ಕಂಡುಬರುವದು. ನಿಗ್ರೋ ಜನರಿಗೆ ಆ ಹೆಸರ ಈ ಹೆಸರು ಎಂಬಿರುವದಿಲ್ಲ. ಯಾ— ಹೆಸರನ್ನು ಕೇಳುವರೋ ಅದನ್ನೇ ತಮ್ಮ ಮಕ್ಕಳಿಗೆ ಇಡುವರು. ಅಮೇರಿಕದ ಸಾವಿರಾರು ನಿಗ್ರೋ ಹೆಂಗಸರ ಹೆಸರು 'ಮಲೇರಿಯಾ' ಎಂದಿರುವದು. ಕೆಲವರ ಹೆಸರ ಬ್ರಾಂಡಿ ಮತ್ತೆ ಕೆಲವರ ಹೆಸರು ವ್ಹಿಸ್ಕಿ, ಇನ್ನು ಕೆಲವರ ಹೆಸರು 'ನ್ಯಾಸ' ಎಂದೆಲ್ಲ ಇರುತ್ತದೆ. ಅವರಲ್ಲಿ ಘಾತ, ಬದನೆ, ಗುಳ್ಳ, ತೇಗ ಎಂದೆಲ್ಲ ಹೆಸರುಗಳಿವೆ. ಕಲ್ಲು ಮಣ್ಣು, ಗುಡ್ಡ, ಬೆಟ್ಟ, ಕೆರೆ ಹಳ್ಳ, ನದಿ, ತೋಟ ಎಂದೂ, ಸಿಂಹ, ಹುಲಿ ಕರಡಿ, ಚಿರತೆ, ಆನೆ, ಹಂದಿ, ಕತ್ತೆ, ಕೋಣ, ಎಂದು ಕೂಡ ಹೆಸರುಗಳಿವೆ. ವಿಚಿತ್ರ ಹೆಸರಗಳಷ್ಟೆ. ಜಗತ್ತಿನ ಮೇಲೆ ಮನುಷ್ಯ, ಪ್ರಾಣಿ, ಸಸ್ಯ ಧಾತುಗಳ ಯಾವ ಯಾವ ಹೆಸರುಗಳನ್ನು ಅವರು ಕೇಳುವರೋ, ಆ ಎಲ್ಲ ಹೆಸರುಗಳನ್ನು ಅವರು ತಮ್ಮ ಮಕ್ಕಳಿಗೆ ಇಡಲಿಕ್ಕೆ ಹಿಂದುಮುಂದೆ ನೋಡುವುದಿಲ್ಲ. ಹೀಗೂ ನಿಗ್ರೋಗಳು ಜಗತ್ತಿನಲ್ಲಿ ಪ್ರಸಿದ್ಧರಾಗಿದ್ದಾರೆ.

ಸತ್ತವರ ಕಣ್ಣುಗಳು ಬದುಕಿದವರಿಗೆ ದೃಷ್ಟಿಕೊಡುತ್ತವೆ.

ಕುರುಡುತನವು ಹಲವು ರೀತಿಗಳಿಂದ ಬರುತ್ತದೆ. ಅವುಗಳಲ್ಲಿ ಈ ರೀತಿಯೂ ಒಂದು. ಕಣ್ಣಿಗೆ ಮೂರು ಕವಚಗಳಿವೆ. ಅದರಲ್ಲಿ ಕೊಂಬಿನ ಜಾತಿಯ ಒಂದು ಪದಾರ್ಥದಿಂದ ಆದ ಗಟ್ಟಿಕವಚವನ್ನು 'ಕೊರ್ನಿಯ'ವೆನ್ನುತ್ತಾರೆ. ಅದು ಪಾರದರ್ಶಕವಾಗಿ ಇರುತ್ತದೆ. ಆದರೆ, ಕೊರ್ನಿಯದ ಪಾರದರ್ಶಕ ಗುಣವು ಕೆಟ್ಟಾಗ ಕುರುಡುತನವು ಬರುವದು. ಅದನ್ನೀಗ ಒಂದು ಹೊಸ ಉಪಾಯದಿಂದ ದೂರಮಾಡುವ ಶೋಧವನ್ನು ರಷ್ಯದ ಒಬ್ಬ ಪ್ರೊಫೆಸರನು ಕಂಡುಹಿಡಿದಿದ್ದಾನೆ.

ಮೇಲೆ ಹೇಳಿದ ಹಾಗೆ ಕಣ್ಣುದೃಷ್ಟಿ ಮಂದವಾದವರ ಕೊರ್ನಿಯವನ್ನು ಮೆಲ್ಲನೆ ಕಳಚಿ ತೆಗೆದು, ಸತ್ತವರ ಕಣ್ಣುಗಳ ಕೊರ್ನಿಯವನ್ನು ಅದರ ಸ್ಥಾನದಲ್ಲಿ ಕಸಿಕಟ್ಟುವರು. ಅದರಿಂದ ಕಳೆದುಹೋದ ದೃಷ್ಟಿ ಪುನಃ ಬರುತ್ತದೆ. ಹೀಗೆ ಮಾಡಿ ರಷ್ಯದ ಆ ಪ್ರೊಫೆಸರನು ೬೦೦ ಮಂದಿ ಕುರುಡರಿಗೆ ದೃಷ್ಟಿಕೊಟ್ಟಿದ್ದಾನೆ. ಕಣ್ಣಿನ ಈ ಒಪರೇಶನ್ ಮಾಡುವದು ಬಹಳ ನಾಜೂಕಾದ ಕೆಲಸ. ಕೊರ್ನಿಯವನ್ನು ಕಿತ್ತು ಇಡಲಿಕ್ಕೆ ಬಹಳ ಚಾತುರ್ಯಕುಶಲತೆಗಳು ಬೇಕು. ಆದರೂ, ಈ ಶಸ್ತ್ರಚಿಕಿತ್ಸೆಯು ಸಾರ್ವತ್ರಿಕವಾಗಿ ಪ್ರಚಾರಕ್ಕೆ ಬಾರದೆ ಇರದು.

ನೋಟಗಳು.=Note......s

ಚುನಾವಣೆಯ ಕಾಲದಲ್ಲಿ ಸಂಬಳಗಳನ್ನು ಇಳಿಸುವರೆ ಕೊಂಗ್ರೆಸು ವಾಗ್ದಾನ ಮಾಡಿದ್ದುದು ನಿಜ. ಅದರಂತೆಯೆ ನಡೆಯಬೇಕಾದುದೂ ನಿಜವೇ. ಆದರೆ, ಸಂಬಳವೆಂದರೆ, ತಮ್ಮ ಕೈಕೆಳಗೆ ಕೆಲಸ ಮಾಡುವವರ ಸಂಬಳವೆಂದು ಮಾತ್ರ ಕೊಂಗ್ರೆಸು ಮಂತ್ರಿಮಂಡಲಗಳು ಎಣಿಸಿರುವುದು ಅಷ್ಟು ಸರಿಯಾಗಿಲ್ಲ.

○ ○ ○ ○

ಎಷ್ಟೋ ಭಾರಿ ಸಂಬಳದವರು ಮಂತ್ರಿಮಂಡಲದ ಕಡಿತಕ್ಕೆ ಒಳಪಡುವ ಹಾಗಿಲ್ಲ. ಪ್ರಾಂತಿಕ ಮತ್ತು ಕೆಳನೋಕರರ ಮೇಲೆ ಮಾತ್ರ ಇವರು ಕೊಡಲಿ ಬೀಸುವ ಹಾಗಾಗಿದೆ. ಇದು ನ್ಯಾಯವೆ? ಎಂದು ಪ್ರಶ್ನೆಗಳು ಮಾತ್ರವಲ್ಲದೆ ಸಂತಾಪವೂ ಹೆಚ್ಚುತ್ತಲಿವೆ.

○ ○ ○ ○

ಸರ್ವಿಸುಗಳೆ ಯಂತ್ರ, ಧ್ಯೇಯವೇ ಮಂತ್ರ. ಮಂತ್ರದಿಂದ ಮಾತ್ರ ಎಲ್ಲ ಕಾರ್ಯ ಸಾಗದು, ಸರ್ವಿಸೂ ಬೇಕಷ್ಟೆ. ಅದರ ತೃಪ್ತಿಯಿಲ್ಲದೆ ಮಂತ್ರಜನವು ಹೇಗೆ ಸಾಧಕವಾದೀತು?

○ ○ ○ ○

ಸೆಕ್ರೆಟರಿಯವರ ನೇಮಕಕ್ಕೊಳಪಡುವವರ ಸಂಬಳಕ್ಕೂ ಮಂತ್ರಿಗಳು ನೇಮಿಸಬಹುದಾಗಿರುವವರ ಸಂಬಳಕ್ಕೂ ಅಜಗಜಾಂತರವಿದೆ. ಈ ಅಂತರವನ್ನು ಇನ್ನಷ್ಟು ಹೆಚ್ಚಿಸುವಂತೆ, ಕೆಳನೋಕರರ ಸಂಬಳ ಇಳಿಸಿದರೆ ಹೇಗಾಗಬಹುದು?

○ ○ ○

ಸಿವಿಲ್ ಸರ್ವಿಸ್ಸು ಉಕ್ಕಿನ ಪಂಜರವಾದರೆ ಪ್ರತಿಷ್ಠರಿಗಾಗಿ ಈ ಪ್ರಾಂತಿಕ ಸರ್ವಿಸೂ ವಜ್ರಪಂಜರವಾಗಿ ನಮ್ಮ ಮಂತ್ರಿಗಳಿಗೆ ಇಂಬೇಕಲ್ಲವೆ? ಇದನ್ನು ಗಾಜಿನ ಹರಳುಗಳಿಂದ ಹೂಡಿದರಂದಿರುತೆ [illegible] ಗಾಜೇ ವಜ್ರ ವಜ್ರವೇ ಎಂದು [illegible]

○ ○ ○

ಹೊಸ ತೆರಿಗೆಗಳನ್ನು ವಿಧಿಸಲು ಎಷ್ಟು ಮಾರ್ಗಗಳಿಲ್ಲವೆ? ಸರ್ವಿಸಿಗೆ ಸೇರಿದವರ ಸಹ, ಪತ್ರಿಗಳೇ ಅವರೂ ತೆರಿಗೆ ಕೊಡಲು ಸಾಧ್ಯರು. ಮತ್ತ ರಾಧಿಕಾರಿಗಳು ತರಬೇಕಾಗಿರುವ [illegible] ತೆರಿಗೆ ಕೃಷಿಯುತ್ಪನ್ನ [illegible] ಇವುಗಳ ಮೇಲೆ [illegible] ಕಣ್ಣಿಡಬಹುದು. ಈಗ ಇರುವ ಇನ್ಕಂಟ್ಯಾಕ್ಸ್ ವಿಧಿಯನ್ನು ಸರಿಗೊಳಿಸಿ, ಸರ್ವರಿಗೂ ನ್ಯಾಯವಾಗಿ ಹಂಚಬೇಕು. [illegible] ಇದ್ದವರ [illegible] ವಿರುವವರ [illegible] ಈ ತೆರಿಗೆ ವಿಧಿಸದೆ ಇದನ್ನೇಕೆ ಪುನಃ ಹಂಚಿ ವಿಧಿಸಬಾರದು? ಇಂಡಿಯಾ ಸರಕಾರವನ್ನು ಕೇಳಿ ವಿಮರ್ಶಿಸಿ ನೋಡಲಿ. ಹಾಗೆ ಮಾಡಿದರೆ ದೊರೆವ ಅಧಿಕ ತೆರಿಗೆಯನ್ನು ಪ್ರಾಂತ ಸರಕಾರಗಳಿಗೆ ಕೆರಲೂ, ಇಂಡಿಯಾ ಸರಕಾರವು ಒಪ್ಪಿತೆ. ಆದರೆ, ಪ್ರಾಂತಿಕ ಖಜಾನೆಗಳು ಒಲಗೊಳ್ಳುವವು.

○ ○ ○ ○

ಸಂಬಳ ಕಡಿತ ಮಾಡುವಾಗಲೂ, ಈಗಣ ನೋಕರರ ಸಂಬಳ ಕಡಿದು ಪ್ರಯೋಜನವಿಲ್ಲ. ಪುರುಷಾರ್ಥವಿಲ್ಲ. ಮುಂದೆ ಬರಲಿರುವವರ ತಲಬನ್ನು ನಿಷ್ಕರ್ಷಿಸಲಿ. ಅವರು ಅದನ್ನು ತಿಳಿದೇ ಕೆಲಸ ಕೈಕೊಳ್ಳುವರು. ನಿವೃತ್ತರಾಗಲಿರುವವರಿಗೆ ಈಗ ಸಂಬಳ ಕಡಿದರೆ, ಅವರ ಪೆನ್ಶನು ಇಳಿಯುವುದಲ್ಲ! ನಿವೃತ್ತರಾಗಲು ಇಚ್ಛಿಸುವವರು ತಮ್ಮ ಪೂರ್ತಿ ಪೆನ್ಶನು ಹೊಂದುವಂತಾಗಲಿ.

○ ○ ○ ○

ಸಾಲದಿಂದ ಪಾರಾಗುವುದೆಂದರೆ, ರೋಗ ತೊಲಗಿದಷ್ಟು ಸುಖ. ರೈತರ ಸಾಲವು ಕೊನೆಯಿಂದ ಮೊದಲಾದ ರೋಗಗಳಂತೆ ಸಾಂಕ್ರಾಮಿಕ ಎಂಬುದೂ ನಿಜ. ಇವುಗಳ ನಿವಾರಣೆಯೆತ್ತನು ಶಮನವಾದರೂ ಶ್ಲಾಘನೀಯ,—ಇದೂ ನಿಜ. ಆದರೆ ಉಪಾಯಗಳು? ಎಂಬುದೇ ಈಗ ಎದ್ದಿರುವ ವಿಮರ್ಶೆ.

○ ○ ○ ○

ಇಂದು ಪಲೆಸ್ಟೀನ್ ದೇಶದಲ್ಲಿ ಉಂಟಾದ ಕಚ್ಚಾಟ ಹಾಗೂ ಪ್ರಬಲ ರಾಷ್ಟ್ರಗಳು ಆಫ್ರಿಕಾ [illegible] ತಮ್ಮ ವಸಾಹತುಗಳಿಗೆ ಕಳುಹಿಸುತ್ತಿರುವ ಸೇನೆಯ ಸಂಖ್ಯೆ, ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅಪಾಯವನ್ನುಂಟುಮಾಡಿದೆ.

ಮುಸಲೀನಿಯು ತನ್ನನ್ನು ಮುಸಲ್ಮಾನರ ಹಿತರಕ್ಷಕನೆಂದು ಸಾರಿ, ಬ್ರಿಟಿಷರ ಕೈಯಿಂದ ಹಾರಾಡಿದ ಪೆಲಸ್ಟೀನ್ ಗ್ರ್ಯಾಂಡ್ ಮುಫ್ತಿಯ ಸ್ನೇಹವನ್ನು ಗಳಿಸಿಕೊಂಡಿರುವುದನ್ನೂ ಆತನು ತನ್ನ ದೇಶದ ಪ್ರಚಾರವನ್ನು ಅರಬ್ಬೀ ಭಾಷೆಯ ಮೂಲಕ ಮಾಡುತ್ತಿರುವುದನ್ನೂ ಕಂಡು "ನಾವು ಬೆದರಬಾರದು, ನಮಗೆ ನಮ್ಮನ್ನು ರಕ್ಷಿಸಿಕೊಳ್ಳಲು ತಿಳಿದಿದೆ" ಎನ್ನುವ ಬ್ರಿಟನು ಅದನ್ನು ಸುರಕ್ಷಿತಗೊಳಿಸುತ್ತಿದೆ. ಅಲ್ಲದೆ ಇಂದು ಪಲೆಸ್ಟೀನ ದೇಶದ ಅರಬ್ಬಿಯನರಲ್ಲಿ—ಬ್ರಿಟಿಷ ಆಳ್ವಿಕೆಯಲ್ಲಿ ಅಸಂತೃಪ್ತಿ, ಜನ [illegible] (ಮುಸಲೀನಿಯ ಆಜನ್ಮ ಶತ್ರು)ದವರ ಮೇಲಿನ ವೈರತ್ವ, ಇಟಲಿಯನರಲ್ಲಿನ ಅಭಿಮಾನ ಹೆಚ್ಚುತ್ತಿರುವುದನ್ನು ಕಂಡು ಬ್ರಿಟಿಷ ಚಕ್ರಾಧಿಪತ್ಯಕ್ಕೆ ಕಳವಳ ಹುಟ್ಟಿದೆ. ಸಿರಿಯಾ ದೇಶದಲ್ಲಿನ ಅರಬ್ಬಿಯನರಲ್ಲಿ ಜನಜಾಗೃತಿಯು ಅಧಿಕವಾಗಿ ಫ್ರೆಂಚ್ ಸರಕಾರದ ತಳ ಕದಲ್ಲುತ್ತಿರುವುದೂ, ಅಲ್ಲಿ ತಲೆತಪ್ಪಿಸಿಕೊಂಡಿರುವ ಗ್ರ್ಯಾಂಡ್ ಮುಫ್ತಿಯು ತಾನು ಇಟಲಿಯಾನರ ಸಹಕಾರದಿಂದ ಸ್ವಾತಂತ್ರ್ಯ ಪಡೆವೆನೆಂದಿರುವುದೂ, ಕಳವಳಕ್ಕೆ ಇನ್ನೊಂದು ಕಾರಣವಾಗಿದೆ. ಅಂತೂ ಉತ್ತರ ಆಫ್ರಿಕೆಯು ಎಲ್ಲಾ ವಸಾಹತುಗಳಲ್ಲಿಯೂ ಯುದ್ಧದ ಗೊಂದಲ ಹಬ್ಬಿ ಹರಡಿಕೊಂಡಿದೆ.

ಇಟಲಿಯು ಏಳು ಸಾವಿರ ಸೈನ್ಯವನ್ನು ಉತ್ತರ ಆಫ್ರಿಕದ ತನ್ನ ವಸಾಹತಾದ ಲಿಬಿಯಾಕ್ಕೆ ಕಳುಹಿಸಿದುದನ್ನು ನೋಡಿ, ಅದಕ್ಕೆ ಉತ್ತರವೆಂಬಂತೆ, ಫ್ರೆಂಚ್ ಸರಕಾರವು ತನ್ನ ಹಡಗುಪಡೆಯೊಂದಿಗೆ ೮೦ ಯುದ್ಧವಿಮಾನಗಳನ್ನೂ ಫ್ರೆಂಚ್ ಮೊರೊಕ್ಕೊ ಪ್ರದೇಶಕ್ಕೆ ಕಳುಹಿಸುವುದಾಗಿ ಪ್ರಕಟಿಸಿದೆ. ಬ್ರಿಟನ್ ಕೂಡಾ ಮಿನೋರ್ಕಾ ಎಂಬ ದ್ವೀಪವನ್ನು ಸ್ಪೈನ್ ದಂಗೆಗಾರರಿಂದ ರಕ್ಷಿಸಲೆಂದು ತನ್ನ ಹಾಗೂ ಫ್ರೆಂಚ್ ಸೇನೆಯನ್ನು ಅದರ ಬಳಿ ಇರಿಸಿದೆ. ಆದರೆ ಸ್ಪೈನ್ ದಂಗೆಗಾರರಿಗೆ ಸಹಾಯವನ್ನೀಯುತ್ತಿರುವ ಇಟಲಿ ಜರ್ಮನಿಗಳು ತಮ್ಮ ಸೇನೆಯನ್ನು ಸ್ಪೈನ್ ದೇಶದ ಬಳಿಯ ದ್ವೀಪಗಳಲ್ಲಿರಿಸಿವೆ. ಇನ್ನೊಂದೆಡೆ ಬ್ರಿಟಿಷ್ ಸರಕಾರವು ತನ್ನ ಸ್ವಾಧೀನಕ್ಕೆ ಬಾಗಿದ ಈಜಿಪ್ಟ್ ದೇಶದಲ್ಲಿ ಯುದ್ಧ ಸಿದ್ಧತೆ ಮಾಡುವಂತೆ ಹೇಳಿದೆ.

ಭೂಮಧ್ಯ ಸಮುದ್ರದ ಹೆಬ್ಬಾಗಿಲಂತಿರುವ ಜಿಬ್ರಾಲ್ಟರ್ ಜಲಸಂಧಿಯು ಇದೀಗ ಪ್ರಾಶಸ್ತ್ಯವನ್ನು ಪಡೆದಿದೆ. ಅಲ್ಲಿ ಜಿಬ್ರಾಲ್ಟರ್ ಎಂಬ ಪ್ರದೇಶವು ಬ್ರಿಟಿಷರ ಆಧೀನದಲ್ಲಿದೆ ಆದರೆ ಈ ಭೂಮಧ್ಯ ಸಮುದ್ರದ ಹೆಬ್ಬಾಗಿಲಂತಿರುವ ಜಲಸಂಧಿಯ ಇನ್ನೊಂದು ಬದಿಯ ಪ್ರದೇಶವು ಸ್ಪೈನ್ ದೇಶದ ಆಧೀನದಲ್ಲಿದೆ ಆದರಿಂದ ಬ್ರಿಟಿಷರ ಕೈಯಲ್ಲಿರುವ ಇನ್ನೊಂದು ಬದಿಯ ಪ್ರದೇಶವನ್ನೂ ತಮ್ಮದಾಗಿ ಮಾಡಿಕೊಂಡು ಭೂಮಧ್ಯ-ಸಮುದ್ರದಲ್ಲಿ ತಮ್ಮ ಆಟವನ್ನು ತೋರುವ ಕುತೂಹಲವು ಇಟಲಿ, ಜರ್ಮನಿಗಳಿಗಿರುವುದು ವಿಶೇಷವಲ್ಲ. ಆದರಿಂದಾಗಿ ಇಂದು ಈ ಉತ್ತರ ಆಫ್ರಿಕದಲ್ಲಿನ ಸ್ಪೈನ್ ಮೊರೊಕ್ಕೊ ಪ್ರದೇಶಕ್ಕಾಗಿ, ಜಿಬ್ರಾಲ್ಟರ್ ಜಲಸಂಧಿ ಎಂಬ ಭೂಮಧ್ಯ ಸಮುದ್ರದ ಹೆಬ್ಬಾಗಿಲ ಇನ್ನೊಂದು ಬದಿಯ "ಕಂಬ"ಕ್ಕಾಗಿ, ಬ್ರಿಟನ್, ಫ್ರೆಂಚ್ ಮತ್ತು ಇಟಲಿ, ಜರ್ಮನಿ, ಸ್ಪೈನುಗಳು ಹೊಡೆದಾಡತೊಡಗಿವೆ. ಇದರ ಪರಿಣಾಮ—ಮಹಾಯುದ್ಧ, ರಕ್ತಪಾತಗಳಲ್ಲಿ ಕೊನೆಗೊಳ್ಳಲೂ ಬಹುದು.

ಆಫ್ರಿಕೆಯ ಮೇಲ್ಭಾಗದ ಪಶ್ಚಿಮದಲ್ಲಿ ಸೇರಿಕೊಂಡಿರುವ 'ಸ್ಪೈನ್ ಮೊರೊಕ್ಕೊ'ವು [illegible] ಇದು ಗಮನಾರ್ಹ [illegible] ಸಾವಿರ ಚದರ ಮೈಲಿ ವಿಸ್ತಾರದ ಪ್ರದೇಶ [illegible] ಸ್ಪೈನ್ ದೇಶದ [illegible] ಫ್ರಾಂಕೊ ಇದೇ [illegible] ದಂಗೆಗಾರರನ್ನು [illegible] ಇದರ [illegible]—ಅದು [illegible] ಇದು ಇಟಲಿ ಜರ್ಮನಿಗಳನ್ನು ತನ್ನೆಡೆ ಸೆಳೆದು [illegible] ಹೋಗಿದೆ.

ಇದರ ನಂತರವೇ ಫ್ರೆಂಚ್ ಮೊರೊಕ್ಕೊ ಪ್ರದೇಶವಿದೆ ಇದು ಎರಡು ಲಕ್ಷ [illegible] ಚದರ ಮೈಲಿ ವಿಸ್ತಾರವಾಗಿದ್ದು ೫೦ ಲಕ್ಷ ಜನವಸತಿಯುಳ್ಳದ್ದಾಗಿದೆ. ಇದು ಸ್ಪೈನ್, ಮೊರೊಕ್ಕೊ ಪ್ರದೇಶಕ್ಕಿಂತ ಅಧಿಕ ಬಲಾಢ್ಯವಾದುದು, ಭೂಮಧ್ಯ ಸಮುದ್ರ ಕರಾವಳಿಯಲ್ಲಿರುವ ಅಟ್ಲಾಂಟಿಕ್ ಸಮುದ್ರ ಕರಾವಳಿಯಲ್ಲಿದೆ. ಇದರಲ್ಲಿನ ಜನಸಂಖ್ಯೆಯಲ್ಲಿ ೬೩ ಲಕ್ಷ ಮುಸಲ್ಮಾನರಾದುದರಿಂದ ಅವರ ಪ್ರಾಶಸ್ತ್ಯ ಅಧಿಕವೆಂದು ಬೇರೆ ಹೇಳಬೇಕಾಗಿಲ್ಲ. ಇನ್ನು ಅಲ್ಜೀರಿಯಾ ಎಂಬ ವಿಶಾಲ ಪ್ರದೇಶವಿದೆ. ಇದು ಫ್ರೆಂಚ್ ದೇಶದಾಗಿದ್ದು ಇದಕ್ಕೆ ಭೂಮಧ್ಯ ಸಮುದ್ರ ಕರಾವಳಿಯಲ್ಲಿ ಒಂದು ಉತ್ತಮವಾದ ರೇವು ಇದೆ. ನಂತರ ಮೂರನೆಯದಾಗಿ ಟ್ಯುನೀಸಿಯಾ ಎಂಬ ಪ್ರದೇಶ ಇದೂ ಫ್ರಾನ್ಸಿಗೆ ಸೇರಿದೆ. ಅಂತೂ ಸ್ಪೈನ್ ಮೊರೊಕ್ಕೊ ಪ್ರಾಂತ್ಯದ ಪಶ್ಚಿಮ, ದಕ್ಷಿಣ ಮತ್ತು ಪೂರ್ವ ದಿಕ್ಕುಗಳಲ್ಲಿ ಫ್ರೆಂಚ್ ವಸಾಹತುಗಳಿದ್ದು ಉತ್ತರಕ್ಕೆ ಭೂಮಧ್ಯ ಸಮುದ್ರವಿದೆ. ಆದರೆ ಇದರ ಪೂರ್ವಕ್ಕಿರುವ ಅಲ್ಜೀರಿಯಾ ಮತ್ತು ಟ್ಯುನೀಸಿಯಾ ಪ್ರಾಂತಗಳ ಪೂರ್ವಕ್ಕೆ ಇಟಲಿಯ ಅಂಕೆಗೆ ಒಳಪಟ್ಟ ಲಿಬಿಯಾ ಎಂಬ ರಾಷ್ಟ್ರವೂ ಅದರ ಪೂರ್ವಕ್ಕೆ ಪ್ರಸಕ್ತ ಬ್ರಿಟನ್ನಿನ ಸ್ನೇಹಕ್ಕೆ ಪಾತ್ರವಾದ ಈಜಿಪ್ಟ್ ದೇಶವು ಭೂಮಧ್ಯ ಸಮುದ್ರ ಕರಾವಳಿಯಿಂದ ಮಧ್ಯ ಆಫ್ರಿಕಾ ತನಕವೂ ಹಬ್ಬಿಕೊಂಡಿದೆ. ಇದರ ಪೂರ್ವಕ್ಕೆ ಇಟಲಿಯಾನರು ಗೆದ್ದ ಅಬಿಸೀನಿಯವಿದೆ. ಅಂತೂ ಒಟ್ಟಿನಲ್ಲಿ ಫ್ರಾನ್ಸಿಗೆ ಸೇರಿದ ಉತ್ತರ ಆಫ್ರಿಕದಲ್ಲಿನ ವಸಾಹತು ೧೧ ಲಕ್ಷ ಚದರ ಮೈಲಿ ವಿಸ್ತೀರ್ಣವಾಗಿದ್ದು ಸುಮಾರು ೧೪೦ ಲಕ್ಷ ಜನಸಂಖ್ಯೆಯುಳ್ಳದ್ದಾಗಿದೆ. ಇದನ್ನು ಯುದ್ಧಕಾಲದಲ್ಲಿ ಕಾಪಾಡಿಕೊಳ್ಳಲು ಸುಮಾರು ೧೫೦ ಸಾವಿರ ಸೈನ್ಯವು ಬೇಕಾಗಬಹುದೆಂದು ಫ್ರಾನ್ಸು ಅಂದಾಜು ಮಾಡಿ ಇದಾಗಲೇ ಮೊರೊಕ್ಕೊ, ಅಲ್ಜೀರಿಯಾ ಮತ್ತು ಟ್ಯುನೀಸಿಯಾ ಪ್ರಾಂತಗಳಲ್ಲಿ ೧೪೦ರಿಂದ ೧೫೦ ಸಾವಿರದ ವರೆಗಿನ ಸೈನ್ಯವನ್ನು ಇರಿಸಿದೆ. ಇದರಲ್ಲಿ ಸುಮಾರು ೬೦ ಸಾವಿರ ಮೊರೊಕ್ಕೊ ಪ್ರಾಂತದಲ್ಲೇ ಇದೆ. ಅಲ್ಲದೆ ಈ ಮೂರು ಸುಪ್ರಖ್ಯಾತ ಹಾಗೂ ವಿಶಾಲ ಫ್ರಾನ್ಸ್ ವಸಾಹತುಗಳಲ್ಲಿ ೨೦೪ ಯುದ್ಧ ವಿಮಾನಗಳೂ ಇರಿಸಲ್ಪಟ್ಟಿವೆ ಅಲ್ಜೀರಿಯಾ ಮತ್ತು ಟ್ಯುನೀಸಿಯಾ ಪ್ರಾಂತಗಳು ಇದೀಗ ಇಟಲಿಯ ಅಂಕೆಗೊಳಪಟ್ಟ ಸ್ಪೈನ್ ಮೊರೊಕ್ಕೊ ಮತ್ತು ಲಿಬಿಯಾ ಪ್ರದೇಶಗಳ ನಡುವೆ ಇದ್ದರೂ ಕೂಡ ಮೇಲೆ ಹೇಳಿದಂತೆ ಬ್ರಿಟನ್ ವಸಾಹತು ಹಾಗೂ ಬ್ರಿಟನ ಆಶ್ರಯಕ್ಕೊಳಪಟ್ಟ ಆಂಗ್ಲೋ ಈಜಿಪ್ಶಿಯನ್ ಸುಡಾನ್ ಮತ್ತು ಈಜಿಪ್ಟ್ ದೇಶಗಳು ಅವುಗಳನ್ನು ಕಾಪಾಡುವಷ್ಟು ಬಳಿಯಲ್ಲೇ ಇವೆ.

ಇಟಲಿಯು ಅಬಿಸೀನಿಯಾ ಯುದ್ಧದಿಂದ ಇದೀಗ ಲಿಬಿಯಾಕ್ಕೆ [illegible] [illegible] ಯುದ್ಧದ ಸಾಮಗ್ರಿ [illegible] ದಲ್ಲಿನ [illegible] [illegible] ಸಾವಿರ ಸೈನ್ಯ [illegible] ಸುಮಾರು [illegible] ಸಾವಿರ [illegible] ಅಂದಾಜು ಮಾಡಲಾಗಿದೆ. ಅಲ್ಲದೆ ಇದಾಗಲೇ ೩೦೦ಕ್ಕಿಂತ ಹೆಚ್ಚು ಯುದ್ಧವಿಮಾನಗಳನ್ನು ಅವುಗಳ [illegible] ದಿನ ದಿನ ಹೆಚ್ಚಾಗುತ್ತಿವೆ.

ಉತ್ತರ ಆಫ್ರಿಕದ ವಸಾಹತುಗಳಲ್ಲೆಲ್ಲಾ ಈಜಿಪ್ಟ್ ಅತೀ ಪ್ರಮುಖವಾಗಿದೆ. [illegible] 'ಇಂಗ್ಲೆಂಡ್-ಈಜಿಪ್ಟ್' ಒಪ್ಪಂದದಂತೆ ಇದಾಗಲೇ ಇಲ್ಲಿ ಸುಮಾರು ೧೨ ಸಾವಿರ ಸೈನ್ಯವೂ ೬೦ ವಿಮಾನಗಳೂ ಬ್ರಿಟಿಷರದ್ದಾಗಿ ಇವೆ, ಅಲ್ಲದೆ ತಕ್ಕಷ್ಟು ಮತ್ತಿನ ಇತರ ರೀತಿಯ ಯುದ್ಧಸಾಮಗ್ರಿಗಳೂ ಇವೆ.

ಇದೀಗ ಈಜಿಪ್ಟು ತನ್ನ ಸೈನ್ಯವನ್ನು ಬಲಪಡಿಸಿಕೊಳ್ಳುತ್ತಿರುವುದಾದರೂ ಅದರ ಸಂಖ್ಯೆಯು ಕೇವಲ ೧೧ ಸಾವಿರ ಮಾತ್ರ. ಅಲ್ಲದೆ ವಿಮಾನ ಬಲವೂ "ಸಾಕಷ್ಟು ಇಲ್ಲ" ಆದರೆ ಒಪ್ಪಂದದ ಪ್ರಕಾರ ಬ್ರಿಟಿಷ್ ಸರಕಾರವೇ ದೇಶದಲ್ಲೆಲ್ಲಾ ಯುದ್ಧಾನುಕೂಲತೆಗಳನ್ನು ಮಾಡಿಕೊಳ್ಳುತ್ತಿದೆ. ಆದರೆ ಬ್ರಿಟಿಷರ ಪ್ರಾಮುಖ್ಯ ಸೈನ್ಯವು ಇದೀಗ ಪೆಲೆಸ್ಟೀನದಲ್ಲಿದೆ. ಅಲ್ಲಿ ಸುಮಾರು ೧೦ ಸಾವಿರ ಸುಸಜ್ಜಿತ ಸೇನೆಯೂ, ೧೨ ಸಾವಿರ ಸಾಧಾರಣ ಸೈನ್ಯವೂ ೧೦೦ ವಿಮಾನಗಳೂ ಇವೆ. ಇನ್ನು ಪಲೆಸ್ಟೀನದ ಉತ್ತರದಲ್ಲಿರುವ ಫ್ರೆಂಚ್ ವಸಾಹತಾದ ಸಿರಿಯಾ ದೇಶದಲ್ಲಿ ಫ್ರೆಂಚ್ ಸೈನ್ಯವು ಸುಮಾರು ೧೦ರಿಂದ ೧೩ ಸಾವಿರದ ತನಕ ಇದ್ದರೂ ಕೂಡ ಅದು ಅಷ್ಟೊಂದು ಪ್ರಯೋಜನಕಾರಿಯಾದುದಲ್ಲ. ಇಟಲಿಯನರಲ್ಲಿ ಅಭಿಮಾನವನ್ನಿಟ್ಟಿರುವ ಹಾಗೂ ಸ್ವಾತಂತ್ರ್ಯದ ಇಚ್ಛೆ ಹೆಚ್ಚಿರುವ ಅಲ್ಲಿನ ಅರೇಬಿ ಪ್ರಜೆಗಳ ಮುಂದೆ ಫ್ರೆಂಚರ ಬಲವು ನಿಷ್ಕಳಂಕವಾಗಿ ನಿಂತಿದೆ.

ಅಂತೂ ಒಟ್ಟಿನಲ್ಲಿ ಭೂಮಧ್ಯ ಸಮುದ್ರದ ಸುತ್ತಲಿನ ಈ ಪ್ರದೇಶಗಳೆಲ್ಲಾ ಇಂದು ಯುದ್ಧ ಭಯದಿಂದ ತಮ್ಮ ತಮ್ಮ ರಾಷ್ಟ್ರಗಳನ್ನು ಕಾಪಾಡಿಕೊಳ್ಳುವ ಹಂಚಿಕೆ ಮಾಡಿಕೊಂಡಿವೆ. ಇದರ ಪರಿಣಾಮವು 'ಅನಾಯುಕ್ತ' ಹಾಗೂ ಮಹಾಯುದ್ಧವೆಂದು ಧೈರ್ಯವಾಗಿ ಹೇಳಬಹುದಾಗಿದೆ.

ದೇಶದ ಎಲ್ಲ ಕಡೆಗಳಲ್ಲಿ ಹರಿಪುರ ಕಾಂಗ್ರೆಸಿಗೆ ಡೆಲಿಗೇಟುಗಳನ್ನು ಚುನಾಯಿಸುವ ಕೆಲಸವು ಬಹಳ ಗದ್ದಲದಿಂದ ನಡೆಯಿತು. ಕಾಂಗ್ರೆಸಿನಲ್ಲುಂಟಾದ ಎರಡು ಪಕ್ಷಗಳಿಗೆ, ಸೌಮ್ಯವಾದಿಗಳು ಮತ್ತು ಗಾಂಧಿ ಪಂಥದವರು ಇವರೊಳಗೆ ಕಠಿಣ ತರದ ಪ್ರತಿಸ್ಪರ್ಧೆಯು ನಡೆಯಿತು.

ಹೊಟ್ಟೆಯ ಪೀಡೆಯಿಂದ ನಿದ್ರಿಸಲಾಗುತ್ತಿರಲಿಲ್ಲ

ನಿಮಗೆ ನಿದ್ರೆ ಸರಿಯಾಗಿ ಬರುವುದಿಲ್ಲವೆ, ಹಾಗಾದರೆ ಮಿಸೆಸ್ ಆರ್. ಬಿ. ಯವರ ಅನುಭವದಿಂದ ನಿಮಗೆ ಉಪಕಾರವಾಗಬಹುದು ವಿಶ್ರಾಮವು ಏನೆಂಬುದು ಅನೇಕ ವರ್ಷಗಳ ಸಮಯ, ಈ ಸ್ತ್ರೀಗೆ ತಿಳಿದ ಇರಲಿಲ್ಲ. ಹೊಟ್ಟೆ ಪೀಡೆಯಿಂದ ಪ್ರತಿರಾತ್ರಿ ಆಕೆಯು ನಿದ್ರೆಯಿಲ್ಲದೆ ಕಳೆಯಬೇಕಾಗಿತ್ತು. ಮಕ್ಲೀನ್ ಬ್ರೆಂಡ್ [illegible] ತನಕ, ಆಕೆಗೆ ಇತರ [illegible] ದೊರೆಯಲಿಲ್ಲ.

ಮೆಕ್ಲೀನ್ ಬ್ರೆಂಡಿನ ಸೇವನೆಯ ನಂತರ [illegible]

[illegible]

[illegible]

Alex C. Maclean

[illegible] ಮಕ್ಲೀನ್ ಬ್ರೆಂಡ್ [illegible] ಎಲ್ಲವೂ ಸರಿಯಾಗುವುದು. ಅದು ನಿಮ್ಮ ಹೊಟ್ಟೆಯನ್ನು ನಿರ್ಮಲಗೊಳಿಸುವುದರಿಂದ ನೀವು ಸುಖವಾಗಿ ನಿದ್ರಿಸುವಿರಿ

[illegible]

ಗೊಳಿಸ್ಪ [illegible]

ಸ್ಥಳೀಯ [illegible] ದೊರೆಯದಿದ್ದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಜೆ. ಎಲ್. ಮೊರಿಸನ್, ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್, ಸ್ಟೆಂಡರ್ಡ್ ಬಿಲ್ಡಿಂಗ್, ಹೊರ್ನ್ಬಿ ರೋಡ್, ಮುಂಬಯಿ



S. No. 72.

20 ಕೋಟಿ ರೂಪಾಯಿಗಳು ದೊರಕುವುವು!

ಸಾರ್ವಜನಿಕ ವಿದ್ಯಾಪ್ರಸಾರಕ್ಕಾಗಿ ಪರದೇಶಿ ಮತ್ತು ಮಿಲ್ ವಸ್ತ್ರಗಳ ಮೇಲೆ ತೆರಿಗೆಯನ್ನು ಹೊರಿಸಬೇಕು.

ಭಾರತದ ೩೩ ಕೋಟಿ ಜನರ ಹಿತಕ್ಕಾಗಿ ರ್ವಜನಿಕ ವಿದ್ಯಾಪ್ರಸಾರಕ್ಕಾಗಿ, ವಿದ್ಯಾ ತರುಣರಿಗೆ ಅದೊಂದು ಉದ್ಯೋಗವನ್ನು ಗಿಸಿಕೊಡುವುದಕ್ಕಾಗಿ, ಪರದೇಶೀ ಮತ್ತು ಬಟ್ಟೆಗಳ ಮೇಲೆ ತುಂಬಾ ತೆರಿಗೆಯನ್ನು ಿಸತಕ್ಕದು. ಈ ರೀತಿ ಮಾಡಿದರೆ ಹಿಂದೂ ದಿಂದ ವರ್ಷಂಪ್ರತಿ ಹೊರಗೆ ಹೋಗುತ್ತಿ ಸುಮಾರು ೧೪—೧೫ ಕೋಟಿ ರೂಪಾಯಿ ನ್ನು ಇಲ್ಲಿಯೇ ಉಳಿಸಬಹುದು—ಎಂಬು ಶ್ರೀ ನಾರಾಯಣದಾಸ್ ಬಿಚೋರಿಯೆಂ ರು ಮೊರ್ಡರ್ನ್ ರಿವ್ಯೂನಲ್ಲಿ ಬರೆದಿರುತ್ತಾರೆ

ಸೇಕಡಾ ೧೫೦ರಷ್ಟು ತೆರಿಗೆಯನ್ನು ಎಲ್ಲ ಶೀ ಸಾಮಗ್ರಿಗಳ ಮೇಲೆ ತೆರಿಗೆಯನ್ನೂ, ಷ ಸಾಮಾನುಗಳ ಮೇಲೆ ೧೦೦ರಷ್ಟು ಯನ್ನೂ ಹೊರಿಸಬೇಕಾಗಿ ಅವರು ಅಭಿ ಮಪಟ್ಟಿರುವರು ಹೀಗೆ ಮಾಡಿದರೆ ಕೆಲವೆ ಗಳಲ್ಲಿ ಭಾರತವು ಹತ್ತಿಯ ಕೈಗಾರಿಕೆ ಲ್ಲಿ ಸ್ವತಂತ್ರವಾಗಬಲ್ಲದು ಈ ರೀತಿ ಲ್ಲಿ ಉಳಿತಾಯವಾದ ೧೪—೧೫ ಕೋಟಿ ಪಾಯಿಗಳನ್ನು ಸ್ವದೇಶಿ ಮಿಲ್ಲುಗಳ ಬಟ್ಟೆಯ ಮೇಲೆ ಸೇಕಡಾ ೨೫ರಿಂದ ೫೦ರಷ್ಟು ತೆರಿಗೆಯನ್ನು ಹೊರಿಸಿ ಗಳಿಸಬಹುದು

ಮಿಲ್ಲುಗಳಲ್ಲಿ ತಯಾರಾಗುವ ಬಟ್ಟೆ ವಸ್ತ್ರದ ಮೌಲ್ಯವು ಸುಮಾರು ೬೦ರಿಂದ ೮೦ ಕೋಟಿ ರೂಪಾಯಿಗಳಷ್ಟಾಗುವುದು ಇದರ ಮೇಲೆ ತೆರಿಗೆಯನ್ನು ಹೊರಿಸಿದರೆ ಕಮ್ಮಿಎಂದರೆ ೨೦ ಕೋಟಿ ರೂಪಾಯಿಗಳು ಲಭಿಸಬಹುದು. ಪರದೇಶಿ ವಸ್ತ್ರದ ಆಮದಿನಿಂದಾಗಿ ಜಮೆಯಾಗುವ ಸುಮಾರು ೫ ಕೋಟಿ ರೂಪಾಯಿಯನ್ನು ಕಳೆದರೂ, ೨೦ ಕೋಟಿ ರೂಪಾಯಿಗಳು ಉಳಿಯುವುವು ಈ ಹಣವನ್ನು ಜನರ ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರಕ್ಕಾಗಿ ವಿನಿಯೋಗಿಸಬಹುದು ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು ಪ್ರತಿ ತಿಂಗಳಿಗೆ ವೆಚ್ಚ ಮಾಡಿದರೆ, ಸುಮಾರು ೩ ಲಕ್ಷ ಪ್ರಾಥಮಿಕ ಶಾಲೆಗಳನ್ನು ತೆರೆದು ಕಮ್ಮಿಯೆಂದರೆ ಮೂರು ಲಕ್ಷ ಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸಿಕೊಡಬಹುದ ಈ ರೀತಿಯಲ್ಲಿ ನಮ್ಮ ಎಲ್ಲಾ ಬಿ ಎ ಇಂಟರಮಿಡ್ಯೆಟ್ ಮತ್ತು ಎಸ್. ಎಸ್. ಎಲ್ ಸಿ. ಇವರಿಗೂ ಉದ್ಯೋಗವನ್ನು ಕೊಡಲು ಅಸ್ಪದವಿದೆ ಇದರಿಂದಾಗಿ ನಮ್ಮ ಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆಯನ್ನು ಒಹುಮಟ್ಟಿಗೆ ಬಿಚ್ಚಿದಂತಾಗುತ್ತದೆ

ಮಿಲ್ ಬಟ್ಟೆಯ ಮೇಲೆ ತೆರಿಗೆಯನ್ನು ಹೊರಿಸುವುದಕ್ಕಿಂತ ಇದೊಂದು ಪ್ರಯೋಜನ ಮಾತ್ರವಲ್ಲ, ಇನ್ನೊಂದು ಅಷ್ಟೇ ಪ್ರಧಾನವಾದ ಒಳ್ಳಿತೂ ಇದೆ ಈ ತೆರಿಗೆಯು ಖಾದಿ ಚಳವಳ ಮತ್ತು ಪ್ರಚಾರಕ್ಕೆ ಸಹಾಯವಾಗುವುದಲ್ಲದೆ, ಹಳ್ಳಿಗಳಲ್ಲಿ ದಿನಕ್ಕೆ ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲದೆ ಉಪವಾಸ ಬೀಳುತ್ತಿರುವ ವಿಧವೆಯರಿಗೂ ರೈತಾಪಿ ಜನರಿಗೂ ಆಹಾರವನ್ನು ಕೊಡುವುದು ಈ ತೆರಿಗೆಯ ಭಾರವು ಹಾಗಾದರೆ ಯಾರ ಹೆಗಲುಗಳ ಮೇಲೆ ಬೀಳುವುದು? ಹೀಗೆ ಮಾಡಿದರೆ ಮಿಲ್ ಬಟ್ಟೆಯ ಕ್ರಯವು ಸೇಕಡಾ ೨೫ರಿಂದ ೫೦ರಷ್ಟು ಏರ ವುದು ಇದರಿಂದ ಧ ಕರ ಮೇಲೆ ಯಾವ ಪರಿಣಾಮವೂ ಉಂಟಾಗದು ರ ಧ್ಯ ನು ಕರಗ ಿವ ವರಿಗೆ ಇದರ ಪಟ್ಟು ಉದ್ದರ ಾ ಥಮಿ ಶಾಲೆಗಳಲ್ಲಿ ಅಧ್ಯಾಪಕರಾಗಿದ್ದುದರಿಂದ ಅವರು ತಮ್ಮ ಬಟ್ಟೆಬರೆಗಳಿಗಾಗಿ ಬಂದಷ್ಟು ಹೆಚ್ಚು ಹಣವನ್ನು ಕೊಡಲು ಹಿಂಜರಿಯಲಿಕ್ಕಿಲ್ಲ. ಬಡವರಾದರೋ, ಬಟ್ಟೆಗೆ ಕ್ರಯವೇರಿದುದರಿಂದ ಹಣವನ್ನು ಗಳಿಸುವ ಉತ್ಸಾಹದಿಂದ ತಮ್ಮ ಆರಾಮ ಸಮಯಗಳಲ್ಲಿ ಬಟ್ಟೆಯನ್ನು ತಯಾರಿಸಿ, ಹಣವನ್ನು ಸಂಪಾದಿಸದೆ ಇರರು.

ಬರ್ಲಿನ್ ನಗರವು ಬಹಳ ಶುಚಿಯಾಗಿರುವ ನಗರವೆಂದೆಣಿಸಲ್ಪಟ್ಟಿದೆ ಅಲ್ಲಿ ಪ್ರತಿನಿತ್ಯ ೩೦೦೦ ಕಸಗುಡಿಸುವವರು ಪ್ರಾತಃಕಾಲವಾದೊಡನೆ, ೩೫೫ ಕಸಗುಡಿಸುವ ಯಂತ್ರೋಪಕರಣಗಳೊಂದಿಗೆ ತಮ್ಮ ಕೆಲಸವನ್ನು ಮಾಡುವರಂತೆ

ಸ್ಕೊಟ್ಲೆಂಡ್ ದೇಶದ ಮೊಲಗಳಿಗೆ ಬೇಸಿಗೆ ಕಾಲದಲ್ಲಿ ಮೈಚರ್ಮವು ನೀಲವರ್ಣದಿದ್ದು ಚಳಿಕಾಲದಲ್ಲಿ ಅದು ಬಿಳೇ ವರ್ಣವನ್ನು ತಾಳುತ್ತದಂತೆ

'DILROZ' Regd

'Dil Roz' is a sure cure for Oriental sores local sores, all kinds of deep rooted sores skin eruptions, Pimples Eczema, Ringworm, Sinus Fistula auxillary Abscess

There is no need of dressing the wounds nor are bitter prohibited

Price Rs. 2 Postage extra

TAHIR DIN

Amritsar LAHORE.



ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ರೋಗ್ಯವೇ ಮುಖ್ಯ ಎಳೆಯ ಮಕ್ಕಳ ರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿ ವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ ಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣ ಧಿಗಳು, ಕೈಕಾಲುಗಳು ಸಣ್ಣಾಗಿ ಣ, ಇವುಗಳಿಂದ ನರಳಿ, ಬಳಲಿ ಎಷ್ಟೋ ಯದ್ದಾಗಿ ಆಡುತ್ತಾ ಪಾಡುತ್ತಾ ಇರಬೇ ಾದ ಕಂದಯ್ಯಗಳು ನೊಯೋ ಎಂದಿರುತ್ತಾರೆ.

ಳೆಯ ಮಕ್ಕಳನ್ನು ಇವುಗಳಿಂದ ಕಾಪಾಡಲ್ಲ ಮಹತ್ತರವಾದ ಔಷಧವೆಂದರೆ ಬಾಲಭಾಸ್ಕರ'ವೊಂದೇ ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ

ಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

ಬಾಲಭಾಸ್ಕರ

ಆಯುರ್ವೇದಾಶ್ರಮಂ,
೫೧ ಗೋವಿಂದಪ್ಪನಾಯಕ್ ಬೀದಿ,
ಜ ಟ ಮದ್ರಾಸು

ಜಿಲ್ಲೆಯ ಏಜಂಟರು —
ಫ್ರೊಷ್ಯೆಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

Ready for sale !

SHARADA DIARY 1938

ARE ISSUED IN THREE SIZES

Big size 0-8 0. **Small size 0-4-0.**

ಶಾರದಾ ಪೋಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ

Interleaved big size DIARIES useful for Banks & Lawyers

ARE AVAILABLE AT 1-2-0 PER COPY

Sharada Press, Mangalore, S. Canara.

HOUNSA

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ ವೆಂಕಟೇಶ ಬಾಳಿಗ,
ಗೋಲಿಕಟ್ಟಾ ಬಜಾರ್, ಮಂಗಳೂರು

Use the soaps

KNOWN ALL OVER

WISICO'S.

MINAR

&

TAJAMAHAL 'Red'

Bar Soaps.

POPULAR IN THE MARKET

Sole Distributer-

P. G. KAMATH,

Kashmir House,

Marnamikatta, MANGALORE

ಮದನಕಾಮೇಶ್ವರಿ ಲೇಹ್ಯ



ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ಸರ್ವರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ-1-4-0(ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ,
P O. Peridepi (ನೆಲ್ಲೂರು ಜಿ)

ಸೂರ್ಯವಂಶದ ಜಪಾನೀಯ ಸಾರ್ವಭೌಮರು

ಮಹಾಜನ ಮನ್ನಣೆಗೂ, ಪ್ರೀತಿಗೂ ಪಾತ್ರರಾಗಿರುವರು ಇವರ ಹೆಸರನ್ನು ಉಚ್ಚರಿಸಿದ ಮಾತ್ರಕ್ಕೆ ಜಪಾನೀಯರು ಮನ್ನಣೆಯಿಂದ ಬಗ್ಗುವರು

ಮಕ್ಕಾ ಮದೀನಗಳು ಹಿಂದೂದೇಶದ ಪಶ್ಚಿಮ ಭಾಗದಲ್ಲಿರುವುದರಿಂದ ಮಹಮ್ಮದೀಯರು ಪ್ರತೀ ದಿನ ತಮ್ಮ ನಿಮಾಜು ಸಮಯದಲ್ಲಿ, ಮಹಮ್ಮದ ಪೈಗಂಬರರಿಂದ ಕಾದು ಇಡಲ್ಪಟ್ಟ ಮಕ್ಕಾ 'ಕಬ್ಬಾ'ದಲ್ಲಿರುವ ಆ ಪವಿತ್ರತೆಯನ್ನು ಸೂಚಿಸುವ ಕಲ್ಲಿಗೆ ಮುಖಮಾಡಿ ನಿಂತೇ ನಿಮಾಜು ಮಾಡುವವರಾಗುವವರು. ಇದರಿಂದ ಮಹಮ್ಮದ ಪೈಗಂಬರರ ಮೇಲಿರುವ ತಮ್ಮ ವಿಶ್ವಾಸವನ್ನು ಸೂಚಿಸುವಾಗ ಅವರದೊಂದು ಭಾವನಾ ಚಿತ್ರವು ತಲೆಯಲ್ಲಿ ಮೂಡಿದಂತಾಗಿ, ಅವರ ಆ ಜಗದೋದ್ಧಾರದ ಕರ್ತವ್ಯ ಪರಿಪಾಲನೆಯಲ್ಲಿ ಕಾಮಾಭಾಗಿಗಳಾಗುತ್ತೇವೆಂಬ ಪರವಶತೆಯಲ್ಲಿ ಲೀನರಾಗಿರುವೆವೆಂಬ ಸದ್ಧರ್ಮಃ ಸ್ವಾಸ್ಥ್ಯತೆಯು ಭಾವೀ ಉದ್ಧಾರದ ಕಾರ್ಯದಲ್ಲಿ ಸಹಾಯಕವಾಗುವುದೆಂಬ ಭಕ್ತಿಯು ಅಂಕುರತ್ವದಿಂದ ಪರಮಾತ್ಮನನ್ನು ಧ್ಯಾನಿಸುವ ಮಹಮ್ಮದೀಯರಂತೆ ಜಪಾನಿಯರು ಇಂದಿಗೂ ತಮ್ಮ ದೇಶೋದ್ಧಾರದ, ತಮ್ಮ ಜನಾಂಗದ ಅಭ್ಯುದಯದ ಸಲುವಾಗಿ ಅವರಲ್ಲಿಯೇ ಇರಲಿ, ಯಾವ ದೇಶದಲ್ಲಿಯೇ ಇರಲಿ, ಯಾವ ಕೆಲಸದಲ್ಲಿಯೇ ಇರಲಿ, ಕಡುತರಹದ ರಣಮಧ್ಯದಲ್ಲಿಯೇ ಇರಲಿ, ಸೂರ್ಯವಂಶಜರಾದ ತಮ್ಮ ಪರಮಾತ್ಮನ ಪ್ರತಿನಿಧಿಯೆಂದು ಕರೆಯಲ್ಪಡುವ ಅವರ ಆ ಜಪಾನು ಚಕ್ರವರ್ತಿಯು ವಾಸಮಾಡುತ್ತಲಿರುವ ಟೋಕಿಯೋ ಪಟ್ಟಣದ ದಿಕ್ಕಿಗೆ [illegible] ಕೊಂಡು ಪ್ರಾರ್ಥನೆಯನ್ನು ದೇವರಿಗೆ ಅರ್ಪಿಸುತ್ತಲಿ [illegible] ತಮ್ಮ ಚಕ್ರವರ್ತಿಯ ಹೆಸರನ್ನು ಎತ್ತಿ [illegible] ತಲೆಯನ್ನು ಬಗ್ಗಿಸಿ [illegible] ಚಕ್ರವರ್ತಿಗಳ [illegible] ರಾಜನ [illegible] ಪ್ರತಿನಿಧಿಯಂತಾಗಿದ್ದರೆ ಪ್ರಜೆಗಳು [illegible] ಪ್ರಜೆಗಳು [illegible] ಪ್ರೀತಿಸಲು [illegible] ಭಾರತೀಯರ ರಾಜಭಕ್ತಿ [illegible] ಪ್ರೀತಿಯ ಪ್ರಭಾವದ ಕಿರಣಗಳನ್ನು ಹೊರಸೂಸುತ್ತಲಿವೆ [illegible] ಕಿರಣಗಳು ಭಾರತೀಯರ [illegible] ಎಂದು ನಾಟುವವೋ? [illegible] ಕಾಲದ ರವಿಯೋದಯವು ಎಂದಾಗುವುದೋ ಎಂದು ಭಾರತೀಯರಾದ ನಾವು ಹಾರೈಸಬೇಕಾಗಿದೆ. ಜಪಾನೀಯರ ಆ ಸೂರ್ಯನು ನಡು ನೆತ್ತಿಗೆ ಬರುತ್ತಲಿದ್ದಾನೆ. ಇಂತಹ ರಾಜ್ಯ ಸ್ಥಿತಿಯನ್ನು ನಿರಿಗಣಿಸಲು 'ಜೀನಾ-ಜಪಾನ್' ರಣರಂಗದ ಯೋಚನೆಯನ್ನು ಬದಿಗಿಟ್ಟು ನೋಡುವವರು ಬೇಕಾಗುತ್ತದೆ.

ಜಪಾನರ ಈಗಿನ ಅರಸರಾದ ಹಿರೋಹಿತೋ ಚಕ್ರವರ್ತಿಯವರ ಜಗತ್ತಿನ ಒಂದೇ ಮೂವರು ಚಕ್ರವರ್ತಿಗಳಲ್ಲೊಬ್ಬರು. ಇಟಲಿಯ ಅರಸರು [illegible] ವರ್ಷದ ಹಿಂದೆ ಚಕ್ರವರ್ತಿಯರನ್ನಾಗಿ ಮಾಡಲ್ಪಟ್ಟರು. ಇಂಗ್ಲಾಂಡಿನ ಅರಸರ 60 ವರುಷಗಳ ಹಿಂದೆ ಹಿಂದೂದೇಶದ ಚಕ್ರವರ್ತಿಗಳಾದರು. ಆದರೆ ಜಪಾನ ಅರಸರ [illegible] 660 ವರುಷಗಳ [illegible] 2600 ವರುಷಗಳ [illegible] ದೇವತೆಯ [illegible] ಜಪಾನ [illegible] ರಾಜವಂಶಾವಳಿಯ 121ನೇ [illegible] ಈಗಿನ [illegible] ವರ [illegible] ದೇಶ [illegible] ದಮಿತ್ಯಾಗಿ [illegible] ದೀರ್ಘ ರಾಜವಂಶಾವಳಿಯ ಜಗತ್ತಿನ ಇತಿಹಾಸದಲ್ಲೆಲ್ಲಿಯೂ ನೋಡಸಿಗದು.

ಇಂದಿನ ಜಪಾನು ಚಕ್ರವರ್ತಿಗಳ ವಂಶದ 123 ರಾಜಕಿರಣಗಳು ಭವ್ಯವಾದ ತಮ್ಮ ಅರಮನೆಯ ಗೋಡೆಗಳಿಂದ ಹೊರಗಾದವರುಗಳಲ್ಲ. ಅವರು ರಾಜರ್ಷಿಗಳಾಗಿ ಕಾಲ ಕಳೆದಿದ್ದರು. ಜಾಪಾನೀಯರ ನಂಬುಗೆಯು ದಿವ್ಯ ರಾಜ ದೇಹವನ್ನು ಸ್ಪರ್ಶಿಬಾರದೆಂದಿತ್ತು. ಆದರೆ 124ನೇಯವರಾದ ಇಂದಿನ 'ಮಿಕಾಡೋ ಹಿರೋಹಿತೋ' ಚಕ್ರವರ್ತಿಗಳು ಸ್ವಂತ ಹಸ್ತಲಾಘವಕ್ಕೆ ಎಡೆಗೊಟ್ಟವರಲ್ಲಿ ಮೊದಲಿಗರು. ಅಳರಸರು ಪ್ರತೀ ಮಾಸದ ಮೊದಲನೇಯ ಹದಿನೈದನೆಯ ಮತ್ತು ಇಪ್ಪತ್ತೊಂದನೆಯ ದಿನಗಳಲ್ಲಿ, ಟೋಕಿಯೋ ನಗರದಲ್ಲಿರುವ ತಮ್ಮ ಹಿರಿಯರ ಪವಿತ್ರ [illegible]ಗಳನ್ನು ಸಂದರ್ಶಿಸಿದ್ದಾದರೆ, ರಾಜಕಾರಣ ಪಟುತ್ವವು ಅರಸರಲ್ಲಿ ದೇದೀಪ್ಯಮಾನವಾಗಿ ಮೂಡುತ್ತದೆಂಬ ಭಾವನೆಯೇ ಇದ್ದು, ಇವರ ಹಿಂದಿನವರೆಲ್ಲರೂ ಅದೇ ಭಕ್ತಿಯಿಂದ ತಮ್ಮ ವಂಶಜರ ಪವಿತ್ರ [illegible] ಕ್ಷೇತ್ರ ಯಾತ್ರಿಕರಾಗುತ್ತಿದ್ದರು. ಆದರೆ ಇಂದಿನ ಚಕ್ರವರ್ತಿಗಳು ತಮ್ಮ ದ್ವೇಯವು ಕರ್ಮಧಾರಣೆ [illegible] ಬಹಿರಂಗದ [illegible] ನ್ನು ನೋಡಲಿಕ್ಕೆ ಬರುವ ಅಸಂಖ್ಯಾತ ಅತಿಥಿಗಳಿಗಾಗಿ ವಿನಿಯೋಗಿಸುವರು. ತಾವು ಪಟ್ಟವೇರಿದ 1926ನೇ ಇಸವಿಯಿಂದ ಇಂದಿನ ವರೆಗೆ ಪ್ರತೀ ವರುಷ 6000 ದಸ್ತಾವೇಜುಗಳಿಗೆ ಸಹಿಯನ್ನು ಹಾಕಿರುವರು. 2000ದ ವರೇಗಿನ ರಾಜದರ್ಬಾರುಗಳಲ್ಲಿ ಭೇಟಿಕೊಟ್ಟು ಭಾಗವಹಿಸುತ್ತಲಿರುವರೆಂದು ಪರಿಶೋಧಿಸಲ್ಪಟ್ಟಿದೆ. ಇದಲ್ಲದೆ ಪ್ರತೀ ದಿನದ ಕೆಲವು ಸಮಯವನ್ನು ವಾರ್ತಾಪತ್ರಿಕೆಗಳನ್ನು ಓದುವದರಲ್ಲಿಯೂ, ಮಂತ್ರಿಮಂಡಲದ ಮತ್ತು ರಾಜಕೀಯದವರ ಭಾಷಣಗಳನ್ನು ಕೇಳುವದರಲ್ಲಿಯೂ, ಕಾಲ ಕಳೆಯುವರು. ಇದಾದ ನಂತರ ಒಬ್ಬ ಉಟಗರಾಗಿ ವೈಜ್ಞಾನಿಕ ಶಾಲೆಯಲ್ಲಿ [illegible] ಪ್ರಾಣಿಶಾಸ್ತ್ರ ಸಂಬಂಧದ ಉದಾಹರಣೆಗಳಲ್ಲಿ ಪ್ರದರ್ಶನ [illegible]



[illegible]

ಅವರ [illegible] ಇವರ [illegible] 6 [illegible] ವರ್ತಿಸಿ [illegible] ಅಮೇರಿಕಾ ದೇಶದವರ ರೀತಿಯಂತೆ [illegible] ಬೆಳಗ್ಗೆ 10 ಘಂಟೆಯ ತನಕ ಇವರ ಯಾತ್ರೆ ಸಮಯವು ಆಹ್ಲಾದಕರವರ್ತನೆಯ ಆಟಗಳಲ್ಲಿಯೇ ಪೂರೈಸುವುದು. ಅನಂತರದ ಸಮಯವನ್ನು ತಮ್ಮ ಪ್ರಜೆಯು ಆನಂದದಲಿ ಮಗ್ನರಾಗುವರು. ಇವರು ಪ್ರತೀ ದಿನ ಬೇರೆ 'ಗೋಲ್ಫ' ಆಟವಾಗುವದರಲ್ಲಿಯಾದರೂ ಕುದುರೆ ಸವಾರಿ ಮಾಡುವದರಲ್ಲಿಯಾದರೂ ಸ್ವಲ್ಪ ಸಮಯವನ್ನು ಪಟುವಟಿಕೆಯಿಂದ ಕಳೆಯುವರು. [illegible] ಚಕ್ರವರ್ತಿಗಳು ತಮ್ಮ [illegible] ಹೆಣ್ಣುಮಕ್ಕಳನ್ನು ಮತ್ತು ಇಬ್ಬರು ಗಂಡು ಮಕ್ಕಳನ್ನು [illegible] ಅವರು [illegible] ಇವರ ಪತ್ನಿಯವರೇ ಇವರ ವಿದ್ಯಾಭ್ಯಾಸವನ್ನು ನಡೆಸುತ್ತಲಿರುವರು. ಇದರ [illegible] ಇವರ [illegible] ಸ ಗುಸಿಮಿ ನಿನೋಮಿಯ ಎಂಬ 4 ವರ್ಷ ಪ್ರಾಯದ ರಾಜಕುಮಾರರು ಮುಂದೆ ಆದರ್ಶಪ್ರಾಯರಾದ ರಾಜರಾಗಿ ಮೆರೆಯುವುದರಲ್ಲಿ ಸಂದೇಹವಿಲ್ಲ.

ಇವರು ಇಂಗ್ಲಾಂಡು ದೇಶದ ವೈಭವವನ್ನು ಸದಾ ಸ್ಮರಿಸಿ, ಕೊಂಡಾಡುವರು. ಇಂಗ್ಲಿಷರೊಡನೆ ಮೈತ್ರಭಾವದಿಂದಿರುವರು. ಈ ಮೈತ್ರಭಾವದಿಂದ ತಪ್ಪುಗಳೆದ್ದು ನಿಲ್ಲುವ ಭಾವನೆಯು ಇವರಲ್ಲಿಲ್ಲ. ರೋಲ್ಸರೋಯ್ಸ ಕಾರಿನಲ್ಲಿಲ್ಲದೆ ಬೇರಾವ ಕಾರಿನಲ್ಲಿಯೂ ತಿರುಗಾಡುವಂತಿಲ್ಲ. ಜಪಾನು ಚಕ್ರವರ್ತಿಗಳಲ್ಲಿ ಮೊದಲಿಗರಾಗಿ ಇಂಗ್ಲೀಷರನ್ನು ಅರಮನೆಯ ತಮ್ಮ ಪವಿತ್ರವೆಂದು ಪರಿಗಣಿಸಲ್ಪಟ್ಟ ಕೋಣೆಗಳಲ್ಲಿ ಸಂಚರಿಸುವಂತೆ ಎಡೆಗೊಟ್ಟವರು ಪ್ರಥಮತಃವಾಗಿ ಇವರೊಬ್ಬರೇ. 'ಡೆಯ್ಲಿಮೈಲ್' ಪತ್ರಿಕೆಯ, ಲೇಖಕರಲ್ಲೊಬ್ಬರಾದ ಜಿ ವಾರ್ಡ ಪ್ರಾಯ್ಸ ಎಂಬವರಿಗೆ ಮೊದಲನ್ನೆಯ ಈ ಸುಸಂದರ್ಭವು ದೊರಕಿತ್ತು. ಪಾಶ್ಚಾತ್ಯ ಸುಧಾರಣೆಯಿಂದ ಮುಂದುವರಿಯುತ್ತಲಿರುವ ಇವರು ತಮ್ಮ ವಂಶಜರಿಂದ ಅನುಸರಿಸಿಕೊಂಡು ಬಂದ ಹಲವು ಕಟ್ಟುಕಟ್ಟಳೆಗಳನ್ನು, ನಿಷ್ಪ್ರಯೋಜಕವೆಂಬ ಭಾವನೆಯಿಂದ ಆಚರಿಸುತ್ತಿರುವುದಿಲ್ಲ. 66 ಮಿಲಿಯ ಜಪಾನೀಯರ ಮೇಲೆಯೂ 30 ಮಿಲಿಯ ಮಂಚೂರಿಯಾ ಚೀನಿಯರ ಮೇಲೆಯೂ ಮತ್ತು ಇತ್ತೀಚೆಗೆ ಉತ್ತರ ಚೀನಾದ 30 ಮಿಲಿಯ ಪ್ರಜೆಗಳ ಮೇಲೆ ಇವರ ಅಧಿಕಾರವು ನಡೆಯುತ್ತಿರುವುದು. ಆದರೆ ವಾಸ್ತವಿಕತೆಯಿಂದ ಇವರ ಹಿಂದಣ 123 ಮಂದಿ ಪೂರ್ವಜರು ಎಷ್ಟು ಜನರಿಗೆ ಒಡೆಯರಾಗಿದ್ದರೋ ಅಷ್ಟೇ ಜನರನ್ನು ಮಾತ್ರ ಆಳುತ್ತಿರುತ್ತೇನೆಂಬ ಭಾವನೆಯು ಮಾತ್ರ ಇವರಲ್ಲಿದೆ.

ಜಿಯುಂಗ ಕೈಶೇಕರ ದಳದವರ ಮೇಲೆ ಹಲ್ಲೆಗಾರರಾಗಿರುವ ಇವರ ದಳದ [illegible] ಅಧಿಕಾರವು ಇವರಿಗೆ ಇಲ್ಲದಿಲ್ಲ. ಆದರ ಬಲವತ್ತರವಾದ ಕಾರಣವು ಇವರಲ್ಲಿ ಕಾಣದೆ [illegible] ಇವರ ಅಧಿಕಾರವು [illegible] ಜಪಾನು [illegible] ಚಕ್ರವರ್ತಿ [illegible] ಚಕ್ರವರ್ತಿಗಳ [illegible] ಹಿಡಿತವು ಕಠಿಣ ತರದಲ್ಲಿಯೇ ಇದ್ದರೂ, [illegible] ಯುದ್ಧವನ್ನು [illegible] ಚಕ್ರವರ್ತಿಗಳ ಅಧಿಕಾರ [illegible] ಪ್ರತಿಭಟಿಸುವಂತಿಲ್ಲ. ಅವರ [illegible] ಪರಿಪಾಲಿಸಲ್ಪಡುವುದು. ಯಾವ ಜಪಾನು ಪ್ರಜೆಗಳೊಡನೆ ಕೇಳಲ್ಪಟ್ಟರೂ, ಯುದ್ಧವು ಅವರ ಸಮ್ಮಂಜಸತೆಯಿಂದಲ್ಲವೆ? ಕೊನೆಗಾಣವಂತಿಲ್ಲವೆಂಬ ಉತ್ತರವೇ ದೊರಕುತ್ತದೆ. ಇದಲ್ಲದೆ ಅನ್ಯಥಾ ಉತ್ತರವು ಸಿಗುವಂತಿಲ್ಲ. ಯುದ್ಧದ ಸಮಯದಲ್ಲಿಯೂ [illegible] ಸೈನಿಕರು [illegible] ಇರಲಿ, [illegible] ಒಮ್ಮೆ [illegible] ತಮ್ಮ ಚಕ್ರವರ್ತಿಗಳ [illegible] ಪ್ರಾರ್ಥನೆಯ [illegible] ಜಪಾನು ರಾಜವಂಶವು [illegible]

ಜಪಾನು ರಾಜ್ಯಕ್ಕೆ [illegible] ಸ್ವತಂತ್ರ [illegible] ಪ್ರಜಾಪ್ರಭುತ್ವ [illegible] ಚಕ್ರವರ್ತಿಗಳ ಪ್ರಭುತ್ವವನ್ನು [illegible] ವಿರೋಧಿಗಳೂ, ಮತ್ತು [illegible] ಜಪಾನ ಚಕ್ರವರ್ತಿಗಳ [illegible] ವಿರೋಧಿಸ [illegible] ಮುಸಲೋನಿ [illegible] ರಂತಹವರಿಂದ, ತಮ್ಮ ಚಕ್ರವರ್ತಿಗಳು ಮಾನವ ಲೋಕದ ದೇವ ಪ್ರತಿನಿಧಿಯಾಗಿರುವರೆಂಬ ಜಪಾನೀಯರ ಭಾವನೆಯು ಮಾಸುವ ತನಕ, ಏನೊಂದು ಜಪಾನು ಕಟ್ಟಳಾಡದೆಂಬುದೇ ಸ್ವಾಭಿಮಾನವಾದ ಅವರ ಏಕೀಭಾವನೆಯು.

ಇಂತಹ ಈಗಣ, ಜಪಾನು ಚಕ್ರವರ್ತಿಯವರು ತಮ್ಮ ಮುಂಚಿನ 123 ಜನ ಪೂರ್ವಜರ [illegible] ಮುಂದುವರಿಸುವರು.

ಸುಶಿಕ್ಷಿತ ಸೊಸೆ

ಲೇಖಕ:— ಬಿ. ರಾಘವೇಂದ್ರರಾವ್, ಮಂಗಳೂರು

ರಾತ್ರಿಯೂಟ ಮುಗಿದು ನನ್ನ ಕೋಣೆಯು ದೀಪದ ಅಡಿಗಿರುವ ಮೇಜಿನ ಮುಂದೆ ಇಟ್ಟ ಕುರ್ಚಿಯಲ್ಲಿ ಕುಳಿತುಕೊಂಡಿದ್ದೆನು. ನನ್ನ ಅಭ್ಯಾಸದ ಚಟವನ್ನು ಚೆನ್ನಾಗಿ ಅರಿತಿರುವ ಆಕೆಯು ಆ ಬಗ್ಗೆ ಒಂದು ಬೆಂಕಿಪೆಟ್ಟಿಗೆಯನ್ನು ಕೆಲವು ಬೀಡಿಗಳನ್ನು ಮೇಜಿನ ಮೇಲೆ ಇಟ್ಟು ತಾನು ಊಟ ಮಾಡುವುದಕ್ಕೆ ಹೋಗಿದ್ದಳು. ನನಗೆ ಗೊತ್ತಿದ್ದೊ, ಗೊತ್ತಿಲ್ಲದೆಯೋ ಅಣಿ ಮಾಡಿಟ್ಟ ಸಂಗ್ರಹದಿಂದ ಒಂದು ಬೀಡಿಯನ್ನು ತೆಗೆದು ಎಳೆಯುತ್ತಿದ್ದೆನು ಬೀಡಿಯು ಕಿರಿದಾಗುತ್ತಾ ಬಂದು ಅದರ ಕಿಚ್ಚು ಬೆರಳುಗಳ ಬುಡಕ್ಕೆ ತಟ್ಟಿದಂತೆ ಮಾಯವಾಗುತ್ತಲಿತ್ತು ಹಾಗೆ ಮಾಯವಾಗುವಾಗ ತನ್ನ ಅಂತಿಮ ಕಾಲವನ್ನು ನನಗೆ ಸೂಚಿಸುವುದಕ್ಕೋ ಎಂಬಂತೆ ಥಕ್ಕನೆ ಎಚ್ಚರಗೊಳಿಸಿತು. ದೃಷ್ಟಿಯು, ಬೆರಳುಗಳ ಮಧ್ಯೆ ನಟ್ಟಿತು ಬಲಗೈಯ ಬೆರಳುಗಳ ಸಹಾಯದಿಂದ ತೋರ್ಬೆರಳನ್ನು ನಡುಬೆರಳನ್ನು ವಿಂಗಡಿಸಿ ನೋಡಿದೆನು ತೋರ್ಬೆರಳು ಮತ್ತು ನಡು ಬೆರಳುಗಳ ಉಗಮ ಸ್ಥಾನದಲ್ಲಿ ಪಕ್ಷಪಾತವಿಲ್ಲದೆ ಚರ್ಮವು ಸುಟ್ಟುಹೋಗಿತ್ತು ದೀಪದ ಪ್ರಕಾಶವು ಮಾಸಿದಂತಿದ್ದುದರಿಂದ ಅದನ್ನು ಸರಿಯಾಗಿ ಪ್ರಕಾಶಗೊಳಿಸುವುದಕ್ಕಾಗಿ ಬತ್ತಿ ಚಕ್ರವನ್ನು ತಿರುಗಿಸಿದೆನು ಚಟ ಎಂಬ ಶಬ್ದೋಚ್ಚಾಟನೆಯಿಂದ ದೀಪದ ಗಾಜಿನ ಬುರುಡೆಯು ಬಲಗೈಯ ಮುಂಗೈಯ ಮೇಲೆ ಬಿದ್ದು ಹಾಯ್ ಎನ್ನುವಷ್ಟರೊಳಗ ಅದು ನೆಲದ ಮೇಲೆ ಬಿದ್ದು ಪುಡಿ ಪುಡಿಯಾಯಿತು ಗಾಜಿನ ಬುರುಡೆಯು ಬಿದ್ದು ಒಡೆಯುವಾಗ ಉಂಟಾದ ಜಲತರಂಗದೋಪಾದಿಯ ಸಪ್ತ ಸ್ವರ ಕೇಳಿದ ಅವಳು ಊಟವನ್ನು ಅರ್ಧಕ್ಕೇ ಬಿಟ್ಟು ಒಳಗೆ ಓಡಿ ಬಂದಳು ಎಲ್ಲಿಂದೆಂದು ಬೇರೆ ಹೇಳಬೇಕಾಗಿಲ್ಲ ಅಡುಗೆ ಕೋಣೆಯಿಂದ

ಕೋಣೆಯಲ್ಲಿ ಕತ್ತಲೆ ಕವಿದಿತ್ತು ಏನಾಯಿತು ಎಂದಳ

ಬೆಂಕಿಪೆಟ್ಟಿಗೆ ಎಲ್ಲಿ? ಎಂದೆ

ಅಲ್ಲೇ ಇತ್ತಲ್ಲವೇ ಎಂದಳು ಆಕೆ

ಇಲ್ಲಿಲ್ಲ ಎಂದೆ ನಾನ

ಬೀಡಿ ಎಳೆದವರಾರ್ ಎಂದಳು

ನಾ ಬೀಡಿ ಎಳೆಯಲಿಲ ಎಂದೆ

ಬೀಡಿ ಎಳೆಯದೆ ಇಷ್ಟಾಯಿತೇ?

ಎಂದಳು

ಬೀಡಿ ಎಳೆದರೆ ಹೀಗಾಗುವುದೇ ಎಂದೆ

ಬೀಡಿ ಎಳೆಯ ವುದೊಂದು ದುರಭ್ಯಾಸ ವಲ್ಲವೇ? ಎಂದಳ

ಬೀಡಿಗಳನ್ನು ಕಂಡಿಸುವವರಿರುವಾಗ ಎಳೆಯಬಾರದೇ ಎಂದ

ಆಗ ಸಿಗರೇಟು ಎಳೆಯು ವುದ ಕ್ರಮ ಎಂದಳು ಆಕೆ

ತರಿಸಿದ್ದಂಟೇ ಎಂದೆನ

ಇದ್ದರೆ ಬೆಂಕಿಪೆಟ್ಟಿಗೆ ಬೇಡವೇ

ಎಂದಳು

ಸಿಗರಲ್ಯಾಟ ಇದೆ ಎಂದುತ್ತರಿಸಿದೆನ

ಅದೆಲ್ಲಿದೆ? ಎಂದಳು

ಸಿಗರೇಟು ಇದೆಯೆ? ಎಂದ ತ್ವರಿತದಿಂದ ಕೇಳಿದೆ

ಇದೆ ಎಂದಳು ಆಕೆ

ಎಲ್ಲಿ ಎಂದ ಕಿಸೆಯೊಳಗಿದ್ದ ಸಿಗರಲ್ಯಾಟನ್ನು ಒಮ್ಮೆ ಪ್ರಕಾಶಗೊಳಿಸಿದೆನು

ಗಾಜಿನ ಬುರುಡೆಯು ಒಡೆದು ಹೋದುದರ ಪರಿಣಾಮದಿಂದ ಅದರ ಏಕೋಮಯವಾದ ಶರೀರವೆಲ್ಲವೂ ಜರ್ಝರೀಭೂತವಾಗಿ ಕುರ್ಚಿಯ ಮತ್ತು ಮೇಜಿನ ಅಡಿಯ ಭೂಭಾಗವನ್ನೆಲ್ಲಾ ಪಸರಿಸಿತ್ತು ಸಡಿಲು ಸಡಿಲಿಂದ ಅದರ ಅಸ್ತಿಪಂಜರದ ಮೂಳೆಯೊಂದು ಆಕೆಯ ಕಾಲಡಿಯಲ್ಲಿ ತನ್ನುದ್ಧಾರದ ಸಲುವಾಗಿ ಇಣುಕುತಿತ್ತು ನಷ್ಟವಾದ ಬುರುಡೆಯ ಪರಿಸ್ಥಿತಿಯನ್ನು ನೋಡುವ ತವಕದಿಂದಿದ್ದ ಆಕೆಯು ನಾನು ಕುಳಿತ ಕುರ್ಚಿಯ ಅರ್ಧ ಸುತ್ತು ಬಂದಳು ಬುರುಡೆಯ ಚೂರೊಂದು ಕಾಲಿನ ತುದಿ ಬೆರಳೊಂದಕ್ಕೆ ತಾಗಿ ರಕ್ತ ಸುರಿಯುವಂತಾಯಿತು. ನನ್ನ ಕಾಲಿಗಲ್ಲ. ನಾನು ಕುರ್ಚಿಯ ಮೇಲೆ ಕುಳಿತವನು ಕದಲಿರಲಿಲ್ಲ

ಏನಿದು ಬುರುಡೆ ಎಂದಳು

ತಲೆ ಬುರುಡೆ ಎಂದೆನು.

ಹೌದು ಹೊಗೆ ತಾಗಿ ಗಟ್ಟಿಯಾದ ಬುರುಡೆ ಎಂದಳು

ಹೋದರೆ ಒಂದೂವರೆ ಆಣೆಯಲ್ಲವೇ? ಎಂದೆ

ಸಂಪಾದನೆ ಮಾಡಿ ತರುವ ನೀನಿರುವಾಗ ನನಗೆ ಬುರುಡೆಯ ಯೋಚನೆಯಿಲ್ಲ ಎಂದಳು

ಇನ್ನೇತರ ಯೋಚನೆ ಎಂದೆ

ಡಾಕ್ಟರರಿಗೆ ಬೇಡವೇ ಫೀ ಎಂದಳು

ಅದಕ್ಕೆ ನಾನಲ್ಲವೇ ಎಂದೆ

ಸಿಗರಲ್ಯಾಟಿನ ಪೆಟ್ರೋಲು ಮುಗಿದು ಅದು ನೊಂದಿಹೋಯಿತು ಪುನಃ ಕತ್ತಲೆ ಕಮಲೇ ಎಂದೆ

ನೀರವ ಕಮಲೇ ಎಂದೆ ನಿರುತ್ತರ, ಪ, ಕಮಲೇ, ನಿಶ್ಶಬ್ದ ಕುರ್ಚಿಯಿಂದ ಎದ್ದು ನಿಲ್ಲುವುದಕ್ಕೆ ನನಗ ಧೈರ್ಯವಿರಲಿಲ್ಲ ಕುಳಿತಲ್ಲಿಂದಲೇ ಒಮ್ಮೆ ಮುಖವನ್ನು ತಿರುಗಿಸಿ ಅಡುಗೆ ಕೋಣೆಯ ಕಡೆಗೆ ದೃಷ್ಟಿಯನ್ನು ಬೀರಿದೆನು ಅಲ್ಲಿಯೂ ಕಗ್ಗತ್ತಲೆ

ಹೋದಳೆಲ್ಲಿಗೆ ಕಮಲೆ? ಎಂದು ಆಲೋಚಿಸಿದೆ ಕಮಲೇ ಕಮಲೆ ಕಮಲೆ ನಿಶ್ಶಬ್ದ ನೀರವ ನಿರುತ್ತರ ಮೌನ ಒಂದ ಘಂಟೆಯ ಸಮಯದಷ್ಟು ದಾಟಿತು ಹೇಳಿಕೊಳ್ಳದು ನಾ ಕದಲದೆ ಕೈಚಾಚಿದೆನು ಮೇಜಿನ ಮೇಲಿರುವ ಕೋಲಿಂಗೆಟಿಲ್ಲಿನ ಗುಪ್ಪೆಯು ಕೈಗೆ ತಾಗಿತ ಅದನ್ನು ಬೆರಳಿಂದ ಒತ್ತಿದೆನ ಕೂಡಲೇ ಕಮಲೆ ಕೈ ಲ್ಲಿರ ಹರಿಕೇನ್ ಲಾಂದವು ಬೆಳಕ ಕೋಣೆಯೊಳಗೆ ಪಸರಿಸುವಂತೆ ಮಾಡಿತು ಬುರುಡೆಂ ಒತ್ತರಕಿಯಾ ಸಮಾರಂಭವು ನನ್ನಾಕೆಯಿಂದ ನೆರವೇರಿತು ಅದರ ದಫನ್ ಕೆಲಸಕ್ಕೆ ನಾನು ಹೋಗಿ ಮರಳಿ ಬರುವಾಗ ಆ ನೆ ಸಾಸಿಯೂ ಆಗಿತ್ತು ಅದರ ದುಃಖ ಸೂಚನೆಗೋ ಎಂಬಂತೆ ಮಣ್ಣಿನ ಹೂಜಿಯೊಂದರಲ್ಲಿ ನೀರು ಟ್ಟು ಅದರ ಕೆಳಗಡೆ ಬೆಡ್‌ಶೀಟಿನ ಒಂದು ವಿಭಾಗ ಮಿಣಿಮಿಣಿ ಮಂದಪ್ರಕಾಶನ್ನು ಬೀರುತ್ತಿತ್ತು ನನ್ನ ಕಮಲೆಯು ನುಸಿ ಪರದೆಯೊಳಗೆ ಸುಖನಿದ್ರಾಪರವಶಳಾಗಿದ್ದಳು ಡಾಕ್ಟರರಿಂದ ಕಾಲಿನ ಬ್ಯಾಂಡೇಜು ಕೆಲಸವೂ ಸಾಂಗವಾಗಿ ನಡೆದಿತ್ತೆಂಬ ಸಂಗತಿಯು ಕಾಲನ್ನು ನೋಡಿ ಮನಗಂಡೆನು ನಮ್ಮ ಕಾಂತುವಾದರೂ ನಮಗೆ ವಿಧೇಯನಾಗಿಯೇ ಇದ್ದಾನೆ ಆದರೆ ಕಮಲೆಯು ಮಾತ ಎಷ್ಟು ಹೇಳಿದರೂ ಕೇಳುವುದಿಲ್ಲವಲ್ಲವೇ ಎಂದಳ ರಾಧಮ್ಮ ತನ್ನ ಪತಿಯೊಡನೆ

ಕಾಲಚಕ್ರವೇ ಆ ರೀತಿ ತಿರುಗಿದೆ ನಮ್ಮ ಈ ಮಂಗಳೂರಿನಲ್ಲಿ ಒಮ್ಮೆ ತಿರುಗಾಡಲು ಹೋದರೆ ಮನಸ್ಸೇ ಚಂಚಲಿತವಾಗುವುದು ಈಗಿನ ಈ ವೈಯಾರ, ಆ ಫ್ಯಾಶನು ಆ ನೋಟ, ಆ ಬೆಡಗು ಅಲ್ಲದೆ ಇತ್ತೀಚೆಗೆ ಹುಟ್ಟಿದ ನೆಕ್ಕಿನ ಕುಪ್ಪುಸಗಳು ಎಷ್ಟೊಂದು ಮನಾಕರ್ಷಣೀಯವಾಗಿರುತ್ತದೆಂದು ಹೆಂಗುಸಾದ ನೀವು ತಿಳಿಯುವ ಒಗೆ ಹೇಗೆ? ಗಂಡುಗುಗಳಾದ ನಮಗೇ ಅಲ್ಲದೆ ಇನ್ನಾರಿಗೂ ಅದರ ಸೊಗು ಅರಿಯದು ಅಲ್ಲದೆ ಈಗಿನ ಯುವತಿಯರು ಕೈಯಲ್ಲಿ ಚೀಟುಗಳನ್ನು ಹಿಡಿದುಕೊಂಡು ಹೋಗುವಾಗ ಈ ನೆಕ್ಕಿನ ಕುಪ್ಪಸಗಳ ದೆಸೆಯಿಂದಾಗಿ ಸೌಂದರ್ಯದ ಅಂದವು ಸೀರೂರುವಂತಾಗಬೇಕೆಂದ ಅದಷ್ಟು ಅಂದವಾಗಿ ತೋರುವ ಆ ಎದೆಯ ಜಗತ್ತನ್ನು ಪರೀಕ್ಷಿಸಲು ಮುಂದೆ ಚಾಚಿಕೊಂಡು ಜಗತ್ತಿನ ಚಿತ್ರಮಯ ಸ್ವಾರಸ್ಯವನ್ನು ತಾವೂ ನೋಡಿಕೊಂಡು ಬೆರಗಾಗಿರುವೆನು ಎಂದು ತಲೆ ತೂಗುತ್ತಾ ಇರುವ ಸೃಷ್ಟಿ ಸೊಬಗನ್ನು ನೋಡಿ ಪರೀಕ್ಷಿಸಿದ ಯಾವ ತರುಣನಾದರೂ ನಮ್ಮ ಕಾಂತುವಿಗಿಂತ ಹೆಚ್ಚಿನ ಅನಾಹುತವನ್ನು ಮಾಡದಿರರು ಎಂದು ಉತ್ತರ ಕೊಟ್ಟರು ನಮ್ಮ ಕಾಂತುವಿನ ತೀರ್ಥರೂಪರಾದ ಕೃಷ್ಣರಾಯರು ಪತಿವ್ರತಾ ಶಿರೋಮಣಿಯಾದ ಪತ್ನಿ ರಾಧಮ್ಮನೊಡನೆ

45 ವರ್ಷ ಪ್ರಾಯವಾಯಿತು ನಿಮಗೆ ಇನ್ನೂ ಹುಚ್ಚು ಹೋಗಲಿಲ್ಲ ಹುಚ್ಚುಚ್ಚು ಮಾತುಗಳನ್ನಾಡುತ್ತಿರುವಿರಿ ಅತ್ತೆಯೆಂದರೆ ಕತ್ತೆಯೇ ಅತ್ತೆ ಇರುವರೇ? ಹುಡುಗಿಗೆ' ಎಂದು ನಿಶ್ಚಯ ತಾಂಬೂಲಕ್ಕೆ ಮೊದಲೇ ಕೇಳುವದು ರೂಢಿ ಆ ಅತ್ತೆಯ ಪ್ರಯಾಸ ? ನನ್ನದು ನೋಡಿ ನನ್ನ ಇಂದಿನ ಭಾಗ್ಯದ ಮಾರ್ಪಾಟದ ಅವಸ್ಥೆಯನ್ನು ನೋಡಿ ಕಟ್ಟಬೇಕು ಬೆಲೆ ಆ ಅತ್ತಿಗೆ ಅಗ್ಗೆ ಅತ್ತೆ ಇರುವರೆಂದೊಡನೆ ಅವರ ಪರಿವಾರದವರಿಗೆ ಆಗುವ ಆನಂದ ಈಗ ಅದೇ ಪರಿಹಾರವೇ, ಅತ್ತೆಯು, ಮಹಾ ಕಾಳಿ ಎನ್ನುವ ಪರಿಹಾಸ್ಯ ಅವಳಿರ ಪ ತನಕ ನಮ್ಮ ಹುಡುಗಿಗೆ ಸುಖ ದೊರೆಯದೆಂದು ಹೇಳುವರು ಎಂದು ಕೊಂಡಳು ರಾಧಮ್ಮ ಹೀಗೆ ಹೇಳುತ್ತಿರುವಾಗ್ಗೆ ರಾಧಮ್ಮನ ಎರಡು ಕಣ್ಣುಗಳಿಂದ ಎರಡು ಹನಿ ಅಶ್ರುವು ಉದುರಿತು ಉದುರದೆ ನಿಂತ ಕಣ್ಣೀರು ಕಣ್ಣು ಗುಳಿಗಳಲ್ಲಿ ಹಾಗೇ ನಿಂತದ್ದು ರಾಧಮ್ಮನಿಗೆ ಜಗತ್ತೆ ಕಿರಿಕಿರಿಯಾಗಿ ತೋರುತ್ತಿತ್ತು

ಕೃಷ್ಣರಾಯರಿಗೆ ಒಮ್ಮೆ ರಾಧಾಕೃಷ್ಣನ ನೆನಪಾಯಿತ ಕೃಷ್ಣರಾಯರೇ ಸ್ವತ ಅಂಗವಸ್ತ್ರದಿಂದ ರಾಧಮ್ಮನ ಕಣ್ಣುಗಳನ್ನು ಒರಸಲು ಹೋದರ

ಹೋಗಿ ಆಚೆ ನೀವು ಒರಸ ಬೇಡ ಎಂದ ಸೀರೆಯ ಸೆರಗಿನಿಂದ ಕಣ್ಣುಗಳನ್ನು ಒರಸಿಕೊಂಡು ಪುನಃ ಜಗತ್ತನ್ನು ಶುಭವಾಗಿ ನೋಡತೊಡಗಿದಳು ರಾಧಮ್ಮ! ಜಗತ್ತಕ್ಕತ್ತಿದ್ದ ಜಗತ್ತು ಈಗ ನಿನಗೆ ಶುಭವಾಗಿ ತೋರುತ್ತದಲ್ಲವೇ ಎಂದರ ಕೃಷ್ಣರಾಯರ

ಹಾಗ ದರೆ? ಎಂದ ಪ್ರಶ್ನಿಸಿದಳ ರಾಧಮ್ಮ

ಪತಿವ್ರತಾ ಶಿರೋಮಣಿಯಾದ ನೀನೇ ನನ್ನನ್ನು ತುಚ್ಛೀಕರಿಸಿದೆ ನಾನು ನಿನ್ನ ನೇತ್ರಗಳನ್ನು ಒರಸಲು ಬಂದಾಗ ನನ್ನನ್ನು ನೀನು ತುಚ್ಛೀಕರಿಸಿದ್ದಲ್ಲವೆಂದರೆ, ಹೋಗಿರಿ ಎಂದು ಉಸುರುತ್ತಿದ್ದೆಯಾ? ಮಾಡಿದ್ದುಣ್ಣೊ ಮಹಾರಾಯಾ ಅಷ್ಟೆ ಎಂದರು ಕೃಷ್ಣರಾಯರು

ಹನ್ನೊಂದುವರೆ ಘಂಟೆಯಾಗಿರಬಹುದು. ನಾನು ಮನೆಗೆ ಬರುವಾಗ ಬಂದವನೇ ನನ್ನ ಕೋಣೆಯೊಳಗೆ ಹೋಗಿ ಕೋಟು ಷರಾಯಿಗಳನ್ನು ತೆಗೆದು ಮಡಗಿದೆನ ಅಷ್ಟರೊಳಗೆ ಕಮಲೆಯು ಒರಸುವ ಎರಡು ಕರವಸ್ತ್ರಗಳನ್ನೂ ಬೇರೊಂದು ಕಾಚಾವನ್ನೂ ಎಡಗೈಯ ಮುಂಗೈ ತೋಳುಗಳ ಮೇಲಿಟ್ಟುಕೊಂಡು ಸರಸರನೆ ಒಳಗೆ ಬಂದವಳೇ ಬಚ್ಚಲು ಮನೆಗೆ ಬರಲಾಗಿದೇ ಎಂದು ನನ್ನನ್ನು ಕರೆದೊಯ್ದಳು ಸ್ನಾನ ಮುಗಿಯುವ ವರೆಗೂ ಕಮಲೆಯು ಬಚ್ಚಲು ಮನೆಯ ಬಾಗಿಲನ್ನು ಓರೆ ಮಾಡಿ ಒಳಗೇ ನಿಂತಿದ್ದಳು. ಅವಳುಟ್ಟ ತೆಳ್ಳಗಿನ ಪತ್ತಲ್ ಸೀರೆಯ ನೀಲ ಬಣ್ಣದ ಹೊಳಪಿನಿಂದ ಅವಳ ಆ ಕುಂಕುಮದ ಅಕ್ಷತೆಯಂತಿದ್ದ ತಿಲಕವು ಅವಳ ವದನದ ಸೊಬಗನ್ನು ಹೊರಸೂಸುತ್ತಲಿತ್ತು ಇನ್ನೂ ಬಿಡಿಯಾಗಿ ಅದನ್ನು ಕಂಡು ಆನಂದಿತನಾಗುತ್ತಲಿದ್ದೆ ಬಾಗಿಲು ಅರ್ಧಕ್ಕರ್ಧ ಓರೆಯಾಗಿ ಹೊರಗಿನ ಸೂರ್ಯ ರಶ್ಮಿಯು ಆ ತೆಳ್ಳಗಿನ ಸೀರೆಯೊಳಗಿಂದ ನೇರಾಗಿ ನೋಡಸಿಗುವ ನೋಟವೊಂದರಿಂದ ಮನಸ್ಸು ಚಂಚಲಿತವಾಯಿತು. ಹಾಗಾಗುವುದು ಸ್ವಭಾವ ಸಿದ್ಧವಷ್ಟೆ

ಅಷ್ಟರೊಳಗೆ ತಾಯಿಯು ಅಲ್ಲಿಗೆ ಬಂದು ಬಿಟ್ಟಳು ಕಮಲೆಯನ್ನು ಹೊರಗೆ ಕರೆದರು. ಹಲ್ಲು ಕಚ್ಚಿದರು ಕಮಲೆಯು ಹೊರಗೆ ಹೋದಳು ಕಮಲೆಯ ಕೈಯನ್ನು ಹಿಡಿದು ಅಡುಗೆ ಕೋಣೆಯೊಳಗೆ ಹೋದರು ಅವರು. ಸುಶಿಕ್ಷಿತಳಾದ ಕಮಲೆಯು ಅತ್ತೆಗೆ ವಿರೋಧವಾಗಿ ವರ್ತಿಸುತ್ತಿದ್ದರೂ ನಮ್ಮ ತಾಯಿ ಎದುರು ಪ್ರತ್ಯುತ್ತರ ಕೊಡುವ ರೂಢಿ ಅವಳಿಗಿರಲಿಲ್ಲ. ನಾನು ಬೇಗಬೇಗನೆ ಸ್ನಾನ ತೀರಿಸಿ ಅಡುಗೆ ಕೋಣೆಯ ಹಿಂದಿನ ಅಂಗಣದಲ್ಲಿ ಮೈ ಒರಸುತ್ತಾ ನಿಂತಿದ್ದೆನು ನಮ್ಮ ತಾಯಿಯವರು ನನ್ನ ಕಮಲೆಗೆ ಕಂಡಾಬಟ್ಟೆ ಮಾತನಾಡುವುದನ್ನು ಮೌನದಿಂದ ಕೇಳಿದೆನು

ನಿಮಗೆ ಬುದ್ಧಿ ಇಲ್ಲ ಪ್ರಾಯದ ಹುಡುಗಿಯರು ನೀವು ಎಷ್ಟು ಸಲ ಹೇಳಿದರೂ ನಿಮಗಿಲ್ಲ, ಸೂರ್ಯೋದಯಕ್ಕೆ ಮುಂಚಿತವಾಗಿ ಹಾಸಿಗೆಯನ್ನು ಬಿಟ್ಟುಬರುವುದಕ್ಕೂ ಸಂಕಟ ನಿಮಗೆ ನಿಮಗೆ ಮೈದು ಬೆಂಡಾಗಿರಿಸದಿದ್ದರೆ ನಿಮ್ಮ ವೇಳೆ ಹೋಯದು ಕಾಂತುವು ಸ್ನಾನ ಮಾಡುವಾಗ ನಿನಗೇನು ಕೆಲಸ ಅಲ್ಲಿ ನೀನೇನಾದರೂ ನೀರು ಹೊಯ್ಯಬೇಕೇ ಅತನ ಸ್ನಾನ ಮಾಡಲು ಅತನಿಗೆ ಗೊತ್ತಿಲ್ಲವೇ? ನೀನಿನ್ನು ಹಗಲು ಹೊತ್ತು ಗಂಡನೊಡನೆ ಮಾತನಾಡಕೂಡದು ಎಂದರು ನಮ್ಮ ತಾಯಿ

ಕಮಲೆಗೆ ಎಲ್ಲಿಂದಿಲ್ಲದ ಸಿಟ್ಟು ಬಂತು ನನಗೂ ಅದೇ ಬೇಕಾಗಿತ್ತು ಅವಳೆಂದಳು ಗಂಡನೊಡನೆ ಮಾತನಾಡದೆ ಬೇರೆಯವರೊಡನೆ ಮಾತನಾಡಬೇಕೇ? ಎಂದು ನಮ್ಮ ತಾಯಿಗೆ ಹಿಂದು ಮುಂದಿಲ್ಲ ಏರಿಂ ಕಮಲೆಯು ಅಲ್ಲಿರಲಿಲ್ಲ ನಾನು ನನ್ನ ಕೋಣೆಗೆ ಹೋಗುವಾಗ ಕಮಲೆಯು ಮಂಚದ ಬಳಿ ನಿಂತಿದ್ದಳ ಅತ್ತೆಯ ಕಾಟದಿಂದ ತಪ್ಪಿಸಿಕೊಳ್ಳುವ ದಕ್ಕೆ ಆಗಳ ಹಾಕಿಕೊಂಡಳು ನನ್ನ ಕಮಲೆ

ಊಟಕ್ಕಾಗಿ ಹೊರಗೆ ಬರುವಾಗ ನನ್ನ ತಲೆಯ ಕ್ರೋಪು ಬ್ರಿಲ್ಲಿಯಂಟಾಯ್ನಿನಿಂದ ಬಾಚಿತ ನಾನು ಪ ಚೆಯನ್ನುಟ್ಟುಕೊಂಡು ಹೊರಗೆ ಬರುವುದನ್ನು ತಾಯಿಯವರು ದೂರದಿಂದ ನೋಡಿದರು ಅಡುಗೆ ಕೋಣೆಯೊಳಗೆ ಹೋದೆನು ಅಲ್ಲಿ ಯಾರೂ ಇರಲಿಲ್ಲ ತಾಯಿಯನ್ನು ಕೂಗಿದೆನು ತಾಯಿಗೆ ಸಿಕ್ಕವು ನೆತ್ತಿಗೆ ಏರಿತ್ತು ಅಷ್ಟಕ್ಕೆ ತಂದೆಯವರ ಸವಾರಿಯೂ ಅಲ್ಲಿಗೆ ಚಿತ್ತೈಸಿತು

ಏನಿದ ಕಾಂತ ಎಂದರು

ಅತ್ತೆ ಸೊಸೆಯರ ಕಾಳಗ ಎಂದೆನು ನಾನು

ಅತ್ತೆ ಸೊಸೆಯರ ಕಾಟವಲ್ಲಿ ಇದ ರತಿ ಪತ್ನಿಯರ ಕಾಳಗ ಎಂದರ ನನ್ನ ತಂದೆಯವರು ಭಾವೀ ಜನಾಂಗವು ಅಭಿಜಿನ್ಯಾರ್ತದ ದೆಸೆಯಿಂದ ಹಾಳಾಗಲಿಕ್ಕಿದೆ ಎಂದ ತಿಳಿಸಿದರು ಅವರು ನನಗೆ ಊಟಕ್ಕೆ ಮಾತ ಸೊನ್ನೆ ಬಿತ್ತು ಭವಿಷ್ಯವಾಣಿಯು ಪರಿಸಮಾಪ್ತಿಯ ಶಿಖರವನ್ನು ನೋಡುವದೆಂತು? ಅಂದಿನಿಂದ ಕಮಲೆಯು ಹೊರಗಾಗಿಲ್ಲ

ಜನೆ ಪುಟದಿಂದ ಮುಂದುವರಿಸಿದುದು

ಜಪಾನೀಯ ಸಾರ್ವಭೌಮರು

ಜರಂತೆ ತಮ್ಮ ವಿಲಾಸ ಭವನಗಳಲ್ಲಿ ವೇಶ್ಯಾಸ್ತ್ರೀಯರನ್ನು ಬರಗೊಳಿಸದಿದ್ದುದೇ ಅವರ ಕರ್ತವ್ಯ ಪರಾನ್ನುಖತೆಯ ಶಿಷ್ಟಾಚಾರದಿಂದ ಉಂಟಾದ ಅವರ ಪ್ರಜಾವಾತ್ಸಲ್ಯದ ಪ್ರೇಮಪರಿಪೂರ್ಣತೆಯ ಆಶಾ ಜನಕ ಯುಕ್ತವಾದ ರಾಜ್ಯಪ್ರೇಮದ ಮಹತ್ವಾಕಾಂಕ್ಷೆಯೇ ಬಲವತ್ತರವಾದ ಕಾರಣವಾಗಿರುತ್ತದೆಂದು ಭಾವಿಸಬಹುದೇ ಸ್ವರ್ಗದಿಂದ ಸೀಧಾ ಇಳಿದು ಬಂದ ಸ್ವರ್ಗಪುತ್ರರೆಂದು ಗಣಿಸಲ್ಪಟ್ಟ ಇವರು ಇಂದು ರಣಾಗ್ರ ಮುಕ್ತದಿಂದ ಮುಂದುವರಿಯುತ್ತಿರುವ ತಮ್ಮ ಸೇನಾಬಲವನ್ನು ಪರೀಕ್ಷಿಸುತ್ತಿರುವ ಕಾರಣವು ಸುಧಾರಿಕತ್ವದ ಪರಿಣಾಮವಿದಲೇ?

(ಅಮೃತಬಜಾರ ಪತ್ರಿಕೆಯಿಂದ)

ಚೀನ-ಜಪಾನ ಯುದ್ಧದ ಗೂಢವೇನು

ಚೀನವನ್ನು ಜಪಾನು ನುಗ್ಗುತ್ತಿದೆ. ಉತ್ತರ ಚೀನದ ಬಹ್ವಂಶವೆಲ್ಲ ಅದರ ಅಂಕೆಗೆ ಒಳಪಟ್ಟಿದೆ. ನಾನ್‌ಕಿಂಗ ನಗರವು ಜಪಾನಿನ ಕೈವಶವಾಯಿತು. ಸಮಯವು ಅನುಕೂಲವಾದರೆ ಹಾಗೆ ಇಡೀ ಚೀನವನ್ನು ಸರ್ಪ ಕಪ್ಪೆಯನ್ನು ನುಂಗಿದಂತೆ ನುಂಗಿಬಿಡುವದು. ಪಶುಬಲದಿಂದಲೆ ತನ್ನ ಕಾರ್ಯಸಾಧಿಸುತ್ತದೆ. ಅನ್ಯಾಯ ಅತ್ಯಾಚಾರ, ಹಿಂಸೆಕಾರ್ಯಗಳನ್ನಾದರು ಲೆಕ್ಕಿಸುವುದಿಲ್ಲ. ಯಾವದಾದ್ದರೊಂದು ಉಪಾಯದಿಂದ ಚೀನದ ಮೇಲೆ ತನ್ನ ಅಧಿಪತ್ಯವಾಗಬೇಕೆಂಬುದೇ ಜಪಾನಿನ ಮಹತ್ವಾಕಾಂಕ್ಷೆ. ಇದರ ಗೂಢವೇನಿರಬಹುದು?

ಚೀನದ ಮೇಲಿನ ಜಪಾನಿನ ಆಕ್ರಮಣದಿಂದ ಪ್ರಪಂಚದ ಮೇಲೆ ಭಯಂಕರ ದುಷ್ಪರಿಣಾಮಗಳಾಗುವವು. ಪೌರ್ವಾತ್ಯ ಪಾಶ್ಚಾತ್ಯರ ಸಂಘರ್ಷಕ್ಕೆ ಇದೇ ಮೊದಲನೆ ಹೆಜ್ಜೆಯಾಗಿದೆ. ಅಂತಹ ಸಂಘರ್ಷವು ಉಂಟಾದುದಾದರೆ ಒಂದು ದೊಡ್ಡ ಪ್ರಳಯವೇ ಆದಂತಾಗಬಹುದು. ಅರ್ವಾಚೀನ ನಾಗರಿಕತೆಯು ನಾಮಾವಶೇಷವಾಗಬಹುದು ಎಂದು ಶಂಕಿಸುವವರು ಬಹಳ ಮಂದಿ ಇದ್ದಾರೆ.

ರಾಜ್ಯವಿಸ್ತಾರದ ಯಾವ ಇಚ್ಛೆಯೂ ತನಗಿಲ್ಲ. ಚೀನದಲ್ಲಿ ಪಾಶ್ಚಾತ್ಯರಿಗಿರುವ ಪ್ರಭಾವವನ್ನು ಕಡಿಮೆಮಾಡಿ, ನ್ಯಾಯವಾಗಿ ಅಲ್ಲಿರಬೇಕಾದ ತನ್ನ ಪ್ರಭಾವವನ್ನು ಬೇರೂರಿಗೊಳ್ಳಿಸಿ, ಪಾಶ್ಚಾತ್ಯರ ದವಡೆಯಿಂದ ಚೀನವನ್ನು ಬದುಕಿಸಬೇಕು—ಎಂಬುದಷ್ಟೆ ತನ್ನ ಆಶೆಯಾಗಿರುವದೆಂದು ಜಪಾನು ಹೇಳುತ್ತದೆ. ಆದರೆ ಜಪಾನಿನ ಮಾತಿಗೂ ಕೃತಿಗೂ ಸಂಬಂಧವಿಲ್ಲ. ಅದು ಗೋಮುಖವ್ಯಾಘ್ರವಾಗಿದೆ. ಅದರ ಚಲನವಲನಗಳನ್ನು ನೋಡಿದರೆ ಜಪಾನು ಪಾಶ್ಚಾತ್ಯರನ್ನು ಸಂಪೂರ್ಣವಾಗಿ ಚೀನದಿಂದ ಓಡಿಸಿ ಬಿಡಬೇಕು. ಅಲ್ಲಿ ತನ್ನದೇ ಅಧಿಕಾರವಾಗಬೇಕು—ಎಂಬ ಸಂಕಲ್ಪ ಮಾಡಿದಂತೆ ತೋರುತ್ತದೆ.

ಅಷ್ಟೇ ಅಲ್ಲ, ಇನ್ನೊಂದು ಸಂದೇಹವೂ ಇದೆ. ಏಸ್ಯವು ಏಸ್ಯನರಿಗಾಗಿ ಎಂದು ಅದು ಭಾವಿಸಿದಂತೆ ಇದೆ. ಏಸ್ಯದಲ್ಲಿ ಯುರೋಪ ಅಮೇರಿಕದವರಿಗೆ ಯಾವದೇ ತರದ ಹಕ್ಕು ಅಧಿಕಾರಗಳಿರಕೂಡದು. ಏಸ್ಯದಲ್ಲಿ ಮುಂದುವರಿದ ರಾಷ್ಟ್ರ ಜಪಾನ ಒಂದೇ. ಅದರ ಮುಂದಾಳುತನದಲ್ಲಿ ಏಸ್ಯನರಿಗಾಗಿ ಏಸ್ಯವು ಮುಂದುವರಿಯಬೇಕು ಎಂಬುದು ಜಪಾನಿನ ವಿಚಾರವಾಗಿರುವದು. ಆದ್ದರಿಂದ ಚೀನದ ಮೇಲೆ ಜಪಾನಿನ ಆಕ್ರಮಣ ಮತ್ತು ಸಫಲತೆ ಎಂದರೆ ಯುರೋಪು ಅಮೇರಿಕದವರಿಗೆ ಒಂದು ದೊಡ್ಡ ಗಂಡಾಂತರವೇ ಸರಿ.

ಚೀನವು ಬಹು ವಿಶಾಲವಾದ ಸಮೃದ್ಧ ದೇಶ. ಜನಸಂಖ್ಯೆ ನಾಲ್ವತ್ತು ಕೋಟಿಗೂ ಮೀರಿದೆ. ಆದರೆ ಪಾಶ್ಚಾತ್ಯ ನಾಗರಿಕತೆಯಲ್ಲಿ ಅವರು ಬಹಳ ಹಿಂದುಳಿದವರು. ಅವರು ಪಾಶ್ಚಾತ್ಯರನ್ನು ಅನುಕರಿಸಿ ಅವರಂತೆ ತಮ್ಮ ಜೀವನವನ್ನು ತಿದ್ದಿಕೊಳ್ಳುವರಾದರೆ, ಚೀನವು ಪಾಶ್ಚಾತ್ಯರಿಗೆ ಬಹು ದೊಡ್ಡ ವ್ಯಾಪಾರದ ಕೇಂದ್ರವಾಗುವುದು. ಆದರೆ ಪಾಶ್ಚಾತ್ಯರಷ್ಟೇ ಪ್ರವೀಣರಾದ ಜಪಾನಿಯರು ಅಲ್ಲಿ ನುಸುಳಿಬಿಟ್ಟರೆಂದರೆ ಪಾಶ್ಚಾತ್ಯರ ಬಾಯಿಗೆ ಮಣ್ಣಾಗುವದು. ಮೂಸೆ ಸೇರಿಸಲಿಕ್ಕೆ ಎಡೆ ಸಿಕ್ಕಿದರೆ ಎಲ್ಲವನ್ನು ನುಂಗಿಬಿಡುವಷ್ಟು ಜಪಾನಿಯರು ಸಮರ್ಥರೆಂಬುದು ಕೋರಿಯ ಮಂಚೂರಿಯಗಳ ಅವರ ನೀತಿಯಿಂದ ಸಿದ್ಧವಾಗಿದೆ.

ಪಾಶ್ಚಾತ್ಯರ ಒಟ್ಟು ವ್ಯಾಪಾರದ ತುಲನೆಯಲ್ಲಿ ಚೀನದೊಡನೆ ಅವರ ವ್ಯಾಪಾರವು ಅತ್ಯಲ್ಪವಾಗಿ ಕಾಣುವುದಾದರೂ ಅದು ಮಹತ್ವದ್ದಾಗಿದೆ. ಆ ವ್ಯಾಪಾರವು ಬೆಳೆಯಲಿಕ್ಕೆ ತುಂಬಾ ಅವಕಾಶವಿದೆ. ಮುನ್ನೂರು ಮಿಲಿಯ ಪವನುಗಳಷ್ಟು ಭಂಡವಾಳವನ್ನು ಪಾಶ್ಚಾತ್ಯರು ಚೀನದಲ್ಲಿ ವಿನಿಯೋಗಿಸಿದ್ದಾರೆ. ಶಾಂಘಾಯ ಒಂದೇ ಪಟ್ಟಣದಲ್ಲಿ ಇದರ ಅರ್ಧದಷ್ಟರ ವಿನಿಯೋಗವಾಗಿದೆ. ಜಪಾನ ಅಲ್ಲಿಗೆ ಬಂದಾಗ ಇಷ್ಟು ಹಣ ಮುಳುಗಿ ಹೋದಂತೆಯೆ! ಹಣ ಹೋಗುವದು ಮಾತ್ರವಲ್ಲ. ಅದರೊಂದಿಗೆ ಪಾಶ್ಚಾತ್ಯರ ಮರ್ಯಾದೆಯೂ ಹೋಗುವದು.

ಪರಿಸ್ಥಿತಿಯು ತನಗೆ ಪ್ರತಿಕೂಲವಾದಾಗಲೆಲ್ಲ ಜಪಾನು ಪಾಶ್ಚಾತ್ಯರ ಮೈತ್ರಿಯನ್ನು ಸಂಪಾದಿಸಿಕೊಂಡು ಸಮಯ ಕಾಯುತ್ತ ಇರುತ್ತದೆ. ಪರಿಸ್ಥಿತಿಯು ಅನುಕೂಲವಾದಾಗ ಗಳಿಸಿದ ಮೈತ್ರಿಯ ಮೇಲೆ ತುಳಸೀದಳ ಬಿಟ್ಟು ತನ್ನ ಬೇಳೆ ಬೇಯಿಸುತ್ತದೆ, ಸ್ವಾರ್ಥ ಸಾಧಿಸುತ್ತದೆ. ಇದರ ಅನುಭವ ಪಾಶ್ಚಾತ್ಯರಿಗೆ ಇದಕ್ಕೆ ಮೊದಲು ಹಲವು ಸಲ ಆಗಿದೆ. ಆದರೆ ಗೃಹಸ್ಥಿತಿಯು ಚೆನ್ನಾಗಿ ಇಲ್ಲದೆ ಇರುವದರಿಂದ ಅವರು ಜಪಾನಿನ ಈ ಧೂರ್ತತನವನ್ನು ನೋಡಿಯೂ ನೋಡದವರಂತೆ ಇರಬೇಕಾಗಿದೆ. ಪೆಕಿಂಗಿನಲ್ಲಿ ಅದಕ್ಕೆ ಇಲ್ಲದ ಅಧಿಕಾರಗಳು ಪ್ರಾಪ್ತವಾದವು. ಮಂಚೂರಿಯನ್ನು ಚೀನದಿಂದ ಬೇರೆ ಮಾಡಿ ಅಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿತು. ಮತ್ತೆ ಈಗ ಉತ್ತರ ಚೀನವನ್ನೆಲ್ಲ ಆಕ್ರಮಿಸುತ್ತ ಬಂದಿದೆ. ಪಾಪದ ಪಾಶ್ಚಾತ್ಯರು ಇದನ್ನೆಲ್ಲ ಪಿಳಿಪಿಳಿಸಿ ನೋಡುತ್ತ ನಿಡು ಸುಯ್ಯು ಬಿಡುತ್ತಾರೆ.

ಆದ್ದರಿಂದ ಒಂದಲ್ಲ ಒಂದು ದಿನ ಜಪಾನಿಗೂ ಯುರೋಪು ಅಮೇರಿಕದವರಿಗೂ ದೊಡ್ಡ ಭಯಂಕರ ಯುದ್ಧ ಒಂದು ಆಗಿಯೇ ಆಗುವದು. ಯುರೋಪಿನವರು ತಮ್ಮ ಅಂತಃಕಲಹಗಳನ್ನು ಪರಿಹರಿಸಿ, ಅಥವಾ ಸ್ವಲ್ಪ ಕಾಲದ ತನಕ ಬದಿಗಿರಿಸುವದೊಂದೇ ಬಾಕಿ ಇದೆ. ಆ ಮೇಲೆ ಆಗುವದು ಇದೇ—ಜಪಾನ ಮುರಿದೋಡಾಯಿತು!

ಆದರೆ ಪರಿಸ್ಥಿತಿ ಹೀಗೆ ನಿಲ್ಲುವ ಸಂಭವ ತೋರುವದಿಲ್ಲ. ಆದರೂ ಯುರೋಪಿನವರು ತಮ್ಮ ತಮ್ಮೊಳಗಿನ ಭೇದಭಾವಗಳನ್ನು ಮರೆತು ಒಂದಾಗಿರಲಾರರು. ಅಮೇರಿಕವು ತನಗೆ ಯಾರ ಗೊಡವೆ ಬೇಡವೆಂದು ಸುಮ್ಮಗಿದ್ದೀತು. ಅಂತಹ ಸಂದರ್ಭದಲ್ಲಿ ವಿಜಯಮಾಲೆಯು ಜಪಾನಿನ ಕೊರಳಿಗೆ ಬೀಳುವದು ನಿಶ್ಚಯ; ಜಪಾನಿನ ಮುಂದಾಳುತನದಲ್ಲಿ ಏಸ್ಯವು ಏಸ್ಯನರಿಗಾಗಿ ಉಳಿಯುವದು ಖಂಡಿತ.

ದೇಹವನ್ನು ಗಟ್ಟಿಯಾಗಿಯೂ ಮನಸ್ಸನ್ನು ನಿಶ್ಚಿಂತೆಯನ್ನಾಗಿಯೂ ಇಟ್ಟುಕೊಳ್ಳಿ



ಭಾರತೀಯ ಚಾ ಪಾನಮಾಡಿ

ನಮ್ಮಲ್ಲಿ ಒಬ್ಬೊಬ್ಬರಿಗೆ ಒಂದೊಂದು ಶ್ರೇಷ್ಠವಾದ ಧರ್ಮಗಳಲ್ಲಿ ಭಕ್ತಿ ಇದೆ. ಯಾಕೆಂದರೆ, ಇದೇ ನಮ್ಮನ್ನು ಕರ್ತವ್ಯಪರರನ್ನಾಗಿಯೂ ಧೈರ್ಯಶಾಲಿಗಳನ್ನಾಗಿಯೂ ಮಾಡುವುದಕ್ಕೆ ಸಹಾಯಕವಾಗಿರುವುದು. ಚಂಚಲವಾದ ಶರೀರದಲ್ಲಿ ನಿಶ್ಚಿಂತವಾದ ಮನಸ್ಸು ಎಂದೂ ಇರಲಾರದು.

ಮನೋಸಹಾಯದಿಂದ ಕೆಲಸಗಾರರಿಗೂ, ದೇಹದಿಂದ ಕೆಲಸಗಾರರಿಗೂ ಆರೋಗ್ಯಕ್ರಮವಾಗಿ ಚಾ ಪಾನವು ಆಯಾಸವನ್ನು ಹೋಗಲಾಡಿಸಿ ಪುನರ್‌ಶಕ್ತಿಯನ್ನು ಕೊಡುವುದಕ್ಕೆ ಒಂದು ಉತ್ಕೃಷ್ಟವಾದ ದಾರಿ.

ಬೇಗನೆ ಬೇಜಾರನ್ನೂ ಆಯಾಸವನ್ನೂ ಹೋಗಲಾಡಿಸಿ ಮನಶ್ಶಾಂತಿಯನ್ನು ಕೊಡುವುದು.

ಚಾ ತಯಾರಿಸುವ ವಿಧಾನ

ನಿರ್ಮಲವಾದ ನೀರನ್ನು ಕಾಸಿ ಕಡಿಯಾದ ಒಂದು ಪಾತ್ರೆಯನ್ನು ಬೆಚ್ಚಗೆ ಮಾಡಿ ಅದರಲ್ಲಿ ಕೆಲಸ ಒಂದು ಚಮಚ ಕೊಡಿಗೊಂದು ಚಮಚಾ ಉತ್ತಮವಾದ ಭಾರತೀಯ ಟೀ ಪುಡಿಯನ್ನು ಹಾಕಿ ನೀರು ಚೆನ್ನಾಗಿ ಕಾದಿದ ಮೇಲೆ ಅದರ ಮೇಲೆ ಸುರಿಯಿರಿ. ಐದು ನಿಮಿಷ ಆದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರೆಸಿ ಸೇವಿಸಿರಿ.

ಹಿಂದೂದೇಶದ ಆನಂದ, ಹೆಮ್ಮೆ—ಭಾರತೀಯ ಚಾ

I K 42

ಶಾಂತಿಯುತ್ಸವದ ಅನಂತರ ಲೋಕದಲ್ಲಿ ಶಾಂತಿಯಾಯಿತೆ?

೧೯೧೪ರಿಂದ ೧೯೧೮ರ ತನಕ ಜರ್ಮನ ಯುದ್ಧ ಎನ್ನಿಸುವ ಪಂಚವಾರ್ಷಿಕ ಮಹಾ ಯುದ್ಧವು ನಡೆದ ಬಳಿಕ ಶಾಂತಿಸ್ಥಾಪನೆಯಾಯಿತು. ಅಂದಿನಿಂದ ಇಂದಿನ ವರೆಗೆ ಪ್ರತಿ ವರ್ಷ ಶಾಂತ್ಯುತ್ಸವವನ್ನು ಆಚರಿಸುತ್ತಿದ್ದೇವೆ. ನಾನಾ ಉಪಾಯಗಳಿಂದ ಶಾಂತಿಸ್ಥಾಪನೆಗಾಗಿ ಪ್ರಯತ್ನಿಸಿದ್ದೇವೆ, ಪ್ರಯತ್ನಿಸುತ್ತಿದ್ದೇವೆ ಆದರೆ ಲೋಕದಲ್ಲಿ ೧೯೧೮ರಿಂದ ನಿಜವಾಗಿಯೂ ಶಾಂತಸ್ಥಾಪನೆಯಾಗಿದೆಯೆ? ಅಥವಾ ಅಶಾಂತಿಯು ಹೆಚ್ಚೆಚ್ಚಾಗಿ ಹರಡುತ್ತಿದೆಯೆ? ಎಂದೂ ಬ್ಬರು ಕೇಳುತ್ತಿದ್ದಾರೆ. ಅವರ ಪ್ರಶ್ನೆಗೆ ಏನೆಂದು ಉತ್ತರಕೊಡಬೇಕೋ ಅದು ನಮಗೆ ಗೊತ್ತಾಗುವುದಿಲ್ಲ. ಶಾಂತ್ಯುತ್ಸವದ ಅನಂತರ ಪ್ರಪಂಚದ ನಾನಾ ಭಾಗಗಳಲ್ಲಿ ಈ ವರೆಗೆ ಒಟ್ಟು ೧೭ ಯುದ್ಧಗಳಾಗಿವೆ ೧೭ನೆ ಯುದ್ಧವು ಚೀನಾ ಜಪಾನುಗಳೊಳಗೆ ಆರಂಭವಾಗಿದೆ. ೧೬ನೇ ಯುದ್ಧವು ಸ್ಪೈನಿನಲ್ಲಿ ನಡೆಯುತ್ತಾ ಉಂಟು. ಉಳಿದ ಯುದ್ಧಗಳ ಕ್ರಮಗಳು ಹೀಗಿದೆ —(೧) ಗೇಲಿಸಿಯದಲ್ಲಿ ೧೯೧೮ರಿಂದ ೧೯೧೯ರ ವರೆಗೆ (೨) ಆಯರ್ಲೇಂದಿನಲ್ಲಿ ೧೯೧೯ರಿಂದ ೧೯೨೧ರ ವರೆಗೆ (೩) ರಶ್ಯದಲ್ಲಿ ೧೯೧೯ರಲ್ಲಿ (೪) ಮೊರೊಕ್ಕೊದಲ್ಲಿ ೧೯೧೯ರಿಂದ ೧೯೨೨ರ ವರೆಗೆ (೫) ಅರೇಬಿಯದಲ್ಲಿ ೧೯೧೯ರಿಂದ ೧೯೨೬ರ ವರೆಗೆ (೬) ಪೋಲೆಂಡಿನಲ್ಲಿ ೧೯೨೦ರಲ್ಲಿ (೭) ಚೀನದಲ್ಲಿ ೧೯೨೦—೨೬ರ ವರೆಗೆ (೮) ಪಶ್ಚಪಾನರದಲ್ಲಿ ೧೯೨೧ರಿಂದ ೧೯೨೨ರ ವರೆಗೆ (೯) ಸಿರಿಯದಲ್ಲಿ ೧೯೨೫ರಲ್ಲಿ (೧೦) ದಕ್ಷಿಣ ಅಮೇರಿಕದಲ್ಲಿ ೧೯೨೫ರಿಂದ ೧೯೩೫ರ ವರೆಗೆ (೧೧) ಚೀನದಲ್ಲಿ ೧೯೨೬ರಿಂದ ೧೯೨೮ರ ವರೆಗೆ (೧೨) ಮಂಚೂರಿಯದಲ್ಲಿ ೧೯೩೧ರಿಂದ ೧೯೩೨ರ ವರೆಗೆ (೧೩) ಚೀನದಲ್ಲಿ ೧೯೩೨ರಲ್ಲಿ (೧೪) ಅಬಿಸೀನಿಯದಲ್ಲಿ ೧೯೩೫ರಲ್ಲಿ (೧೫) ಅಬಿಸೀನಿಯದಲ್ಲಿ ೧೯೩೫—'೩೬ (೧೬) ಸ್ಪೈನಿನಲ್ಲಿ ೧೯೩೬ರಲ್ಲಿ ಆರಂಭವಾಗಿ ಈಗಲೂ ನಡೆಯುತ್ತಿದೆ (೧೭) ಚೀನದಲ್ಲಿ ಈ ವರ್ಷ ಆರಂಭವಾಗಿ ಈಗಲೂ ನಡೆಯುತ್ತಿದೆ ಈ ಭಯಂಕರ ಹೋರಾಟಗಳು ಶತ್ರುಮಿತ್ರ ಪಕ್ಷದವರೊಳಗೆ ಅಥವಾ ಅವರ ಸಹಾಯ ಒಲವುಗಳನ್ನು ಪಡೆದ ಆಯಾ ದೇಶಗಳ ಬೇರೆ ಬೇರೆ ಪಂಗಡಗಳೊಳಗೆ ಮತ್ತು ಸಾಮ್ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆ ಮತ್ತು ಸ್ವಾತಂತ್ರ್ಯಸಾಧನದ ದೈವೀಪ್ರೇರಣೆಯಿಂದ ಪ್ರಬಲ ಮತ್ತು ದುರ್ಬಲ ರಾಷ್ಟ್ರಗಳೊಳಗೆ ನಡೆದುವು. ಇವುಗಳಿಂದ ಅಪರಿಮಿತ ಧನಹಾನಿ ಉಂಟಾದುದಲ್ಲದೆ ಅಸಂಖ್ಯ ಜನರ ಪ್ರಾಣಹಾನಿಯೂ ಆಯಿತು. ಏಸ್ಕ್ರಮ್ಯಾನರದಲ್ಲಿ ನಡೆದ ಒಂದು ಯುದ್ಧದಿಂದ ೫೦೦೦೦,೦೦೦ ಜನಗಳ ನಷ್ಟವೂ ೧೯೩೨ರ ಚೀನದ ಯುದ್ಧದಿಂದ ಶಾಂಘಾಯಿ ಒಂದೇ ಒಂದು ಪಟ್ಟಣಕ್ಕೆ ೭೦,೦೦೦,೦೦೦ ಜನಗಳ ನಷ್ಟವೂ ಆಗಿದ್ದಿತು. ಜನರು ಬಲಿಯಾದುದಕ್ಕೆ ಲೆಕ್ಕವೇ ಇಲ್ಲ. ಹಾಗಾದರೆ, ಶಾಂತಿಯಾಯಿತೇ ಅಶಾಂತಿ ಹರಡಿತೆ? ನೀವೇ ಎಣಿಸಿ.

ಯುದ್ಧಕ್ಕೆ ಕಾರಣ—ಆಹಾರ ದೋಷ.

ನಾವು ತೆಗೆದು ಕೊಳ್ಳುವ ಆಹಾರವು ಶರೀರ ಪ್ರಕೃತಿಗೆ ಅನುಕೂಲವಾಗಿ ಇರುವದಿಲ್ಲವಾದರೆ ಯುದ್ಧವಾರಂಭವಾಗುವದೆಂಬ ವಿಚಿತ್ರ ಶೋಧವನ್ನು ಅಮೇರಿಕದ ಆಹಾರ ಪುರವಟಿ ಮಾಡುವ ಒಂದು ಕಂಪೆನಿಯ ಮಾಲಕನು ಮಾಡಿದ್ದಾನೆ. ಇದರಲ್ಲಿ ಅವನ ಸ್ವಾರ್ಥವು ಅಡಕವಾಗಿದ್ದರೂ ಇದ್ದಿರಬಹುದು. ಆದರೆ ಅವನು ಹೇಳುವ ಮಾತುಗಳನ್ನು ಅಲ್ಲವೆನ್ನಲಿಕ್ಕಾಗುವದಿಲ್ಲ.

ಪೌಷ್ಟಿಕವೂ ಹಿತಕರವೂ ಅಲ್ಲದ ಆಹಾರವನ್ನು ತೆಗೆದುಕೊಳ್ಳುವದರಿಂದ ನರನಾಡಿಗಳ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಇದರಿಂದ ಅವನಲ್ಲಿ ಶಾರೀರಿಕ ಮಾನಸಿಕ ಕೆಲವು ರೋಗಗಳು ಹುಟ್ಟುತ್ತವೆ. ಅದರ ಪರಿಣಾಮ— ಮನುಷ್ಯ ಮನುಷ್ಯರೊಳಗಿನ ಪ್ರೇಮ ಸಂಬಂಧವು ತೀರಾ ಕಡಿದು ಹೋಗಿ ದ್ವೇಷಾಸೂಯೆಗಳು ಹುಟ್ಟುತ್ತವೆ. ಪೌಷ್ಟಿಕವಾದ ಉತ್ತಮ ಆಹಾರವನ್ನು ಕ್ರಮತಪ್ಪದೆ ಉಂಡವನು ಯಾವಾಗಲಾದರೂ ತಾಳ್ಮೆ, ಶಾಂತಿಯನ್ನು ಕೆಡಿಸಿಕೊಂಡುದಿಲ್ಲ ಎಂದು ಆ ಶೋಧಕನು ಹೇಳುತಿದ್ದಾನೆ.

ಚೀನ—ಜಪಾನು ಯುದ್ಧ, ಸ್ಪೇಂಕೊ—ಸ್ಪೈನ ಯುದ್ಧಗಳಾಗುತ್ತಿರಲಿಕ್ಕೂ ಸಹ, ಆಯಾ ದೇಶೀಯರ ಆಹಾರದೊಳಗಿನ ಕೊರತೆಯೇ ಮುಖ್ಯ ಕಾರಣವೆಂದು ಅವನ ಹೇಳಿಕೆ.

ನಮ್ಮ ದೇಶದಲ್ಲಿಯೂ ಸರಕಾರ ಮತ್ತು ಜನತೆಯೊಳಗೆ ಆಗಾಗ ಸಂಘರ್ಷವಾಗ ತ್ತದೆ. ಸರಕಾರವು ಉತ್ತಮ ಅನ್ನಾಹಾರಗಳನ್ನು ಹಿಂದೀಯರಿಗೆ ಒದಗಿಸಿಕೊಟ್ಟರೆ ಈ ಸಂಘರ್ಷವು ನಿಲ್ಲಬಹುದೇನೂ?

ಚೀಟುಗಳ ಸಂಗ್ರಹಕ್ಕೆ ವಿಶೇಷ ಆತುರ

ಲಂಡನಿನಲ್ಲಿ ಪೆನ್ನತಾನೆ ಅಂಚೆ ಚೀಟುಗಳ ಒಂದು ದೊಡ್ಡ ಪ್ರದರ್ಶನವು ನಡೆಯಿತು. ಅದರಿಂದ ತಿಳಿದು ಬಂದ ಸಂಗತಿಗಳು ಇವು.

1840ನೆ ಇಸವಿಯಲ್ಲಿ ಮೊದಲು ಎಂಗ್ಲೆಂಡಿನಲ್ಲಿ ಅಂಚೆಚೀಟುಗಳ ಪ್ರಚಾರವಾಯಿತು. 1850ರಲ್ಲಿ ಚೀಟುಗಳನ್ನು ಹರಿದುಕೊಡುವ ಸುಲಭ ಅನುಕೂಲತೆ ದೊರೆಯಿತು. 1855ರಲ್ಲಿ ಚೀಟುಗಳ ಒಂದರಲ್ಲಿ ಬಣ್ಣಗಳ ಅಂಟು ಸವರತೊಡಗಿದರು.

ಕಳೆದ ಒಂದು ವರ್ಷದಲ್ಲಿಯೇ ಇಂಗ್ಲೆಂಡಿನಲ್ಲಿ 700 ಕೋಟಿ ಚೀಟುಗಳ ಮಾರಾಟವಾಯಿತು. ಇಡೀ ಸಾಮ್ರಾಜ್ಯದಲ್ಲಿ ಸಮ್ರಾಟರ ಸಿಂಹಾಸನಾರೋಹಣದ ಸ್ಮಾರಕವಾಗಿ 300 ಕೋಟಿ ಅಂಚೆ ಚೀಟುಗಳು ಅಚ್ಚಾಗಿದ್ದವು. ಸಾಮ್ರಾಜ್ಯಾಂತರ್ಗತ ಎಷ್ಟೋ ದೇಶಗಳಲ್ಲಿ 6ನೇ ಜಾರ್ಜರ ಅಂಚೆ ಚೀಟುಗಳನ್ನು ಇನ್ನು ಮುಂದಕ್ಕೆ ಪ್ರಚಾರಕ್ಕೆ ತರಬೇಕಾಗಿದೆ. ಅವು ಪ್ರಚಾರಕ್ಕೆ ಬಂದುವೆಂದರೆ ಸಾಮ್ರಾಜ್ಯದ ಅಂಚೆ ಚೀಟುಗಳ ಜಾತಿಯ ಸಂಖ್ಯೆ 700ನ್ನು ಕೂಡಿಸಿದಂತಾಗುತ್ತದೆ.

ಮೊದಲನೆ ಜಾರ್ಜರ ಲಂಡನಿನ ಒಬ್ಬ ವ್ಯಾಪಾರಿಯೇ 50000 ಪವನು ಬೆಲೆಯ 40 ಲಕ್ಷ ಕಿರೀಟಧಾರಣಾ ಚೀಟುಗಳನ್ನು ತರಿಸಿದ್ದನು. ಜನರಲ್ಲಿ ಅಂಚೆಚೀಟುಗಳ ಸಂಗ್ರಹದ ಆತುರವು ಮಿತಿಮೀರಿ ಬೆಳೆದಿದೆ. ಅವರಿವರೆನ್ನದೆ ಎಲ್ಲರೂ ಈಗ ಅಂಚೆ ಚೀಟುಗಳನ್ನು ಸಂಗ್ರಹಿಸುತಿದ್ದಾರೆ.

ಬೆಂಕಿ ಪೆಟ್ಟಿಗೆ ಚಿತ್ರಗಳು 85000 ಇವೆ

ವ್ಯರ್ಥವಾಗಿ ಹೋಗುವ ಸಮಯವನ್ನು ಯಾವುದಾದರೊಂದು ವಿನೋದ ವೃತ್ತಿಯಲ್ಲಿ ಬಳಸುವವರ ಸಂಖ್ಯೆ ಈಗ ಬೆಳೆಯುತ್ತ ಬಂದಿದೆ. ಅಂಥ ವೃತ್ತಿಗಳಲ್ಲಿ ಬೆಂಕಿಪೆಟ್ಟಿಗೆ ಚಿತ್ರಗಳನ್ನು ಸಂಗ್ರಹಿಸುವದೂ ಒಂದಾಗಿದೆ. ಈ ವೃತ್ತಿಯು ಈಗ ಅಂಚೆಚೀಟುಗಳ ಸಂಗ್ರಹಕ್ಕೆ ಪ್ರಬಲ ಪ್ರತಿಸ್ಪರ್ಧಿಯಾಗಿ ನಿಂತಿದೆ. ಕಲಾದೃಷ್ಟಿಯಿಂದಲೂ ಕುತೂಹಲಕ್ಕಾಗಿಯೂ ಬೆಂಕಿಪೆಟ್ಟಿಗೆ ಚಿತ್ರಗಳನ್ನು ಶೇಖರಿಸುವದು ಉತ್ತಮ ವಿನೋದವೃತ್ತಿಯಾಗಿರುವುದು. ಜಪಾನು ಒಂದು ದೇಶದಲ್ಲಿಯೇ ಇಂಥ ಬೇರೆ ಬೇರೆ 80000 ಚಿತ್ರಗಳಿರುವವು. ದೇಶೀ ಕಲೆಯ ಪ್ರಚಾರಕ್ಕಾಗಿ ಅಲ್ಲಿಯ ಬೆಂಕಿಪೆಟ್ಟಿಗೆ ಚಿತ್ರಗಳನ್ನು ಸಾಧನವಾಗಿ ಮಾಡಿಕೊಂಡರೆ ರಸ್ಯದಲ್ಲಿ ಪ್ರಚಾರವು ಬೆಂಕಿ ಪೆಟ್ಟಿಗೆ ಚಿತ್ರಗಳ ಮೂಲಕ ನಡೆಯುತ್ತದೆ. ವಿಲಾಯತಿಯ ಇಬ್ಬರು ಸಂಗ್ರಹಕರು ಬೇರೆ ಬೇರೆಯಾಗಿ 20000ದಷ್ಟು ಬೆಂಕಿಪೆಟ್ಟಿಗೆ ಚಿತ್ರಗಳನ್ನು ಸಂಗ್ರಹಿಸಿದ್ದಾರೆ. ಒಬ್ಬ ಮಹಿಳೆಯ ಬಳಿಯಲ್ಲಿ ಅಂಥ 35000 ಚಿತ್ರಗಳಿರುವವು. ಅವಳ ಹತ್ತಿರ 4ನೆ ವಿಲಿಯಂ ಅರಸನು ಉಪಯೋಗಿಸಿದ ಬೆಂಕಿಪೆಟ್ಟಿಗೆಯ ಒಂದು ಅಪೂರ್ವ ಚಿತ್ರವೂ ಸಂಗ್ರಹಿಸಲ್ಪಟ್ಟು ಇರುವದಂತೆ.

ಮಿಲಿಯಾಂತರ ವೆಚ್ಚದಿಂದ ೬೦ ಮನುಷ್ಯ ನಿರ್ಮಾಣ!

ನ್ಯೂಯೋರ್ಕ ನಗರದಲ್ಲಿ ಬರುವ ವರ್ಷ ಅದ್ಭುತವಾದ್ದೊಂದು ಪ್ರದರ್ಶನವು ನಡೆಯುವದು. ಅದರಲ್ಲಿ ಜಗತ್ತಿನ ಎಲ್ಲ ಭಾಗಗಳಿಂದಲೂ ಎಲ್ಲ ವಿಷಯಗಳಿಗೆ ಸಂಬಂಧಪಟ್ಟ ಅತ್ಯಚ್ಚರಿ ವಸ್ತು ಒಡವೆ ಮೊದಲಾದವುಗಳು ಪ್ರದರ್ಶಿತವಾಗುವವು. ಒಂದೊಂದು ವಿಷಯಕ್ಕೆ ಸಂಬಂಧಪಟ್ಟವುಗಳ ಪ್ರದರ್ಶನಕ್ಕಾಗಿ ಬೇರೆ ಬೇರೆ ಅನುಕೂಲವಾದ ಕಟ್ಟಡಗಳು ಕಟ್ಟಲ್ಪಟ್ಟಿವೆ. ಮನುಷ್ಯ ಶರೀರ ಮತ್ತು ಆರೋಗ್ಯ ವಿಜ್ಞಾನಕ್ಕೆ ಸಂಬಂಧಿಸಿದ ಸಾಮಗ್ರಿಗಳ ಪ್ರದರ್ಶನಕ್ಕಾಗಿ ಪ್ರತ್ಯೇಕ ಒಂದು ಹೋಲು ಇದೆ. ಅದನ್ನು Hall of Man ಎಂದು ಕರೆವರು. ಒಟ್ಟು ಪ್ರದರ್ಶನಕ್ಕಾಗಿ ಎಷ್ಟೋ ಮಿಲಿಯ ಡಾಲರುಗಳ ಖರ್ಚಾಗುವದು.

ಮನುಷ್ಯನ ಹೋಲಿನಲ್ಲಿ ಪ್ರದರ್ಶನಕ್ಕಿಡುವದಕ್ಕೆ ಒಂದು ಅತ್ಯದ್ಭುತ ಮನುಷ್ಯ ಶರೀರದ ನಿರ್ಮಾಣವಾಗಿದೆ. ಇದನ್ನು [illegible] ಗಾಜಿನಿಂದ ತಯ್ಯಾರಿಸಿರುವರು. ಮನುಷ್ಯ ಶರೀರದ ಸಣ್ಣದೊಡ್ಡ ಅಂಗೋಪಾಂಗಗಳನ್ನೂ ಅವುಗಳ ವ್ಯಾಪಾರಗಳನ್ನು ದರ್ಶಕರು ಹೊರಗಿನಿಂದಲೇ ನೋಡಿ ತಿಳಿಯಬಹುದು. [illegible] ವಿಸರ್ಜನ [illegible] ಮೊದಲಾದವುಗಳ ಜೀವಂತ ಮನುಷ್ಯನಲ್ಲಿ ನಡೆಯುವಂತೆ [illegible] ಇದಕ್ಕೆ ಮಿಲಿಯಾಂತರ ಡಾಲರುಗಳ ವೆಚ್ಚವಾಗಿದೆ.

ವೈಜ್ಞಾನಿಕ ಸಂಘಟನೆ [illegible] ಅವರು ಈ ಪ್ರದರ್ಶನದಲ್ಲಿ ಒಂದು ದೊಡ್ಡ ಕೋಣೆಯಷ್ಟು ದೊಡ್ಡ ಕಣ್ಣು ಅಷ್ಟೇ ದೊಡ್ಡ ತಲೆ ಒಂದರಲ್ಲಿಯನ್ನು [illegible] ಪ್ರದರ್ಶನಕ್ಕಿಡುವರು. ಕಣ್ಣಿನ ಅತಿಸೂಕ್ಷ್ಮವಾದ ರಚನೆಯನ್ನು ಕೂಡ ಕಣ್ಣಿನ ಆಕೃತಿಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಬೆಳಕಿನ ಹೆಚ್ಚು ಕಡಿಮೆಯಿಂದ, ದೂರದೃಷ್ಟಿ, ಸಮೀಪದೃಷ್ಟಿ ಮೊದಲಾದ ಕಣ್ಣಿನ ದೋಷಗಳಿಂದ, ಹೊರಗಿನ ವಸ್ತುವಿನ ಆಕಾರ ಬಣ್ಣಗಳ ಜ್ಞಾನವು ಆಗುವದರಲ್ಲಿ ಯಾವ ಯಾವ ಕಾರಣಗಳಿಂದ ಯಾವ ಯಾವ ಹೆಚ್ಚು ಕಡಿಮೆಗಳಾಗುವವೋ, ಅವನ್ನು ದರ್ಶಕರು ಈ ಕಣ್ಣಿನೊಳಗೆ ನಿಂತು, ಹೊರಗಿನ ವಸ್ತುಗಳನ್ನು ನೋಡಿ ತಿಳಕೊಳ್ಳಬಹುದು. ಈ ಕಣ್ಣಿನ ಗೊಂಬೆಯೇ ಒಂದು ಉರಟಾದ ದೊಡ್ಡ ಕಿಟಕಿಯಷ್ಟು ವಿಶಾಲವಾಗಿರುತ್ತದೆಂದ ಬಳಿಕ ಇಡೀ ಕಣ್ಣು ಎಷ್ಟು ದೊಡ್ಡದಿದೆ ಎಂದು ನೀವೇ ಊಹಿಸಬಹುದು.

ತಲೆಬುರುಡೆಯು ದರ್ಶಕರ ಗುಂಪು ಕೂಡಿ ತಿರುಗುವಷ್ಟು ದೊಡ್ಡದಾಗಿ ಇರುವದು. ಅದರಲ್ಲಿ ಕಾದಲ ಚರ್ಮ ಎಲುಬು ಒಳಗಿನ ಸರಿ ಬೂದು ಮತ್ತು ಬಿಳಿ ಮಿದುಳು ಆ ಬೇರೆ ಬೇರೆ ಭಾಗಗಳು ನರಗಳ ಜೋಡಣೆ, ಕಣ್ಣು ಮೂಗು ಬಾಯಿಗಳ ಆಕಾರ ಸ್ಥಾನ ಮೊದಲಾದ ಪ್ರತಿಯೊಂದು ವಿಷಯವನ್ನು ನೋಡಿ ತಿಳಕೊಳ್ಳಲಿಕ್ಕಾಗ ತದೆ. [illegible] ತಲೆಬುರುಡೆಯಲ್ಲಿ ಸಂಚಾರ ಮಾಡಿ ನಮ್ಮ ಅಂಗೋಪಾಂಗಗಳನ್ನು ಅವುಗಳ [illegible] ಕಾರ್ಯಗಳು ನಡೆವ ರೀತಿಯನ್ನು [illegible] [illegible] ತಲೆಬುರುಡೆಯಲ್ಲಿ [illegible] ನಮ್ಮ [illegible] ನಾವು ಅದರಲ್ಲಿ ಸಂಚರಿಸುವವರೆಂದು ಎಣಿಸಿದಾಗ [illegible] ಅಲ್ಲಿಯ ಆಕೃತಿಯನ್ನು ಎಷ್ಟು [illegible] ಸ್ವಾಭಾವಿಕವಿದ್ದಂತೆ ಮಾಡಿರುವರೆಂದರೆ ನಾವು ಹಾಗೆ ಎಣಿಸಬೇಕಾದ ಅಗತ್ಯ ಕೂಡ ಇಲ್ಲ. ನಮ್ಮ ತಲೆ ಒಳಗಡೆಯೊಳಗೆ ನಾವು ಸಂಚರಿಸುತ್ತಿರುವಂತೆಯೇ ಮನಗೆ ಭಾಸವಾಗುವದು.

ಪ್ರದರ್ಶನದಲ್ಲಿ ಇನ್ನೊಂದು ಆಶ್ಚರ್ಯವೆಂದರೆ ಅತ್ತಿಂದ ಮಾತನಾಡುವ ಅಸ್ಥಿಪಂಜರವು. ಅದು ನಿಜವಾದೊಂದು ಅಸ್ಥಿಪಂಜರದ ಬೇರೆ ಬೇರೆ ಕೀಲುಗಳು ಬೇಕಾದ ಹಾಗೆ ಚಲಿಸುವಂತೆಯೂ ಚಲನೆಗೆ ತಕ್ಕ ತೆ [illegible] ಮಾತನಾಡುವಂತೆಯೂ ಚಲನೆಯ ಕ್ರಮವನ್ನು ವಿವರಿಸುವಂತೆಯೂ ಅದನ್ನು ವಿವಿಧ ಉಪಾಯಗಳಿಂದ ವ್ಯವಸ್ಥೆಗೊಳಿಸಿದ್ದಾರೆ. ಈ ಅಸ್ಥಿಪಂಜರವು ಮಾತನಾಡಿದಂತೆ ನಡೆಯುವದು ಕುಣಿಯುವದು ಹಾರುವದು ಓಡುವದು ಮೊದಲಾದ ಎಲ್ಲಾ ಕೆಲಸಗಳನ್ನೂ ಮಾಡುವದು, ಮತ್ತು ತಾನು ಹೇಗೆ ಕಾರ್ಯಗಳನ್ನು ಮಾಡುತಿದ್ದೇನೆಂದು ದರ್ಶಕರಿಗೆ ವಿವರಿಸಿ ಹೇಳುವದು.

ANNOUNCEMENT

We beg to inform our patrons and well wishers that from the 1st January 1938, the rate of interest on Current Account Deposits will be 1% per annum on daily balances.

Estd 1906
CANARA BANK, LIMITED.

ನೋಟಗಳು.=Note.......s

ಒಂದು ಮೈಲಿನಿಂದ ೪೨ ಮೈಲುಗಳ ದೂರಕ್ಕೂ ಸೈಕಲ್ ಸವಾರಿಯಲ್ಲಿ ಇದುವರೆಗೆ ಯಾವ ದೇಶದ ಯಾವ ಸವಾರನಿಗಿಂತಲೂ ಚೆನ್ನಾಗಿ ಮುಂದಾದ ಜಾನಕೀದಾಸನೆಂಬ ಪಂಜಾಬಿಯು ಈಗ, ಆಸ್ಟ್ರೇಲ್ಯದಲ್ಲಿ ನಡೆವ ಪ್ರಪಂಚದ ಸ್ಪರ್ಧೆಯಾಟಗಳಲ್ಲಿ ಪಂಕ್ತಿನೋಡು ವನು. ಇಡೀ ಹಿಂದೂದೇಶದಿಂದ ಈ ಪಂತದ ಆಟಗಳಿಗೆ ಹೋಗುವಾತನು ಇವನೇ ಒಬ್ಬನು.

೦ ೦ ೦ ೦

ಬೀಜದ ಹೋರಿಗಳನ್ನು ಸಾಕುವ ಪೆಶನು ಅಲ್ಲಲ್ಲೇ ಅಡಗಿರುವಂತೆ ತೋರುತ್ತದೆ ಈಗ ಕೋಣಗಳ ಪ್ರಸ್ತಾಪವೆದ್ದಿದೆ. ಕೊಚ್ಚಿ ತಿರುವಾಂಕೂರು ರಾಜ್ಯಗಳಲ್ಲಿನ ಹವಾಗುಣವು ಈ ಕೋಣಗಳನ್ನು ಬೆಳೆಸುವುದಕ್ಕೆ ಅತ್ಯುತ್ತಮ ವಾಗಿದೆ ಎಂದು ಕೇಂದ್ರದ ಕೃಷಿಬೋರ್ಡಿನ ಅಭಿಪ್ರಾಯವಾಗಿದೆ ಎಮ್ಮೆಗಳನ್ನು ಸಾಕುವುದಕ್ಕಾಗಿಯೆ ತಿರುವಾಂಕೂರಿನಲ್ಲಿ ಸೂರತಿನಿಂದ ಕೆಲವು ಎಮ್ಮೆಗಳನ್ನು ತಂದು ಪರೀಕ್ಷೆನೋಡು ತ್ತಿದ್ದಾರೆ.

೦ ೦ ೦ ೦

ಕೊಂಗ್ರೆಸ್ ಧ್ವಜವು ಕೊಂಗ್ರೆಸಿನವರದೇ ಅಲ್ಲ, ಇಡೀ ಜನಾಂಗದ್ದು, ಎಂದರೆ ಕಾಂಗ್ರೆಸಿಗೆ ವಿರುದ್ಧರಾದವರದೂ ಆಗಿದೆ ಎಂದು ಮುಖ್ಯಮಂತ್ರಿಗಳನೇಕರು ಅದುಕಾರಣವೇ, ಕಾಂಗ್ರೆಸಿನವರು ಅದನ್ನು ಏರಿಸುವುದೂ, ಇತರರೂ ಅದನ್ನು ಇಳಿಸುವುದೂ ಸಂಗತವೇ ಹೊರತು, ಆಕ್ಷೇಪಕರವಾಗಿಲ್ಲ

೦ ೦ ೦ ೦

ಜೀವವಿರುವವಷ್ಟು ಕಾಲಕ್ಕೆ ಜಪಾನನ್ನು ಎದುರಿಸಿ, ನಾನು ಚೀನದ ಸ್ವಾತಂತ್ರ್ಯವನ್ನು ಕಾಪಾಡುವೆನು' ಎಂದು ಚಿಯಾಂಗ್ ಕೈ ಶೇಕರು ಅಲ್ಲಲ್ಲ ಸಾರಿರುವರು. ನೆಂಕಿಂಗ್ ರಾಜಧಾನಿ ಕೈತಪ್ಪಿತು ದಕ್ಷಿಣ ಚೀಣದಲ್ಲಿ ಜಪಾನು ನುಗ್ಗುತ್ತದೆ ಹೀಗಿರುವಾಗಲೂ ಇವರು ಹೀಗೆನ್ನುವುದೇ?

೦ ೦ ೦ ೦

ಆಯಿತಪ್ಪಾ- ದೊರೆ ನೀನಾದರೆ ನಷ್ಟ ವೇನು? ಎಂದು ಜಪಾನಿಗೆ ಹೇಳಿದ್ದರೆ, ಈ ಕೈಶೇಕರನ್ನು ಕೈಸರರಂತೆ ಮರ್ಯಾದೆಯಿಂದ ಕಂಡು ಎಂದೂ ಎದುರಿಸುತ್ತಿರಲಿಲ್ಲ ಇವರಿಗೂ ಶಾಶ್ವತ ಮಹಾಸಂಭ್ರಮಗಳು ಉಳಿಯುತ್ತಿದ್ದುವು ಆದರೆ, ಚೀನವು ಮಾತ್ರ ಪರಾಧೀನವಾಗುತ್ತಿತ್ತು

೦ ೦ ೦ ೦

ಸಾವಿರ ರೀತಿಗಳಿಂದ ಒಬ್ಬ ಮನುಷ್ಯನನ್ನು ಸುಲಭವಾಗಿ ವಶಮಾಡಿಕೊಳ್ಳುವಷ್ಟು ದುರ್ಬಲವಾಗಿ ಮನುಷ್ಯ ಹೃದಯವಿದೆ ಸಾವಿರ ರೀತಿಗಳಿಂದ ಒಂದು ಜನಾಂಗವನ್ನು ಬಾಧಿಸಿ ವಿಜ್ಞಾನದ ಬಲದಿಂದ ಅದನ್ನು ಜಗ್ಗಿ ಬಡಿಯಬರುತ್ತದೆ ಆದರೆ, ಚೀನದ ಸೋಲು ಇಷ್ಟರಲ್ಲಿ ಆಗಲಿಲ್ಲ ಮಾತ್ರವಲ್ಲ, ಇನ್ನಷ್ಟು ವರ್ಷಗಳ ತನಕವೂ ನಿರ್ಧಾರವಾಗುವಂತಿಲ್ಲ ಎದುರಲ್ಲೇ ಚೀನವು ಎದುರಾಡದೆ ಇರಬಹುದಾದರೂ, ಒಳಗಿಂದೊಳಗೆ ಬೇಯುತ್ತಿದ್ದು, ಜಪಾನನ್ನು ಅಲ್ಲಲ್ಲಿ ಬೆಂಡಾಗಿಸದೆ ಬಿಡಲಾರದು.

೦ ೦ ೦ ೦

ಜಪಾನು ಚೀನವನ್ನು ಗೆದ್ದರೂ, ಅಲ್ಲಿಂದ ಕಪ್ಪ ಪಡೆಯಲಾರದು. ಗೆದ್ದ ರಾಷ್ಟ್ರಗಳು ಪಡೆವ ಕಪ್ಪವೆಂದರೆ, ಅಲ್ಲಿನ ವ್ಯಾಪಾರ, ಅಲ್ಲಿನ ಖನಿಜಗಳು, ತನ್ನ ಹಣವನ್ನು ಅಲ್ಲಿ ಬಿತ್ತಿ ಕೊಯ್ಯುವ ಬಡ್ಡಿಯ ಬೆಳೆ ಇತ್ಯಾದಿ. ಇದೊಂದು ಚೀನದಿಂದ ಸದ್ಯಕ್ಕೆ ದೊರೆವಂತಿಲ್ಲ. ತನ್ನ ಅಧೀನರಿಗೆ ಸಂಬಳ ಪೆನ್ಸನುಗಳು ಮೊದಲಾದುವನ್ನು ಜಪಾನಿಗೆ ಚೀನವು ಕೊಡುವ ಹಾಗಿಲ್ಲ.

ಇಂತಹ ಕಪ್ಪ ಕಾಣಿಕೆಯಿಲ್ಲದೆ, ಜಪಾನು ದ್ವೀಪಗಳು ಬಾಳುವಂತಿಲ್ಲ. ಆದಕಾರಣ ಈ ಕಪ್ಪವನ್ನು ಪಡೆವಂತೆ, ಈಗ ಮಂಚೂರಿಯ ಮೊದಲಾದ ಪ್ರಾಂತ್ಯಗಳಿಂದ ಉತ್ಪನ್ನಗಳು ಹೆಚ್ಚಿಸುವರೆ ಜರ್ಮನಿಗೆ ಒಂದು ಬಗೆಯ ಕಂಟ್ರಾಕ್ಟಿಗೆ ಜಪಾನು ವಹಿಸಿಕೊಟ್ಟಿದೆ. ಮೊದಲಾಗಿ, ಮಂಚೂರಿಯದ ಕಲ್ಲಿದ್ದಲಿಂದ ಎಣ್ಣೆ ತಯಾರಿಸಲಾಗುವುದು. ೧೯೪೦ರಲ್ಲಿ ಜಪಾನಿನ ನೌಕಾನಯನಕ್ಕೆಲ್ಲ ಇದೇ ಎಣ್ಣೆಯ ಪೂರೈಕೆಯಾಗುವುದು

* * * *

ಇದೇ ರೀತಿ, ಈಗ ಚೀನದಿಂದ ಗೆದ್ದ ಅಂಶಗಳಲ್ಲೆಲ್ಲ ಜರ್ಮನಿಯು ಕೈಗಾರಿಕೆಗಳನ್ನು ಸ್ಥಾಪಿಸಿ, ಜಪಾನಿಗೆ ಸಹಾಯಮಾಡುವಂತೆ ಕರಾರಾಗಿದೆ ಆಗ, ಜಪಾನಿನ ಕೈಗಾರಿಕವಾಗಿ ನುಗ್ಗಿ, ಅಲ್ಲಿನ ಕೈಗಾರಿಕೆಯನ್ನೆಲ್ಲ ಮೂಲೆಪಾಲಾಗಿಸುವುದು ಆಗ ಆ ರಾಷ್ಟ್ರಗಳು ಜಪಾನಿನ ಸರಕು ತಮ್ಮಲ್ಲಿಗೆ ಬರಬಾರದೆಂದೂ, ತಮ್ಮಲ್ಲಿಂದ ಕಚ್ಚಾ ಸರಕು ಜಪಾನಿಗೆ ಕಳುಹಲಾಗದೆಂದೂ ಶಾಸನಮಾಡುವರು

೦ ೦ ೦ ೦

ಈ ಶಾಸನದಿಂದ ಏನೂ ಫಲವಿಲ್ಲ ಅಷ್ಟರಲ್ಲೇ ಜಪಾನು ಜರ್ಮನಿಯ ಸಹಾಯದಿಂದ ಸರ್ವತಂತ್ರ ಸ್ವತಂತ್ರವಾಗುವುದು ಈಗ ನಿದ್ದೆಯಲ್ಲಿರುವ ಜಡಭರಿತವಾದ, ಜಪಾನನ್ನು ಚೀನದೊಳಗೆ ಬಾರದಂತೆ ತಡೆಯದೆ ಇರುವ ಸುಧಾರಿತ ರಾಷ್ಟ್ರಗಳು ಆಗ ಎಲ್ಲವೂ ಮೋಸ ಹೋದವೆನ್ನುವುವು ಈ ಕರ್ಮಕ್ಕೆ ಎರಡೇ ವರ್ಷಗಳಲ್ಲಿ ಫಲದೊರೆವುದು ಖಂಡಿತ

೦ ೦ ೦ ೦

ಇಜಿಪ್ತದಲ್ಲಿ ಮುಖ್ಯಮಂತ್ರಿಗೂ ಅರಸನಿಗೂ ವೈಮನಸ್ಸಿಗೆ ಕಾರಣವುಂಟಾಗಿದೆ ಕಾರಣವಿಷ್ಟೆ ಮುಖ್ಯಮಂತ್ರಿಯನ್ನು ನೇಮಿಸುವುದು ಅರಸನ ಅಧಿಕಾರವಾಗಿತ್ತು ಈಗ, ಅಧಿಕ ಮತದ ಬೆಂಬಲವಿಲ್ಲದ ಪಕ್ಷ ನಾಯಕನು ಮಂತ್ರಿಯಾಗಬಾರದೆಂದು ಒಂದು ಮಸೂದೆ ಅಲ್ಲಿನ ಪಾರ್ಲಿಮೆಂಟಿನ ಮುಂದೆ ಬಂದಿದೆ ಇದು ಅರಸನಿಗೆ ಸಮ್ಮತವಿಲ್ಲದುದಾಗಿದೆ

೦ ೦ ೦ ೦

ದೇವಸ್ಥಾನಗಳ ಧರ್ಮಕರ್ತರನ್ನು ಚುನಾಯಿಸುವಾಗ, ಅವರಿಗೆ ವೋಟು ಕೊಡುವರೆ ಹರಿಜನರಿಗೂ ಹಕ್ಕು ಇದೆಯೆಂದು ಹೈಕೋರ್ಟು ತೀರ್ಮಾನಿಸಿಯದೆ ಇದರಿಂದ ದೇವಸ್ಥಾನಗಳಲ್ಲಿ ಪ್ರವೇಶಿಸುವುದಕ್ಕೂ ಹರಿಜನರಿಗ ಆತಂಕವಿಲ್ಲವೆನ್ನುವ ತೀರ್ಮಾನಗಳೂ ನ್ಯಾಯಸ್ಥಾನದಿಂದ ದೊರೆವುದಕ್ಕೆ ಹೆಚ್ಚಿನ ವಿಳಂಬವಾಗದೆಂದೇ ಹರಿಜನ ಹಿತೇಚ್ಛುಗಳು ಭರವಸೆಯಿಂದ ಹೇಳುತ್ತಿರುವುದು

೦ ೦ ೦ ೦

ಎಸೆಂಬ್ಲಿ ಚುನಾವಣೆಗೆ ಯಾರೂ ವೋಟು ಕೊಡಲು ಅಧಿಕಾರವುಳ್ಳವರೋ ಅವರು ಲೋಕಲ್ ಬೋರ್ಡು ಚುನಾವಣೆಗಳಲ್ಲಿ ವೋಟು ಕೊಡಬಹುದಾಗಿ ಇರುವ ಕಾರಣ,— ಇನ್ನು ಸಮಸ್ತ ಪ್ರಾಯಸ್ಥರಿಗೆ ವೋಟಿನ ಅಧಿಕಾರ ಸಿಗಬಹುದೆಂಬ ಇಚ್ಛೆಯು ನೆರವೇರುವಂತಿಲ್ಲ ಈ ಕುರಿತಾಗಿ ಜನವರಿಯಲ್ಲಿ ಹೊಸ ಕಾನೂನನ್ನು ಎಸೆಂಬ್ಲಿಯು ಮಂಜೂರು ಮಾಡುವಂತಿದೆ

೦ ೦ ೦ ೦

ಲೋಕಲ್ ಬೋರ್ಡಿನ ಅಥವಾ ಇತರರ ಕೈಯಿಂದ ಸೆಕೆಂಡರಿ ಶಾಲೆಗಳನ್ನು ಸರಕಾರವೇ ಕೈವಶಿಸಿಕೊಂಡು ಅವನ್ನು ನಡೆಸುವ ಹಾಗಿಲ್ಲ, ಏಕೆಂದರೆ, ಸೆಕೆಂಡರಿ ವಿದ್ಯಾಭ್ಯಾಸವೆಲ್ಲವೂ ಖಾಸಗಿಯಾಗಿ ನಡೆಯುತ್ತ, ಅದರ ಸಹಾಯಾರ್ಥವಾದ ಗ್ರೇಂಟನ್ನು ಮಾತ್ರ ಸರಕಾರವು ತೆರುವಂತೆ, ಸರಕಾರದ ನಿರ್ಧಾರವಿದೆ ಎಂದು

ರಾಷ್ಟ್ರಪತಿಯರ ಅಸ್ಸಾಮು ಪ್ರವಾಸ

ರಾಷ್ಟ್ರ ವೀರಕನ್ಯೆ—ನಾಗಾರಾಣಿ!

ಸರಕಾರ್ರ, ಸಹಕಾ ... ವ ಬೇಂಕುಗಳ ... ಸರಕಾರವೆಂದ ... ಳೂ ರೈತರದ್ದು ... ದೇಖ ಸರಿ ... ಈ ವಿಸ ... ಳಿಯ ... ದೇ

ನೈಸರ್ಗಿಕ ಸೌಂದರ್ಯದಿಂದ ಶೋಭಾಯಮಾನವಾದ ಅಸ್ಸಾಮಿನ ಬೈಲುಗಳಲ್ಲಿ ರಾಷ್ಟ್ರಪತಿಯರು ಬಹಳ ಹರ್ಷಚಿತ್ತದಿಂದ ಪ್ರವಾಸಗೈದರೆಂದು ಅವರದೊಂದು ಪ್ರಕಟಣೆ ಹೊರಬಿದ್ದಿರುತ್ತದೆ ಈ ಪ್ರಕಟಣೆಯ ಸಂಕ್ಷಿಪ್ತ ಸಾರಾಂಶವನ್ನು ಕೆಳಗೆ ಕೊಡಲಾಗಿದೆ-

ಅಸ್ಸಾಮಿನವರಿಗೆ ಕಾಂಗ್ರೆಸಿನ ಕುರಿತು ವಿಶ್ವಾಸ.

ಹಾದಿಯಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ಅಸ್ಸಾಮಿನ ಮೂಲನಿವಾಸಿಗಳು ಫಲಪುಷ್ಪ ವಸ್ತ್ರ ಕಾಣಿಕೆಗಳಿಂದ ರಾಷ್ಟ್ರಪತಿಯರನ್ನು ಬಹಳ ಉತ್ಸಾಹದಿಂದ ಸ್ವಾಗತಿಕರಿಸಿದರು ಕಾಂಗ್ರೆಸ್ ಕೆಲಸಕ್ಕೆಂದು ತಮ್ಮ ಕಿಂಚಿತ್ ಮುಷ್ಟಿಗೆ ದುಡ್ಡು ದುಗ್ಗಾಣಿಗಳನ್ನು ರಾಷ್ಟ್ರಪತಿಯರಿಗೆ ಒಪ್ಪಿಸಿದರು ಈ ಹಳ್ಳಿಗರ ಅತ್ಯಂತ ಪ್ರೇಮ, ದೃಢವಿಶ್ವಾಸ, ಉತ್ಸಾಹಗಳನ್ನು ನೋಡಿ, ನಗರನಿವಾಸಿಗಳಾದ ನೆಹರುಗಳಲ್ಲಿ ತಮ್ಮ ಕುರಿತು ಒಂದು ತರದ ನಾಚಿಕೆಭಾವವು ಉಂಟಾಯಿತಂತೆ ಸ್ವಾರ್ಥ, ಧನಾಭಿಲಾಷೆ, ಕುತಂತ್ರಗಳಿಂದ ಕೂಡಿದ ನಗರಗಳಿಗೂ ಇವರಿಗೂ ಬಹಳ ವ್ಯತ್ಯಾಸವಿರುವುದೆಂದು ರಾಷ್ಟ್ರಪತಿಯರಲ್ಲಿ ಹೊಳೆಯಿತು.

ದೊಡ್ಡ ದೊಡ್ಡ ಸ್ಥಳಗಳಲ್ಲಿ ಜನಸ್ತೋಮಗಳೆ ರಾಷ್ಟ್ರಪತಿಯರನ್ನು ಸ್ವಾಗತೀಕರಿಸಿ, ವಂದೇ ಮಾತರಂ ಗೀತೆಯಿಂದ ಮತ್ತು ಜಯಘೋಷಗಳಿಂದ ಎಲ್ಲೆಲ್ಲೂ ರಾಷ್ಟ್ರಪತಿಯನ್ನು ಅತ್ಯಂತ ಒಲುಮೆಯಿಂದ ಸ್ವಾಗತೀಕರಿಸಿದರು ನಗರಗಳಲ್ಲಿ ನೆರೆದಕ್ಕಿಂತ ಹೆಚ್ಚು ಜನರಿರುವ ಹಳ್ಳಿಗರ ಒಂದು ಮಹಾಸಭೆಯನ್ನು ಸಿಲ್ಚಾರ್ ಎಂಬ ಹಳ್ಳಿಯಲ್ಲಿ ಅವರು ಸಂಬೋಧಿಸಿದರು

ರಸ್ತೆಗಳು ಹಾಳು, ಅವಸ್ಥೆಯಲ್ಲಿದ್ದರೂ ಅಸ್ಸಾಮಿನ ನೈಸರ್ಗಿಕ ಸೌಂದರ್ಯದಿಂದ ರಾಷ್ಟ್ರಪತಿಯರಿಗೆ ಪ್ರವಾಸದ ದಣಿವು ತಿಳಿಯಲಿಲ್ಲ ಅದಲ್ಲದೆ ಅಲ್ಲಿನ ಮಹಾಜನಗಳ ಪ್ರೇಮವನ್ನೂ ಉತ್ಸಾಹವನ್ನೂ ರಾಷ್ಟ್ರಾನುರಾಗವನ್ನೂ ನೋಡಿ ರಾಷ್ಟ್ರಪತಿಯರು ತಮ್ಮ ಆಯಾಸವೆಲ್ಲವನ್ನೂ ಮರೆತುಬಿಟ್ಟರು

ಅಸ್ಸಾಮಿನ ಸಿಲ್ಹೆಟ್ಟಿನಲ್ಲಿ ರಾಷ್ಟ್ರಪತಿಯರು ಹೆಚ್ಚಾಗಿ ಒಂಗಾಳ ವಾತಾವರಣವನ್ನ ಕಾಣುವವರಾದರು. ಅಲ್ಲಿ ಹಿಂದೂ ಮುಸ್ಲಿಂ ಎಂಬ ಭೇದಭಾವವಿಲ್ಲದೆ ಕಾಂಗ್ರೆಸ್ಸಿನ ಕುರಿತು ಜನರಿಗಿರುವ ಪ್ರೀತಿವಿಶ್ವಾಸವನ್ನು ನೋಡಿ ರಾಷ್ಟ್ರಪತಿಯರು ಸಂತುಷ್ಟರಾಗಿರುವರು ರಾಷ್ಟ್ರಾಭ್ಯುದಯಕ್ಕಾಗಿ, ಸ್ವಾತಂತ್ರ್ಯ ಸಾಧನೆಗಾಗಿ ಈ ಪ್ರದೇಶವು ಮಹಾಪರಿತ್ಯಾಗವನ್ನು ಮಾಡುತ್ತದೆಂದು ರಾಷ್ಟ್ರಪತಿಯರ ಶ್ಲಾಘನೆ 'ಸಿಲ್ಹೆಟ್ಟಿನ ಜನರಲ್ಲಿ ನನಗೆ ವಿಶ್ವಾಸವಿರುವುದು ಸಿಲ್ಹೆಟಿಗೆ ಜಯವಾಗಲಿ'

ಸಿಲ್ಹೆಟಿನ ಮನಿಪುರಿಗಳು.

ಸಿಲ್ಹೆಟ್ಟಿನ ಭಾನುಬಿಲ್ ಪ್ರದೇಶದಲ್ಲಿ ರಾಷ್ಟ್ರಪತಿಯರಿಗೆ ಮನಿಪುರಿ ಜನವರ್ಗದ ಸಂಪರ್ಕವಾಯಿತು. ಚರಕಧಾರಿಗಳಾದ ನೂರಾರು ಮಂದಿ ಮನಿಪುರಿ ಸ್ತ್ರೀಯರು, ಮಕ್ಕಳು, ರಾಷ್ಟ್ರಪತಿಯರನ್ನು ಸ್ವಾಗತೀಕರಿಸಿದರು ಅಸಹಕಾರ ಚಳವಳದಲ್ಲಿ ಮನಿಪುರಿಗಳು ಅತ್ಯಂತ ಪರಿಶ್ರಮವನ್ನು ವಹಿಸಿದ್ದರು ಒಂದಾನೊಂದು ದಿನ ತೆರಿಗೆ ತೆರಲು ಸಿದ್ಧರಿಲ್ಲದ ಒಂದು ಚಳವಳವನ್ನು ನಡೆಯಿಸಿದ್ದರು. ಈ ಮನಿಪುರಿ ಜನರಿಗೂ ಇತರ ಹಿಂದೀಯರಿಗೂ ಬಹಳ ವ್ಯತ್ಯಾಸವಿರುವುದು ರಾಷ್ಟ್ರಪತಿಯರಿಗೆ ಕಾಣಬಂತು ಅವರು ಹೆಚ್ಚಾಗಿ ಬರ್ಮಿ ಜನರನ್ನು ಹೋಲುತಿದ್ದಾರೆ ಅತ್ಯಂತ ನಿರ್ಮಲ ಜನರು, ಸಾಗುವಳಿಯು ಅವರ ಹೊರಸೂಸಿ ಕಾಣಿಸುತ್ತದೆ. ಈ ಜ... ಹೆಚ್ಚು ಶಿಕ್ಷಣವಿಲ್ಲದಿದ್ದರೂ ಅ... ಉತ್ತಮತರದ ನೂಲುವವರೂ ನೇಯುವವರು ಆಗಿರುವರು ಅವರು ವೈಷ್ಣವ ಧರ್ಮದವರು. ಆದರೆ ಅವರಲ್ಲಿ ಅನೇಕ ಬರ್ಮಿ ಕಟ್ಟಳೆಗಳಿವೆ ತಮ್ಮ ಧರ್ಮದಲ್ಲಿ ಅಸ್ಪೃಶ್ಯರಾಗಿ ಎಣಿಸಲ್ಪಟ್ಟ ಮುಸ್ಲಿಂ ಬೆಸ್ತಗಾರರು, ರಾಷ್ಟ್ರಪತಿಯರ ಭೇಟಿಮಾಡಿ ತಮ್ಮ ಸಂಕಷ್ಟಗಳನ್ನು ಹೇಳಿಕೊಂಡರು.

ನಾಗಾರಾಣಿಯು ಈಗ ಕಾರಾಗೃಹದಲ್ಲಿರುವಳು

ಸಿಲ್ಹೆಟ್ಟಿನಲ್ಲಿ ನಾಗರೆಂಬ ಜನವರ್ಗವಿದೆ. ಸುತ್ತಲಿನ ಬೆಟ್ಟಗಳಲ್ಲಿರುವ ಈ ಜನರು ಫಲ, ಪುಷ್ಪ, ವಸ್ತ್ರ ಇತ್ಯಾದಿಗಳಿಂದ ಕೂಡಿದವರಾಗಿ ರಾಷ್ಟ್ರಪತಿಯರ ದರುಶನಕ್ಕಾಗಿ ಬಂದಿದ್ದರು. ಆಗ ಅವರು ಅವರಿಂದ ಒಂದು ಕತೆಯನ್ನು ಕೇಳಿದರು ಸಮಸ್ತ ಹಿಂದೂದೇಶವು ಈ ಕಥೆಯನ್ನು ತಿಳಿಯುವುದು ಉತ್ತಮವೆಂದು ರಾಷ್ಟ್ರಪತಿಯರ ಅಭಿಪ್ರಾಯ ಈ ಕಥೆಯು ಓರ್ವ ತರುಣಿಯ ಕುರಿತು ಗುಯ್ಡಾಲೊ ಎಂಬುದು ಆಕೆಯ ಹೆಸರು. ಆರು ವರ್ಷಗಳ ಹಿಂದೆ ಅಸಹಕಾರ ಚಳವಳ ಪ್ರಾರಂಭವಾದಾಗ ಅವಳ ಪ್ರಾಯ ೧೯ ವಾಗಿತ್ತು. ಮಹಾತ್ಮಾ ಗಾಂಧಿಯವರ ಕುರಿತು, ಕಾಂಗ್ರೆಸ್ಸಿನ ಕುರಿತು ಅವಳಿಗೆ ವಾರ್ತೆಗಳು ಬಂದು, ಅವಳಲ್ಲಿ ರಾಷ್ಟ್ರಾನುರಾಗದ ಸ್ವಾತಂತ್ರ್ಯ ಪ್ರೇಮದ ಸ್ಫೂರ್ತಿ ಉಂಟಾಯಿತು ತನ್ನ ಜನರನ್ನು ಬಂಧವಿಮೋಚನೆ ಮಾಡಿ ಅವರಿಗೆ ಸ್ವಾತಂತ್ರ್ಯಗಳಿಸಬೇಕಾಗಿ ಆಕೆಯು ದೃಢ ಸಂಕಲ್ಪಮಾಡಿದಳು ಸ್ವಾತಂತ್ರ್ಯಧ್ವಜವನ್ನು ಆಕೆಯು ಅನಾವರಿಸಿದಳು ಅನೇಕರ ಅವಳ ಅನುಯಾಯಿಗಳಾದರು. ಬ್ರಿಟಿಷ ಪ್ರಭುತ್ವವು ಕೋಪಗೊಂಡಿತ್ತೆಂದೂ, ಅಭಿಪ್ರಾಯದಿಂದಲೆ ಆಕೆಯು ತನ್ನ ಕಾರ್ಯಸಾಧನೆಯನ್ನು ಮಾಡುವವಳಾದಳು ಆದರೆ ಬ್ರಿಟಿಷಪ್ರಭುತ್ವವು ಸುರಕ್ಷಿತವಾಗಿ ಇದ್ದಿತು ಅನೇಕ ಹಳ್ಳಿಗಳ ಧ್ವಂಸವಾಗಿ, ಆಕೆಯನ್ನು ಸೆರೆಹಿಡಿಯಲಾಯಿತು ಅವಳಿಗೆ ಜೀವಾವಧಿ ಶಿಕ್ಷೆಯು ವಿಧಿಸಲಾಯಿತು ಈಗ ಅವಳು ಅಸ್ಸಾಮಿನ ಒಂದು ಕಾರಾಗೃಹದಲ್ಲಿರುವಳು ತನ್ನ ತಾರುಣ್ಯದ ಉತ್ಸಾಹದಲ್ಲಿ ಬ್ರಿಟಿಷ ಪ್ರಭುತ್ವವನ್ನೆ ಎದುರಾಯಿಸಿದ, ಆಕೆಯು ಈಗ ಯಾವತರದ ಸಂಕಷ್ಟಗಳು, ಮನೋವ್ಯಥೆಯನ್ನು ಅನುಭವಿಸುತ್ತಿರುವಳು? ಹಿಂದೂ ದೇಶಕ್ಕೆ ಈ ನಾಗಾರಾಣಿಯ ಕುರಿತು ಜ್ಞಾನವೆ ಇಲ್ಲ ಆದರೆ ನಾಗಾ ಜನರೆಲ್ಲರ ಸ್ಮರಣೆಯಲ್ಲಿ ಗಿಯ್ಡಾಲಲ ಹೆಸರಿರುವುದು ಅವಳನ್ನು ಬಂಧವಿಮೋಚನೆಗೊಳಿಸುವ, ಅವಳನ್ನು ಸಮಸ್ತ ಹಿಂದೂದೇಶವು ಸ್ಮರಿಸುವ ದಿನವು ಸದ್ಯದಲ್ಲಿ ಮೂಡುವುದು

ಪ್ರಾಂತ್ಯಕೀಯ ಸ್ವಯಂಪ್ರಭುತ್ವದಲ್ಲಿ ಸಾರವಿಲ್ಲ.

'ಆದರೆ ನಮ್ಮ ಪ್ರಾಂತ್ಯಕೀಯ ಸ್ವಯಂಪ್ರಭುತ್ವದಿಂದ ಆ ಬಂಧಮುಕ್ತತೆಯನ್ನು ನಡೆಸುವುದು ಅಸಾಧ್ಯ. ಕಾರಣ ನಾಗಾಪ್ರದೇಶವು ಬೇರೆಯಾಗಿ ಇರಿಸಲ್ಪಟ್ಟ ಪ್ರದೇಶವಾಗಿದ್ದು, ಅದು ಮಂತ್ರಿಯರ ಸ್ಪರ್ಶದಿಂದ ಹೊರಗಾಗಿರುವುದು ನೂತನ ಪ್ರಾಂತ್ಯಕೀಯ ಸ್ವಯಂಪ್ರಭುತ್ವ ಬರುವ ಮೊದಲೆ, ಈ ಪ್ರದೇಶದ ಗೊಡವೆಗೆ ಯಾರೂ ಹೋಗುತ್ತಿದ್ದಿಲ್ಲವಂತೆ ಗಿಯ್ಡಾಲೊವಿನ ಕುರಿತು ಪ್ರಶ್ನೆಗಳನ್ನು ಕೇಳಲು, ಕೇಂದ್ರ ಅಸೆಂಬ್ಲಿಯಲ್ಲೂ, ಅಸ್ಸಾಮಿನ ಅಸೆಂಬ್ಲಿಯಲ್ಲೂ ಅವಕಾಶವೆ ದೊರಕಲಿಲ್ಲ. ಈ ತರದ 1935ರ ಇಂಡಿಯಾ ಆಕ್ಟಿನಿಂದ ನಾವು ಸ್ವರಾಜ್ಯದ ಕಡೆ ಮುಂದೊತ್ತುತ್ತಿದ್ದೇವೆ.

ಗಿಯ್ಡಾಲೊವನ್ನು ಸ್ಮರಿಸಿಯೆ, ರಾಷ್ಟ್ರಪತಿಯರು ಅಸ್ಸಾಮಿನಿಂದ ಹಿಂತೆರಳುವವ

ಅನುಕ್ರಮಣಿಕೆ.

ಸಮುದ್ರದಲ್ಲಿ ಕಲ್ಲೋಲ
ಮ ಸಾರ್ವಭೌಮರು
ತ ಸೊಸೆ
ನಾ ಜಪಾನ್ ಯುದ್ಧದ ಗೊಂದಲ
ಚಿತ್ರವಿಚಿತ್ರ,
ವರ್ತಮಾನ ಸಂಗ್ರಹ.
ವಿವಿಧ ಸಮಾಚಾರಗಳು,
ಅಗ್ರಲೇಖ,
ಫೆಡರೇಶನು ೧೦
ಸ್ಫುಟವಿಚಾರಗಳು ,,
ತಾಲೂಕುಗಳಿಂದ ೧೧
ಮುಖ್ಯ ಮಂತ್ರಿಗಳ ಅಭಿಪ್ರಾಯ ೧೩
ಜನನಾಯಕರ ಬೆಂಬಲದ ರುದ್ರಪ್ರತಾಪ ೧೮

ಸ್ವದೇಶಾಭಿಮಾನಿ.

ತಾ.೨೪ನೇ ಶುಕ್ರವಾರ ದಶಂಬರ ೧೯೩೭

ಫೆಡರೇಶನು

ವೈಸ್ರಾಯರು ಈ ವಿಷಯ ನುಡಿದುದೇನು

ವಾಣಿಜ್ಯ ಸಂಘಗಳ ವಾರ್ಷಿಕೋತ್ಸವದ ಔತಣಕಾಲದಲ್ಲಿ, ಶ್ರೀಮಾನ್ ವೈಸ್ರಾಯರು ಭಾರತವರ್ಷವನ್ನೆಲ್ಲ ಒಂದಾಗಿಸಿ ಸಂಯೋಜಿತ ರಾಜ್ಯಭಾರಕ್ರಮವನ್ನು ಸ್ಥಾಪಿಸುವ ವಿಷಯವಾಗಿ ಮಾತೆತ್ತಿದರು. ಕಳೆದ ವರ್ಷ ವೈಸ್ರಾಯರು ಬಹಳವಾದ ವಿಶ್ವಾಸದಿಂದ ಮಾತೆತ್ತಿದಷ್ಟು ಭರವಸೆಯಿಂದೇನೂ ಈವರ್ಷ ನುಡಿಯದೆ,—ಒಂದೇ ವರ್ಷದೊಳಗಾಗಿ ಫೆಡರೇಶನು ಸ್ಥಾಪನೆಹೊಂದುವುದಾಗಿ ಅಂದು ಹೇಳಿದ್ದರು—ಈಗ ಇನ್ನಷ್ಟು ವಿಳಂಬ ಉಂಟಾಗುವುದು ನಿಜವಾದರೂ, ವಿಳಂಬವಾಗಿದ್ದರೂ ಖಂಡಿತವಾಗಿಯೆ ಈ ಹೊಸ ರಾಜ್ಯಭಾರ ಕ್ರಮದ ಸಂಯೋಜನೆಯು ಆಗಿಯೇ ಆಗುವುದು ಎಂದರು ಏಕೆಂದರೆ, ಆಕ್ಟಿನಲ್ಲಿ ಸೂಚಿತವಾಗಿರುವ ಕ್ರಮಗಳನ್ನು ಜ್ಯಾರಿಗೆ ತರುವಾಗ,—ಅವುಗಳಲ್ಲಿ ದೋಷಗಳು ಕಾಣುವುವು, ಆಕ್ಷೇಪಗಳು ತೋರುವುವು—ಇವನ್ನೆಲ್ಲ ಸ್ಥಳೀಯ ರಾಜ್ಯಗಳ ಪ್ರತಿನಿಧಿಗಳೊಡನೆ ವಿಮರ್ಶಿಸಿಯೇ ಮುಂದೊತ್ತಬೇಕಾಗಿರುವುದು ಕಳೆದ ವರ್ಷದಲ್ಲೆಲ್ಲ ವೈಸ್ರಾಯರು ಎಷ್ಟೋ ದೇಶೀಯ ರಾಜ್ಯಗಳ ದಿವಾನರು, ರಾಜರು, ಪ್ರತಿನಿಧಿಗಳು ಮೊದಲಾದವರೊಡನೆ ಈ ವಿಚಾರದಲ್ಲಿ ತುಂಬ ವಿಮರ್ಶೆ ನಡೆಸಿರುವರು ಇವರ ಈ ಪೇಚಾಟವನ್ನು ಕೊಂಡಾಡಲೇ ಬೇಕು

ಆದರೆ ಬ್ರಿಟಿಷ ಇಂಡಿಯದ ಪ್ರಾಂತ್ಯದ ಮಂತ್ರಿಮಂಡಲಗಳ ಅಭಿಪ್ರಾಯಗಳನ್ನು ಅವರು ಎಷ್ಟಕ್ಕೆ ಮನ್ನಿಸಿದ್ದಾರೆ, ಅಥವಾ ಅವರು ವಿಮರ್ಶಿಸಿರುವರು? ಇದೂ ವೈಸ್ರಾಯರ ಅವಗಾಹನೆಗೆ ಅಗತ್ಯವಾಗಿ ಕೋರಬೇಕಾದ ವಿಷಯವಲ್ಲವೆ? ಸ್ಥಳೀಯ ರಾಜ್ಯಗಳ ಪ್ರತಿನಿಧಿಗಳೆಂದರೆ, ಬ್ರಿಟಿಷ ಆಳಿಕೆಯ ಮೂಲಾಧಾರಗಳಾಗಿದ್ದು, ಸಂಸ್ಥಾನಿಕ ಪ್ರಗತಿಗೆ ಹಾನಿಕರವಾಗಿಯೇ ಅಭಿಪ್ರಾಯಕೊಡುವವರು ಎಂದು ಪ್ರಾಂತಿಕ ಜನಾಭಿಪ್ರಾಯವಿದೆ ಈ ಅಭಿಪ್ರಾಯದಲ್ಲಿ ಸೂಚಿತವಾಗಿರುವ ಸಂಶಯ ಸಂಕಷ್ಟಗಳನ್ನು ಕುರಿತು ವೈಸ್ರಾಯರು ಆಲೋಚಿಸಬೇಡವೆ? ರಾಜರುಗಳ ಮತ್ತು ಅವರ ಪ್ರತಿನಿಧಿಗಳಮಾತುಗಳನ್ನು ಕೇಳುವತವಿಗಳಿಂದಲೇ ಸ್ವಜನತೆಯ ಅಭಿಪ್ರಾಯಗಳನ್ನು ಲಾಲಿಸಬೇಡವೆ? ಅದಕ್ಕೆ ಬದಲಾಗಿ ವರಿಷ್ಠ ನ್ಯಾಯಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲು ಎಡೆಕೊಡಲಾಗುವುದಿಲ್ಲ ಎಂದು ತಿಳಿಸಿಯೇ ಇರುವರಲ್ಲ! ಸ್ಥಳೀಯ ರಾಜ್ಯಗಳು ಫೆಡರೇಶನಿನಲ್ಲಿ ಸೇರುವ ಮೊದಲು ಇವನ್ನು ಸೇರಿಸಿಕೊಳ್ಳುವ ಶರ್ತ ಮೊದಲಾದುವನ್ನು ವರಿಷ್ಠ ಸಭೆಯು ಚರ್ಚಿಸಬೇಕೆಂದಿತ್ತು, ಆಗ ಜನಾಭಿಪ್ರಾಯವು ತಿಳಿಯಬರುತ್ತಿತ್ತು ಆದರೆ, ಈ ಪ್ರಸ್ತಾಪವೇ ಎಸೆಂಬ್ಲಿಯಲ್ಲಿ ಕೇಳಬಾರದಂತೆ ವಿಧಿಯಾಗಿ ಬಿಟ್ಟಿದೆ.

ಶ್ರೀಮಾನ್ ವೈಸ್ರಾಯರು ವರಿಷ್ಠ ಸಭೆಯಲ್ಲಿ ಫೆಡರೇಶನ್ ವಿಚಾರವನ್ನು ಚರ್ಚಿಸಬಿಟ್ಟು, ಪ್ರಾಂತಿಕ ಸರಕಾರಗಳು ಈ ಭಾಗದಲ್ಲಿ ಹೇಳಲಿಕ್ಕಿರುವುದನ್ನು ಲಾಲಿಸಿ, ಮುಂದೆ ನಡೆಯುವುದು ಶ್ರೇಯಸ್ಕರವಾಗಿದೆ ಈಗಣ ಪ್ರಾಂತಿಕ ಸರಕಾರಗಳು, ಅವು ಯಾವ ಪಕ್ಷದ ಮಂತ್ರಿಗಳಿಂದ ಕೂಡಿರಬಹುದಾದರೂ, ಜನಾಭಿಪ್ರಾಯವನ್ನೆ ಸಾರುವುವಾಗಿವೆ ಎಂದು ವೈಸ್ರಾಯರೇ ಹೇಳುವಾಗ, ಈ ಸರಕಾರಗಳು ಫೆಡರೇಶನ್ ವಿಷಯವಾಗಿ ಹೇಳಲಿಕ್ಕಿರುವುದನ್ನೂ ವೈಸ್ರಾಯರು ತಿಳಿದುಕೊಂಡರೆ ಅತ್ಯುತ್ತಮವೆನಿಸದೆ? ಆಗ ತಾನೆ ಫೆಡರೇಶನು ಹೇಗಾದರೆ ಚೆನ್ನಾದೀತು ಎಂಬುದನ್ನು ನಿಷ್ಕರ್ಷಿಸಬಹುದು ತನ್ನ ಅಪ್ಪಣೆಯಂತೆ ಇಂಡಿಯವು ಬೇಡವೆಂದರೂ ಈ ಫೆಡರೇಶನ್ ವಿಧಾನವನ್ನು ಅಂಗೀಕರಿಸಬೇಕು ಎಂದು ಬ್ರಿಟಿಷ ಸರಕಾರವು ಅಹಂಭಾವದಿಂದ ಹೇಳುವುದನ್ನು ಮರೆತು, ಸ್ವಲ್ಪಮಟ್ಟಿಗಾದರೂ ಪ್ರಾಂತಿಕ ಸರಕಾರಗಳ ಅಭಿಪ್ರಾಯವನ್ನು ತಿಳಿದು ಮುಂದರಿದಲ್ಲಿ, ಫೆಡರೇಶನು ಅಸಾಧ್ಯವಾಗಿ ತೋರುತ್ತಿಲ್ಲ

ಸ್ಥಳೀಯ ರಾಜ್ಯಗಳ ಪ್ರತಿನಿಧಿಗಳು ಚುನಾವಣೆಹೊಂದಿಯೇ ಬರುವಂತಾಗಬೇಕು ಹೊರತು ರಾಜರುಗಳು ಹೆಸರೆತ್ತಿ ನೇಮಿಸಿದವರೇ ಪ್ರತಿನಿಧಿಗಳಾಗಬಾರದು, ಅಥವಾ ಬ್ರಿಟಿಷ ಪ್ರಾಂತ್ಯಗಳಿಗೆ ಮಾತ್ರ ಅನ್ವಯಿಸುವ ವಿಷಯಗಳಲ್ಲಿ ಇವರು ಕೈಯಿಕ್ಕುವುದಿಲ್ಲವಾಗಿ ಖಂಡಿತವಾದ ವಾಗ್ದಾನ ಕೊಡಬೇಕು ಮನ್ನಡೆಗೆ ಪ್ರತಿಕೂಲವಾಗಿರುವ ವಿಷಯಗಳಲ್ಲಿ ಇವರು ವೋಟು ಕೊಡುವುದೂ ಅನುಕೂಲವಿರುವಲ್ಲಿ ಇವರು ಪ್ರತಿಕೂಲರಾಗುವುದೂ ಸಂಭವವಾಗಿದೆ ಎಂದು ಆಕ್ಟಿನ ಅನುಬಂಧದಲ್ಲಿಯ ಸೂತ್ರಗಳು ತಿಳಿಸುತ್ತವೆ ಸ್ವದೇಶರಕ್ಷಣೆಗೆ ಬೇಕಾದ ಏರ್ಪಾಡು ಮುಖ್ಯವಾಗಿ ಮೊದಲಲ್ಲೇ ಆಗಬೇಕು ನಿರ್ದಿಷ್ಟವಾದ ಕಾಲದೊಳಗೆ ಸಂಪೂರ್ಣ ಸ್ವಾತಂತ್ರ್ಯ ದೊರೆವಂತೆ ಮುಂದರಿಸಲು ಏರ್ಪಾಡುಗಳು ಸೂಚಿತವಾಗಬೇಕು, ಹೊರತು ಪ್ರತಿಯೊಂದು ಹೆಜ್ಜೆಗೂ ಬ್ರಿಟಿಷ ಪಾರ್ಲಿಮೆಂಟಿನ ಮುಖ ನೋಡಿಯೇ ಪ್ರಸನ್ನತೆಯೊದಗಿಸಿಕೊಳ್ಳುವ ಕಾರಣಗಳಿರಬಾರದು ತುಕ್ಕು ಹಿಡಿದು, ಬಲು ನಿಧಾನವಾಗಿ ತಿರುಗುವ ಪಾರ್ಲಿಮೆಂಟಿನ ಯಂತ್ರಗಳ ಮೂಲಕ ಭಾರತವರ್ಷಕ್ಕೆ ಸಂಪೂರ್ಣ ಸ್ವರಾಜ್ಯ ದೊರೆವ ಮಸೂದೆ ಮುದ್ರಿಸುವರೆ ಯುಗಗಳು ಬೇಕಾದಾವೆಂಬ ಅಂಜಿಕೆಯು ದೂರಗೊಳ್ಳುವಂತೆ ಸ್ಪಷ್ಟವಚನಗಳಿಂದ ಭಾರತವರ್ಷವೆಲ್ಲ ಇಂತಿಂತಹ ಪ್ರಜಾಪ್ರತಿನಿಧಿಗಳ ಹೇಳಿಕೆಯಂತೆ ಸ್ವರಾಜ್ಯವನ್ನು ಇಂತಿಷ್ಟೆ ಅವಧಿಯೊಳಗೆ ತಳೆದುಕೊಳ್ಳಲಿ ಎಂಬ ಅಭಿಪ್ರಾಯವು ಫೆಡರೇಶನಿನ ಮೂಲದಲ್ಲೇ ಇರಬೇಕು ಇಷ್ಟನ್ನು ವೈಸ್ರಾಯರು ಪೂರಯಿಸದೆ ಇರಲಾರರು, ಹಾಗೆ ಮಾಡಲೆಂದು ಆಶಿಸುತ್ತೇವೆ

ಸ್ಫುಟವಿಚಾರಗಳು

ತುಪ್ಪ ಎಂದರೆ ಯಾವುದದು?

ಸರಕಾರವು ಅಲ್ಲಲ್ಲಿಂದ ಆಹಾರ ವಸ್ತುಗಳನ್ನು ತರಿಸಿಕೊಂಡು ಪರೀಕ್ಷಿಸಿ, ಅವುಗಳಲ್ಲಿ ಬೆರಸಿರುವ ಹಾನಿಕರ ಪದಾರ್ಥಗಳಿಗಾಗಿ, ಅವನ್ನು ಮಾರುವವರನ್ನು ದಂಡಿಸುವುದಷ್ಟೆ ಕಳೆದ ವರ್ಷ ನಮ್ಮ ಆಧಿಪತ್ಯದಲ್ಲಿ ಮಾರಾಟವಾದ ತುಪ್ಪದ ಮಾದರಿಗಳನ್ನು ನೋಡಿದಾ 88 ಅಂಶ ಇತರ ಬೆರಿಕೆಯಿದೆಯೆಂದೂ, ಹಿಂದಣ ವರ್ಷ ಇದು 45ರಷ್ಟಿತ್ತೆಂದೂ ಈಗ ಗೊತ್ತಾಗಿದೆ ಆದರೆ, ಯಾವ ತೆರದಲ್ಲೂ ಈ ಬೆರಸಿದ ಪದಾರ್ಥವು ಗೋಚರಕ್ಕೆ ಬಾರದಂತೆ ಇನ್ನೆಷ್ಟೋ ಬಗೆಯಾಗಿ ರಸಾಯನಿಕ ವಸ್ತುಗಳ ಬೆರಕೆಯಾಗುತ್ತದೆ ತುಪ್ಪದ ವ್ಯಾಪಾರಿಗಳೇ ಉತ್ತಮ ವಿಜ್ಞಾನಿಗಳ ಸಹಾಯ ಪಡೆಯುವರಾಗಿಯೂ ಗೊತ್ತಾಗಿದೆ ತುಪ್ಪದ ದೋಷಗಳಿಗಾಗಿ ವ್ಯಾಪಾರಿಗಳಿಗೆ ದಂಡನೆಯಾಯ್ತೆಂದು ತಿಳಿದು, ಈಗ ಬೆಣ್ಣೆಯನ್ನೆ ಕಾಸಿ ಕಣ್ಣೆದುರಲ್ಲೆ ತಯಾರಿಸಿರುವ ತುಪ್ಪವನ್ನು ಮಾತ್ರ ಕೆಲ ವ್ಯಾಪಾರಿಗಳು ಮಾರತೊಡಗಿದ್ದಾರೆ ಆದರೆ, ಬೆಣ್ಣೆಯಲ್ಲಿ, ಕುರಿಯ ಅಥವಾ ಆಡಿನ ಚರ್ಬಿಯನ್ನು ಗಟ್ಟಿಗೂಡಿ ತುಂಬಾ ಬೆರಸುವರಾಗಿ ತಿಳಿದುಬರುತ್ತದೆ ಹಾಲನ್ನು ಹೆಚ್ಚಾಗಿ ಅಲ್ಲಲ್ಲಿಂದ ತಂದು ಒಟ್ಟುಕೊಂಡು ಮಾರುವವರು ಅಧಿಕಾರಿಗಳಿಗೆ ತಪ್ಪು ಹೆಸರನ್ನು ತಿಳಿಸುವರು, ಇದು ಮುಂದೆ ಸಮನ್ಸು ಜ್ಯಾರಿ ಮಾಡುವಾಗ ತಿಳಿದ ಬರುವುದು ಆದುದರಿಂದ ಲೈಸನ್ಸು ಪಡೆದವರೇ ಮಾತ್ರ ಹಾಲನ್ನು ಮಾರುವಂತಾಗಬೇಕೆಂದು ವರದಿಯಲ್ಲಿ ಸೂಚನೆ ಇದೆ ಮ್ಯುನಿಸಿಪಾಲಿಟಿಗಳಲ್ಲಿ ಸೆನಿಟರಿ ಇನ್ಸ್‌ಪೆಕ್ಟರುಗಳಿಗೆ ಈ ವಿಷಯದಲ್ಲಿ ಪೋಲೀಸ್ ಅಧಿಕಾರವನ್ನು ಕೊಟ್ಟು ನೋಡಿದರೆ ಅನ್ಯಾಯಗಳು ನಡೆಯದಾಗಿ ಸೂಚನೆ ಇದಲ್ಲದೆ ಇದು ವರೆಗೆ ಹೀಗೆ ಬೆರಿಕೆಯಾದ ಪದಾರ್ಥಗಳನ್ನು ತಾಜಾ ಪದಾರ್ಥಗಳೆಂದು ಮಾರಿದವರಿಗೆ 15—20 ರೂಪಾಯಿಗಳಷ್ಟೆ ಮಾತ ದಂಡನೆ ಹೊರಿಸಿದ್ದು ಹೆಚ್ಚಲ್ಲವೆಂದೂ (ಏಕೆ ದರೆ ಈ ಬೆರಿಕೆಯಿಂದ ದೊರೆವ ಲಾಭ ಬಹಳವಾಗಿದೆ) ಆಕ್ಟಿನಲ್ಲಿ ಸೂಚಿಸಿರುವಂತೆ 100ರಿಂದ 500ರ ವರೆಗೆ ದಂಡನೆ ವಿಧಿಸಬೇಕಾಗಿ ಮ್ಯಾಜಿಸ್ಟ್ರೇಟರನ್ನು ಕೇಳಿಕೊಳ್ಳಬೇಕೆಂದೂ ಮ್ಯುನಿಸಿಪಾಲಿಟಿಗಳಿಗೆ ತಿಳಿಸಲಾಗಿದೆ ಕೆಲವೇಳೆ ಬಳ್ಳಾರಿಯಲ್ಲಿ ಮಾಡಿದಂತೆ (107 ಟಿನ್ನು ತುಪ್ಪ) ಇಂತಹ ಬೆರಿಕೆ ... ಕೆಟ್ಟ ... ಮಾರುವುದು ... ದೊಳು ಮ ... ಪದಾರ್ಥಗಳನ್ನು ನಾಶ ... ಮ್ಯುನಿಸಿಪಾಲಿಟಿಗಳಲ್ಲಿ ... ಒಳಪಡಿಸಬೇಕೆಂದೂ ... ಗಿದೆ

ವಾರ್ಧಾ ಶಿಕ್ಷಣ ಸ್ಕೀಮು

ಇದನ್ನು ಕುರಿತಾಗಿ ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರರಾಗಿರುವ ಶ್ರೀ ಎನ್ ಎಸ್ ಸುಬ್ಬರಾವ್ (ರಾಜಕಾರ್ಯ ಪ್ರವೀಣ) ಇವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿರುವರು ತಿಂಗಳಿಗೆ ರೂಪಾಯಿ ... ಆದರೂ ಸಂಬಳವು ಪ್ರಾಥಮಿಕ ಶಿಕ್ಷಕರಿಗೆ ಸಿಗಬೇಕಾಗಿ ಇದರಲ್ಲಿ ಸೂಚಿತವಾಗಿದೆ, ಇಷ್ಟಕ್ಕಾದರೂ ನಾವು ಸಂತೋಷಪಡುವ ಕಾರಣವಿದೆ ಪ್ರೊಜೆಕ್ಟ್ ಮೆಥಡನ್ನು ಅನುಸರಿಸಿ ಶಿಕ್ಷಣ ಕೊಡುವಂತಾಗಬೇಕೆಂದಿರುವುದೂ, ನೂಲುವ ಮತ್ತು ನೇಯುವ ವೃತ್ತಿಪಾಠಗಳು ನಡೆದು, ಅವುಗಳ ಪರಿಣಾಮವಾಗಿ ಶಾಲೆಯ ಖರ್ಚಿನ ಮಟ್ಟಿಗೆ ಸಹಾಯವಾಗುವಂತಿರುವುದೂ ಉತ್ತಮ ಸೂಚನೆ ಚಿಕ್ಕವರಿಗೆ ಕೈಗಾರಿಕೆಯ ಶಿಕ್ಷಣ ದೊರೆವಂತಹ ಅತ್ಯುತ್ತಮ ಪರಿಣಾಮಗಳು ಈ ಕ್ರಮದಿಂದ ಉಂಟಾಗುವವು ಆದರೆ, ಈ ಉತ್ಪನ್ನಗಳೇ ರಾಷ್ಟ್ರದ ಪಾ ಮುಖ್ಯ ಕೈಗಾರಿಕೆಗಳೊಡನೆ ಸ್ಪರ್ಧೆಗೆ ನಿಲ್ಲಬಹುದೆಂಬ ಅಂಜಿಕೆಯೂ ಇದೆ ಅದೂ ಅಲ್ಲದೆ, ಈಗ ೭ ವರ್ಷ ವಯಸ್ಸಿನೊಳಗಣ ಬಾಲಕ ಬಾಲಕಿಯರಿಗೆ ಇಂತಹ ಕೈಗಾರಿಕೆಗಳಲ್ಲಿ ಶ್ರಮವಾದರಂತೆ, ಕಾರ್ಖಾನೆಗಳ ಕಾನೂನು ಇದೆ ಕೊನೆಯ ಕಷ್ಟವೆಂದರೆ, ಈ ಬಗೆಯ ಶಿಕ್ಷಣಕೊಡಲು ಯೋಗ್ಯರಾಗಿರುವ ಉಪಾಧ್ಯಾಯರನ್ನು ಚುನಾಯಿಸುವುದು

ಬಿಹಾರದ ಮಂತ್ರಿಗಳು

ಏನನ್ನು ಅಪ್ಪಣೆ ಕೊಡಿಸಿದರೂ, ಜಿಲ್ಲಾಧಿಕಾರಿಗಳು ಸರಕಾರದ ಮುಖ್ಯ ಸೆಕ್ರೆಟರಿಯವರ ಸೂಚನೆಯಂತೆ ಮಾತ್ರವೇ ನಡೆಯಬೇಕಲ್ಲದೆ, ಈ ಅಪ್ಪಣೆಗಳಂತಲ್ಲ, ಎಂದು ಸೆಕ್ರೆಟರಿಯವರು ಪ್ರತ್ಯೇಕವೊಂದು ಅಪ್ಪಣೆ ಹೊರಡಿಸಿದ್ದರು ಇದರಿಂದ ಪ್ರಾಂತಿಕ ಸ್ವರಾಜ್ಯವೆಂದರೆ ಏನರ್ಥ ಎಂದು ಕೇಳಲು ಆಸ್ಪದವುಂಟಾಯಿತು ಮಂತ್ರಿಗಳ ಮತ್ತು ತನ್ನ ಸ್ಥಾನವನ್ನು ನಿಷ್ಕರ್ಷಿಸಿ ತಿಳಿಯಲಿಕ್ಕೆ ಮಾತ್ರ ಈ ರೀತಿಯಾಗಿ ತಾನು ಸರ್ಕಿಲರು ಕೊಟ್ಟುದಾಗಿ ಖಾಸಗಿ ಸೆಕ್ರೆಟರಿಯವರು ವಿವರಿಸಿ, ತನ್ನ ಪ್ರಮಾದಕ್ಕಾಗಿ ಸಂತಾಪಗೊಂಡರು ಮಂತ್ರಿಗಳು ಗವರ್ನರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಈ ಸರ್ಕಿಲಾರಿನ ವಿಷಯವಾಗಿ ಸ್ವಲ್ಪ ವಿಮರ್ಶಿಸಬೇಕಾಯಿತು ಗವರ್ನರರು ಈ ವಿಚಾರದಲ್ಲಿ, ಇತ್ತಂಡಗಳೊಳಗೆ ಕ್ಲೇಷವುಂಟಾಗ ಬಿಡದೆ, ಸದ್ಯದಲ್ಲೇ ಆ ಸರ್ಕಿಲಾರನ್ನು ಹಿಂದೆಗೆಯುವಂತೆ ಸೂಚಿಸಿರುವರಾಗಿ ತಿಳಿದು ಬರುತ್ತದೆ ಜಿಲ್ಲಾಧಿಕಾರಿಗಳು ಮಂತ್ರಿಗಳ ಅಪ್ಪಣೆ ಮೀರಿದರೆ ಅದರ ಪರಿಣಾಮಗಳನ್ನು ಅನುಭವಿಸಬೇಕಾಗುವುದೆಂದು ಮಂತ್ರಿಗಳೂ ಸರ್ಕಿಲಾರು ಕೊಡಿಸುವರು ಈ ಮಧ್ಯೆ ಆ ಸರ್ಕಿಲಾರು ಕೊಟ್ಟ ಬ್ರೆಟ್ ಸಾಹೆಬರು ದೀರ್ಘ ರಜೆಯ ಮೇಲೆ ಸದ್ಯದಲ್ಲೇ ತೆರಳಲಿರುವರು

ವಾರ್ತಾವರದಿ

ಅಸ್ಸಾಮಿನ ಪ್ರಧಾನ ಮಂತ್ರಿಯರಿಗೂ ಗವರ್ನರರಿಗೂ ಕಮಿಶನರ ಆಫೀಸಿನ ವ್ಯಯದ ಕುರಿತು ವಾದ ಉಂಟಾಗಿ, ಬಿಕ್ಕಟ್ಟಿನ ಪರಿಸ್ಥಿತಿಯು ಉಂಟಾಗಿರುತ್ತದೆ

ಅಹಮ್ಮದಾಬಾದಿನಲ್ಲಿ ಮತ್ತೊಮ್ಮೆ ಮುಷ್ಕರಗಳ ತಲೆದೋರಿವೆ

ಮುಂದಿನ ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷವು ಏಳು ಬಿಲ್ಲುಗಳನ್ನು ತರಲಿದೆ

ಜಪಾನೀಯರು ಉತ್ತರ ಚೀನಾದಲ್ಲಿ ಮಾತ್ರವಲ್ಲದೆ ಸಮಸ್ತ ಚೀನದ ಮೇಲೆ ಕೈ ಮಾಡುವ ಉದ್ದೇಶವನ್ನು ಕೈಕೊಂಡಿರುತ್ತದೆ ದಕ್ಷಿಣ ಚೀನಕ್ಕೆ ಜಪಾನೀಯರು ಒಂದು ಮಹಾ ದಂಡನ್ನು ಕಳುಹಿಸಿರುವರು

ಜಪಾನಿನಮೇಲೆ ಸೆ... ಗಳನ್ನು ಜ್ಯಾರಿಮಾಡುವ ಕುರಿತು ಮಿ॥ ಏಡನ್ನರು ಒಂದು ಯೋಜನೆಯ ಕುರಿತು ಆಲೋಚಿಸುತ್ತಿದ್ದಾರೆ

ಸ್ಪೆಯಿನಿನ ಟ್ರೆಕ್ವ್ಯೂರಲ್ ಎಂಬಲ್ಲಿ ದಂಗೆಖೋರರಿಗೂ ಸರಕಾರಕ್ಕೂ ಘೋರ ಕದನವೊಂದು ನಡೆದು ಸ್ಪೆನಿಶ್ ಸರಕಾರವು ವಿಜಯಿಯಾಗಿರುತ್ತದೆ

ಕೆಲ್ಲೋಗ್ ಶಾಂತಿ ಒಪ್ಪಂದವನ್ನು ರಚಿಸಿದ ಕೆಲ್ಲೋಗರು ದಿವಂಗತರಾದರು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯೊಂದು ಜನವರಿ ತಾ 2ರಲ್ಲಿ ಸೇರುವುದು ಇದಕ್ಕೆ ಎಲ್ಲಾ ಪ್ರಾಂತ್ಯಕೀಯ ಪ್ರಧಾನರು ಆಹ್ವಾನಿಸಲ್ಪಟ್ಟಿರುವರು

ಮೊಂಗಲರು ಚೀನಿಯರಿಗೆ ಸಹಾಯಕರಾಗುವರು

ಚೀನಿಯರಿಗೆ ಸಹಾಯಾರ್ಥವಾಗಿ ಮಹಮ್ಮದ್ ಸೈನ್ಯವರ್ಗವೊಂದು ಹೊರಡಿರುತ್ತದೆ

ಸಾಲಗಾರರ ಹಾವಳಿಯನ್ನು ಕಡಿಮೆ ಮಾಡುವ ಒಂದು ಬಿಲ್ಲು ಬಿಹಾರಿನ ಸರಕಾರವು ಮುಂದೆ ತರಲಿದೆ

ಲಕ್ನೋದಲ್ಲಿ ಶಸ್ತ್ರಧಾರಿಪುಂಡರ ಡಕಾಯಿತಿಗಳ ಕಾಟವು ಇಂದಿಗೆ ಬಹಳ ಸಮಯದಿಂದ ಆಗಾಗ್ಗೆ ನಡೆಯುತ್ತಿದೆ. ಇದನ್ನು ತಡೆಯುವರೇ ಪೋಲೀಸರು ಬಹಳವಾಗಿ ಪ್ರಯತ್ನಿಸುತ್ತಿದ್ದಾರೆ

ವಾರದ ವಾರ್ತೆಗಳು:

ಬಿಹಾರಿನಲ್ಲಿ ಬಿಕ್ಕಟ್ಟಿನ ಪ್ರಸಂಗ. ಬಾಬು ಸುಭಾಶ್ಚಂದ್ರಬೋಸರು ಮುಂದಿನ ಅಧ್ಯಕ್ಷರಾಗುವರು. ಜಂಜಿಬಾರ್ ಲವಂಗ ಬಹಿಷ್ಕಾರದ ಪರಿಣಾಮ. ಗವರ್ನರರ ಭೇಟಿ— ರಾಷ್ಟ್ರಪತಿ— ಲೋರ್ಡ್ ಲೊಥಿಯನ್ ಭೇಟಿ

ಮದ್ರಾಸಿನ ಲಾ (ನ್ಯಾಯ) ಕಾಲೇಜಿನಲ್ಲಿ ಭಾಷಣಮಾಡುತ್ತಾ ಪ್ರಧಾನ ಸಚಿವ ಮಾನ್ಯ ರಾಜಗೋಪಾಲಾಚಾರ್ಯರು, ಅಲ್ಲಿ ವ್ಯಾಸಂಗಮಾಡುತ್ತಿರುವ ಲಾ ವಿದ್ಯಾರ್ಥಿಗಳಿಗೆ ಒಂದು ಒಳ್ಳೇ ಬೋಧನೆಯನ್ನು ಕೊಟ್ಟರು. ಅವರು ಹಳ್ಳಿಗಳಲ್ಲಿ ನ್ಯಾಯಜ್ಞಾನವನ್ನು ಹರಡಿಸಿ ವಾದಗಳೇ ಉಂಟಾಗದಂತೆ ಸಾಧಿಸಲು ಹೊಣೆಗಾರರಾಗಬೇಕೆಂದು ಹೇಳಿದರು

ಇನ್ನೂ ಅಂಡಮಾನದಲ್ಲಿರುವ ೧೧೯ ಬಂಗಾಳದ ರಾಜಕೀಯ ಕೈದಿಗಳನ್ನು ಜನವರಿ ತಾ ೧೫ರೊಳಗೆ ಸ್ವದೇಶಕ್ಕೆ ಹಿಂತರಲಾಗುವುದೆಂದು ಬಂಗಾಳ ಸರಕಾರದ ಪ್ರಕಟಣೆಯಾಗಿರುತ್ತದೆ

ಹೊನರರಿ ಮೆಜಿಸ್ಟ್ರೇಟ ಕ್ರಮವನ್ನು ಸಂಯುಕ್ತ ಪ್ರಾಂತ್ಯದ ಸರಕಾರವು ರದ್ದುಮಾಡಿರುವುದು

ಕಲ್ಕತ್ತಾ ನಗರಸಭೆಯ ವಿದ್ಯಾಖಾತೆಯಲ್ಲಿ ಮೊನ್ನೆ ವಿಮೋಚನೆಹೊಂದಿದ ಡಿಟೆನ್ಯೂಗಳಲ್ಲಿ ೨೫ ಮಂದಿಗಳಿಗೆ ಉದ್ಯೋಗದೊರಕಿರುವುದು

ಸಂಯುಕ್ತ ಪ್ರಾಂತ್ಯದ ಕೆಲವು ಕಡೆಗಳಲ್ಲಿ ನಡೆದ ಅಸೆಂಬ್ಲಿ ಉಪಚುನಾವಣೆಯಲ್ಲಿ ಮುಸ್ಲಿಂ ಲೀಗಿಗೆನೇ ಅಧಿಕ ಮತವು ದೊರಕಿರುವುದು

ಜಪಾನೀಯರ ಕೈವಶವಾದ ಚೀನೀಯ ಸ್ಥಳಗಳಲ್ಲಿ ಜಪಾನೀಯರ ಅಧೀನದಲ್ಲಿ ಸ್ವಯಂ ಪ್ರಭುತ್ವದ ಸರಕಾರಗಳು ಸ್ಥಾಪನೆಯಾಗಿವೆ ಈ ಮೊದಲು ಇದ್ದ ಚೀನೀಯ ಸರಕಾರಗಳೆಲ್ಲಾ ರದ್ದಾಗಿವೆ

"ವಿದ್ಯಾರ್ಥಿಗಳು ಮಾತೃಭೂಮಿಯ ಸೇವಕರಾಗುವಂತೆ, ಅದರ ಸೇವೆಯನ್ನು ಮಾಡುವಂತೆ ಅವರ ಶಿಕ್ಷಣವು ನಡೆಯಬೇಕು ಜಪಾನಿನ ಯಶಸ್ಸಿಗೆ ಇದೇ ಕಾರಣವು ಜಪಾನಿನಲ್ಲಿ ಪ್ರಾಥಮಿಕ ಮತ್ತು ಮಿಲಿಟರಿ ವಿದ್ಯಾಭ್ಯಾಸವು ಕಡ್ಡಾಯವಾಗಿ ನಡೆಯುತ್ತಿದೆ ಅದೇ ರೀತಿಯಲ್ಲಿ ಹಿಂದೂದೇಶದಲ್ಲೂ ನಡೆಯಬೇಕು"— ಎಂಬುದಾಗಿ ಪಂಡಿತ ಮಾಲವೀಯರು ಅಲ್ಲಹಾಬಾದಿನ ವಿಶ್ವವಿದ್ಯಾಲಯದ ಪದವಿದಾನೋತ್ಸವ ಸಮಯದಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ತಿಳಿಸಿದರು

ಮೊನ್ನೆ ತಾ ೧೪ರಲ್ಲಿ ಜರಗಿದ ಅಲ್ಲಹಾಬಾದ್ ವಿಶ್ವವಿದ್ಯಾಲಯದ ಪದವೀದಾನೋತ್ಸವಕ್ಕೆ ಇತರ ಮಹನೀಯರೊಡನೆ ರಾಷ್ಟ್ರಪತಿಯವರೂ ಕೂಡಿಬಂದು ಸಂಯುಕ್ತ ಪ್ರಾಂತ್ಯದ ಗವರ್ನರರಾದ ಸರ್ ಹೇರಿ ಹೇಗರ ಪರಿಚಯ ಮಾಡಿಕೊಂಡರಂತೆ

ಹಣದ ಅಭಾವವಿರುವ ಇಂದಿನ ದಿನಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕೈಗೊಳ್ಳುವದು ಸರಕಾರಗಳಿಗೆ ಅಸಾಧ್ಯವಾದುದರಿಂದ, ವಿದ್ಯಾವಂತ ತರುಣರು ಹಳ್ಳಿಗಳಲ್ಲಿ ನೆಲೆನಿಂತು ರಾಷ್ಟ್ರೀಯ ಶಿಕ್ಷಣದ ಬಗ್ಗೆ ಪರಿಶ್ರಮಿಸಬೇಕೆಂದು ಪಂಡಿತ ಮಾಲವೀಯರು ಅಲ್ಲಹಾಬಾದಿನಲ್ಲಿ ನೂತನವಾಗಿ ಪದವಿಪಡೆದ ತರುಣರಿಗೆ ಬೋಧನೆಯಿತ್ತರು

ವಿದ್ಯಾರ್ಥಿಗಳ ಮೇಲೆ ಮಹಾಹೊಣೆಗಾರಿಕೆಯು ಇರುವುದೆಂದು ರಾಷ್ಟ್ರಪತಿಯವರು ಹಿಂದೆ ಒಂದು ಭಾರಿ ಬೋಧಿಸಿದುದನ್ನು ಪಂಡಿತ ಮಾಲವೀಯರು ಅಲ್ಲಹಾಬಾದಿನ ತಮ್ಮ ಭಾಷಣದಲ್ಲಿ ಮತ್ತೊಮ್ಮೆ ಒತ್ತಿಹೇಳಿ ಭಾಷಣ ಮಾಡಿದರು

ಚೀನಾನಾಯಕ ಚಿಯಾಂಗ್-ಕೈ ಶೇಕ್ ಇವರು ಜ್ಞಾನಾನಿನ ಚೀನಾ ಸರಕಾರವನ್ನು ಅಲ್ಲಗಳೆದಿರುವರು.

ಸಿಪಾಯಿ ದಂಗೆಯ ಸಮಯದವನಾದ ೧೧೫ ವರ್ಷ ಪ್ರಾಯದ ಸೂರತ್ತಿನ ಅಬ್ದುಲ್ ಘಫರ್ ಮಹಮ್ಮದ್‌ಭಾಯಿಯು ಮೊನ್ನೆ ದಿನ ಪರಲೋಕವಾಸಿಯಾದನು

ತನ್ನ ಅಪ್ಪಣೆಗಳನ್ನು ಸರಿಯಾಗಿ ನಡೆಸದುದಕ್ಕೆ ಶಾಂಘಾಯಿಯಲ್ಲಿನ ಚೀನಾ ದಂಡಿನ ನಾಯಕನೊಬ್ಬನನ್ನು ಚಿಯಾಂಗ್ ಕೈ ಶೇಕರ ಅಪ್ಪಣೆಪ್ರಕಾರ ಗಲ್ಲಕ್ಕೇರಿಸಲ್ಪಟ್ಟನು

ನಾಂಕಿಂಗ್ ನಗರದಲ್ಲಿ ೯೦,೦೦೦ ಮಂದಿ ಚೀನಿಯರು ಮಡಿದಿರುವರಂತೆ

ಚೀನಿಯರು ಜಪಾನಿಯರನ್ನು ವಿರೋಧಿಸಲು ಮಹಾ ಸಿದ್ಧತೆಗಳನ್ನು ಮಾಡುತಿದ್ದಾರೆ

ಮಹಾತ್ಮಾಜಿ ವಿರಚಿತ ವಿದ್ಯಾಯೋಜನೆಯ ಕುರಿತು ಬಹಳ ಮೆಚ್ಚುಗೆಯನ್ನು ಸೂಚಿಸಿ, ಇಂದಿಗೆ ಬಹಳ ವರ್ಷಗಳಿಂದ ಪ್ರೊಫೆಸರರಾಗಿ ಸ್ವಿಟ್ಸರ್‌ಲೇಂಡಿನಲ್ಲಿ ನೆಲೆನಿಂತ ಡಾ। ಪ್ರಿವಾತರು, ಮಹಾತ್ಮಾಜಿಯವರಿಗೆ ಒಂದು ಪತ್ರವನ್ನು ಬರೆದಿರುವರು ಇದೇ ತರದ ವಿದ್ಯಾಯೋಜನೆಗಳು ಪಾಶ್ಚಾತ್ಯದಲ್ಲಿ ಅನೇಕ ಕಡೆಗಳಲ್ಲಿ ರೂಢಿಯಲ್ಲಿದ್ದು, ವಿದ್ಯಾರ್ಥಿಯರ ದುಡಿಮೆಯಿಂದಲೇ ನಡೆಯುವ ಅನೇಕ ಶಾಲೆಗಳು ಅಲ್ಲಿವೆ ಎಂದು ಇವರು ತಿಳಿಸುತಿದ್ದಾರೆ

ಹರಿಜನರಿಗೆ ಶುದ್ಧ ನೀರನ್ನು ಒದಗಿಸುವರೆ ಕೂಡಿಸಲಾದ ನಿಧಿಯಲ್ಲಿ ಇನ್ನೂ ಅರ್ಧ ಲಕ್ಷ ರೂಪಾಯಿಗಳು ಇರುವುದು. ಹರಿಜನರಿಗಾಗಿ ಬಾವಿಗಳನ್ನು ತೋಡಲು ಧನಸಹಾಯವನ್ನು ಬೇಕಾದವರು ಕೋರಬಹುದೆಂದೂ ಆ ಬಗ್ಗೆ ಹರಿಜನ ಸೇವಕ ಸಂಘದ ಶ್ರೀ। ಠಕ್ಕರಬಾಪಾರವರ ಪ್ರಕಟನೆ

ಕಾಂಗ್ರೆಸ್ ಸರಕಾರದ ರೀತಿ ನೀತಿಯ ಸ್ವಲ್ಪ ಸಮಾಧಾನದಿಂದ ಇರಬೇಕೆಂದು ಶ್ರೀ ವಿಜಯ ಲಕ್ಷ್ಮಿ ಪಂಡಿತರ ವಿಲ್ಲೆಪಾರ್ಲೆಯಲ್ಲಿ ನಡೆದ ಒಂದು ಸ್ತ್ರೀಸಭೆಯಲ್ಲಿ ಮನವಿಮಾಡಿಕೊಂಡಿರುವರು

ಭಾರತೀಯ ವಿಜ್ಞಾನ ಪರಿಷತ್ತಿನ ರಜತೋತ್ಸವಕ್ಕಾಗಿ ಹಿಂದೂದೇಶಕ್ಕೆ ಹೊರಟ ನೂರು ಮಂದಿ ಪಾಶ್ಚಾತ್ಯ ವಿಜ್ಞಾನಿಗಳು ಮುಂಬಾಯಿಯಲ್ಲಿ ಇಳಿದು ಮುಂಬಾಯಿ ವಿಶ್ವವಿದ್ಯಾನಿಲಯದ ಸತ್ಕಾರಪೂರ್ವ ಸ್ವಾಗತವನ್ನು ಪಡೆದು, ವಿಜ್ಞಾನ ಪರಿಷತ್ತಿನಲ್ಲಿ ಭಾಗವಹಿಸಲು ಕಲ್ಕತ್ತೆಗೆ ತೆರಳಿರುವರು

ಲಾರ್ಡ್ ಲೋಥಿಯಾನರು, ಮಹಾತ್ಮಾಜಿಯವರನ್ನು ಮತ್ತು ಶ್ರೀ। ಜವಾಹರಲಾಲ ನೆಹರುಗಳವರನ್ನು ಸದ್ಯದಲ್ಲೇ ಕಂಡು, ಭಾರತೀಯ ರಾಜಕೀಯ ಪ್ರಶ್ನೆಯ ಕುರಿತು ವಿಚಾರಿಸುವರಂತೆ

ಬಿಹಾರ ಸರಕಾರದ ಮುಖ್ಯ ಕಾರ್ಯದರ್ಶಿಗಳಾದ ಬ್ರೆಟ್ ಸಾಹೇಬರಿಂದ ಪ್ರಾಂತ್ಯದ ಅಧಿಕಾರಿಗಳಿಗೆ ಕಾಂಗ್ರೆಸ್ ಮಂತ್ರಿಗಳ ಅಪ್ಪಣೆಗಳನ್ನು ನಡೆಸಿಕೊಡಬಾರದಾಗಿ ಹೊರಟ ಅಪ್ಪಣೆಯು ಈಗ ಹಿಂತೆಗೆಯಲಾಗಿದೆ ಗವರ್ನರರಿಗೂ ಮಂತ್ರಿಮಂಡಲಕ್ಕೂ ನಡೆದ ಮಾತುಕತೆಯ ಫಲಿತಾಂಶವಾಗಿ, ಈ ಅಪ್ಪಣೆಯಲ್ಲಿ ಗವರ್ನರರಿಗೆ ಯಾವತ್ತೂ ತರದ ಕೈಯಿರಲಿಲ್ಲವಂತೆ. ಇದರ ಪರಿಣಾಮವಾಗಿ ಬ್ರೆಟ್ ಸಾಹೇಬರು ದೀರ್ಘಕಾಲದ ರಜೆಯಲ್ಲಿ ಹೋಗಬೇಕಾಗಿದೆ

ರಂಗೂನಿನ ಸರಕಾರಿ ಸದನದಿಂದ ೬೦ ಸಾವಿರ ರೂಪಾಯಿ ಮೌಲ್ಯದ ಕೆಲವು ಆಭರಣಗಳ ಕಳವಾಗಿರುತ್ತದೆ.

ಮುಂಬಾಯಿಯಲ್ಲಿ ಶ್ರೀ। ನರಿಮೇನರು ಬಹುಮತ ಪಡೆದು, ಹರಿಪುರದ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು

ಶ್ರೀ।ಗಳಾದ ಭುಲಾಭಾಯಿ ದೇಸಾಯಿ, ರಾಜಗೋಪಾಲಾಚಾರ್ಯ ಇವರೇ ಮೊದಲಾದ ಮಹನೀಯರು ವಿರೋಧಿಗಳಿಲ್ಲದೇನೇ ಹರಿಪುರ ಕಾಂಗ್ರೆಸ್ಸಿಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು

ಚೀನಾದೇಶದ ಕೆಂಟೋನ್ ಪ್ರದೇಶದಲ್ಲಿ ಸಿಂಗ್ಪೋ ಎಂಬಲ್ಲಿ ಜಪಾನಿಯರ ೧೭ ಮಿಲಿಯ ಪವನು ಬೆಲೆಬಾಳುವ ಗಿರಣಿಗಳನ್ನು ಚೀನೀಯರು ಸುಟ್ಟುಬಿಟ್ಟಿರುವರು

ಹಾಂಕೋವಿನಲ್ಲಿ ಸೋವಿಯಟ್ ವೈಮಾನಿಕರ ಸಹಾಯದಿಂದ ಜಪಾನಿಯರನ್ನು ವಿರೋಧಿಸಲು ಚೀನಿಯರು ವಿಶೇಷ ತರದ ಸಿದ್ಧತೆಗಳನ್ನು ಮಾಡಿರುವರು

ತನ್ನ ಜಹಜನ್ನು ಧ್ವಂಸಮಾಡಿದುದಕ್ಕೆ ಅಮೇರಿಕವು ಜಪಾನಿನೊಡನೆ ಬರೇ ಪ್ರತಿಕೂಲಗಳನ್ನು ಮಾಡುತ್ತಿದೆಯಲ್ಲದೆ, ಸಮರಭೂಮಿಗೆ ಇಳಿಯುವ ಕುರಿತು ಯಾವತ್ತೂ ಆಲೋಚನೆಗಳನ್ನು ಮಾಡಿದ ದು ಕಂಡುಬರುವುದಿಲ್ಲ

ಹಿಟ್ಲರಗೆ ವಸಾಹತುಗಳನ್ನು ಕೊಟ್ಟು ಆತನನ್ನು ಸಮಾಧಾನಪಡಿಸಿದರೆ ಪ್ರಪಂಚದ ಶಾಂತಿಭಂಗವಾಗದೆಂದು ಕೆಲವು ಬ್ರಿಟಿಷ ಮುತ್ಸದ್ದಿಗಳ ಅಭಿಪ್ರಾಯ

"ಹಿಟ್ಲರ್—ಹಾಲಿಫೆಕ್ಸ್ ಮಾತುಕತೆಯಿಂದ ಭಯಂಕರ ವ್ಯವಹಾರ ಸಂಭವಿಸಿತು ಎಡೆನ್ನರಿಗೆ, ಹಾಲಿಫೆಕ್ಸರು ಆ ಕಾರ್ಯವನ್ನು ವಹಿಸಿದ್ದರಿಂದ ತನ್ನ ಸಿರ್ಗಿನವಾಗಿ ಅವಮಾನವಾಗಿದೆಂದು ತಮ್ಮ ಉದ್ವೇಗ ರಾಜಿನಾಮೆಯಿತ್ತರಂತೆ ಅದರ ಆ ವಾರ್ತೆಯು ಜಗತ್ತಿಗೆ ಪ್ರಕಟವಾಗುವ ಮೊದಲೇ ಕೆಲವು ಮಾತುಕತೆಗಳು ನಡೆದು, ಎಡೆನರನ್ನು ಸಮಾಧಾನಪಡಿಸಿ, ಅವರು ರಾಜಿನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಲಾಯಿತು

ಜಪಾನಿಯರು ಅಮೇರಿಕದ "ಪಾನೇ" ಎಂಬ ಜಹಜಿನ ಮೇಲೆ ಆಕ್ರಮಿಸಿ ಅದನ್ನು ಮುಳುಗಿಸಿದ ಕುರಿತು, ಅಧ್ಯಕ್ಷ ರೂಸ್‌ವೆಲ್ಟರು ಜಪಾನಿಯರ ಸರಕಾರದೊಡನೆ ಬಲವಾದ ಪ್ರತಿಕೂಲಿಮಾಡಿದುದರ ಪರಿಣಾಮವಾಗಿ, ಜಪಾನೀಯ ಸಂಗ್ರಾಮಾಧಿಕಾರಿಗಳೊಬ್ಬರು ಸ್ವದೇಶಕ್ಕೆ (ಹಿಂದಕ್ಕೆ) ಕರೆಯಲ್ಪಟ್ಟಿರುವರಂತೆ

ಸ್ಪೈನಿನಲ್ಲಿ ಸಮರವು ಸಾಗುತ್ತಿದೆ ರಿಪಬ್ಲಿಕ್ ಸರಕಾರಕ್ಕೆ ಅನೇಕ ಜಯಗಳು ಒದಗಿದುದರಿಂದ ದಂಗೆಗಾರರ ಚಟುವಟಿಕೆಗಳು ಸ್ವಲ್ಪ ತಡೆಗಟ್ಟಿವೆಯೆಂದು ತಿಳಿದುಬರುತ್ತದೆ

ಮದ್ರಾಸಿನ ಕಾಂಗ್ರೆಸ್ ಭವನದಲ್ಲಿ ಅ। ಭಾ। ಖಾದಿ ಮತ್ತು ಕೈಗಾರಿಕಾ ಪರಿಷತ್ತು ಪ್ರಾರಂಭವಾಗಿರುತ್ತದೆ ಹಳ್ಳಿ ಕೈಗಾರಿಕೆಗಳ ಅಭ್ಯುದಯದ ಕುರಿತು ಅನೇಕ ಪ್ರದರ್ಶನಗಳ ಏರ್ಪಾಡುಮಾಡಲಿದೆ

ಹಿಂದೂದೇಶಕ್ಕೆ ಬಂದ ಲೋರ್ಡ್ ಲೋಥಿಯನರು ಮೊನ್ನೆ ಅಲ್ಲಹಾಬಾದಿಗೆ ತೆರಳಿದವರು ಆನಂದಭವನಕ್ಕೆ ತೆರಳಿ ರಾಷ್ಟ್ರಪತಿ ಜವಾಹರಲಾಲರನ್ನು ಕಂಡರು ಬೆಳಿಗ್ಗೆ ೯ ಘಂಟೆಗೆ ಬಂದ ಲೋಥಿಯನರು ಅಪರಾಹ್ನ ೧ ಘಂಟೆಗೆ ಹಿಂತೆರಳಿದ್ದು, ಶ್ರೀ। ನೆಹರುಗಳನ್ನು ನಿನ್ನೆ ಮತ್ತೊಮ್ಮೆ ಕಂಡರು.

ರೈತರು ಇಂದು ರೂಢಿಯಲ್ಲಿರುವ ಕ್ರಮಗಳಿಗೆ ವಿಧೇಯರಾಗಿ ವರ್ತಿಸದಿದ್ದರೆ ಕಾಂಗ್ರೆಸ್ ಸರಕಾರಕ್ಕೆ ಒಂದೇ ಬಲಾತ್ಕಾರಯುಕ್ತ ಉಪಾಯಗಳನ್ನು ನಡೆಸಬೇಕಾಗುತ್ತದೆ, ಇಲ್ಲವಾದರೆ ಸರಕಾರ, ಸಹಕಾರ ಬ್ಯಾಂಕುಗಳನ್ನು ಸರಕಾರವೆಂದರೆ ...ಗಳೂ ರೈತರದ್ದೇ— ದರೆ, ಅಧಿಕಾರ ಕೈಜಿಸಬೇಕಾಗುತ್ತದೆ ಸರಿಸರಿಂದ ರೈತರೆಲ್ಲರೂ ಈ ವರ್ಷ ಗೇಣಿ ವಿನಾ ಕಾಗಿ ಸಂಯುಕ್ತಪ್ರಾಂತ್ಯದ ಮಂತ್ರಿಮಂಡಳಿಯು ... ಬ್ಬರ ಮನವಿ ...ದಕ್ಕೆ

ರೈತರ ಋಣಸಂದಾಯದ ಬೀಲಿನ ಕುರಿತು ಮದ್ರಾಸು ಎಸೆಂಬ್ಲಿಯಲ್ಲಿ ಜೊಯಿಂಟ್ ಸಿಲೆಕ್ಟ್ ಕಮಿಟಿಯ ರಚನೆಯಾಗಿರುತ್ತದೆ ನಮ್ಮ ಜಿಲ್ಲೆಯ ಶ್ರೀಯುತ ಕಾರಂತರು ಈ ಕಮಿಟಿಯಲ್ಲಿರುವರು

ಸ್ಪೈನಿನ ದಂಗೆಗಾರ ವಿಮಾನಗಳು ಬೆರ್ಸಿಲೋನಾದ ಮೇಲೆ ಬೊಂಬಿನ ಧಾಳಿಯನ್ನು ನಡೆಸಿದರು ಸ್ಪೈನಿನ ಸರಕಾರವನ್ನು ಸದೆಬಡೆಯಲು ಜನರಲ್ ಫ್ರೇಂಕೊನು ಬಹಳ ಪರಿಶ್ರಮಪಡುತ್ತಿದ್ದರೂ, ನಿರರ್ಥಕವಾಗಿದೆ

ಅಹ್ಮದಾಬಾದಿನಲ್ಲಿ ಪುನಃ ಮತ್ತೊಮ್ಮೆ ಮುಷ್ಕರ ನಡೆಯುವ ಸಂಭವಗಳಿವೆ

ಮಹಾತ್ಮಾಜಿಯವರಿಂದ ಕಲ್ಪಿತವಾದ ವಾರ್ಧಾ ಶಿಕ್ಷಣ ಯೋಜನೆಯು ಜಗತ್ತಿನ ಉತ್ತಮ ಯೋಜನೆಗಳಲ್ಲಿ ಒಂದೆಂದು ಹಿಂದೂದೇಶದಲಿ ಈಗ ಪ್ರವಾಸಗೈಯುತ್ತಿರುವ ನ್ಯೂ ಎಜ್ಯುಕೇಶನ್ ಡೆಲಿಗೇಶನಿನ ಪ್ರೊ। ಸೆಟಿರ್ ಡೇವಿಸ್‌ರ ಅಭಿಪ್ರಾಯವಾಗಿರುವುದು

ಬ್ರಿಟನು ಇನ್ನೂ ನಾಲ್ಕೈದು ವರ್ಷಗಳ ಸಮಯ ಯುದ್ಧಶಸ್ತ್ರ ಸಿದ್ಧತೆಯಲ್ಲಿ ತೊಡಗುವುದಂತೆ

ಬ್ರಿಟನ ಪ್ರಧಾನಮಂತ್ರಿ ಚೆಂಬರ್‌ಲೇನರ ಆರೋಗ್ಯಸ್ಥಿತಿಯು ನೆಟ್ಟಗಿಲ್ಲದಿರುವುದರಿಂದ, ಅವರಿಗೆ ತನ್ನ ಕಾರ್ಯಗಳನ್ನು ಒಬ್ಬಂಟಿಗರಾಗಿ ನಡೆಯಿಸಲಾಗದಿರುವುದರಿಂದ, ಸರ್ ಸಾಮುವೇಲ್ ಹೋರರನ್ನು ಅವರಿಗೆ ಸಹಾಯಕರಾಗಿ ಕೊಡುವ ಆಲೋಚನೆಯಿದೆ

ಹಿಂದೂದೇಶದಿಂದ ಆಚರಿಸಲಾದ ಜಂಜಿಬಾರ್ ಲವಂಗ ಬಹಿಷ್ಕಾರವು ಅತ್ಯಂತ ಪರಿಣಾಮಕಾರಿಯಾದಂತೆ ತೋರುತ್ತದೆ ಇದರಿಂದ ಅಲ್ಲಿನ ಸರಕಾರ ಆಯದಲ್ಲಿ ೩೦ ಸಾವಿರ ಪವನುಗಳು ಕಡಿಮೆಯಾಗಿವೆ ಬಹಿಷ್ಕಾರವು ಹೀಗೆ ದೀರ್ಘ ರೂಢಿಯಲ್ಲಿದ್ದರೆ ಅಲ್ಲಿನ ಸರಕಾರಕ್ಕೆ ಆರ್ಥಿಕ ಮುಗಟ್ಟು ಉಂಟಾಗುವುದೆಂದು ಊಹಿಸಲಾಗಿದೆ

ಮಧ್ಯಪ್ರಾಂತ್ಯದ ಸರಕಾರವು ಪರೀಕ್ಷಾರ್ಥವಾಗಿ ತನ್ನ ಒಂದು ಜಿಲ್ಲೆಯಲ್ಲಿ ಕಡ್ಡಾಯಶಿಕ್ಷಣ ಯೋಜನೆಯನ್ನು ನಡೆಯಿಸುವುದಂತೆ. ಅಬಕಾರಿ ಉತ್ಪನ್ನದಿಂದ ರೂ ೨೦ ಲಕ್ಷಗಳನ್ನು ಗ್ರಾಮೋದ್ಧಾರಕಾರ್ಯಕ್ಕೆ ವಿನಿಯೋಗಿಸುವ ಆಲೋಚನೆಯೂ ಮಧ್ಯಪ್ರಾಂತ್ಯ ಸರಕಾರಕ್ಕೆ ಇರುವುದೆಂದು ತಿಳಿದುಬರುತ್ತದೆ.

ಜಮೀನ್ದಾರರನ್ನು ವಿಚಾರಿಸಿ, ಅವರ ಸಮ್ಮತಿಪಡೆದು ಒಕ್ಕಲುಗಳ ಸ್ಥಿತಿಯನ್ನು ಕೆಲವು ಮಟ್ಟಿಗೆ ಉದ್ಧಾರಗೊಳಿಸುವ ಮಸೂದೆಯೊಂದು ಬಿಹಾರಿನ ಎಸೆಂಬ್ಲಿಯಲ್ಲಿ ಮಂಜೂರಾಗಿರುವುದು

ಸಂಯುಕ್ತಪ್ರಾಂತ್ಯದ ಗವರ್ನರು ಕಾಂಗ್ರೆಸ್ ಪ್ರಧಾನರನ್ನು ಲಕ್ಷಿಸದೆ ಥಿಲ್ಲಿಯ ಕೆಲವು ಕಾಂಗ್ರೆಸ್ ಕೆಲಸಗಾರರ ದಸ್ತಗಿರಿಗೆ ಅಪ್ಪಣೆಕೊಟ್ಟಿದ್ದರಂತೆ. ಈ ಕುರಿತು ಕಾಂಗ್ರೆಸ್ಸಿನ ಧೋರಣೆಯನ್ನು ಆಲೋಚಿಸಲು ಕಾಂಗ್ರೆಸ್ ಮಂತ್ರಿಗಳು ಆನಂದ ಭವನದಲ್ಲಿ ಸೇರಿದ್ದರು

ಹರಿಪುರದ ಕಾಂಗ್ರೆಸ್‌ಗೆ ಬಾಬು ಸುಭಾಶ್ಚಂದ್ರಬೋಸರನ್ನು ಅಧ್ಯಕ್ಷರನ್ನಾಗಿ ಚುನಾಯಿಸುವ ಸಂಭವಗಳಿವೆ

ಐಗುಪ್ತದ ಅರಸರಿಗೂ ಪ್ರಧಾನ ಸಚಿವರಿಗೂ ಶಾಸನವಿಚಾರದಲ್ಲಿ ಭೇದಾಭಿಪ್ರಾಯವುಂಟಾಗಿ, ಅರಸರು ಸದ್ಯದಲ್ಲೇ ಪ್ರಧಾನ ಸಚಿವ ನಾಹಾಸ್ ಪಾಶಾರವರನ್ನು ನಿವೃತ್ತಗೊಳಿಸಲಿಕ್ಕಿದ್ದಾರಂತೆ.

ಗಳೂರು.

ಪುರ ಕಾಂಗ್ರೆಸ್ಸು.

ದಲ್ಲಿ ಬರುವ ಫೆಬ್ರವರಿಯಲ್ಲಿ ಜರಗುವ ಅಧಿವೇಶನದ ಕುರಿತು, ಸಮಸ್ತ ಜಿಲ್ಲೆಯಲ್ಲೆಲ್ಲಾ ಉತ್ಸಾಹವು ಉಂಟಾಗಿದ್ದು ಹರಿ ವಿಠಲ ನಗರದಲ್ಲಿ ಬಾರಿ ಜನ ಸ್ತೋಮವು ಕೂಡಿ ಬರುವುದೆಂದು ಊಹನೆಗಳುಂಟಾಗಿವೆ. ಸ್ವಾಗತ ಕಮಿಟಿಯು ಆ ಬಗ್ಗೆ ಎಲ್ಲಾ ಸಿದ್ಧತೆಗಳನ್ನು ಮಾಡುವುದರಲ್ಲಿ ತೊಡಗಿರುತ್ತದೆ.

ಬಡವರಿಗೆ ಧರ್ಮಾರ್ಥವಾಗಿ ಉಳಕೊಳ್ಳಲು ಚಪ್ಪರದ ನಿರ್ಮಾಣ ಮಾಡಲಾಗಿದೆ. ಇತರರಿಗೆ ಸಣ್ಣ ಸಣ್ಣ ಗುಡಿಸಲುಗಳ ನಿರ್ಮಾಣ ಮಾಡಲಾಗಿದೆ. ಇವುಗಳಿಗೆ ಬಾಡಿಗೆಯನ್ನು ತೆರಬೇಕಾಗಿದೆ. ಬಿಡಾರ ಬೇಕಾದವರು ಮೊದಲಾಗಿ ತಿಳಿಸಬೇಕು.

ವಿಠಲ ನಗರವು ಬಿ. ಬಿ ಎಂಡ್ ಸಿ. ಐ. ರೈಲ್ವೆ ನಿಲ್ದಾಣವಾದ ಕಿಲ್ಲಾ ಸ್ಟೇಶನಿನಿಂದ ೨೦ ಮೈಲು ದೂರವಿರುತ್ತದೆ. ಇಲ್ಲಿಂದ ವಿಠಲ ನಗರಕ್ಕೆ ತೆರಳಲು ಬಸ್ಸಿನ ವ್ಯವಸ್ಥೆಯಿದೆ.

ಮಿಶನ್ ಹಾಸ್ಕೂಲ್ ದಿನಾಚರಣೆಯು ಮೊನ್ನೆ ತಾ. ೨೦ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಜನಾಬ್ ಗುಲಾಂ ದಸ್ತಗಿರ್ ಸಾಹೇಬು ಬಹದೂರರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಅಂದು ಬೆಳಗ್ಗೆ ಆಟಪಂದ್ಯಾಟಗಳು ನಡೆದು, ಫಲಾಹಾರ ಕೂಟವು ನಡೆಯಿತು. ಬಹುಮಾನ ಹಂಚೋಣ, ಮುಖ್ಯ ಉಪಾಧ್ಯಾಯರ ವರದಿ, ಅಧ್ಯಕ್ಷರ ಭಾಷಣ, ನಾಟಕ ಇತ್ಯಾದಿಗಳಿಂದ ಸಾಯಂಕಾಲದ ಕಾರ್ಯಕ್ರಮವು ನಡೆಯಿತು.

ವಿದ್ಯಾರ್ಥಿ ಸಂಘ

ಸ್ಥಳೀಯ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಮದ್ರಾಸು ಸರಕಾರದ ಕೋರ್ಟು ಮತ್ತು ಆರೋಗ್ಯದ ಸಚಿವರಾದ ಮಾನ್ಯ ರಾಮನ್ ಮೆನೊನರು ಬರುವ ಆದಿತ್ಯವಾರ ತಾ. ೨೬ರಲ್ಲಿ ಪ್ರಾತಃಕಾಲ ೭ ಘಂಟೆಗೆ ಇಲ್ಲಿನ ಪಬ್ಲಿಕ್ ಪ್ಲೈ ಬಜಾರಿನ ವಿಜಯ ಹಾಲಿನಲ್ಲಿ ಒಂದು ಭಾಷಣ ಮಾಡಲಿದ್ದಾರೆ. ಎಲ್ಲರಿಗೂ ಸುಸ್ವಾಗತವಿದೆ.

ಡಾಕ್ಟರ್ ಎಂ. ಕೇಶವ ಪೈಯವರು.

ಮದ್ರಾಸಿನ ಕ್ಷಯರೋಗ ಚಿಕಿತ್ಸೆ ಪ್ರವೀಣರಾದ ನಮ್ಮ ಜಿಲ್ಲೆಯವರಾದ ಡಾ. ಎಂ. ಕೇಶವ ಪೈಯವರು ಈಗ ಮಂಗಳೂರಿಗೆ ಚಿಕಿತ್ಸೆಗಿರುವರು. ಶ್ರೀಯುತರು ಮದ್ರಾಸಿನ ಸಂಯುಕ್ತ ಗೌಡಸಾರಸ್ವತ ಸ್ಕಾಲರ್‌ಶಿಪ್ ಸಂಘಕ್ಕೆ ನಿಧಿ ಕೂಡಿಸುವರೆ ನಮ್ಮ ಜಿಲ್ಲೆಯ ಪ್ರವಾಸ ಗೈಯುವರಾಗಿ ಬರಲಿರುವರೆ. ನಮ್ಮ ಜಿಲ್ಲೆಯಲ್ಲಿ ಹಲವು ಜನರು ಇವರ ಕೈಗಳಲ್ಲಿ ಚಿಕಿತ್ಸೆಯನ್ನು ಪಡೆದು ಗುಣಲಾಭವನ್ನು ಪಡೆದಿರುವರು. ಶ್ರೀಯುತರು ಹಿಡಿದ ಕಾರ್ಯವು ಯಶಸ್ವಿಯಾಗಿ ನಡೆಯುವಂತೆ ಸಹಾಯಕರಾಗುವರೆಂದು ಕೋರಿಕೆ ಇದೆ.

ಇವರು ಸ್ಥಳೀಯ ಕೆನರಾ ಹೈಸ್ಕೂಲಿನ ದಿನಾಚರಣೆಯಲ್ಲಿ ಭಾಗವಹಿಸಿದ್ದರು.

ಕಳೆದ ರಿ ಸೆಟ್ಲ್‌ಮೆಂಟ್ ಪ್ರಕಾರ ನಮ್ಮ ಜಿಲ್ಲೆಯ ನಂಜ ಮತ್ತು ಪುಂಜ ಭೂಮಿಗಳ ಮೇಲಿನ ಕಂದಾಯವನ್ನು ಹೆಚ್ಚಿಸಿದುದು ಕಾಂಗ್ರೆಸ್ ಸರಕಾರದಿಂದ ರದ್ದು ಮಾಡಲಾಗಿದೆ.

ಜಿಲ್ಲಾ ಟೀಚರ್ ಮೆನೇಜರರ ಪರಿಷತ್ತು

ಇದೇ ತಾ. ೧೮ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ೧೩ನೇ ಪರಿಷತ್ತು ಸ್ಥಳೀಯ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಶ್ರೀಗಳಾದ ಮಂಗೇಶರಾಯರ ಅಧ್ಯಕ್ಷತನದಲ್ಲಿ ಕೂಡಿತು. ಕಡ್ಡಾಯವಾದ ಎಲಿಮೆಂಟರಿ ವಿದ್ಯಾಭ್ಯಾಸವು ನಡೆಯುವಂತೆ ಸರಕಾರದೊಡನೆ ಕೇಳಿಕೊಳ್ಳಬೇಕೆಂಬ ಠರಾವು ಮಂಜೂರಾಯಿತು.

ಪರಿಷತ್ತು ಬೆಳಗ್ಗೆ ಪ್ರಾರಂಭವಾಗಿ, ಪ್ರಾರಂಭದಲ್ಲಿ ಪಂಜೆ ಮಂಗೇಶರಾಯರ ನಿಧನದ ಕುರಿತು ಸಂತಾಪ ಸೂಚಕ ಠರಾವು ಮಾಡಿ, ಅವರ ತೈಲ ಚಿತ್ರವೊಂದನ್ನು ಟ್ರೈನಿಂಗ್ ಶಾಲೆಯಲ್ಲಿ ಇರಿಸಬೇಕಾಗಿ ನಿರ್ಣಯಿಸಲಾಯಿತು. ನಂತರ ಸಂಘದ ಗತ ವರ್ಷದ ವರದಿಯು ಓದಲಾಗಿ ಶ್ರೀಯುತ ಉಮೇಶರಾಯರು ವಾರ್ಧಾ ಶಿಕ್ಷಣ ಯೋಜನೆಯು ರೂಢಿಗೆ ಬರುವುದರಿಂದ ಉಂಟಾಗುವ ಸಮಸ್ಯೆಗಳನ್ನು ವಿವರಿಸಿದರು. ಅಧ್ಯಕ್ಷರು ಟೀಚರ್ ಮೆನೇಜರರು ಜಿಲ್ಲಾ ವಿದ್ಯಾ ಕೌನ್ಸಿಲಿನಲ್ಲಿ ಅನುಭವಿಸುತ್ತಿರುವ ಕಷ್ಟಗಳನ್ನು ವಿವರಿಸಿದರು. ಶ್ರೀ ಕುರುಕಾಲು ಗಣಪಯ್ಯ ಶೆಟ್ಟಿ, ಶ್ರೀ ಸುಬ್ಬಣ್ಣಯ್ಯನವರು ಸಂಘದ ಪರವಾಗಿ ವಿದ್ಯಾ ಕೌನ್ಸಿಲಿನ ಸದಸ್ಯರಾಗಿ ಆರಿಸಲಾದರು. ಈ ಪರಿಷತ್ತಿನಲ್ಲಿ ೨೨ ಠರಾವುಗಳು ಮಂಜೂರು ಮಾಡಲಾದುವು.

ಜಿಲ್ಲಾ ವಿದ್ಯಾ ಕೌನ್ಸಿಲಿನಲ್ಲಿ ತಮ್ಮ ಪ್ರಾತಿನಿಧ್ಯವನ್ನು ಎರಡರಿಂದ ಆರಕ್ಕೆ ಹೆಚ್ಚಿಸುವಂತೆಯೂ, ಗ್ರಾಂಟುಗಳಲ್ಲಿ ಇನ್ನು ಕಡಿತವಾಗದಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದೂ, ಇತ್ಯಾದಿ ಟೀಚರ್ ಮೆನೇಜರರಿಗೆ ಹಿತಕರವೆನಿಸುವ ತರಹ ಅನೇಕ ಠರಾವುಗಳು ಈ ಪರಿಷತ್ತಿನಲ್ಲಿ ಮಾಡಲಾದುವು.

ಹರಿಪುರ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ.

ನಮ್ಮ ಜಿಲ್ಲೆಯಿಂದ ಹರಿಪುರ ಕಾಂಗ್ರೆಸ್ಸಿಗೆ ಹೋಗತಕ್ಕ ಪ್ರತಿನಿಧಿಗಳ ಚುನಾವಣೆಯು ನಡೆಯುತ್ತಲಿದೆ. ಅನೇಕ ಕಡೆಗಳಲ್ಲಿ ಪ್ರತಿನಿಧಿಗಳು ಪ್ರತಿಸ್ಪರ್ಧೆ ಇಲ್ಲದೆ ಆರಿಸಲ್ಪಟ್ಟಿರುವರು.

ಮೊನ್ನೆ ಬುಧವಾರ ದಿವಸ ರಥಬೀದಿ ವಾರ್ಡಿಗೆ ಶ್ರೀ ಕಿಲ್ಲೆಯವರೂ, ಶ್ರೀಮತಿ ಕಮಲಾದೇವಿಯವರೂ ಪ್ರತಿಸ್ಪರ್ಧಿಗಳಾಗಿ ಚುನಾವಣಾ ಕಾರ್ಯವು ನಡೆದು ಶ್ರೀಮತಿ ಕಮಲಾದೇವಿಯವರು ಕಿಲ್ಲೆಯವರಿಗಿಂತ ೨೦ ಓಟುಗಳನ್ನು ಹೆಚ್ಚಿಗೆ ಪಡೆದಿರುವರು.

ಕೇಕಡಾ ೬೦ರ ಪಾಲಿ ಮತಗಳು ಪೋಲಾಗಿದ್ದವು. ಈ ಚುನಾವಣೆಯಿಂದ ಮಂಗಳೂರಿನಲ್ಲಿ ಬಹಳ ಕೋಲಾಹಲವು ಉಂಟಾಗಿತ್ತು. ಅಂತೆಯೇ ಬಂದರ ವಾರ್ಡಿನ ಸ್ಥಾನಕ್ಕೆ ಶ್ರೀ ಶ್ರೀನಿವಾಸ ಮಲ್ಯರಿಗೂ, ರಾಮರಾಯ ಮಲ್ಯರಿಗೂ ಪ್ರತಿಸ್ಪರ್ಧೆ ನಡೆದು, ಶ್ರೀನಿವಾಸ ಮಲ್ಯರು ಆರಿಸಲ್ಪಟ್ಟಿರುವರು.

ಮಾರುತಿ ಕಬ್‌ಪೆಕ್ ದಿನಾಚರಣೆ.

ಇದೇ ಕಳೆದ ಆದಿತ್ಯವಾರ ೧೯ನೇ ತಾರೀಕಿನಲ್ಲಿ ಜಿಲ್ಲಾ ಕಲೆಕ್ಟರರಾದ ಶ್ರೀ ವೆಲ್ಲೋಡಿಗಳವರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನ ಕಬ್ ಮಂದಿರದಲ್ಲಿ ಜರಗಿತು. ಧ್ವಜವಂದನೆಯ ನಂತರ ಕಬ್‌ಮಾಸ್ಟರರಾದ ಶ್ರೀ ವಿಠಲ ಕಮ್ತಿಯವರು ಗತವರ್ಷದ ವರದಿಯನ್ನು ಓದಿದರು. ನಂತರ ಅಧ್ಯಕ್ಷರಿಂದ ಕಬ್ ಬೇಡುಗಳು ಹಂಚಲಾದುವು. ನೃತ್ಯ ಇತ್ಯಾದಿ ವಿನೋದ ಆಟಗಳ ಕಾರ್ಯಕ್ರಮವು ನಡೆದ ಮೇಲೆ ಸಮಾರಂಭವು ಮುಕ್ತಾಯವಾಯಿತು.

ಪ್ರೆಸ್ ಕೆಲಸಗಾರರ ಸಂಘ

ದಕ್ಷಿಣ ಕನ್ನಡ ಜಿಲ್ಲೆಯ ಛಾಪಖಾನೆ ಕೆಲಸಗಾರರ ಸಂಘದ ಸಭೆಯೊಂದು ಮೊನ್ನೆ ಆದಿತ್ಯವಾರ ಸೇರಿತ್ತು. ನಂತರ ಇತ್ತೀಚೆಗಿನ ಮುದ್ರಕರಗಳ ನಿಮಿತ್ತ ಮದ್ರಾಸು ಸರಕಾರದಿಂದ, ಮುದ್ರಕರಗಳನ್ನು ಹೂಡುವ ಮೊದಲೇ ಕೆಲಸಗಾರರು ತಮ್ಮ ಕೋರಿಕೆಗಳನ್ನು ಯಜಮಾನರೊಡನೆ ಆರುಹಿಕೊಳ್ಳಬೇಕಾಗಿ ಬಂದ ಆಜ್ಞೆಯು ಶ್ರೀ ಕಮಲಾದೇವಿಯವರಿಂದ (ಅಧ್ಯಕ್ಷಿಣಿಯರ) ವಿವರಿಸಲಾಯಿತು. ಉಪಾಧ್ಯಕ್ಷ, ಕಾರ್ಯದರ್ಶಿ, ಉಪಕಾರ್ಯದರ್ಶಿ ಚುನಾವಣೆಗಳಾದ ನಂತರ ಸಭೆಯು ಮುಕ್ತಾಯವಾಯಿತು.

ಕೆನರಾ ಹೈಸ್ಕೂಲು ದಿನಾಚರಣೆ

ಇಲ್ಲಿನ ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೨೪ರಲ್ಲಿ ಜರಗಿತು. ಬೆಳಗ್ಗೆ ಹಿಂದಿನ ಮತ್ತು ವಿದ್ಯಾರ್ಥಿ ವರ್ಗವೆಲ್ಲಕ್ಕೂ ಫಲಾಹಾರಗಳಾದ ನಂತರ ವ್ಯಾಯಾಮ ಮತ್ತು ಸ್ಪರ್ಧೆಯ ಆಟಗಳಲ್ಲಿ ಗೆದ್ದವರಿಗೆಲ್ಲ ಬಹುಮಾನಗಳನ್ನು ರಾವ್ ಬಹದ್ದೂರ್ ಡಾ। ಎಮ್ ಕೇಶವ ಪೈ ಎಮ್ ಡಿ ಯವರ್ಯಿಂದ ಹಂಚಿಸಲಾಯಿತು. ಸ್ಕೂಲ್ ದೇಕಮಿಟಿಯ ಸಭೆಸೇರಿ ಹಿಂದಣ ವರ್ಷದ ಲೆಕ್ಕಪತ್ರಗಳನ್ನು ಮಂಜೂರು ಮಾಡಿ ಮುಂದಿನ ವರ್ಷದ ಕಮಿಟಿಯನ್ನು ಚುನಾವಣೆ ಮಾಡಲಾಯಿತು. ಅನಂತರ ಮಹಾಸಭೆಯು ಸಾಯಂ ೫-೩೦ಕ್ಕೆ ಸೇರಿತು. ಪ್ರಾರ್ಥನೆಯಾಗಿ ಅಧ್ಯಕ್ಷರಾಗಿರುವ ಮದ್ರಾಸು ಸರಕಾರದ ಮಂತ್ರಿಯವರು ಶ್ರೀ ಕೇ ರಾಮನ್ ಮೆನೊನ್‌ರವರು ಅಧ್ಯಕ್ಷಸ್ಥಾನವನ್ನೇರುತ್ತಲೇ, — ಶಾಲೆಯ ಅಭಿನಂದನೆಯನ್ನು ಶ್ರೀ ಬಿ ನರಸಿಂಹ ಶೆಣೈ, ಬಿ. ಎ. ಇವರು ಭಾಷಣ ಪೂರ್ವಕ ಮುಗಿಸಲು, ಹೆಡ್‌ಮಾಸ್ತರರು ಈ ಶಾಲೆಯು ಕಳೆದ ವರ್ಷದಲ್ಲಿ ಹೊಂದಿರುವ ಸರ್ವತೋಮುಖವಾಗಿರುವ ಅಭಿವೃದ್ಧಿಯನ್ನು ಕುರಿತಾಗಿ ವರದಿಯನ್ನು ಮುಂದಿಟ್ಟು ಬಹುಮಾನಗಳನ್ನು ವಿದ್ಯಾರ್ಥಿಗಳಿಗೆ ಹಂಚಿದರು. ಅಧ್ಯಕ್ಷ ಭಾಷಣವು ಸಂದರ್ಭೋಚಿತವಾಗಿದ್ದಿತು (ಮುಂದಿನ ಸಂಚಿಕೆಯಲ್ಲಿ). ಅನಂತರ ಧನ್ಯವಾದಗಳನ್ನಿತ್ತ ಬಳಿಕ, ಬಾಲಕರು 'ಮಕ್ಕಳ ಕಥೆಯ ಕೂಟ' ಎಂಬ ವಿನೋದವನ್ನೂ, ಹೈಸ್ಕೂಲ ವಿದ್ಯಾರ್ಥಿಗಳು ಭಾಸ ಮಹಾಕವಿಯ ಮಧ್ಯಮವ್ಯಾಯೋಗ ಎಂಬ ಏಕಾಂಕ ನಾಟಕವನ್ನು ಅಭಿನಯಿಸಿದರು. ಯುವಕ ವಿದ್ಯಾರ್ಥಿ ಸ್ವಯಂಸೇವಕರ ದಳವೂ ಎಳೆಯ ಬಾಲಕರ 'ಕಬ್' ದಳವೂ ಅಲ್ಲಿನ ಶಿಸ್ತಿನ ವಿಚಾರ ನೋಡುತ್ತಿದ್ದುವಲ್ಲದೆ, ಶಾಲಾ-ಪರಿಸರವೆಲ್ಲ ಅತ್ಯುಜ್ವಲ ದೀಪಾವಳಿಯಿಂದಲೂ, ರಾಷ್ಟ್ರಧ್ವಜಾದಿ ಶೃಂಗಾರಗಳಿಂದಲೂ ಮನೋಹರವಾಗಿದ್ದಿತು.

ತಾಲೂಕುಗಳಿಂದ

ಪುತ್ತೂರು.

ರೈತರ ಋಣಸಂದಾಯ ಮಸೂದೆಯ ಕುರಿತು ಆಲೋಚಿಸಲು ಒಂದು ಸಾರ್ವಜನಿಕ ಸಭೆಯು ಮೊನ್ನೆ ತಾ. ೧೯ರಲ್ಲಿ ಶ್ರೀ ಎಂ. ಶಿವರಾಯರ ಅಧ್ಯಕ್ಷತನದಲ್ಲಿ ನಡೆಯಿತು. ಅಧ್ಯಕ್ಷರು ಈ ಮಸೂದೆಯನ್ನು ನೆರೆದವರಿಗೆ ವಿವರಿಸಿ ಹೇಳಿದರು. ನಂತರ ಈ ಸಭೆಯು ರೈತರ ಋಣಸಂದಾಯಕ್ಕಾಗಿ ಬರೆದ ಈ ಮಸೂದೆಯನ್ನು ಆತ್ಯಾದರದಿಂದ ಸ್ವೀಕರಿಸುತ್ತಿರುವಾಗ್ಯ, ಅದರಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕಾಗಿ ಕೇಳಿಕೊಳ್ಳಬೇಕೆಂದೂ, ರೈತನ ಋಣಸಂದಾಯ ಮಾಡಲು ಈ ಬಿಲ್ಲು ಮಂಜೂರಾದ ಮೂರು ತಿಂಗಳೊಳಗೆ ಒಂದು ವ್ಯವಸ್ಥೆಯ ನಿರ್ಮಾಣವಾಗಬೇಕೆಂದೂ, ೧೯೩೦ರ ನಂತರ ತೆಗೆದ ಸಾಲಗಳಿಗೆ ಉಪಶಮನ ಕೊಡಬಾರದಾಗಿಯೂ ಸಾಗುವಳಿ ಕೆಲಸಕ್ಕಾಗಿ ತೆತ್ತ ಸಾಲಕ್ಕೆ ಮಾತ್ರ ಈ ಮಸೂದೆಯು ಅನ್ವಯಿಸಬೇಕೆಂದೂ, ವೃತ್ತಿ ತೆರಿಗೆ ಮತ್ತು ಮನೆತೆರಿಗೆ ಕೊಡುವವರು ಕೂಡಾ ಈ ಬಿಲ್ಲಿನ ಪ್ರಕಾರ ಉಪಶಮನಕ್ಕೆ ಬದ್ಧರಾಗಬೇಕೆಂದೂ, ಈ ಮಸೂದೆಯು ಕಳಗೆ ಸಹಕಾರ ಸಂಘಗಳ ಮತ್ತು ಬ್ಯಾಂಕ್ ಸ್ಟಾಕ್ ಕಂಪೆನಿಗಳಿಂದ ಸಾಲಗಳನ್ನು ಕೂಡಿಸಕೆಂದೂ, ಧಾರ್ಮಿಕ ಮತ್ತು ಇತರ ಸಾರ್ವಜನಿಕ ಸಹಾಯಕ ಸಂಸ್ಥೆಗಳಿಗೆ ಈ ಮಸೂದೆಯು ಅನ್ವಯಿಸಬಾರದೆಂದೂ, ಬಡ್ಡಿ ಮಾಫಿ ಕುರಿತು ಸಾಲಗನಿಗೂ ಸಾಲಗಾರನಿಗೂ ಸರಿಯಾದ ರೀತಿಯಲ್ಲಿ ಇತರ ವ್ಯವಸ್ಥೆಯಾಗುವ ತರದಲ್ಲಿ ಮಸೂದೆಯಲ್ಲಿ ಬದಲಾವಣೆಯಾಗಬೇಕೆಂದೂ ಬಡ್ಡಿದರದ ಮೇಲೆ ಸರಕಾರವು ಕೈಹಾಕದೆಂದೂ ಇವೇ ಮೊದಲಾದ ಅನೇಕ ಬದಲಾವಣೆಗಳನ್ನು ಸೂಚಿಸಿ ಈ ಸಭೆಯಲ್ಲಿ ಠರಾವುಗಳಾದುವು. ಸಮಯಸಂಕೋಚದಿಂದ ಮೊನ್ನೆ ಈ ಸಭೆಯು ಮುಕ್ತಾಯವಾದುದರಿಂದ ಇನ್ನೊಂದು ಸಭೆಯು ಬೇಗನೇ ಜರಗಲಿರುವುದೆಂದೂ ತಿಳಿದುಬರುತ್ತದೆ.

ಜಿಲ್ಲಾ ಮೆಡಿಕಲ್ ಸಂಘ

ಜಿಲ್ಲಾ ಮೆಡಿಕಲ್ ಸಂಘದ ಮಾಸಿಕ ಸಭೆಯು ಮೊನ್ನೆ ದಿನ ಜರಗಿ ಡಾ. ಸಿ. ಓ. ಕಮ್ತಿಯವರು ಕ್ಷಯ ರೋಗದ ಕುರಿತು ಒಂದು ಉಪನ್ಯಾಸವನ್ನಿತ್ತರು.

ಮುನ್ಸಿಪಲ್ ಸಭೆ

ಸ್ಥಳೀಯ ಮುನ್ಸಿಪಾಲಿಟಿಯ ಸಭೆಯೊಂದು ಮೊನ್ನೆ ತಾ. ೨೦ನೇ ಸೋಮವಾರ ದಿವಸ ಉಪಾಧ್ಯಕ್ಷ ಶ್ರೀ ಪದ್ಮನಾಭ ನಾಯ್ಕರ ಅಧ್ಯಕ್ಷತನದಲ್ಲಿ ನಡೆಯಿತು. ಶ್ರೀ ರಂಗರಾಯರು ಇವರು ಸ್ಥಳೀಯ ವೆಂಕಟ್ರಮಣ ದೇವಾಲಯದ ಇದಿರಿನಲ್ಲಿ ಒಂದು ಉದ್ಯಾನ ವನವನ್ನು ರಚಿಸಲು ನಗರ ಸಭೆಯ ಅಪ್ಪಣೆಯನ್ನು ಕೋರಿ ಬಂದ ಅರ್ಜಿಯ ಕುರಿತ ದೀರ್ಘ ಚರ್ಚೆಯು ನಡೆಯಿತು. ಅಲ್ಲಿ ಮೋಟಾರು ಚಲಾವಣೆ ಹೆಚ್ಚುತ್ತಿರುವುದರಿಂದ ಅದೊಂದು ಸಾರ್ವಜನಿಕ ವಿಹಾರಕ್ಕೆ ಯೋಗ್ಯವಾದ ಸ್ಥಳವಲ್ಲವೆಂದು ಕೆಲವರು ಅಭಿಪ್ರಾಯ ಪಟ್ಟರು. ಬಹಳ ಚರ್ಚೆಯ ನಂತರ ಅದನ್ನು ಮುಂದಕ್ಕೆ ಇಡಲಾಯಿತು. ಸೂಳೆಯರ ಮೇಲೆ ನಿರ್ಬಂಧ ಹಾಕುವ ಕ್ರಮವನ್ನು ಜ್ಯಾರಿ ಮಾಡುವ ಕುರಿತು ಶ್ರೀ ರಂಗರಾಯರ ಠರಾವಿನ ಕುರಿತು ನಂತರ ಆಲೋಚಿಸಲಾಯಿತು. ಈ ವಿಷಯದಲ್ಲಿ ನೇಮಕವಾದ ಕಮಿಟಿಯ ವರದಿಯು ಮುಂದಕ್ಕೆ ಕರೆಯಲಾಯಿತು. ಕೆಲಸಮಯ ಚರ್ಚೆ ನಡೆದು, ಈ ಠರಾವಿನ ಕುರಿತು ಆಲೋಚನೆಯು ಮುಂದುವರಿಸಿಯಿಡಲಾಯಿತು.

ಫೋರ್ಡ್ ಕ್ರಿಕೆಟ್ ಕಪ್.

ಫೋರ್ಡ್ ಕಪ್‌ಗಾಗಿ ಪ್ರಥಮ ಪಂದ್ಯಾಟವು, ಸೈಂಟ್ ಅಲೋಸಿಯಸ್ ಕೊಲೇಜಿನವರಿಗೂ, ಎಂ. ಸಿ. ಸಿ. ಯವರಿಗೂ ನಡೆದು, ಎಂ. ಸಿ. ಸಿ ಯು ವಿಜಯಿಯಾಗಿರುತ್ತದೆ.

ಮುನ್ಸಿಪಲ್ ನೋಕರರ ಸಂಘ.

ಈ ಸಂಘದ ಸಭೆಯೊಂದು ಮುನ್ಸಿಪಲ್ ಕಮಿಶನರ ಅಧ್ಯಕ್ಷತನದಲ್ಲಿ ಮೊನ್ನೆ ಕೂಡಿ ಬಂದು, ಸಂಘದ ಸೆಕ್ರಿಟರಿಗಳಾದ ಶ್ರೀನಿವಾಸರಾಯರನ್ನು ಸೇಲಮಿನಲ್ಲಿ ಜರಗುವ ಮುನ್ಸಿಪಲ್ ನೋಕರರ ಪ್ರಾಂತ್ಯೀಯ ಪರಿಷತ್ತಿಗೆ ಪ್ರತಿನಿಧಿಗಳಾಗಿ ಆರಿಸಲಾಯಿತು.

ತಿದ್ದುಪಡಿ.

ಕಳೆದವಾರ ಸಾಧಾರಣ ವಿವಾಹ ಎಂಬ ಶಿರೋನಾಮದಡಿಯಲ್ಲಿ ಶ್ರೀಮತಿ ಮೀರಾಬಾಯಿಯವರಿಗೂ, ಬೆನೆಗಲು ಸುಬ್ಬರಾಯರಿಗೂ ವಿವಾಹವಾಗಿರುವುದೆಂದು ಪ್ರಕಟವಾದುದು ತಪ್ಪುವಾರ್ತೆಯಾಗಿರುತ್ತದೆ. ಶ್ರೀಮತಿಯವರ ವಿವಾಹ ನಡೆದುದು ದಿವಂಗತ ಬೆನೆಗಲ್ ಸುಬ್ಬರಾಯರ ಮಗ ಬೆನೆಗಲ್ ರಾಘವೇಂದ್ರರಾಯರೊಡನೆ. ವಾರ್ತೆಯು ತಪ್ಪಾಗಿ ಪ್ರಕಟವಾದುದಕ್ಕೆ ನಾವು ವಿಷಾದಿಸುತ್ತೇವೆ. (ಸಂ ಸ್ವ)

ಉಡುಪಿ

೨೨ ೧೯ರಲ್ಲು ಸ್ಥಳೀಯ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಂಬ್ರ ೯೫೫ನೇ ಉಡುಪಿ ಸಹಕಾರ ಸಂಘದ ರಜತೋತ್ಸವವು ಕುಂದಾಪುರ ಡಿವಿಜನಿನ ಅಧೀನರಾದ ಶ್ರೀ ಟಿ ಎ ವರ್ಗಿಸ್ ಐ ಸಿ ಎಸ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೊಟ್ಟಿಕಾರ್ ಪದ್ಮನಾಭಪೈಗಳು ಸದ್ರಿ ಸಂಘಕ್ಕೆ ಶ್ರೇಯೋಭಿವೃದ್ಧಿ ಸೂಚಿಸಿ ಭಾಷಣಮಾಡಿದರು. ಅನಂತರ ಶ್ರೀಗಳಾದ ಕೋ-ಆಪರೇಟಿವ್ ಶ್ರೀನಿವಾಸರಾವ್ ಪಿ ವೆಂಕಟ್ರಮಣಾಚಾರ್ಯ, ಕೆ ರಾಮಚಂದ್ರ ಶೆಣೈಯವರೂ ಭಾಷಣಗಳನ್ನಿತ್ತ ತರುವಾಯ ಅಧ್ಯಕ್ಷರು ಚಿಕ್ಕದಾದ ತಮ್ಮ ಭಾಷಣದಿಂದ ಸಂಘಕ್ಕೆ ಉತ್ತರೋತ್ತರಾಭಿವೃದ್ಧಿಯನ್ನು ಕೋರಿದರು. ಧನ್ಯವಾದ ಸಮರ್ಪಣೆಯೊಂದಿಗೆ ಜಯಜಯಕಾರದೊಡನೆ ಸಭೆ ಮುಕ್ತಾಯವಾಯಿತು.

ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರು ಉಡುಪಿ ಸಹಕಾರ ಸಂಘವನ್ನು ಸಂದರ್ಶಿಸಿದಾಗ ಪಂಚಾಯಿತದಾರರೊಡನೆ ಮಾತಾಡುತ್ತಾ ನಾಲ್ಕು ಬಡಿ ದರವನ್ನು ಸಂಘ ರಜತೋತ್ಸವದ ಸ್ಮಾರಕವಾಗಿಯಾದರೂ ಇಳಿಸಬೇಕೆಂದರು.

ಕಾರ್ಕಳ

ಮದ್ರಾಸು ಸರಕಾರದ ಕೃಷಿಕರ ಋಣ ನಿವಾರಣಾ ಮಸೂದೆಯನ್ನು ಚರ್ಚಿಸುವ ಸಲುವಾಗಿ ತಾ. ೧೯ರಲ್ಲು ಒಂದು ಸಾರ್ವಜನಿಕ ಸಭೆಯು ಇಲ್ಲಿಯ ಸ್ವರಾಜ್ಯ ಮೈದಾನಿನಲ್ಲಿ ಶ್ರೀ ಬಿ ವೆಂಕಟೇಶಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಮಸೂದೆಯನ್ನು ಸಮರ್ಥಿಸಿ ಭಾಷಣ ಹಾಗೂ ಬಹುಮತದ ಠರಾವು ಮಂಜೂರಾಯಿತು.

ವೇದನಾಮಯ ಮೂಳೆ ವ್ಯಾಧಿಗೆ ಆಶ್ಚರ್ಯಕರ ಗುಣಕಾರೀ ಔಷಧ ಸಾಂಬಕ್ಕಿನಿಂದ ವಿಶಿಷ್ಟ ಉಪಶಮನ.

ಮೂಳೆವ್ಯಾಧಿ ಎಂಬ ಆ ಭಯಂಕರ ನೋವಿನ ಸಂಕಟದಿಂದ ನೀವು ಕೊರಗಾಗಿರು ವಿಸ್ತೃತಿಗಳಿಂದ ತಯಾರಿಸಲ್ಪಟ್ಟ ಸಾಂಬಕ್ ಲೇಪನವನ್ನು ಉಪಯೋಗಿಸಿರಿ. ಶಮಗೆ ದೊರಕುವ ಉಪಶಮನದಿಂದ ನೀವು ಆಶ್ಚರ್ಯಚಕಿತರಾಗುವಿರಿ. ಸಾಂಬಕ್ಕಿನಿಂದ ಶುದ್ಧ ನಾಡಿಗಳಿಗಿರುವ ತಡೆಯು ಮಾಯವಾಗುವುದು. ಮೂಳೆಗಳೂ ವ್ಯಾಧಿಯೂ ಮಾಯವಾಗುವುದು. ಕಜ್ಜಿ ಉರಿಕಜ್ಜಿ ಗಾಯ, ಹುಣ್ಣು ಇತ್ಯಾದಿಗಳಿಗೆ ಸಾಂಬಕ್ಕ್ ಉಪಯೋಗಿಸಿ ಒಳ್ಳೇ ಗುಣವನ್ನು ಪಡೆಯಿರಿ. ಎಲ್ಲಾ ದವಾಖಾನೆಗಳಲ್ಲೂ ಸಾಂಬಕ್ ರೂ 1 ಮತ್ತು 2 4-0ರಂತೆ ದೊರೆಯುತ್ತದೆ.

ಏಜಂಟರು—ಮೆಸರ್ಸ್ ದಾಧಾ ಎಂಡ್ ಕೊ ಪಿ. ಟಿ. ಮದ್ರಾಸು.

ಸಾಂಬಕ್ ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

ಸಾಂಬಕ್

Zam Buk

ಮುಖ್ಯ ಮಂತ್ರಿಯವರ ಅಭಿಪ್ರಾಯ

ರೈತರ ಋಣವಿಮೋಚನೆ

ಯನ್ನು ಕುರಿತಾದ ಬಿಲ್ಲನ್ನು ಎಸೆಂಬ್ಲಿಯ ಮುಂದಿಡುವಾಗ, ಶ್ರೀ ರಾಜಗೋಪಾಲಾಚಾರ್ಯರು, ಇದುವರೆಗೆ ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ಪ್ರಕಟವಾದೆಲ್ಲ ಅಭಿಪ್ರಾಯಗಳನ್ನು ವಿಮರ್ಶಿಸಿ, ಭಾಷಣ ಮಾಡಿದುದರ ಸಾರಾಂಶವು

ಬಿಲ್ಲನ್ನು ಸಿಲೆಕ್ಟ್ ಕಮಿಟಿಗೆ ಒಪ್ಪಿಸುವುದು ಹಿತವೆಂದು ಎಸೆಂಬ್ಲಿಗೆ ತೋರಿದಲ್ಲಿ, ಪ್ರತಿದಿನವೂ ಇದನ್ನ ಪರ್ಯಾಲೋಚಿಸಿ, ಹೊಸ ವರ್ಷದ ಆರಂಭವಾಗುವಾಗಲೆ, ಜನವರಿ ತಾ. ೧ ಯಾ ೨ರಲ್ಲಿ ಅದನ್ನು ತಿದ್ದಿದ ರೂಪದಲ್ಲಿ ಪ್ರಕಟಿಸಿ, ಮುಂದಣ ಸಭೆಯಲ್ಲಿ ಜನವರಿ ತಾ. ೨೬ರ ತರುವಾಯ ಅದನ್ನು ಮಂಜೂರು ಮಾಡಲು ಅನುಕೂಲವಾಗುವುದಾಗಿ ಸೂಚಿಸಲಾಯಿತು.

ಆರ್ಥಿಕ ಸ್ಥಿತಿ ಹಾಳಾಗಿದೆ ಎಂದು ಎಲ್ಲರೂ ಮಾತಾಡುತ್ತಲಿರುವಾಗ ಸರಕಾರವು ಏನೊಂದನ್ನೂ ಮಾಡದೆ ಇರುವುದು ವಿವೇಕವೆನಿಸದೆಂದೇ—ರೈತರ ಋಣಬಾಧೆಯನ್ನು ನಿವಾರಿಸಿ ಕೃಷಿಯನ್ನು ಉತ್ತಮಸ್ಥಿತಿಗೆ ಬರುವಂತೆ ಮಾಡಲು ಇದೊಂದು ಪ್ರಯತ್ನ ಮಾಡಲಾಯಿತು. ನೂರಾರು ವಿಷಯಗಳಲ್ಲಿ ನಾನಾ ತಿದ್ದುಪಡಿಗಳಾಗುವ ಅಗತ್ಯವಿರುವಾಗ, ಯಾವುದೊಂದಕ್ಕೆ ಕೈಹಚ್ಚಿದರೂ, ಅದಕ್ಕಿಂತ ಇನ್ನೆಷ್ಟೋ ವಿಷಯಗಳು ಅಗತ್ಯವಾಗಿವೆ ಎಂದೇ ಗೊಣಗುವುದು ಸಹಜವೇ. ತೀರ್ವೆಯ ತಿದ್ದುಪಡಿ ಮೊದಲಾಗಲಿ ಎಂಥವರಿದ್ದಾರೆ ತೀರ್ವೆಯ ಕ್ರಮವನ್ನು ಸುಲಭವಾಗಿ ತಿದ್ದಲು ಬರುವುದಿಲ್ಲ ಈಗ ಸರಕಾರವು ಹೇಗೆ ನಡೆಯಬೇಕೆನ್ನುವ ಶಾಸನವಿದೆಯೋ ಅದನ್ನ ನೋಡಿಕೊಂಡೇ ಎಂತಹ ತಿದ್ದುಪಡಿಗಳನ್ನಾದರೂ ಮಾಡಿಕೊಳ್ಳಬೇಕಾಗಿದೆ. ಅಲ್ಲಲ್ಲಿ ಉಂಟಾಗಿರಬಹುದಾದ ನ್ಯೂನಾತಿರಿಕ್ತಗಳನ್ನು ತಿದ್ದಿಕೊಳ್ಳಬಹುದು ಹೊರತು, ಇಡೀ ಕಂದಾಯಕ್ರಮ ತಿದ್ದಿ ಬರಲಾರದು. ಆಗಿದ್ದರೂ ತೀರ್ವೆಯ ಭಾರಕ್ಕಿಂತ ಋಣಭಾರವೇ ಹೆಚ್ಚಿನದು ತೀರ್ವೆಯ ಸುಧಾರಣೆಗೆ ಬಹಳ ಕಾಲ ಬೇಕಾಗುವುದು ಅದುವರೆಗೆ ಋಣಭಾರವು ಇನ್ನಷ್ಟು ಹೆಚ್ಚಿ ಸರ್ವನಾಶವಾಗಬಹುದು

ಋಣಭಾರವನ್ನು ಕುರಿತಾಗಿ ವಿಚಾರ ನಡೆದಲ್ಲ, ಇದೇ ಎಲ್ಲಕ್ಕೂ ಮೂಲದಲ್ಲಿ ತಿದ್ದುಪಡಿಗೊಳ್ಳುವುದು ಅಗತ್ಯವೆಂದು ವಿಮರ್ಶಿಸಲಾಗಿದೆ ಅದಕ್ಕಾಗಿ ಬಜೆಟು ಕಾಲದಲ್ಲಿ ಈ ವಿಷಯಕವಾದ ಮಸೂದೆ ಮುಂದೆ ಇಡಲಾದೀತೆಂದು ಮಂತ್ರಿಗಳು ತಿಳಿಸಿದಂತೆ, ಈ ಮಸೂದೆಯನ್ನು ಈಗ ಮುಂದಿಡಲಾಗಿದೆ

ಇನ್ನೂರು ಕೋಟಿ ರೂಪಾಯಿಗಳಷ್ಟು ಸಾಲವನ್ನು ನಮ್ಮ ರೈತರು ಹೊರುತಿದ್ದಾರೆಂದು ಸರಕಾರಕ್ಕೆ ವರದಿ ತಲುಪಿಯೇ ಇದೆ ಕೆಳತರಗತಿಯ ರೈತರು ತೀರ್ವೆಯ ೩೦ ಮಡಿ ಹೆಚ್ಚಾಗಿಯೂ, ಮೇಲ್ತರಗತಿಯವರು ತೀರ್ವೆಯ ೮ ಮಡಿ ಹೆಚ್ಚಾಗಿಯೂ ಸಾಲದ ಭಾರ ಹೊರುತ್ತಿರುವರು. ಈ ಸಾಲವನ್ನು ಸರಕಾರವು ಸಹಕಾರ ಸಂಘಗಳೂ ಖಾಸಗಿ ಸಂಸ್ಥೆಗಳೂ ಕ್ರಮವಾಗಿ, ೧, ೬, ೯೩ರಂತೆ (ನೂರರಲ್ಲಿ) ಒದಗಿಸಿಕೊಟ್ಟಿದ್ದಾಗಿದೆ. ಸಾಲದಲ್ಲಿ, ನೂರರಲ್ಲಿ ಹತ್ತು ರೂಪಾಯಿ ಮಾತ್ರವೇ ಶುಭಶೋಭನಾದಿಗಳಿಗಾಗಿ ವ್ಯಯವಾದುದು ಹೆಚ್ಚಿನ ಹೊಸ ಸಾಲಗಳು, ಹಿಂದಣ ಸಾಲಗಳನ್ನು ತೆರುವುದಕ್ಕಾಗಿಯೇ ಆಗಿವೆ ಸಾಲದಿಂದ ಸಾಲ, ಹೀಗೆ ಕ್ರಮವಾಗಿ ಏರುತ್ತಿರುವ ಸಾಲದ ಸಂತಾನವನ್ನೆ ನಿರ್ಮೂಲಿಸುವುದಕ್ಕಾಗಿ ಈ ಮಸೂದೆ ಪ್ರಯತ್ನಿಸುವುದು

ಪರಸ್ಪರವಾಗಿ ಪಂಚಾಯತಿ ಮಾಡಿ ~~ಈ ಸಾಲಗಳನ್ನು ಸುದಾರಿಸಬಾರದೋ ಎಂದು~~ ಕೇಳುವವರಿದ್ದಾರೆ. ಪಂಚಾಯತಿಯಿಂದ ಸಾಲಗಳನ್ನು ಮುಗಿಸಲಾಗುದಿಲ್ಲೆಂದು ಹಿಂದಿನ 'ರಿಕಾರ್ಡು' ಸೂಚಿಸುತ್ತದೆ. ಇದೇಕೆಂದು ವಿಚಾರಿಸಿದರೆ, ಸುಖವಾಗಿ ಯಾವನೊಬ್ಬನೂ ಸದ್ದಿಲ್ಲದೆ ಸಾಲವನ್ನು ಇಳಿಸಿ, ಕೊಟ್ಟು ಬಿಡುವ ಸಾವತಿಗೆ ರಸೀದಿ ಬರೆದು ಕೊಡುವನೆಂದು ಭಾವಿಸುವುದು ಅಸಾಧ್ಯ. ಅದೊಂದು ವೇಳೆ ಸಾಧ್ಯವಾದರೂ, ಒಂದೊಂದು ಸಾಲವು ಒಂದೊಂದು ಬಗೆಯಾಗಿ ವಿಮೋಚನೆ ಹೊಂದುವಂತಾಗುವುದು. ಸಮಸ್ತರಿಗೂ ಲಗಾವಾಗುವಂತಹ ಒಂದೇ ಬಗೆಯ ಸೂತ್ರವಿಲ್ಲದಿರುವಲ್ಲಿ ಒಬ್ಬರ ನ್ಯಾಯವು ಇನ್ನೊಬ್ಬನಿಗೆ ಅನ್ಯಾಯವಾಗಿ, ಮತ್ತೊಬ್ಬನಿಗೆ ಅಪಾಯವಾಗಿ ಪರಿಣಮಿಸಲೂ ಬಹುದಾಗಿದೆ. ಆಗುವಷ್ಟು ಹೆಚ್ಚಿನ ಸಮಾನ ಪರಿಣಾಮವುಳ್ಳಂತಹ ನಿಯಮವನ್ನೆ ಶಾಸನ ರೂಪವಾಗಿ ವಿಧಿಸಿದರೆ ಉತ್ತಮವಲ್ಲವೆ? ಹೀಗೆ ಎಲ್ಲರಿಗೂ ಒಂದೇ ಬಗೆಯಾಗಿ ಅನ್ವಯಿಸುವಂತೆ ಈ ಮಸೂದೆಯಲ್ಲಿ ವಿಧಿಸಿದ್ದಲ್ಲದೆ, ಆಕ್ಷೇಪಗಳನ್ನು ತುಂಬಿಸಿ ವಿನಾಯಿತಿಗಳನ್ನು ಹೆಚ್ಚಿಸಿ ಮತ್ತೆ ಕೋರ್ಟುಕಚೇರಿಗಳಲ್ಲಿ ನರಳದಂತೆ ಮಾಡಿದಲಾಗಿದೆ

ಮಾನ್ಯ ಮುಖ್ಯ ಮಂತ್ರಿ
ಸಿ. ರಾಜಗೋಪಾಲಾಚಾರಿಯವರು.

ಕರಾರುಗಳನ್ನ ಮುರಿಯುವ ಹಾಗೆ ಈ ಕಾನೂನು ಇದೆ ಎಂದು ಕೆಲವರು ಎನ್ನುವರು. ಆದರೆ, ಕರಾರುಗಳು ಯಾವುವು ಎಂತಹವು ಎಂಬುದನ್ನು ನೋಡಬೇಡವೆ? ಸಂಬಳ ಇಳಿಸಬೇಕಾಗಿದೆ ಎಂದ ಕೂಡಲೆ, ಅದೂ ಒಂದು ಕರಾರು, ಇಳಿಸುವುದು ಅನ್ಯಾಯ ಎನ್ನುವರು. ಇದೆಲ್ಲ ನ್ಯಾಯಕ್ಕೆ ಸರಿ, ರಾಜಕೀಯ ವಿಷಯದಲ್ಲಿ ಸಲ್ಲದು

ಹಿಂದೆ ಬಡ್ಡಿಯ ದರವನ್ನ ಇಂತಿಷ್ಟೆ ಆಗಬೇಕಾಗಿ ತಿಳಿದ್ದಿಲ್ಲವೆ? ಕೋರ್ಟುಗಳ ವಾಸ್ತವಿಕವಾಗಿ ತೆಗೆದುಕೊಂಡ ಸಾಲವೆಷ್ಟು, ಯಾವ ಬಡ್ಡಿ ಹಿಡಿಯಬಹುದು ಎಂದು ನಿರ್ಧರಿಸಿದ್ದಿಲ್ಲವೆ? ಅದೆಲ್ಲವೂ ಕರಾರಿಗೆ ವಿರೋಧವಾಗಲಿಲ್ಲವೆ? ಅವನ್ನೆಲ್ಲಾ ಕಾಂಗ್ರೆಸ್ ಮಂತ್ರಿಗಳು ಜಾರಿಗೆ ತಂದುದಲ್ಲವಷ್ಟೆ ಡೆಕ್ಕನ್ ರಿಲೀಫ್ ಆಕ್ಟನ್ನು ನೋಡಿದರೆ ಕಂಟ್ರಾಕ್ಟುಗಳ ಪವಿತ್ರತೆ ತಿಳಿದು ಬಂದೀತು ಅದಂತಿರಲಿ, ಈ ಮಸೂದೆಗೆ ಅನ್ವಯಿಸಲಾರದೆನ್ನಲೇ ಬೇಕಾಗಿದೆ ಒಳ್ಳೆಯ ಮನಸ್ಸಾಕ್ಷಿಯಿಂದ, ನೈತಿಕ ವಿಶ್ವಾಸದಿಂದ, ಸಾಧುಬುದ್ಧಿಯಿಂದ ಸುಲಭವಾದ ಸ್ಪಷ್ಟ ಮಾತುಗಳಲ್ಲಿ ಈ ಆಕ್ಟನ್ನು ಬರೆದಿದೆ ಕಂಟ್ರಾಕ್ಟೆಂದು, ಕೆಲವರ್ಷಗಳ ಹಿಂದೆ ಎತ್ತಿದ ನೂರು ರೂಪಾಯಿಗಳ ಸಾಲ ಸಲ್ಲಿಸುವುದಕ್ಕೆ ಈಗ ಸ್ಥಿರಚರಸೊತ್ತನ್ನೆಲ್ಲ ಮಾರುವ ಅಗತ್ಯವೂ ರೈತನಿಗೆ ಉಂಟಾಗುವಾಗ, ಅದರ ಪವಿತ್ರತೆ ನೋಡಬೇಕೆ? ರೈತನನ್ನು ಉಳಿಸಬೇಕೆ? ಅಸಲಿನ ಮೂರು ಪಾಲು ಬಡ್ಡಿಯನ್ನು ತೆತ್ತರೂ ಇನ್ನು ಸಾಲ ಬಾಕಿಯಾದರೆ, ರೈತನು ಉಳಿದಾನೆ? ಅದೂ ಕಂಟ್ರಾಕ್ಟೇ? ರೈತನನ್ನು ಉಳಿಸಬೇಕೆಂದು ಪ್ರತಿಯೊಬ್ಬನ ವಿವೇಕ ಹೇಳುತ್ತಿಲ್ಲವೆ? ಕಂಟ್ರಾಕ್ಟು ಪವಿತ್ರ ಅದರ ಪವಿತ್ರತೆ ಕೆಡಿಸಬಾರದು ಆದರೆ ಬಡ್ಡಿ ಮಾತ್ರ ಏಷ್ಟಕ್ಕೂ ಪವಿತ್ರವಲ್ಲ, ಅದನ್ನು ಕಂಟ್ರಾಕ್ಟಾಗಿ ಎಣಿಸಬಾರದು, ಇಷ್ಟೆ ನನ್ನ ಅರಿಕೆ. ಬಡ್ಡಿಯು ಕ್ರೂರವೇ ಅನ್ಯಾಯ ವೆಂದು ಧರ್ಮವಾಣಿಯಿದೆ ಆದರೂ, ಅಸಲಿನ ದುಪ್ಪಟ್ಟಿಗಿಂತ ಹೆಚ್ಚನ್ನ ವಸೂಲುಮಾಡಿಕೊಳ್ಳಬಾರದೆಂದು ಹಿಂದಣವರ ನೀತಿವಚನವಿದೆ ಶಾಸನರೂಪವಾಗಿಲ್ಲದ, ಈ ಪುರಾತನ ಪದ್ಧತಿಯು ಮರೆತುಹೋಗಿರಬಹುದು ಈಗ ಇದು (ಆದಕ್ಕಾಗಿ ಇಲ್ಲದಿದ್ದರೂ) ಈ ಮಸೂದೆಯು ಮೂಲಕ ಪುನಃ ಜಾರಿಗೆ ಬರುವಂತಾಗಿದೆ

ಮುಖ್ಯವಾಗಿ, ಬೇಸಾಯಗಾರರು ತಮ್ಮ ಜೀವನವನ್ನು ನೂತನವಾಗಿ ಪುನಃ ಪ್ರಾರಂಭಿಸಬಹುದಾಗಿರುವಂತೆ, ಈ ಆಕ್ಟು ಅವರಿಗೆ ಅನುಕೂಲತೆಯನ್ನುಂಟುಮಾಡುವುದು ಇದೊಂದು ಸಾಲದ ಭಾರವು ಕಳಚಿ ಬಿತ್ತೆಂದ ಕೂಡಲೆ, ಅವರಿಗೆ ಜೀವನದಲ್ಲಿ ಹೊಸ ಹುರುಪು ಉಂಟಾಗುವುದು ಎಂದು ನಂಬಲಾಗಿದೆ.

ಸಾಲಗಾರರೊಳಗೆ ಸರಕಾರ, ಸಹಕಾರ ಸಂಘಗಳು ಮತ್ತು ಕೆಲವು ಬ್ಯಾಂಕುಗಳನ್ನು ವಿನಾಯಿತಿಪಡಿಸಿದ್ದೇಕೆಂದರೆ, ಸರಕಾರವೆಂದರೆ ಪ್ರಜೆಗಳೆ. ಸಹಕಾರ ಸಂಘಗಳೂ ರೈತರದ್ದೇ—ಹೀಗಾಗಿ, ರೈತರೇ ತಮ್ಮ ಲೇವಾದೇವಿ ಸರಿಪಡಿಸಿಕೊಳ್ಳುವ ಹಾಗೆ ಆಗಲೆಂದು ಈ ವಿನಾಯಿತಿ ಕೊಟ್ಟಿದೆ ಸರಕಾರವು ಉಳಿಯಬೇಕೇ ಬೇಡವೇ? ಉಳಿಯಬೇಕಾದರೆ, ಅದಕ್ಕೆ ಖರ್ಚಿಗೆ ಹಣವು ವಸೂಲಾಗಬೇಡವೆ? ಆದುದರಿಂದ ಯಾವ ಖರ್ಚಿಗೂ ಮೊದಲು ರೈತರು ಕಂದಾಯವನ್ನು ಮೊದಲಾಗಿ ತೆರಲೇ ಬೇಕಾಗಿದೆ

ಕೆಲವರಿಗೆ ಈ ಮಸೂದೆಯಿಂದ ಕಠಿಣ ಪ್ರಸಂಗಗಳು ಉಂಟಾಗಬಹುದು ಪ್ರತಿಯೊಂದು ಕಠಿಣ ಪ್ರಸಂಗಕ್ಕೆ ಒಂದೊಂದು ಬಗೆಯ ವಿನಾಯಿತಿ ಕೊಡುತ್ತ ಹೋದರೆ, ಮಸೂದೆಯೇ ಉಳಿಯದು, ಎಂದರೆ, ಕಠಿಣಪ್ರಸಂಗಗಳಿಗಾಗಿ ಕೊಡುವ ವಿನಾಯಿತಿಗಳಿಂದ ಆಕ್ಟಿನ ಬೆಲೆ ಇಳಿದುಹೋಗಬಹುದು. ಇತರ ಪ್ರಾಂತಿಕ ಸರಕಾರಗಳು ಇಂತಹ ಕಾನೂನನ್ನು ಇನ್ನೂ ಮಾಡಿಲ್ಲ ಎಂಬ ಕಾರಣದಿಂದ ನಾವು ಮಾಡಬಾರದೆಂದಿಲ್ಲ ಅವರಿಗೂ ಒಂದು ಧೈರ್ಯ ಉಂಟಾಗಲಿ, ಮಾದರಿ ಸಿಗಲಿ

ಇದಲ್ಲದೆ, ಇಂತಹ ಕಾನೂನಾಗಲು ಈಗ ಅಪ್ಪಿಯುಂಟಾದಲ್ಲಿ, ಸಾಲಕ್ಕೆ ತುತ್ತಾಗಿರುವ ರೈತರು ನಿರಾಶರಾಗಿ ಏನೆಲ್ಲ ಅನರ್ಥವನ್ನು ಮುಂದೆ ಉಂಟುಮಾಡಬಹುದೆಂಬುದನ್ನು ಈಗಲೇ ಭಾವಿಸಲಾರದಷ್ಟಾಗಿದೆ ಹಿಂದಣ ಕಾನೂನಿನಂತೆ ಬಿತ್ತಿ ತೆತ್ತವರು ತೆತ್ತು ಹೋಗಿಹೋದರೆಂದೂ, ಅಸಲ್ಲೆ ಮಾಡಿದವರು ಬದುಕಿದರೆಂದೂ ಹೇಳಬಾರದು. ಕತ್ತಲಿಗಾಗಿ ಯಾವ ಕಾನೂನನ್ನ ಮಾಡಿದರೂ ಫಲವುಂಟೆ? ಒಟ್ಟಿನ ಮೇಲೆ ಈ ದೇಶದ ಮುಖ್ಯಾಂಗವಾದ ಕೃಷಿಯು ಒಣಾಂಗದ ಭಾಗ್ಯವಾಗಿರುವ ಪ್ರಯುಕ್ತ, ಜನರು ಸುಖದಿಂದ ಒಂದಿಷ್ಟು ಉಸಿರಾಡಲೂ ಅವಕಾಶವಾಗುವ ಕಾನೆ ಸಧ್ಯಕ್ಕೆ ಈ ಮಸೂದೆಯನ್ನು ಮಾಡಲಾಗಿದೆ ಇದೆಲ್ಲವೂ ಸರಿ ಎಂದು ಬಲ್ಲುವುದಿಲ್ಲ, ಕ್ರಮೇಣ ತಿದ್ದಿ, ಬೇಕಾದಂತೆ ಸರಿಪಡಿಸಿಕೊಳ್ಳಬಹುದು ಅದಕ್ಕಾಗಿ ಈಗಲೆ ಸಿಲೆಕ್ಟ್ ಕಮಿಟಿಗೆ ಒಪ್ಪಿಸೋಣ (ಚರ್ಚೆ ನಡೆದು ಸಿಲೆಕ್ಟ್ ಕಮಿಟಿಗೆ ಒಪ್ಪಿಸಲಾಗಿದೆ)

ಚೀನಿಯರಿಗೆ ಸಹಾಯಾರ್ಥವಾಗಿ ೧೫೦ ಸೋವಿಯಟ್ ಯುದ್ಧವಿಮಾನಗಳು, ಜಪಾನಿಯರು ಪಟ್ಟಣಕ್ಕೆ ಹಿಡಿಯಬೇಕಾಗಿ ಹವಣಿಸುತ್ತಿರುವ ಹಾಂಕೌವು ನಗರಕ್ಕೆ ಬಂದಿವೆಯೆಂದು ವಾರ್ತೆಯಿದೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೋನೋಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಾದೂ ಫಲಕಾರಿಯಾಗದೇ ಇನ್‌ಜೆಕ್ಷನ್ ವ ಎಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ, ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಗದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜ ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N. JASANI,** Vithalbhai Patel Road, BOMBAY 4.

ವಿಚಿತ್ರ, ಪರಂತು ಪೂರ್ಣ ಸತ್ಯ!

ಏನು?

ಸರ್ವಾಧಿಕಾರಿ ಕಣ್ಣೀರು ಕರೆದನು!!

ಹಿಟ್ಲರ ಮುಸಲೋನಿಯರು ಕಾರುಣ್ಯದ ಮೂರ್ತಿಗಳು!

ಹಿಟ್ಲರ್ ಮುಸಲೋನಿಗಳೆಂದರೆ ಗುಡುಗು ಮಿಂಚುಗಳಂತೆ ಅವರ ಕಣ್ಣುಗಳಿಂದ ಉದುರಿದ ಒಂದೊಂದು ಕಿಡಿ, ಬಾಯಿಂದ ಬಿದ್ದ ಒಂದೊಂದು ನುಡಿಯಿಂದ ಪ್ರಳಯವೇ ಆಗಬಹುದು ಆದ್ದರಿಂದ ಜಗತ್ತಿಗೆ ಜಗತ್ತು ಇಂದು ಅವರನ್ನು ನಟ್ಟ ದೃಷ್ಟಿಯಿಂದ ದಿಟ್ಟಿಸುತ್ತದೆ, ಕಿವಿಕೊಟ್ಟು ಆಲಿಸುತ್ತದೆ

ಆದರೆ ನಿಜವಾಗಿಯೂ ಹಿಟ್ಲರ ಮುಸಲೋನಿಯರು ಪ್ರಳಯಕಾರಿ ಜೀವಿಗಳೆ? ಒಬ್ಬೊಬ್ಬರು ಒಂದೊಂದು ರೀತಿಯಿಂದ ಹೇಳುತ್ತಾರೆ ಅವರ ಪೂರ್ಣ ಪರಿಚಯ ಮಾಡಿಕೊಳ್ಳುವದು ಅವರ ಆತ್ಮೀಯರಿಗೂ ಸಾಧ್ಯವಾಗಿಲ್ಲ ಯಾಕೆಂದರೆ ಪ್ರತಿಯೊಬ್ಬರು ತಂತಮ್ಮ ಸಂಕುಚಿತ ದೃಷ್ಟಿಯಿಂದ ಇತರರನ್ನು ನೋಡುವರೇ ಹೊರತು, ನಿಷ್ಪಕ್ಷಪಾತವಾಗಿ ನೋಡಿ ತಿಳಕೊಳ್ಳುವ ವಿಶಾಲ ದೃಷ್ಟಿಯು ಎಲ್ಲರಿಗೆ ಇರುವದು ಅಪರೂಪ ಘಟನೆಯೇ

ಹಿಟ್ಲರ ಮುಸಲೋನಿಯರು ತುಂಬ ವಿನೋದಪ್ರಿಯರು ಆದರೆ ಮುಸಲೋನಿಯ ವಿನೋದದಲ್ಲಿ ವ್ಯಸನವು ಅಂಟಿಕೊಂಡಿದೆ ವ್ಯಂಗದಿಂದ ಕೂಡಿ ಕಟುವಾಗಿರುವದು ಹಿಟ್ಲರನ ವಿನೋದವು ವಿನೋದವಲ್ಲದ ಬೇರೇನಿಲ್ಲ

ಮುಸಲೋನಿಯು ದೊಡ್ಡ ಮಹತ್ವಾಕಾಂಕ್ಷೆಯನ್ನು ಕಟ್ಟಿಕೊಂಡವನು, ಅಹಂಕಾರಿ ಎಂದೆಲ್ಲ ನಾನಾ ಬಗೆಯಾಗಿ ಅವನನ್ನು ಚಿತ್ರಿಸುವವರಿದ್ದಾರೆ ಆದರೆ ಅವನ ಸಂಪರ್ಕದಲ್ಲಿದ್ದವರು ಇಂಥ ಯಾವ ದೋಷಗಳನ್ನು ಅವನಲ್ಲಿ ಕಾಣುವದಿಲ್ಲ ಹಿಟ್ಲರ ಹೀಗಿಲ್ಲ ಅವನಲ್ಲಿ ಕೊಟ್ಟು ತೆಗೊಳ್ಳುವದೆಂಬದು ಇಲ್ಲವೇ ಇಲ್ಲ ಮಹಾ ಹಟವಂತ ಎಲ್ಲವು ತಾನು ಹೇಳಿದಂತೇ ಆಗಬೇಕು ಇಲ್ಲವಾದರೆ ಸಿಟ್ಟಿನಿಂದ ಸುಟ್ಟು ಸುಣ್ಣವಾಗಿಬಿಡುವನು ಅವನು ವಾರ್ತಾಲಾಪ ಬೆಳೆಸುವದು ಬಹು ಕಠಿಣ ಜೀವದ ಗೆಳೆಯರ ಕೂಡಿದಲ್ಲಿ ಕೂಡ ಒಂದೇ ಮೌನವಾಗಿದ್ದು ಅವರು ಹೇಳುವನ್ನೆಲ್ಲ ಸುಮ್ಮನೆ ಗುಟ್ಟಿ ಕೇಳುತ್ತ ಇರುವನು ಅಥವಾ ತಾನೊಬ್ಬನೇ ಮಾತಾಡಿಕೊಂಡಿರುವನು ಇಂಥದು ಅವನ ಸ್ವಭಾವ ಮುಸಲೋನಿ ವ್ಯವಹಾರವಾದಿ ಆದರೆ ಹಿಟ್ಲರ ಆದರ್ಶವಾದಿ ವ್ಯವಹಾರದ ಸೌಕರ್ಯಕ್ಕಾಗಿ ಆದರ್ಶದಿಂದ ಪತಿತನಾಗುವವನು ಅವನಲ್ಲ

ಹಿಟ್ಲರನು ಮದ್ಯ ಮಾಂಸ ಸೇವಿಸುವದಿಲ್ಲ ಬೀಡಿ ಸಿಗರೇಟು ಸೇದುವದಿಲ್ಲ ಹೊಗೆಬತ್ತಿಯ ಹೊಗೆಯನ್ನು ಮೂಸುವದು ಹಾಗಿರಲಿ, ನೋಡಿದೊಡನೆ ಪ್ರಾಣ ಹೋದಂತಾಗುವದು ಅವನಿಗೆ ಆದರೆ ಸಿನೇಮ, ಸಂಗೀತ, ಒಳ್ಳೊಳ್ಳೇ ಪುಸ್ತಕಗಳನ್ನೋದುವದೆಂದರೆ, ಪ್ರಿಟ್ ಮೋಲಿನಂತೆ ಉಬ್ಬುವನು ಅವನ ಎರಡು ಭುಜಗಳು ನಾಲ್ಕಾಗುವವು ಖಚೇರಿಯ ಒಂದು ಕೋಣೆಯಲ್ಲಿ ಖಾಸಗಿ ಸಿನೇಮ ಪ್ರದರ್ಶನಾಲಯ ಒಂದಿದೆ ಸಮಯ ಸಿಕ್ಕಿದಾಗ, ಕಾರ್ಯಬಾಹುಳ್ಯದಿಂದ ಮನಸ್ಸು ಸೋತಾಗ, ಇಲ್ಲಿಗೆ ಹೋಗಿ ಲೋಕದ ಸುಪ್ರಸಿದ್ಧ ಚಿತ್ರಪಟಗಳನ್ನು ನೋಡಿ ಆನಂದಿಸುವನು ಲೈಫ್ ಆಫ್ ಬೆಂಗಾಲ್ ಲ್ಯಾನ್ಸರ್ ಎಂಬ ಚಿತ್ರಪಟವನ್ನು ಎರಡು ಮೂರು ಬಾರಿ ನೋಡಿದರೂ ಅವನಿಗೆ ಮತ್ತೆ ನೋಡಬೇಕೆನ್ನಿಸಿತ್ತಂತೆ ಆದರೆ ಅವಕಾಶವಿಲ್ಲ.

ಈಗ ಹಿಟ್ಲರ್ ರೋಮಾಂಚನಾದಿ ಸಾಹಸ ಕೃತ್ಯಗಳ ವರ್ಣನೆ ಇರುವ ಕಥೆಕಾದಂಬರಿಗಳಷ್ಟೇ ಓದುತ್ತಾನೆ ಇತರ ಗ್ರಂಥಗಳನ್ನು ಓದಿ ಮನನಮಾಡಿಕೊಳ್ಳಲಿಕ್ಕೆ ಅವನಿಗೆ ಸಮಯದ ಅಭಾವ ತುಂಬಾ ಇದೆ. ಆದರೆ ಅವನಿಗೆ ನೆನಪಿನ ಶಕ್ತಿ ಬಹಳ ಎಷ್ಟೋ ವರ್ಷಗಳ ಮೊದಲು ಓದಿದ ವಿಷಯವಾದರೂ ನಿನ್ನೆ ಮೊನ್ನೆ ಓದಿದಂತೆ ಅವನ ಸ್ಮರಣೆಗೆ ಬರುತ್ತದೆ ಅವನ ಸಂಗಾತಿಗಳು ಕೆಲವು ವರ್ಷಗಳ ಮೊದಲು ಮಾತಾಡಿರುವದಕ್ಕೆ ವಿರೋಧವಾಗಿ ಈಗ ಮಾತಾಡಿದರೆ, ಅವನು ಹಿಂದಿನ ಪ್ರಸಂಗದ ನೆನಪು ಮಾಡಿಕೊಳ್ಳಲಿಕ್ಕೆ ಎಂದೆಂದಿಗೂ ಮರೆಯುವದಿಲ್ಲ

ಹಿಟ್ಲರನು ತನಗೆ ಸಣ್ಣ ಸಣ್ಣ ಅಪರಾಧ ಮಾಡಿದವರನ್ನು ಲಕ್ಷಿಸುವದಿಲ್ಲ 'ಪಾಪದವರು' ಎಂದು ಹೇಳಿ ಬಿಟ್ಟು ಅವರ ಕಡೆಗೆ ಉದಾಸೀನನಾಗಿ ಇರುತ್ತಾನೆ ನಿಮ್ಮ ಎಷ್ಟುಮಂದಿ ಖಾಸಗಿ ದ್ವೇಷಿಗಳಿಗೆ ಅಧಿಕಾರ ಪಡೆದ ಮೇಲೆ ನೀವು ಶಿಕ್ಷೆ ಕೊಟ್ಟಿರಿ?'' ಎಂಗೊಬ್ಬನು ಕೇಳಿದಾಗ ಹಿಟ್ಲರನು ನಸುನಗುತ್ತ ಒಬ್ಬರಿಗೂ ಇಲ್ಲ' ಎಂದನು ಕೈ ... ಜೈಲಿನಲ್ಲಿದ್ದಾಗ ಒಬ್ಬ ಜೈಲ ಕಾವಲುಗಾರನು ಅವನನ್ನು ಬಹು ವಿಧದಿಂದ ಹಿಂಸಿಸಿದ್ದನಂತೆ ಆದರೆ ಹಿಟ್ಲರನು ಅಧಿಕಾರ ಪಡೆದ ಮೇಲೆ ಕೂಡ ಆ ಕಾವಲುಗಾರನ ಅದೇ ಜೈಲಿನಲ್ಲಿ ಕಾವಲು ಕೊಡುತ್ತಿದ್ದಾನೆ

ಹಿಟ್ಲರನು ಇನ್ನೂ ಅವಿವಾಹಿತ ಅದೇಕೆ ಹಾಗೆ? ಎಂಬುದೊಂದು ಸಮಸ್ಯೆಯ ... ವರಿಂದ ... ಬಂದಿದೆ ಜರ್ಮನಿಯಲ್ಲಿ ಎಲ್ಲರೂ ... ವೆಯಾಗಬೇಕು ... ಹೆಚ್ಚು ... ತಂದೆತಾಯಿಂದಿರಾಗಬೇಕು ... ಬೋಧಿಸುತ್ತಾನೆ ಆದರೆ, ... ವ ದುವೆಯಾಗಿಲ್ಲ ಇನ್ನು ... ಚಾರಿ ಅದೇಕೆ ಹಾಗೆ? ಆದರೆ ... ರಣದಲಿ ಹೊರಗಿನ ಸ್ತ್ರೀ ... ದಿಷ್ಟು ... ವ ತ ನಿಜ ಲೋಕದ ಸ್ತ್ರೀಯ ... ಮೊನ್ನೆ ಮೊನ್ನೆ ... ಅಷ್ಟು ... ರ್ಡ ಬಾದಶಹರ ಒಬ್ಬ ಸ್ತ್ರೀಗಾಗಿ ರಾಜ್ಯವನ ಸಿಂಹಾಸನವನ್ನೂ ತ್ಯಜಿಸಲಿಲ್ಲವೆ? ಅದೇ ಅವನಿಗೆ ಹೆದರಿಕೆ ... ಆದರೆ ಅಷ್ಟು ಪ್ರೇಮ ... ಭಕ್ತಿ ವಿಶ್ವಾಸ — ಹಿಟ್ಲರನ ಈಗ ಅವನ ಸರ್ವಶಕ್ತಿಗಳು ಜರ್ಮನಿಯ ಪುನರುದ್ಧಾರ ಕಾರ್ಯದಲ್ಲಿ ತೊಡಗಿವೆ ... ಯಾದಾಗ ಅದು ಸಾಧ್ಯವೆ? — ಸರ್ವಥಾ ಇಲ್ಲ

ಹಿಟ್ಲರನಂತೆ ಮುಸಲೋನಿಯೂ ಒಬ್ಬ ಸರ್ವಾಧಿಕಾರಿ ಆದರೆ ಅವನ ಜೀವನಕ್ರಮ ತೀರ ಇನ್ನೊಂದಾಗಿದೆ ಅವನು ಹೆಂಡತಿ ಮಕ್ಕಳು ಬಂಧುಬಳಗದವರೊಂದಿಗೆ ಸಂಸಾರ ಕಟ್ಟಿಕೊಂಡಿದ್ದಾನೆ ಆದರೂ ಶಕ್ತಿಸಾಮರ್ಥ್ಯ ಪೂರ್ವವತ್ ಇವೆ ಅವುಗಳಲ್ಲಿ ಸ್ವಲ್ಪವೂ ಕುಂದುಕೊರತೆಯುಂಟಾಗಿಲ್ಲ ಅವನು ಮುಖದಿಂದ ಹೊರಸೂಸುವ ಕಾಂತಿಯೂ ಅವನ ... ರ ಕಣ್ಣುಗಳನ್ನು ಕುಕ್ಕಿಸುವದರಿಂದ ಆದ್ದರಿಂದ ತನ್ನನ್ನು ನೋಡಬಂದವರು ಕಂಗೆಡದಂತೆ ಅವರು ತೀರ ಸಮೀಪ ಸೇರುವ ತನಕ ಅವನು ಮುಖತಗ್ಗಿಸಿ ಹಿಡಿದೇ ತನ್ನ ಕೋಣೆಯಲ್ಲಿ ಕೂತುಕೊಳ್ಳುವನಂತೆ ಇಲ್ಲವಾದರೆ ಅವನ ತೇಜಃಪುಂಜವಾದ ಕಣ್ಣುಗಳನ್ನು ಮುಖವನ್ನು ನೋಡುತ್ತ ದೂರದಿಂದ ಬರುವವರು ಹತ್ತಿರ ಬರುವಷ್ಟರಲ್ಲಿ ಕಂಗಾಲಾಗಿ ಬಂದಂಥ ಕಾರ್ಯಕಾರಣಗಳನ್ನು ಪೂರ್ಣ ಮರೆತು ಬಿಡುವರಂತೆ ಎಂಥ ಅಪೂರ್ವ ಶಕ್ತಿ!

ಚಿಂತೆಗೂ ಚಿತೆಗೂ ಬಿಂದು ಮಾತ್ರದ ವ್ಯತ್ಯಾಸವಷ್ಟೆ? ಹೊರಗಿನ ಪ್ರಪಂಚದಲ್ಲಿ ಅನುಕೂಲ ಪ್ರತಿಕೂಲ ಎಂಥೆಂಥ ಘಟನೆಗಳು ಘಟಿಸುತ್ತಿದ್ದರೂ, ಮುಸಲೋನಿ ಮಾತ್ರ, ಪೂರ್ಣ ನಿಶ್ಚಿಂತನಾಗಿ ನಿದ್ರಿಸುತ್ತ ರಾತ್ರಿಗಳನ್ನು ಸುಖಿಯಾಗಿ ಕಳೆಯುವನು ಹಿಟ್ಲರನಂತೆ ಅವನೂ ಶಾಕಾಹಾರಿ ಆದರೆ ಕೆಲ ಕೆಲವು ಸಲ ಸ್ವಲ್ಪ ಮದ್ಯಮಾಂಸ ಸೇವಿಸುವದಿದೆ ಹಿಟ್ಲರನು ವ್ಯಾಯಾಮಾದಿಗಳಲ್ಲಿ ಸಮಯ ಕಳೆಯುವದು ಕಡಿಮೆ ಪರಂತು ಮುಸಲೋನಿ ವ್ಯಾಯಾಮ ಕಸರತ್ತುಗಳಲ್ಲಿ ತುಂಬಾ ಸಮಯ ಕಳೆಯುತ್ತಾನೆ

ಮುಸಲೋನಿಯನ್ನು ನೋಡುವಾಗ ಘನಗಂಭೀರನಾಗಿ ತೋರುವದಾದರೂ, ಅವನ ಹೃದಯವು ಪ್ರೇಮ ಕರುಣಾರಸಗಳಿಂದ ತುಂಬಿತುಳುಕುತ್ತದೆ ಒಮ್ಮೆ ಅವನ ಕಿರಿಯ ಮಗಳು ಪ್ರಾಣಾಂತಿಕ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಳು ಅದೇ ಕಾಲಕ್ಕೆ ಮುಸಲೋನಿ ಪತ್ರಕರ್ತರ ಒಂದು ಖಚೇರಿಯ ಕಟ್ಟಡದ ಅನಾವರಣ ಸಮಾರಂಭಕ್ಕೆ ಹೋಗಿದ್ದನು ಅಲ್ಲಿ ಭಾಷಣ ಕೊಡುತ್ತಿರುವಾಗ ಕೆಲವು ಪತ್ರಕರ್ತರು ಕಿರಿಯ ಮಗಳಿಗೆ ಪ್ರೇಮಪೂರ್ವಕ ಉಪಹಾರ'ವೆಂದು ಒಂದು ಗೊಂಬೆಯನ್ನು ಮುಸಲೋನಿಯ ಕೈಯಲ್ಲಿಟ್ಟರು ಆಗಲೇ ... ಗಳ ದಾರುಣ ಅಸ್ವಸ್ಥಾವಸ್ಥೆಯನ್ನು ... ಮುಸಲೋನಿಯ ಕಣ್ಣುಗಳಿಂದ ದಳದಳನೆ ನೀರು ಸುರಿಯಿತು ... ದುಃಖದ ಆವೇಗದಿಂದ ... ಸಾಧ್ಯವಾಗಲಿಲ್ಲ ... ಇತರ ಕಾರ್ಯಗಳನ್ನು ... ಅಷ್ಟರ ... ಕಣ್ಣ ...

ಇಟಲಿಯ ಸರ್ವಾಧಿಕಾರಿ ಮುಸಲೋನಿ ಅಂದರೆ, ಪ್ರೇಮದ ಅವತಾರ, ವಾತ್ಸಲ್ಯದ ಮೂರ್ತಿ, ಕರುಣಾರಸದ ಆಗರ ಎಂದು ಕೇಳಿದರೆ ನೀವು ಆಶ್ಚರ್ಯಪಡಬಹುದಷ್ಟೆ? ಆದರೆ ಅದು ಪೂರ್ಣ ಸತ್ಯ.

ಹರಿಪುರ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸು ಕಮಿಟಿಯವರ, ಈ ಚುನಾವಣೆಯ ದಿನಗಳು ಇದೇ ತಿಂಗಳ ತಾ ೨೬ಕ್ಕಿಂತ ಹೆಚ್ಚಿಗೆ ಮುಂದರಿಸಬಾರದಾಗಿ ತಿಳಿಸಿದ್ದರಿಂದಲೂ ತಾ ೨೪ ಮತ್ತು ೨೫ಕ್ಕೆ ಜಿಲ್ಲಾ ಪರಿಷತ್ತು ನಡೆಯಲಿರುವುದರಿಂದಲೂ ತಾ ೨೬ಕ್ಕೆ ಈ ಕೆಳಗಿನ ವಿಭಾಗಗಳಲ್ಲಿ ಚುನಾವಣೆಯು ನಡೆಯುವುದು

ಹಳ್ಳಿ ವಿಭಾಗ ಉಮೇದ್ವಾರರು —

X ... ಆರ್ ... ನರಸಿಂಹ ಶೆಣೈ

XI ... ಕೋಚಣ್ಣ ಶೆಟ್ಟಿ

XII ... ನರಸಿಂಹ ಭಟ್

I ... ಭಟ್ಟ ... ಶೆಣೈ

ಉಮೇಶ ರಾವ್, ...

DIAMONDS! - DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ ಆರ್ ಕೆ ಶೆಟ್, ಜುವೆಲರ್
ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರು.

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

ಮಂಗಳೂರಿನ ಪೇಟೆಧಾರಣೆ

ಸಾಮಾಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ಬತ್ತ ಹೊಸ ಗುಡ್ಡು ಮು	1 —10	1 —10
ದಾರಿ ಅಕ್ಕಿ	3— 8	4— 0
ಸುಗ್ಗಿ	4— 8	4— 8
ಗುಡ್ಡು	4— 4	4—12
ಊರ ಅವಲ್ ಬೆಸ್ತಿಗೆ	4— 7	4— 7
ರಂಗೂನು ಬೆ ಗೋ ಗಳ್ಳೆ	6 — 8	7— 4
ಎಲ್ಲೂರು ಬೆ ಮು ಗಳ್ಳೆ	3—14	4— 0
ಗೋದಿ ಗೋಣಿ ಗಳ್ಳೆ	12 — 8	15— 8
ತೊಗರಿ ಗೋಣಿ ಗಳ್ಳೆ	11— 8	18— 8
ಹುರುಳಿ ಗೋಣಿ ಗಳ್ಳೆ	5—10	5 —10
ಕಡಲೆ ಗೋಣಿ ಗಳ್ಳೆ	9 — 8	10 — 8
ತೊಗರಿಬೇಳೆ ಗೋಣಿಗಳ್ಳೆ	11— 8	18— 0
ಉದ್ದು ಗೋಣಿ ಗಳ್ಳೆ	9— 0	9 — 8
ಹೆಸರು ಗೋಣಿ ಗಳ್ಳೆ	9— 12	10— 8
ಊರುಬೆಲ್ಲ ಖಂಡಿ ಗಳ್ಳೆ	26— 0	30— 0
ಉಪ್ಪು ಗೋಣಿ ಗಳ್ಳೆ	4— 8	5— 4
ಕೊಬ್ರಿ ಖಂಡಿ ಗಳ್ಳೆ	52 — 8	0— 0
ಎಳ್ಳಿಂಡಿ ಖಂಡಿ ಗಳ್ಳೆ	25 —	26 — 0
ತೆಂಗಿನ ಎಣ್ಣೆ ಮುಡಿ ಗಳ್ಳೆ	3 —12	3—14
ಎಳ್ಳೆಣ್ಣೆ ಮುಡಿ ಗಳ್ಳೆ	6— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳೆ	6— 5	7— 5
ಮೋರಿಸ ಸಕ್ಕರೆ ಮು. ಗಳ್ಳೆ	2— 13	2 —14
ಮೆಣಸು	1— 8	6— 0
ಸಾಸಿವೆ ಮುಡಿ ಗಳ್ಳೆ	5 — 8	6 8
ಕಾಳುಮೆಣಸು ಪ ಸೇಗೆ	17 — 0	19 0
ಯೇಲಕ್ಕಿ ಬೀಜ ಮಣಗಳ್ಳೆ	80— 0	8 — 0
ಗೇರುಬೀಜ ಮು ಗಳ್ಳೆ	[illegible]	— 1
ಕಬ್ಬಿಣ ಖಂಡಿ ಗಳ್ಳೆ	30— 0	5 — 0
ತಾಂಬ್ರ ತಗಡು ಮು ಗಳ್ಳೆ	14— 12	15— 0
ತಾಂಬ್ರ ಪಾತ್ರೆಗಳು ಮು ಗಳ್ಳೆ	17— 0	18— 0
ಬೀಡಿಬೆಲ್ಲ ಸೇರು ಗಳ್ಳೆ	13— 8	14— 0
ಹಿತ್ತಾಳೆ ಕಂಚು ಮು ಗಳ್ಳೆ	12— 0	12— 0
ಅವಲು ಗಳ್ಳೆ	22— 4	22— 6
ಹುಣಸೆ ಹುಳಿ ಖಂಡಿ ಗಳ್ಳೆ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳೆ	140 0	148— 0
ಪ್ಲಾಂಟರ್ ಕಾಫಿ ಖಂಡಿ ಗಳ್ಳೆ	185— 0	195 0
ಮಡಿಕೇರಿ ಏಲಕ್ಕಿ	15— 0	17 — 8

WANTED

Applications are invited before the 31st Dec 1937, for the post of a Clerk in the Mangalore Co operative Town Bank Ltd, Only passed S S L Cs with a good knowledge of typing who can furnish a Cash security of Rs 300 need apply

U. Srinivasa Rao,
Secretary
Mangalore 18 12 37

WANTED

Applications are invited from members of the Gowd Saraswath Brahmin community for the post of the Manager at the Sri mad Ananthesh war Temple Manjeshwar on a Salary of Rs 100 per month Security of Rs 3000 required Applications should reach the undersigned before the 10th January 1938

Mijar Nagappa Pai,
Trustee
Srimad Ananthesh war Temple
Manjeshwar
Mangalore 18 12 37

Canara High School, MANGALORE

The Canara High School Association has increased the seats in the School Council from seven to ten, each of the three seats will be filled up by election from among themselves by old Boys that have paid Rs 50/- or upwards to the school funds one being elected per year in the three years 1938 1939 and 1940 A tentative list of old Boys that have paid Rs 50/ and upwards to the school funds has been put up on the Notice Board of the School and copies of the list have been forwarded to the Secretary of the School Day Committee and the Secretary of the Old Boys Association It is requested that objections to the list may be sent in before 31st January 1938, in consideration of which a final list will be issued by the School Council

M Madhava Rao,
Manager

ಶಾಲಿವಾಹನ ಶಕ ೧೮೫೯ನೆಯ ಈಶ್ವರ ಸಂವತ್ಸರದ ಮಾರ್ಗಶಿರ ಬ ೧೦ ಶನಿವಾರದಿಂದ ಮಾರ್ಗಶಿರ ಬ ೧೪ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇ ಡಿಸೆಂಬರ್)

ತಾರೀಖು	ವಾರ	[illegible]	[illegible]	ನಕ್ಷತ್ರ	[illegible]	[illegible]	[illegible]
25	ಶನಿ		[illegible]	ಹಸ್ತ	[illegible]	[illegible]	[illegible]
26	ರವಿ	[illegible]	[illegible]	ಚಿತ್ತ	[illegible]	[illegible]	
27	ಸೋಮ	[illegible]	[illegible]	ಸ್ವಾತಿ	[illegible]	[illegible]	
28	ಮಂಗಳ	[illegible]	[illegible]	ವಿಶಾಖ	[illegible]	[illegible]	
29	ಬುಧ	[illegible]	[illegible]	ಅನುರಾಧ		[illegible]	
30	ಗುರು	[illegible]	[illegible]	ಜ್ಯೇಷ್ಠ	[illegible]	[illegible]	
31	ಶುಕ್ರ	[illegible]	[illegible]	[illegible]	[illegible]	[illegible]	

ಗರ್ಭಿನೋಲ್ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗ ಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ [illegible] ಶೂಲೆ, ಶ್ವೇತಪ್ರದರ ರಕ್ತಪ್ರದರ ಗರ್ಭಸ್ರಾವ ಗರ್ಭಾಶಯ ವ್ಯಾಧಿ [illegible] ಹೆರಿಗೆ [illegible] ನಂತರ ಉಂಟಾಗುವ ಕ್ಷಯ ಜಪ್ಪಿ ಅಜೀರ್ಣ ಮಲಬದ್ಧತೆ, ಎದೆನೋವು ಬೆನ್ನುನೋವು ತಲೆನೋವು, ತಲೆ ತಿರುಗುವಿಕೆ ವಾತಸ್ತಂಭ (Hysteria) ಮೊದಲಾದ ನಾನಾ ತರದ ಮೊದುಳಿನ ವಿಕಾರಗಳು ಅಶಕ್ತತೆ ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು

ಹುಚ್ಚೇನು? ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಪ್ರತ್ಯು ಇಂಗ್ಲಿಷ ವೈದ್ಯರು ಕೂಡಾ

"ವಿಜಯ ಗರ್ಭಿನೋಲ್"

ನ್ನು ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ "ಬೇರೆ ಅನೇಕ ಔಷಧಗಳಿಂದ ಗುಣ ಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರೆಯಾಗಿ ಗುಣಹೊಂದಿದ್ದಾರೆ ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ"

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ 2—8—0
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು —

ವಿಜಯ ಫಾರ್ಮೆಸಿ, ಕೊಚ್ಚಿನ್.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

THE PIE-MONEY BANK LTD,

Maidan Road MANGALORE

Undertakes all kinds of Banking Business Current account interest [illegible] % per annum Savings Bank Deposits [illegible] per annum

FIXED DEPOSITS

For 2 Years [illegible] 1 Year [illegible] [illegible] months [illegible]

Auction chit Funds ranging from Rs 100 to Rs 5000 run regularly on systematic lines Unique Banking facilities to Businessmen and interested Public

Apply for particulars — **K R. GURU,** *Managing Director*

ಪೈಂಟರ್ಸ್

Whenever you require the Service of
Please call on or write to:-

Simon & Co.,
Painters.

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಚೆಟ್ಟಿನ ದಾಸಿಕೆ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

PAINTERS

ಸತ್ತವರನ್ನು ಬದುಕಿಸುವ ಉಪಾಯ!

ಅದನ್ನೀಗ ವಿಜ್ಞಾನಿಗಳು ಹುಡುಕುತ್ತಿದ್ದಾರೆ!

ಸತ್ತವರು ಬದುಕುವದು! ಯಾಕೆ ಆಶ್ಚರ್ಯಪಡಬೇಕು? ನಮ್ಮ ಪುರಾಣಗಳಲ್ಲಿಯೂ ಅಂಥಹದ್ದೊಂದು ಕತೆಯಿದೆ. ದ್ರೋಣಾಚಾರ್ಯರು ಆಗಾಗ ಸತ್ತು—ಸ್ವರ್ಗಕ್ಕೆ ಹೋಗಿ ಭೂಮಿಗೆ ಬಂದು—ಪುನಃ ಬದುಕಿಕೊಳ್ಳುತ್ತಿದ್ದರಂತೆ. ತಮ್ಮ ಮಗನು ಸತ್ತು ಸ್ವರ್ಗಕ್ಕೆ ಹೋದರೆಂದು ಕೇಳಿದೊಡನೆಯೆ, ಅವರನ್ನು ನೋಡಿಬರೋಣವೆಂದು ಅವರೂ ಸತ್ತು ಸ್ವರ್ಗಕ್ಕೆ ಹೋಗಿದ್ದರು. ಆದರೆ ಹಿಂತಿರುಗಿ ಬರುವಾಗ, ತಮ್ಮ ಶರೀರವನ್ನೆಲ್ಲ ಶತ್ರುಗಳು ಛಿನ್ನಭಿನ್ನ ಮಾಡಿದ್ದುದರಿಂದ ಅವರಿಗೆ ಪುನಃ ಬದುಕಿಕೊಳ್ಳಲು ಆಗಲಿಲ್ಲ; ಇಲ್ಲವಾದರೆ ಈಗಲೂ ಅವರನ್ನು ನಾವೆಲ್ಲ ಕಣ್ಣಾರೆ ಕಾಣಬಹುದಾಗಿದ್ದಿತ್ತು — ಆದರೆ ಉಪಾಯವಿಲ್ಲ!—ಹೀಗೆಂದು ಮಹಾಭಾರತದಲ್ಲಿ ಹೇಳಿಯದೆ.

ಸತ್ತವರು ಬದುಕುವದು ದ್ವಾಪರಯುಗದ ದ್ರೋಣಾಚಾರ್ಯರಿಗೆ ಮಾತ್ರವಲ್ಲ, ಕಲಿಯುಗದ ನಮಗೂ ಸಾಧ್ಯವಿದೆ ಎಂದೂ ತೋರಿಸಲಿಕ್ಕೆ ರಶ್ಯದ ಕೆಲವು ಜನ ವಿಜ್ಞಾನಿಗಳು ಭಗೀರಥ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ. ಅವರು ತಮ್ಮ ಪ್ರಯತ್ನಗಳಲ್ಲಿ ಹೆಚ್ಚಿನ ಮಟ್ಟಿಗೆ ಕೃತಕೃತ್ಯರಾಗಿಯೂ ಇದ್ದಾರೆ.

ಕೊರ್ನಿಯ ಎಂಬ ಕ್ರೋಂಬಿನ ಸ್ವಭಾವದ, ಪಾರದರ್ಶಕ ಗುಣವುಳ್ಳ, ಒಂದು ಕವಚವು ಕಣ್ಣನ್ನು ಸುತ್ತಲೂ ಆವರಿಸಿಕೊಂಡಿದೆ. ಅದರ ಪಾರದರ್ಶಕತ್ವ ಕೆಲವು ಕಾರಣಗಳಿಂದ ಕೆಟ್ಟುಹೋದಾಗ ಕುರುಡುತನ ಬರುವದು. ರಶ್ಯದ ಓರ್ವ ಕುಶಲವಿಜ್ಞಾನಿಯು ಆಗ ತಾನೇ ಸತ್ತವನ ಕಣ್ಣನ್ನು ಕಿತ್ತು, ಅದರ ಒಳ್ಳೆಯ ಸ್ಥಿತಿಯಲ್ಲಿರುವ ಪಾರದರ್ಶಕ ಕೊರ್ನಿಯವನ್ನು ಸುಲಿದು, ಜೀವದಿಂದಿದ್ದರೂ ಕುರುಡನಾಗಿರುವವನ ಕಣ್ಣಿಗೆ ಕಸಿಕಟ್ಟುವ ಕ್ರಮವನ್ನು ಕಂಡುಹಿಡಿದು ವಿಶೇಷ ಸಫಲತೆಯನ್ನು ಪಡೆದಿದ್ದಾನೆ. ಕುರುಡು ಕಣ್ಣಿನ ಕೊರ್ನಿಯದ ಬದಲಿಗೆ ದೃಷ್ಟಿಯುಳ್ಳ ಸತ್ತವನ ಕಣ್ಣಿನ ಕೊರ್ನಿಯವನ್ನು ಇಟ್ಟು ಒಂದೆರಡು ದಿನಗಳಲ್ಲಿ ಅದು ಚೆನ್ನಾಗಿ ಕೂಡಿಬಂದು, ಕುರುಡನಿಗೆ ಕಣ್ಣು ಕಾಣಿಸತೊಡಗುವದು! ಸತ್ತವರ ಕಣ್ಣಿನ ಕೊರ್ನಿಯವನ್ನೇ ಯಾಕೆ ಕೇಳುತ್ತಾರೆ ಎಂದು ನೀವು ಕೇಳಬಹುದು. ಬದುಕಿದ್ದವರು ತಮ್ಮನ್ನು ತಾವು ಕುರುಡುಮಾಡಿಕೊಳ್ಳಲಿಕ್ಕೆ ಯಾರು ತಾನೇ ಒಪ್ಪುವರು? ಆದ್ದರಿಂದ ಈ ಕಾರ್ಯಕ್ಕೆ ಇಂದೋ ನಾಳೆಯೋ ಸುಟ್ಟು ಅಥವಾ ಹೂತು ಮಣ್ಣುಪಾಲು ಮಾಡುವ ಸತ್ತವರ ಕಣ್ಣುಗಳನ್ನು ಉಪಯೋಗಿಸುತ್ತಾರೆ.

ಬದುಕಿದ್ದ ಕುರುಡರನ್ನು ಸತ್ತವರ ಕಣ್ಣಿನ ಕೊರ್ನಿಯ ಉಪಯೋಗಿಸಿ ದೃಷ್ಟಿಬರುವಂತೆ ಉಪಾಯ ಹುಡುಕಿದುದರ ಜೊತೆಗೆ ಇನ್ನೊಂದು ಗೂಢವನ್ನೂ ವಿಜ್ಞಾನಿಗಳು ತಿಳಿಯುವಂತಾಯಿತು. ಹೃದಯ ಮತ್ತು ಶ್ವಾಸಕೋಶಗಳ ಚಲನೆಯು ನಿಂತುಹೋಗುವದೇ ಮನುಷ್ಯನು ಸತ್ತಿರುವುದರ ಸಾಧಾರಣ ಲಕ್ಷಣವಾಗುತ್ತದೆ. ಆದರೆ, ಹೀಗೆ ಸತ್ತು ಒಂದೆರಡು ದಿನಗಳು ಕಳೆಯುವ ವರೆಗೆ ಮನುಷ್ಯನ ಎಲ್ಲಾ ಅಂಗಗಳೂ ಸತ್ತುಹೋಗುವುದಿಲ್ಲ. ಬೇರೆ ಬೇರೆ ಅಂಗಭಾಗಗಳಿಗೆ ಸಾಯಲಿಕ್ಕೆ ಹೆಚ್ಚುಕಡಿಮೆ ಸಮಯವು ಬೇಕಾಗುತ್ತದೆ. ಆದ್ದರಿಂದಲೇ, ಸತ್ತು ಕೆಲವು ಸಮಯ ಕಳೆದುಹೋದ ಮೇಲೆ ಕೂಡ ಕೃತ್ರಿಮ ಶ್ವಾಸೋಚ್ಛ್ವಾಸ ಎದೆಗುಂಡಿಯ ತಿಕ್ಕಾಟವು ಮತ್ತು ಹೊಸ ರಕ್ತವನ್ನು ಇಂಜೆಕ್ಟಮಾಡಿದುದರಿಂದ ಅವರು ಬದುಕಿದ ಹಲವು ನಿದರ್ಶನಗಳೂ ಇವೆ. ಎದೆಗುಂಡಿಗೆ ಮತ್ತು ಶ್ವಾಸಕೋಶಗಳ ಚಲನೆ ನಿಂತ ನಂತರ—ಅಂದರೆ, ಅವು ಸತ್ತಬಳಿಕ. ಸ್ವಲ್ಪ ಸಮಯದಲ್ಲಿಯೇ ಸಾಯುವಂಥವುಗಳು ಮೆದುಳು ಮತ್ತು ಬೆನ್ನೆಲುಬಿನ ಕೊಳವೆಯೊಳಗೆ ಇರುವ ಮೆದುಳುಬಳ್ಳಿ ಆಗಿರುತ್ತದೆ. ಆದ್ದರಿಂದ ಸತ್ತವರನ್ನು ಬದುಕಿಸಬೇಕಾದರೆ, ಮೊದಲು ಮಾಡಬೇಕಾದ ಕಾರ್ಯಗಳೆಂದರೆ ಪುನಃ ಎದೆಗುಂಡಿಗೆಯ ಬಡಿತ, ಶ್ವಾಸೋಚ್ಛ್ವಾಸ ಆಗುವಂತೆ ಮಾಡಿದ ಬಳಿಕ ಮೆದುಳು ಮತ್ತು ಮೆದುಳುಬಳ್ಳಿ ಸಾಯದಂತೆ ಉಪಾಯಮಾಡುವದು ಅಥವಾ ಅವು ಸತ್ತಿದ್ದರೆ ಬೇರೆ ಮೆದುಳು ಮತ್ತು ಮೆದುಳುಬಳ್ಳಿಯನ್ನು ಕಸಿಮಾಡುವದಾಗಿದೆ.

ಸತ್ತ ಎರಡು ಮೂರು ಮಿನಿಟುಗಳೊಳಗಾಗಿ ಎದೆಗುಂಡಿಗೆ ಮತ್ತು ಶ್ವಾಸಕೋಶಗಳು ಬದುಕುವಂತೆ ಮಾಡಬಹುದು. ಅಂದರೆ ಅವುಗಳಲ್ಲಿ ಪುನಃ ಚಲನೆಯನ್ನು ಉಂಟುಮಾಡಬಹುದು. ಅದಕ್ಕೂ ಹೆಚ್ಚಿಗೆ ಸಮಯ ಕಳೆದ ಮೇಲೆ ಸತ್ತ ಎದೆಗುಂಡಿಗೆಯನ್ನು ಚಲಿಸಲಿಕ್ಕಾಗುತ್ತದೋ ಎಂದು ನೋಡಿದಾಗ, ಅದರಲ್ಲಿ ಆ ವಿಜ್ಞಾನಿಗೆ ಅಷ್ಟು ಯಶಸ್ಸು ಬರಲಿಲ್ಲ. ಆದರೆ ಬೇರೆ ಬೇರೆ ಪ್ರಾಣಿಗಳನ್ನು ಬೇಕೆಂತಲೇ ಸಾಯಗೊಳಿಸಿ, ಆರು ಮಿನಿಟಿನೊಳಗೆ ಎದೆಗುಂಡಿಗೆ ಮತ್ತು ೨೦ ಮಿನಿಟುಗಳಲ್ಲಿ ಶ್ವಾಸಕೋಶಗಳ ಚಲನೆಯುಂಟಾಗುವಂತೆ ಮಾಡಿ, ಸತ್ತ ಆ ಪ್ರಾಣಿಗಳನ್ನು ಪುನಃ ಬದುಕಿಸಿರುವನು. ೨೦ ಮಿನಿಟುಗಳೊಳಗೆ ಸತ್ತ ಶ್ವಾಸಕೋಶಗಳನ್ನು ಪುನಃ ಬದುಕಿಸಬಹುದೆಂಬುದರಿಂದ ಅದಕ್ಕೂ ಮೊದಲು ಸಾಯುವ ಎದೆಗುಂಡಿಗೆಯ ಕಡೆಗೆ ಪ್ರಥಮ ಲಕ್ಷ್ಯವನ್ನು ಕೊಟ್ಟು ಅದನ್ನು ಮೊದಲು ಬದುಕಿಸುವದು ಸಾಧ್ಯವಾಗಿದೆ. ಇವೆರಡೂ ಕೋಮಲಾಂಗಗಳು ಹೆಚ್ಚು ಕಡಿಮೆ ಒಂದೇ ಸಮಯಕ್ಕೆ ಸಾಯುವಂತಾಗಿದ್ದರೆ, ಎರಡರ ಕಡೆಗೂ ಒಂದೇ ಬಾರಿಗೆ ಲಕ್ಷ್ಯಕೊಟ್ಟು ಎರಡನ್ನೂ ಒಂದೇ ಬಾರಿಗೆ ಬದುಕಿಸುವದು ಅಸಾಧ್ಯವಾಗುತ್ತಿತ್ತು. ಆದರೆ, ಹೀಗಿಲ್ಲದಿರುವುದರಿಂದ ಸತ್ತ ಮನುಷ್ಯನನ್ನು ಪುನಃ ಬದುಕಿಸುವದು ಸುಲಭಸಾಧ್ಯವಾಗಿದೆ.

ಸತ್ತ ಪ್ರಾಣಿಗಳನ್ನು ಹೀಗೆ ಬದುಕಿಸಿದಾಗ ಅವುಗಳಲ್ಲಿ ಮೊದಲಿನಂತೆ ಅಂಗಾಂಗಗಳ ಚಲನೆಗೆ ಮತ್ತು ನರಮಂಡಲದೊಳಗೆ ಇರಬೇಕಾದ ಸಂಬಂಧವು ಕಡಿದುಹೋಗಿ ಅವು ಒಂದಕ್ಕೊಂದಾಗಿ ಹೋದುದು ಗೊತ್ತಾಯಿತು. ಆದರೆ ಐದಾರು ದಿನಗಳಲ್ಲಿ ಅವು ತಮ್ಮ ಪೂರ್ವಸ್ಥಿತಿಗೆ ಬಂದು ಜೀವಿಸತೊಡಗಿದುವು. ಪರಂತು, ಎದೆಗುಂಡಿಗೆ ಸತ್ತು ೬ ಮಿನಿಟುಗಳು ಕಳೆದ ಬಳಿಕ ಬದುಕಿಸಿದ ಪ್ರಾಣಿಗಳಲ್ಲಿ ಅಂಗೋಪಾಂಗ ವ್ಯಾಪಾರಕ್ಕೂ ನರಮಂಡಲಕ್ಕೂ ಇರುವ ಪೂರ್ವದ ಸಂಬಂಧವು ಪುನಃ ಸ್ಥಾಪಿತವಾಗಲೇ ಇಲ್ಲ. ಕೆಲವು ಮೂಕ, ಕೆಲವು ಕಿವುಡು, ಕೆಲವು ಕುರುಡು, ಹೀಗೆ ಏನಾದರೂ ಒಂದು ಕೊರತೆಯು ಇದ್ದೇ ಇತ್ತು. ಆದರೂ ಕೂಡ ಈ ಸತ್ತು ಜೀವಕ್ಕೆ ಬಂದವುಗಳು ಮುಂದೆ ಕೆಲವು ತಿಂಗಳುಗಳ ವರೆಗೆ ಬದುಕಿದ್ದವು.

ವಿಷ ಸೇವನೆ ಅಥವಾ ರಕ್ತಸ್ರಾವದಿಂದ ಸತ್ತವುಗಳನ್ನು ಸಹ ಅವು ಅಸಿಲದ ಪೂರ್ವಕ್ಕೆ ಮತ್ತು ರಕ್ತವನ್ನು ಇಂಜೆಕ್ಟಮಾಡಿ ಬದುಕಿಸುವದು ಸಾಧ್ಯವೆಂದು ಗೊತ್ತಾಗಿದೆ. ಆದರೆ ಈ ಎಲ್ಲಾ ಸಂದರ್ಭಗಳಲ್ಲಿ ಹಳೆ ಮೋಟಾರ ಇಂಜಿನುಗಳನ್ನು ನಡೆಸುವ ರೀತಿಯಲ್ಲಿ ದೀರ್ಘಕಾಲದ ತನಕ ಕೃತ್ರಿಮ ಶ್ವಾಸೋಚ್ಛ್ವಾಸ ಮತ್ತು ಹೃದಯಚಲನೆಯನ್ನು ನಡೆಸುವದು ಅಗತ್ಯವಾಗಿದೆ.

ನಾಣ್ಯಗಳ ಪರೀಕ್ಷೆಗೆ ಹೊಸಯಂತ್ರ.

ನಮ್ಮ ದೇಶದಲ್ಲಿ ಮಾತ್ರವಲ್ಲ, ನಾಣ್ಯಗಳ ಪ್ರಚಾರವಿರುವ ಎಲ್ಲಾ ದೇಶಗಳಲ್ಲಿಯು ಕೃತ್ರಿಮ ನಾಣ್ಯಗಳನ್ನು ತಯಾರಿಸುವವರಿದ್ದಾರೆ. ಈ ಖೋಟಾ ನಾಣ್ಯಗಳ ಪ್ರಚಾರದಿಂದ ದೊಡ್ಡದೊಡ್ಡ ಬೇಂಕುಗಳಿಂದಾರಂಭಿಸಿ ಸಾಮಾನ್ಯ ಜನರ ವರೆಗೆ ಎಲ್ಲರೂ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ವಿದೇಶಗಳಲ್ಲಿ ಸುಳ್ಳು ನಾಣ್ಯಗಳನ್ನು ಹುಡುಕಿ ತೆಗೆಯುವದು ಎಷ್ಟು ಕಷ್ಟವಾಗಿದೆಯೆಂದರೆ—ನಾಣ್ಯಗಳ ಆಕಾರದ ಗಾಜಿನ ತುಂಡುಗಳಿಗೆ ವಿದ್ಯುಚ್ಛಕ್ತಿಯ ಸಹಾಯದಿಂದ ಬೆಳ್ಳಿ, ಚಿನ್ನಗಳ ಪರಕನ್ನು ಕೊಡುತ್ತಾರೆ. ಇವುಗಳನ್ನು ನಿಜವಾದ ನಾಣ್ಯಗಳಿಂದ ವಿಂಗಡಿಸಿ ತಿಳಿಯುವದು, ವಿಶೇಷಜ್ಞರಿಗೆ ಕೂಡ ಅಸಾಧ್ಯವಾಗುತ್ತದೆ.

ಆದರೆ ಆಸ್ಟ್ರೇಲಿಯದ ನಾಲ್ಕು ದೊಡ್ಡ ಬೇಂಕುಗಳಲ್ಲಿ ಒಂದೊಂದು ವಿಶೇಷ ಪ್ರಕಾರದ ಯಂತ್ರವನ್ನಿಟ್ಟಿದ್ದಾರೆ. ಅದು ವಿದ್ಯುಚ್ಛಕ್ತಿಯ ಬಲದಿಂದ ಒಂದೇ ಮೂರುವರೆ ಮಿನಿಟುಗಳಲ್ಲಿ ೫೦೦ ನಾಣ್ಯಗಳನ್ನು ಪರೀಕ್ಷಿಸಿ, ಲೆಕ್ಕಿಸಿ, ಸುಳ್ಳುಗಳನ್ನು ವಿಂಗಡಿಸಿ ನಿಜವಾದವುಗಳನ್ನು ಚೀಲದಲ್ಲಿ ತುಂಬಿಸಿ ಕಟ್ಟುವದು. ಈ ಯಂತ್ರವು ಎಷ್ಟು ಚೊಕ್ಕವಾಗಿ ಕೆಲಸಮಾಡುವದೆಂದರೆ, ಆಸ್ಟ್ರೇಲಿಯದ ನಿಜವಾದ ನಾಣ್ಯಕ್ಕಿಂತ ಒಂದು ಕೂದಲೆಳೆಯಷ್ಟು ಹೆಚ್ಚು ಕಡಿಮೆಯಿದ್ದ ಸುಳ್ಳು ನಾಣ್ಯವನ್ನು ಕೂಡ ಅದು ಬೇರೆ ಮಾಡಿಇಡುವದು.

ಈಗ ಅಂಥ ಯಂತ್ರವನ್ನು ತಮಗೂ ತಯಾರಿಸಿ ಕೊಡಬೇಕೆಂದು ಯಂತ್ರಶೋಧಕನಿಗೆ ಕರೆಬಂದಿದೆ. ಆದರೆ ಏನು ಪ್ರಯೋಜನ? ಸುಳ್ಳು ನಾಣ್ಯಗಳು ಬೇಂಕುಗಳನ್ನು ಮುಟ್ಟಬೇಕಾದರೆಯೇ ತಮ್ಮನ್ನು ನಿರ್ಮಿಸಿದವರ ಉದ್ದೇಶವನ್ನು ಸಾಧಿಸಿಕೊಡುತ್ತವೆ. ನಿಜವಾಗಿ ನಷ್ಟಪಡುವವುಗಳು ಬೇಂಕುಗಳಲ್ಲ, ಪರಂತು ಹಳ್ಳಿಹಳ್ಳಿಗಳಲ್ಲಿರುವ ಸಾಮಾನ್ಯ ಜನತೆಯಾಗಿದೆ. ವಿಶೇಷ ಬೆಲೆಬಾಳುವ ಯಂತ್ರದಿಂದ ಪ್ರಯೋಜನ ಪಡೆಯುವದು ಅವರಿಗೆ ಸಾಧ್ಯವೆ?

ಶ್ರೀ ಸತ್ಯಮೂರ್ತಿಯವರು ಸಿಂಹಳದಲ್ಲಿ ಪ್ರವಾಸಗೈದು ಕಾಂಗ್ರೆಸ್ಸಿನ ಸಂದೇಶವನ್ನು ಸಾರಿದರು.

ಪಂಜಾಬಿನಲ್ಲಿ ಶಾಯುಧಗಂಜ್ ಚಳವಳವು ಮತ್ತೊಮ್ಮೆ ಪ್ರಾರಂಭವಾಗಿರುತ್ತದೆ.

ಆಸ್ಸಾಮು ಪ್ರಾಂತ್ಯವು ಕಾಂಗ್ರೆಸ್ ಪ್ರಾಂತ್ಯವಾಗಿ ಬೇಗನೆ ಮಾರ್ಪಡುವ ಸಂಭವಗಳುಂಟಾಗಿವೆ. ರಾಷ್ಟ್ರಪತಿಯವರ ಪ್ರವಾಸದ ಅನುಭವವಾಗಿರುತ್ತದೆ.

THE
BANK OF MANGALORE LTD.,
MANGALORE.
ESTD 1931

Branches-
Panemangalore, Mudabidri & Padubidri.

Chairman—**Philip J. Chandran, Esq.,**
Retd Dt Registrar of Joint Stock Companies

On & from 1st of January 1937,
Fixed Deposits will be received at following rates of interest

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly

Saving Bank deposit 3½% on daily balances

All kinds of banking business transacted
U. R. PAI, N. U. PAI, *Managing Directors*

ನಾಳೆಯ ಜಗತ್ತು

ನಾಳೆಯ ಜಗತ್ತಿನ ಸ್ವರೂಪವು ಇಂದಿನಂತೆಯೇ ಇರುವುದೇ? ಯಾರೂ ಹೇಳಲಾರರು. ಹೇಳುವದು ಅಸಾಧ್ಯವೇ ಸರಿ. ದಿನನಿತ್ಯ ಆಗುವ ಹೊಸ ಹೊಸ ಶೋಧನೆಗಳಿಂದ ಭವಿಷ್ಯವನ್ನು ಊಹಿಸುವುದು ಕೂಡಾ ಕಷ್ಟವಾಗಿರುವದು. ಆದರೆ, ಒಂದು ಮಾತು ಹೇಳಬಹುದು ನಾಳೆಯ ಜಗತ್ತಿನಲ್ಲಿ ಕೃತ್ರಿಮ ಹತ್ತಿಯು ಸರ್ವತ್ರ ಪ್ರಚಾರವಾಗಿ ಗಿಡದ ಹತ್ತಿಯನ್ನು ಕೇಳುವವರೇ ಇಲ್ಲವಾಗುವರು. ವೈಜ್ಞಾನಿಕ ಕೃಷಿಕ್ರಮದಲ್ಲಿ ನಾನಾ ಬಗೆಯ ಸುಧಾರಣೆಗಳಾಗಿ ಭೂಮಿಯ ಫಸಲು ಸಾವಿರಾರು ರೂಪಾಯಿ ಹೆಚ್ಚುವದು. ಈಗ ಭತ್ತವು ಕೊಯ್ಲಿಗೆ ಬರಲು, ೪ ತಿಂಗಳುಗಳು ಬೇಕಾದರೆ ನಾಳೆ ಎರಡೇ ತಿಂಗಳುಗಳು ಬೇಕಾದವು. ವಿಮಾನಗಳ ಸಂಚಾರವು ಸರ್ವತ್ರ ಮಿತಿಮೀರಿ ರೈಲುಗಳನ್ನು, ಬರೇ ಜೀನಸುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡೊಯ್ಯಲು ಉಪಯೋಗಿಸುವರು. ಕಟ್ಟಡ ನಿರ್ಮಾಣ ಮೊದಲಾದ ಕೆಲಸ ಕಾರ್ಯಗಳಲ್ಲಿ ಹೊಸ ಹೊಸ ಸಾಧನಗಳ ಉಪಯೋಗವಾಗುವದು. ಇಂದು ಸತ್ತವನು ನಾಳೆ ಬದುಕಿ ಬಂದುದಾದರೆ, ತಾನು ಹುಟ್ಟಿ ಬದುಕಿದುದೆಲ್ಲಿ ಎಂದು ಸಂದೇಹಪಡುವಷ್ಟು ಇಂದಿನ ಜಗತ್ತಿನಲ್ಲಿ ನಾಳೆ ಬದಲಾವಣೆಗಳಾಗುವವು ಖಂಡಿತ. ವಿಜ್ಞಾನವು ಏನನ್ನು ಸಾಧಿಸೀತು, ಏನನ್ನು ಸಾಧಿಸಲಾರದು ಎನ್ನುವದು ದುರೂಹವಾಗಿದೆ

ಸರ್ವರೋಗಗಳಿಗೂ ರಾಮಬಾಣ ಔಷಧಿ

ಹೆಚ್ಚು ಕಡಿಮೆ ಎಲ್ಲಾ ರೋಗಗಳಿಗೂ ಕೊಡಲಿಕ್ಕಾಗುವ ಸಂಜೀವನದಂಥ ಒಂದು ಔಷಧಿಯನ್ನು ಈಚೆಗೆ ಪಾಶ್ಚಾತ್ಯ ವೈಜ್ಞಾನಿಕರೊಬ್ಬರು ಕಂಡುಹಿಡಿದಿರುವರು. ಅಂಥಹ ಉಪಯುಕ್ತ ಶೋಧೆಯು ಕಳೆದ ೨೦ ವರ್ಷಗಳಲ್ಲಿ ಇದು ಮೊದಲನೆಯ ಬಾರಿ ಆಗಿರುವದಂತೆ. ಆ ಔಷಧದ ಪ್ರಯೋಗವಾದೊಡನೆಯೇ ರಕ್ತದಲ್ಲಿರುವ ರೋಗಾಣುಗಳಿಗೂ ಈ ಔಷಧದ ಅಣುಗಳಿಗೂ ಪ್ರಬಲ ಹೋರಾಟವು ಟವು ನಡೆದು, ರೋಗಾಣುಗಳು ಸೋತು ನಾಶವಾಗುವವು. ಒಂದೆರಡು ಚಿಕಿತ್ಸಾಲಯುಗಳಲ್ಲಿ ಆ ಔಷಧಿಯು ಪ್ರಯೋಗವಾದಾಗ ವಿಶೇಷ ರೀತಿಯ ಗುಣಾಂಶವು ಕಂಡುಬಂದಿತು. ಮೆನಿಂಜೆಟಿಸ್, ನ್ಯೂಮೋನಿಯಾ, ರಕ್ತವಿಷ, ಜ್ವರ, ಸನ್ನಿಪಾತ ಮೊದಲಾದವುಗಳಲ್ಲಿ ಇದು ಬಹಳ ಪರಿಣಾಮಕಾರಿಯಾಗಿ ತೋರಿಬಂದಿದೆ.



Distributors for South Kanara—
Raghavendra Ranga Pai, Car Street Mangalore
ಕುಂದಾಪುರ ಪ್ರವರ್ತಕರು—ಕಾಮತ್ಸ್ ಸ್ವದೇಶೀ ಎಂಪೋರಿಯಂ.

S. U. N. & Co.,
Silk Merchants,
Chaukhamba, BENARES CITY

[illegible] 150 [illegible] 35 [illegible] 55 [illegible] 18 [illegible] 65 [illegible] 20 [illegible]

ಶಿರೋಮಣಿ ನಾರಾಯಣಾಚಾರ್ಯ,
[illegible], ಬನಾರಸ್ ಸಿಟಿ

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ
ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.
ಇವರ
ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ
ಶಾಸ್ತ್ರೀಯ ರೀತ್ಯಾ ತಯಾರಿ
ಅತ್ಯಂತ ಗುಣಕಾರಿ.
ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ
ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ—ಗರ್ಭಶೂಲಿ, ಗರ್ಭಸ್ರಾವಕ್ಕೆ
ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ
ಕೃಷ್ಣಾರಕ್—ಶ್ವಾಸಖಾಸ, ದುರ್ಬಲತೆ ನೇತ್ರ ಪ ಚರ್ಮವ್ಯಾಧಿಗಳಿಗೆ
ವೃದ್ಧಿಕಾಸವ—ಸಿತ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಷ್ಟಂಕಕ್ತ, ಧಾತುಕ್ಷೀಣತೆಗೆ
ಭುವನಾಂಜನ ಪೈನ್‌ಬಾಮ್—ಶಾರೀರಕ ನೋವುಗಳಿಗೆ.
ದಶಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಜನಸಾಮಾನ್ಯರ ಬೆಂಬಲದ ರುದ್ರ ಪ್ರತಾಪ!

ಹಾಗೂ

ಅದರ ಶೋಧಕ—ಮಹಾತ್ಮಾ ಲೆನಿನ್.

ಹೀನರೆಂದೆಣಿಸಲ್ಪಡುವ ಕೆಲಸಗಾರರೇ ಇಂದಿನ ಸೋವಿಯಟ್ ರಷ್ಯದ ಮಹಾ ಕ್ರಾಂತಿಮಯ ಜೀವನದ ಜೀವಾಳವಾಗಿದ್ದಾರೆ. ಸೋವಿಯಟ್ ರಷ್ಯದ ಕ್ರಾಂತಿಮಯ ಮಹಾವಾದಿನ—ಸಮತಾವಾದದ ಬೀಡಿನ ಕಗ್ಗಲ್ಲ ಅಸ್ತಿವಾರವು ಕೆಲಸಗಾರರ ಶಿಲಾಸಮವಾದ ಬಗೆದೆಯ ಮೇಲೆಯೇ ಕಟ್ಟಲ್ಪಟ್ಟಿದೆ ಆ ಅಸ್ತಿವಾರವಿನ್ನೆಂದೂ ಕದಲದು. ಕ್ರಾಂತಿಯಾದಾಗ 'ಇದು ಇಪ್ಪತ್ತು ದಿನಗಳ ವರೆಗೂ ಬಾಳುವುದು ಕಷ್ಟ'ವೆಂದು ಕೂರಲೆತ್ತಿ ಕೂಗಿದ ಸೋವಿಯಟ್‌ನ ವೈರಿಗಳು ಇಂದು ಬೊಟ್ಟು ಕಚ್ಚಿದ್ದಾರೆ. ಅಖಂಡ ಇಪ್ಪತ್ತು ವರ್ಷಗಳು ಕಳೆದವೆ—ಕ್ರಾಂತಿಯಾಗಿ, ಆದರೆ ಸೋವಿಯಟ್‌ನ ಧ್ಯೇಯದಲ್ಲಿ ಎಳ್ಳಷ್ಟೂ ಕುಂದು ಬಂದಿಲ್ಲ ಇನ್ನೂ ಕಲಿಯುತ್ತಿದೆ ಜಗತ್ತಿನ ಇತರ ರಾಷ್ಟ್ರಗಳಿಗೆ ಹಾಸ್ಯಾಸ್ಪದವಾದ ನಗೆಯ ಹೊಗೆಯನ್ನು ಹರಪುತ್ತಿದೆ

ಲೆನಿನ್-ಕ್ರಾಂತಿಯ ಮುಂದಾಳು—ಸೋವಿಯಟ್‌ನ ನಿರ್ಮಾತೃಕ—! ಅವನು ಬಡಜನರ ಬೆಂಬಲದ ಉಪಯೋಗವನ್ನು ಮೊದಲೇ ಕಂಡುಕೊಂಡಿದ್ದ ಕಾರ್ಲ್ ಮಾರ್ಕ್ಸ್ ಹಾಗೂ ಎಂಗಿಲ್ಸ್ ಅವರ ಕೃತಿಗಳನ್ನು ಚೆನ್ನಾಗಿ ಅಭ್ಯಾಸಿಸಿ, ಬಡಕೆಲಸಗಾರರ—ಅವರ ಕಷ್ಟನಷ್ಟಗಳ ವಿಚಾರದವನಾಗಿ, ಆತನ ನಂತರವೂ ಪ್ರಜಾಸಮೂಹವು—ಇಡೀ ಜಗತ್ತು ಅತನನ್ನು ಮರೆಯದಂತಹ ಸಹಾನುಭೂತಿಯನ್ನು ಸಂಪಾದಿಸಿದನು

ಲೆನಿನ್ನನ ಇಡೀ ಜೀವನದಲ್ಲಿ ಆತನನ್ನು ಅನಸರಿಸಿದುದೆಂದರೆ—ಆತನ ಆ ಶಾಂತ ಹಾಗೂ ಗಂಭೀರ ಮೊಗ, ಆಕರ್ಷಕ ಕಣ್ಣುಗಳು, ಆತನು ಸುಲಭವಾಗಿ ಅಭ್ಯಾಸಿಸಿದ ಮಾರ್ಕ್ಸ್‌ವಾದ ಮತ್ತು ಪರರಾಷ್ಟ್ರಗಳಲ್ಲಿನ ಕೆಲಸಗಾರರೊಡನಾಡಿ, ಅವರಲ್ಲಿ ಕಲಿತು, ಅರಿತ ಅನುಭವ

1905ರಲ್ಲಿನ ಕ್ರಾಂತಿಯು ಲೆನಿನ್ನನನ್ನು ಇನ್ನಷ್ಟು ಪ್ರತಿಭಾವಂತನನ್ನಾಗಿ ಮಾರ್ಪಡಿಸಿತ ಲೆನಿನ್ನನು ಆ ಕ್ರಾಂತಿಯ ಜೀವಾಳವನ್ನು ಚೆನ್ನಾಗಿ ಅಭ್ಯಾಸಿಸಿದ ಅದರ ಫಲವಾಗಿ ಯಶಸ್ವಿಯಾದ 1917ರ ಕ್ರಾಂತಿಯು ರಷ್ಯಾದ ಜನಜೀವನದಲ್ಲೂ ಕ್ರಾಂತಿಯನ್ನುಂಟುಮಾಡಿತು ಕೆಲಸಗಾರರ, ಬಡ ಕೂಲಿಯಾಳುಗಳ ಉತ್ಕರ್ಷದಲ್ಲಿ ಸಹಕಾರಿಯಾಯಿತು

ಲೆನಿನ್ನನು 1894ನೇ ಇಸವಿಯಲ್ಲಿಯೇ ಜನತೆಯಲ್ಲಿ ಕ್ರಾಂತಿಯನ್ನುಂಟುಮಾಡುವ, ಆ ಕ್ರಾಂತಿಯು ಯಶಸ್ವಿಯಾಗುವ ಹಲಕೆಲವು ಸುಲಭಸಾಧನಗಳನ್ನು ಕುರಿತಾಗಿ 'ಜನತೆಯ ಮಿತ್ರರಾರು?' ಎಂಬೊಂದು ಗ್ರಂಥವನ್ನು ಬರೆದಿದ್ದ ಆದರೆ 1917ನೇ ಇಸವಿಯ ಕ್ರಾಂತಿಯಲ್ಲಿ ತನ್ನ ಆಶಯವು ಕೈಗೂಡಿದ ವಿಜಯವನ್ನು ಮಿಗಿಲೆನಿಸುವ ದೃಶ್ಯವನ್ನು ಕಂಡ ಎಲ್ಲರೂ ಕ್ರಾಂತಿಯ ನ ಬಯಸುತಿದ್ದರು ಎಲ್ಲರೂ ಕ್ರಾಂತಿಗಾಗಿ ಹಾತೊರೆಯುತಿದ್ದರು ಭಾಂಡವಾಲಶಾಹೀ ಹಾಗೂ ಧನಿಕರ ಮೇಲಿನ ದ್ವೇಷದ ದಳ್ಳುರಿ ರಷ್ಯದ ಮೂಲೆ ಮೂಲೆಗೂ, ಹಳ್ಳಿಹಳ್ಳಿಗೂ ಹಬ್ಬಿ ಭುಗಿಲ್ಲೆಂದು ಉರಿಯಹತ್ತಿತು

ಕ್ರಾಂತಿಯ ನಂತರ ಲೆನಿನ್ನನು ಪೀಟ್ರೋಗ್ರಾಡಿಗೆ ಬಂದಾಗ, ಅಲ್ಲಿ ಆತನನ್ನು ಸ್ವಾಗತೀಕರಿಸಲು ನಿಂತ ಜನರನ್ನು ಕಂಡು, ಆತನ ಮನಸ್ಸು ವ್ಯಥಿತವಾಯಿತು ಕೂಲಿಯಾಳುಗಳು, ಬೇಸಾಯಗಾರರು, —ವೀರನಾರಿಯರು ಸೈನಿಕರ "ಯೂನಿಫಾರ್ಮ್"ನಲ್ಲಿ ಲೆನಿನ್ನನಿಗೆ ವಂದಿಸಿದರು ಅಂದಿನ ಆ ವಿಜಯದ್ಘೋಷವನ್ನು ಲೆನಿನ್ನನು ಸಾಯುವ ತನಕವೂ ಮರೆಯಲಿಲ್ಲ "ಸಮತಾವಾದದ ಕ್ರಾಂತಿಯು ಚಿರಕಾಲ ಬಾಳಲಿ!"

ಕ್ರಾಂತಿಯ ನಂತರ ಲೆನಿನ್ನನು ಜನತೆಯ ಕಾರ್ಯಕಲಾಪಗಳನ್ನು ಬಹಳ ಸಾವಧಾನದಿಂದ ಪರೀಕ್ಷಿಸುತಿದ್ದ. ಆಗ ಆತನ ಮನಸ್ಸು ಕುತೂಹಲದಿಂದ ಬೇಯುತಿದ್ದಿತು, ಜನತೆಯು ಮಾಡುತಿದ್ದ ವಿದ್ಯಾಭಿವೃದ್ಧಿಯ ಕಾರ್ಯದಲ್ಲಿ ಲೆನಿನ್ನನ ಕೈಯಿತ್ತು ಸೈನಿಕರ ಶಿಸ್ತಿನ ಚಳವಳದಲ್ಲೂ ಲೆನಿನ್ನನೇ ಮುಂದಾಗಿ ರಷ್ಯಾದ ಸೈನ್ಯದ ಸ್ವರೂಪವನ್ನೇ ಬದಲಾಯಿಸಿದ

ಬೇರೆಯವರು ಹೇಳಿದುದನ್ನು ಮನಸ್ಸಿಟ್ಟು ಸಾವಧಾನದಿಂದ ಆಲಿಸುವ ಅದೊಂದು ಕಲೆಯು ಲೆನಿನ್ನನನ್ನು ಮತ್ತಷ್ಟು ಜನಾದರಕ್ಕೆ ಪಾತ್ರನಾಗುವಂತೆ ಮಾಡಿತು. ಲೆನಿನ್ನನು ಹಲವು ಕಾರ್ಯಕಲಾಪಗಳನ್ನು ಖಂಡಿಸಿ, ಮಾತಾಡಲು ಒಂದು ಭಾಷಣವನ್ನು ತಯಾರಿಸಿ, ಬಾಯಿಪಾಠ ಮಾಡಿ ಬಂದ ಆಸಾಮಿಗಳು ಆತನ ಸೌಮ್ಯಸ್ವಭಾವವನ್ನೂ ಎಂತಹ ಕೆಲಸಗಾರರಲ್ಲೂ ತೋರುವ ಆದರವನ್ನೂ ಕಂಡು, ಲೆನಿನ್ನನು ನಮ್ಮ ಹಿತಚಿಂತಕ, ಲೆನಿನ್ನನು ನಮ್ಮವ, ರಷ್ಯಾವು ನಮ್ಮದು, ನಾವು ಲೆನಿನ್ನನವರ ಎಂದು ದ ಕೊಂಡು ಹಿಂತೆರಳಿದ್ದಾರೆ

ಲೆನಿನ್ನನಿಗೆ ಕೆಲಸಗಾರರ ಮೇಲೆ ಅತಿಶಯವಾಗಿ ಭರವಸೆಯಿತ್ತು ಅವರ ತಲೆಯು ಬೆಳ್ಳಗಿದ್ದರೂ, ಅವರ ಉತ್ಸಾಹವು ಕುಂದಿರಲಿಲ್ಲ ಧನದ ದರ್ಪವು ತನ್ನೆದೆಗಾಲ ಹೆಜ್ಜೆಯನ್ನು ಅವರೆದೆಯ ಮೇಲೆ ಸಿಪಾಯಿಗಿರಿಯಿಂದ ಊರಿದ್ದರೂ, ಉತ್ಸಾಹದ ಉಬ್ಬಿದೆದೆಯ ಹೆಪ್ಪಿಟ್ಟನ್ನು ಮುರಿಯಬಲ್ಲುದೆ ಬೊಲ್ಶೆವಿಕ್ ಪಾರ್ಟಿಯ ಮುಂದಾಳತ್ವದಲ್ಲಿ ಬಡಜನರನ್ನೂ ಕೂಲಿಯಾಳುಗಳನ್ನೂ ಕೆಲಸಗಾರರನ್ನೂ ಒಂದುಗೂಡಿಸಿ ಸಮತಾವಾದದ ತತ್ವವನ್ನು ಹಬ್ಬಿಸಿ, ಅದನ್ನು ಸ್ಥಾಪಿಸಬಹುದೆಂದು ಆತನು ದೃಢವಾಗಿ ನಂಬಿದ್ದನು

ಲೆನಿನ್ನನಿಗೆ ಜನರ ಅಂತರಾಳವನ್ನು ಅರಿತುಕೊಳ್ಳುವ ವಿಚಿತ್ರ ಶಕ್ತಿಯೊಂದಿದ್ದಿತು ಮುಂದಾಳುಗಳ ಔದಾರ್ಯ ಸ್ವಭಾವವನ್ನೂ ಬಡಜನರೊಡನೆ ಅವರ ಸಂಬಂಧದ ಹೆಜ್ಜೆಗಳನ್ನೂ ಮೆಚ್ಚುತಿದ್ದ ಲಂಚ ಮೋಸ ಮುಂತಾದುವುಗಳನ್ನು ಕಟುವಾಗಿ ಖಂಡಿಸುತಿದ್ದ ಅಂತೆಯೇ ಜನಸಾಮಾನ್ಯರಿಗೆ ಲೆನಿನ್ನನಲ್ಲಿ ಅಗಾಧ ಮಮತೆಯಿತ್ತು ಅವನಿಗಾಗಿ ಸರ್ವಸ್ವವನ್ನೂ ತ್ಯಜಿಸಲು ಅವರು ಸಿದ್ಧರಾಗಿದ್ದರು ಲೆನಿನ್ನನಂತಹ ಮಹಾ ಮನುಷ್ಯನು ಸೋವಿಯಟ್ ರಷ್ಯದ ಭಾವೀ ಉತ್ಕರ್ಷದ ಚುಕ್ಕಾಣಿಯನ್ನು ಹಿಡಿದುಕೊಂಡ ಮಹಾತ್ಮನು, ಒಂದು ಕೈಯಿಂದ ಅದನ್ನು ತಿರುಗಿಸುತ ಮತ್ತೊಂದು ಕೈಯಿಂದ ಒಂದೆದೆಗಳ ಮೇಲೆ ಕೈಯಾಡಿಸಿ, ಸಮಾಧಾನಗೊಳಿಸುವುದನ್ನು ಕಂಡಲ್ಲಿ ಯಾರಿಗೆ ಆತನಲ್ಲಿ ಸಹಾನುಭೂತಿಯೊದಗದಿರಬಲ್ಲುದು?

ಇಂದಿಗೆ ಇಪ್ಪತ್ತು ವರ್ಷಗಳ ಕಳೆದವು—ರಷ್ಯದಲ್ಲಿ ಸಮತಾವಾದದ ಕ್ರಾಂತಿಯಾಗಿ! ಈ ಅವಧಿಯಲ್ಲಿ ರಷ್ಯದ ಜನತೆಯಲ್ಲಿ ಉಂಟಾದಷ್ಟು ಮಾರ್ಪಾಟುಗಳು ಬೇರೆಲ್ಲೂ ಎಂತಹ ಸಂದರ್ಭದಲ್ಲೂ ಆಗಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು ಅವರ ಆ ಜೀವನದಲ್ಲಿ—ಅವರ ನಾಯಕತ್ವವನ್ನು ಲೆನಿನ್ನನ ವಹಿಸಿಕೊಂಡೊಡನೆ—ಮಿಂಚು ಮಿಂಚಿದಂತಾಯಿತು ಸಮತಾವಾದದ ಅಪೂರ್ವ ಪ್ರತಿಭೆಯಿಂದು ಅವರನ್ನು ರಕ್ಷಿಸುತ್ತಿದೆ

ಜನಸಾಮಾನ್ಯರ ಜೀವನದ ದಾರಿಯನ್ನು ಬದಲಾಯಿಸಿದವನು ಲೆನಿನ್ ಇನ್ನು ಸಮತಾವಾದದ ಯಾವ ತತ್ವವೇ ಆಗಲಿ ರಷ್ಯದ ಜನಜೀವನವನ್ನು ಬದಲಾಯಿಸಲಾರದ ಲೆನಿನ್ನನ ಆರಂಭಿಸಿದ ಕೃಷಿ ಕೈಗಾರಿಕೆಗಳ ಅಭಿವೃದ್ಧಿಯ ನವವಿಧಾನವು ಇಡೀ ಜಗತ್ತನ್ನೇ ಬೆರಗುಗೊಳಿಸಿದ ಆ ದಿನ ಕೈಕೆಲಸಗಳ ದಲ್ಲಿ ಯಾರೂ ಕಾಣಲಾರರು ದಿನವಿಡೀ ಬೆವರು ಸುರಿಸುತ್ತ ಗದ್ದೆಗಳಲ್ಲಿ ಕೆಲಸಮಾಡಿ 'ಅಯ್ಯೋ ಧನಿಯ ಗನೇ ಸಂ' ಎನ್ನುವವರೆಲ್ಲ ಕಾಣೆಯಾಗಿದ್ದಾರೆ ಪ್ರತಿಯೊಬ್ಬನೂ ಅವನವನ ಶಕ್ತ್ಯನುಸಾರ ಕೆಲಸಮಾಡಿ, ಹೊಟ್ಟೆ ತುಂಬ ಉಂಡು ಸುಖವಾಗಿರಬೇಕೆಂಬುದೇ ರಷ್ಯದ ಇಂದಿನ ಕಾನೂನು ಎಂತಹನೇ ಆಗಲಿ ಆತನ ನಿರುದ್ಯೋಗದಿಂದ ನರಳಬೇಕೆಂದಿಲ್ಲ, ಅದಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿಲ್ಲ ಅದರ ಬದಲು ಆತನಿಗೊಂದು ಉದ್ಯೋಗವು ತೆರವಿರುತ್ತದೆ ಕಾಲ ಮೇಲೆ ಕಾಲು ಚಾಚಿ, ಉಂಡುಣ್ಣುವ ಸೋಮಾರಿಗಳಿಗಲ್ಲಿ ಅವಕಾಶವಿಲ್ಲ ಬಡವರ ಒಯ್ಯುವ ವೈಯ್ಯ ಬಿಸಿರುಧಿರವನ್ನು ಕುಡಿದ ಮತ್ತರಾಗಿ, ನಲಿಯುವ ಧನಿಕರ ಸುಳಿವಿಲ್ಲ ಅದರ ಬದಲು ಇಂದ ಅಲ್ಲಿ ಪ್ರತಿಯೊಬ್ಬ ಕೆಲಸಮಾಡಿ, ಜೀವನನೌಕೆಯನ್ನು ಸುಸೂತ್ರವಾಗಿ ಸಾಗಿಸುವ ಜನಸಾಮಾನ್ಯರಿದ್ದಾರೆ

ಅಂತೆಯೇ ರಷ್ಯಾದ ಸಮಾಜದಲ್ಲಿ ಸ್ತ್ರೀಪುರುಷರೆಂಬ ಭೇದಭಾವವಿಲ್ಲ ಪುರುಷರಿಗೆ ಸಮಾಜದಲ್ಲಿ ಯಾವ ರೀತಿಯ ವ್ಯವಹಾರಗಳಿಗೆ ಎಡೆಯುಂಟೋ, ಆ ರೀತಿಯ ವ್ಯವಹಾರಗಳೆಲ್ಲದರಲ್ಲಿಯೂ ಸ್ತ್ರೀಯು ಸ್ವೇಚ್ಛೆಯಾಗಿ ತಲೆಹಾಕಬಹುದು ಮೂಲೆಯಲ್ಲಿ ಕುಳಿತು ಪತಿಯರ ಗುಲಾಮರಾಗಿ, ಬರೀ ಮಕ್ಕಳು ಮರಿಗಳನ್ನು ಹೊರಡಿಸುವ ಯಂತ್ರಗಳಂತಿರುವ ಸ್ತ್ರೀಯರು ಇಂದು ಅಲ್ಲಿಲ್ಲ. ರಣರಂಗದಲ್ಲಿ ತೋಪುಗಳಿಗೆದೆಯನ್ನಾನಿಸಿ, ಸರ್ದರಿಸುವ ವೀರರಮಣಿಯರು ಅಲ್ಲಿರುತ್ತಾರೆ

ಇವುಗಳೆಲ್ಲವುಗಳಿಗೆ ಬೀಜವನ್ನು ಬಿತ್ತಿದವನ ಲೆನಿನ್ ಆತನ ಬೀಜವು ಪಕ್ವವೆಂದಾಯಿತ ? ಸಾಮಾನ್ಯವೆಂದೆಣಿಸಲ್ಪಡುತಿದ್ದ ಜನತೆಯ ಬೆಂಬಲದಿಂದ ಜನಸಾಮಾನ್ಯರ ಬೆಂಬಲದಿಂದ ಎಂತಹ ತತ್ವಾಧಿಪತ್ಯವನ್ನಾದರೂ ಸ್ಥಾಪಿಸಬಹುದೆಂದು ಮೊದಲಾಗಿ ತಿಳಿಸಿದವನು ಲೆನಿನ್ ಇಂದು ರಷ್ಯಾವು ಎಂತಹ ಸುಖದ ಓಲಗದ ಸೌಭಾಗ್ಯದ ಸ್ಥಾನವಾಗಿದೆ! ಜಗತ್ತಿನ ಎಲ್ಲಾ ರಾಷ್ಟ್ರಗಳು ಅತ್ತ ಕಣ್ಣಿಟ್ಟು ನೋಡುತ್ತಿವೆ ರಷ್ಯಾದ ಉತ್ಕರ್ಷದ ಪ್ರತಿಭೆಯಿಂದ ಕಣ್ಣುಗಳು ಕುಕ್ಕಿಹೋಗಿವೆ ಭಾರತವೂ ಈಗೀಗ ಅತ್ತಲೇ ನೋಡಲಾರಂಭಿಸಿದ ಚಿಹ್ನೆಗಳ ತೋರುತ್ತಿವೆ ನೋಡಲಿ! ಮುಂದೆ ಸಾಗಲಿ!

ಇಪ್ಪತ್ತು ವರ್ಷಗಳ ಹಿಂದೆ ರಷ್ಯಾವನ್ನು ಹುಚ್ಚೆಂದು ಕೂಗಿ, ನಲಿಯುತಿದ್ದ ಯುರೋಪಿನ ಇತರ ರಾಷ್ಟ್ರಗಳೇನ ಮಾಡುತ್ತಿವೆ? ಬರೀ ಇಪ್ಪತ್ತು ದಿನಗಳ ವರೆಗೆ ಬಾಳಲಾರದ ಸೋವಿಯಟ್ ರಷ್ಯಾವು ಅಖಂಡ ಇಪ್ಪತ್ತು ವರ್ಷಗಳ ಜೀವನದಲ್ಲಿಯೂ ಮುಗ್ಗರಿಸದುದನ್ನು ಕಂಡು, ಸಿಡಿಲು ಬಡಿದಂತಾಗಿದೆಯೇನೋ! ಆಶ್ಚರ್ಯಪಡಬೇಕಾಗಿಲ್ಲ ಜನಸಾಮಾನ್ಯರ ಬೆಂಬಲದ ರುದ್ರಪ್ರತಾಪವದು."

ಸ್ವಲ್ಪ ಆಲಸ್ಯವಾಗುತಿದ್ದರೆ ಪ್ಯಾಲೆಸ್ಟೈನಿನಲ್ಲೂ ಸ್ಪೈನಿನ ತರದ ಇನ್ನೊಂದು ಮಹಾ ದಂಗೆಯುಂಟಾಗುತಿತ್ತಂತೆ ಕಾರಣ ಅಲ್ಲಿನ ಪಸಿಯವರು ಹೊರಗಣ ಪೆಸುಪ್ಪ ಜನಾಂಗಗಳಿಂದ ಸಹಾಯ ಪಡೆದು, ಒಂದು ಮಹಾ ದಂಗೆಗಾಗಿ ಸಿದ್ಧತೆಗಳನ್ನುಮಾಡಿದ್ದರಂತೆ ಅದು ಈಗಿನ ಸರ್ಕಾರದ ತಿಳುವಳಿಕೆಗೆ ಬಂದಿದ್ದು, ದಂಗೆಯ ಕಾರಣಗಳನ್ನು ಅವರು ಕಿತ್ತುಹಾಕಿ—

"NACET" BLADES



ಅತೀ ಕಡಿಮೆ ಬೆಲೆಯಾದರೂ ಯೋಗ್ಯ ಮತ್ತು ಖಾತ್ರಿಯಾದುದು

ನೆಸೆಟ್ ಬ್ಲೇಡುಗಳನ್ನು ಪಡೆಕೊಂಡರೆ, ಒಳ್ಳೆ ಬಾಕಿಯಾದ ಬ್ಲೇಡುಗಳನ್ನು ಅತಿ ಕಡಿಮೆ ಬೆಲೆಯಲ್ಲಿ ಪಡೆಕೊಂಡರೆ ದು ಎಣಿಸಬಹುದು ಅವುಗಳ ಜನಜನಿತವಾದವುಗಳು ಕಾರಣ ಅವುಗಳ ವಿಶಿಷ್ಟ ಯೋಗ್ಯತೆ ಪತಿಯೊಂದ ಮೇಲ ಒಳೆ ಹರಿತವಾಗಿದ್ದು ವಾ ಅನೇಕ ಗಳನ್ನು ಕೊಡುತ್ತದೆ ನೆಸೆಟ್ ಬ್ಲೇಡುಗಳ ಮೂರುಗೂಟದ ರೇಜರುಗಳಲ್ಲಿ ಉಪಯೋಗಿಸಬಹುದು



7 ಆಣೆಗಳಿಗೆ ಬ್ಲೇಡುಗಳು 10

INX

A3

B4

A4

B

ಉಡುಪಿ

ಉತ್ಸವಾರಂಭ 8-1-1938 ಸಂಕ್ರಮಣ ಉತ್ಸವ 13-1-1938 ಚೂರ್ಣೋತ್ಸವ 14 1-1938

ಏಳುವವರ ಉತ್ಸವ 16-1 1938 ಪರ್ಯಾಯ ಪಟ್ಟವೇರುವ ಶ್ರೀ ಫಲಿಮಾರು ಸ್ವಾಮಿಗಳ ಪರ್ಯಾಯ ಉತ್ಸವ 17 1-1 938

ಪರ್ಯಾಯ ಪಟ್ಟದಿಂದ ಏಳುವವರು.—

ಶ್ರೀ ಪೇಜಾವರ ಮಠದ
ಶ್ರೀ ವಿಶ್ವಮಾನ್ಯ ತೀರ್ಥ
ಶ್ರೀ ಪಾದಂಗಳವರು

ಶ್ರೀ ಕೃಷ್ಣನ ಸನ್ನಿಧಿಯಲ್ಲಿ ನಿಮ್ಮ ಭಕ್ತಿ
ಯನ್ನು ಅರ್ಪಿಸಲು ಅತ್ಯುತ್ತಮ
ಸಂದರ್ಭ ಇಲ್ಲಿ ಸಮಗ್ರ
ಕರ್ನಾಟಕದ ಭಕ್ತಶಿರೋಮಣಿಗಳು
ಬಂದು ಸೇರುವರು.

ಯಾತ್ರಾರ್ಥಿಗಳಿಗೆ ಸರ್ವಾನುಕೂಲತೆಯು
ವ್ಯವಸ್ಥೆಗೊಳಿಸಿಯದೆ.

ಪರ್ಯಾಯ ಪಟ್ಟವೇರುವವರು.—

ಶ್ರೀ
ಫಲಿಮಾರು ಮಠದ ಶ್ರೀ
ರಘುಮಾನ್ಯ ತೀರ್ಥ ಶ್ರೀ
ಪಾದಂಗಳವರು.

ಉಡುಪಿಯಲ್ಲಿ ಉಳಕೊಳ್ಳಲಿಕ್ಕೆ ನಮ್ಮ ವಿಶ್ರಾಂತಿಗೃಹವಲ್ಲದೆ, ಮಠಗಳಲ್ಲಿಯೂ ಉಪಾಸಕರಲ್ಲಿಯೂ ಉಳಕೊಳ್ಳುವ ವ್ಯವಸ್ಥೆ ಮಾಡಲಾಗುವುದು,

ಧರ್ಮಸ್ಥಳ ಸುಬ್ರಮ್ಮಣ್ಯ, ಕೊಲ್ಲೂರು ಮತ್ತು ಗೋಕರ್ಣಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಲ್ಲಿ ಯಾತ್ರೆಯನ್ನು ಪೂರೈಸಲಿಕ್ಕೆ ಅನುಕೂಲವಿದೆ. ಪ್ರಯಾಣಿಕರ ಸೌಕರ್ಯದ ಕಡೆಗೆ ವಿಶೇಷ ಗಮನ ಕೊಡಲಾಗುವುದು.

ಜ್ಯಾಂಟ್ ಮೆನೇಜರ್ಸ್,

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು

1937

ಹನ್ನೆರಡು ತಿಂಗಳ ಹಿಂದೆ ಮೂಡಿದ ಸಂವತ್ಸರವೊಂದು ಈಗ ಅಸ್ತಂಗತವಾಗುತ್ತಿದೆ. ಈ ವರ್ಷ ನಡೆದುದೇನು? ಅದರ ಪರಿಣಾಮವೇನು?

ಕ್ರಿಸ್ತಮಸದಂತಹ ಪುಣ್ಯಾದಿನಾಚರಣೆ ಮಾಡುವಾಗ, ಈಗ ಜಗತ್ತಿನ ಸುಧಾರಣೆಗೆ ಕಾರಣ ಕರ್ತೃಗಳೆನಿಸುವ ಅಗ್ರಗಣ್ಯ ಯುರೋಪಿಯ ರಾಷ್ಟ್ರಗಳಾದರೂ ಜಗತ್ತಿನ ಶಾಂತಿಗಾಗಿ ಹವಣಿಸುವ ಮಾತುಗಳನ್ನೆ ಆಡುತ್ತಿರುವರೇ ಹೊರತು, ಲೋಕಶಾಂತಿಗೆ ಇನ್ನೂ ಎಷ್ಟು ಕಾಲವಿರಬಹುದೋ ಎಂದು ಹೇಳಲು ಕೂಡ ಅಸಮರ್ಥವಾಗಿವೆ. ಅಷ್ಟು ಹಾಳಾಗಿದೆ ಜಗತ್ತಿನ ಸ್ಥಿತಿ. ಆ ಜನಾಂಗಗಳೇ ಎಂದೇನು, ಎಲ್ಲ ಧರ್ಮಗಳವರೂ ನಂಬುವಂತೆ ಸಾರುವ ಧರ್ಮಕ್ಕೂ ಅವರ ಆಚಾರಕ್ಕೂ ಯಾವ ಸಂಬಂಧವೂ ತೋರಿಬರುತ್ತಿಲ್ಲ ಎಂಬುದೊಂದು ವಿಶೇಷ ಅವಲಕ್ಷಣವಾಗಿದೆ.

ಜನಾಂಗಸಂಘವು ಕೇವಲ ಛಾಯಾಚಿತ್ರ

ಮುಖ್ಯವಾಗಿ, ಜನಾಂಗ ಸಂಘವೆಂಬುದು ಯಾವ ಶಾಂತಿಯನ್ನು ಎಷ್ಟು ಮಾತ್ರಕ್ಕೂ ಸಾಧಿಸಲು ಅಶಕ್ತವಾಗಿರುವ ಸಂಸ್ಥೆಯಾಗಿ, ಜೀವನ್ಮೃತಾವಸ್ಥೆಯಲ್ಲಿದೆ. ಇದನ್ನೂ ಉಳಿದಿರುವುದೂ ಶೋಚನೀಯವಾಗಿದೆ. ಇದನ್ನೊಮ್ಮೆಗೆ ಮುಕ್ತಾಯಗೊಳಿಸಿ, ಇತರ ವಿಧಾನಗಳಿಂದ ಶಾಂತಿಯ ಸ್ಥಾಪನೆಗಾಗಿ ಹವಣಿಸಬಹುದಾಗಿದ್ದಿತು. ಮ್ಯಾಂಚೂರಿಯವನ್ನು ಜಪಾನು ನುಗ್ಗಿದಾಗಲೇ, ಪ್ರಮುಖ ರಾಷ್ಟ್ರಗಳು ತಮ್ಮ ಕರ್ತವ್ಯ ಕರ್ಮವನ್ನು ತಿಳಿದು ಅವನ್ನು ನೆರವೇರಿಸಿದ್ದರೆ, ಈ ಸಂಘವಾದರೂ ಉಳಿಯಬಹುದಾಗಿದ್ದಿತು, ಘೋರ ಅನ್ಯಾಯಗಳಿಗೆ ಕೈಹಚ್ಚುವವರು ಸ್ವಲ್ಪ ಹಿಂತೆಗೆವಂತೆ ನೈತಿಕ ತಡೆಯಾದರೂ ಇರುತ್ತಿತ್ತು. ಇಂಗ್ಲೆಂಡು ಅಮೇರಿಕಗಳು ಒಂದಾಗಿ ಆಲೋಚನೆ ಮಾಡುತ್ತ ಮುಂದರಿಯದೆ, ತಮ್ಮ ತಮ್ಮ ಸ್ಥಿರಚರ ಸೊತ್ತುಗಳ ಭದ್ರತೆಗೇ ಮರುಳಾಗಿ, ಈ ಗತಿಯುಂಟಾಗಿದೆ ಎನ್ನಬಹುದು. ಜನಾಂಗಗಳು ಕಳ್ಳತನ ಸುಲಿಗೆ ಮಾಡದಂತೆ ಇವೆರಡೇ ರಾಷ್ಟ್ರಗಳು ಖಂಡಿತ ತಡೆಯಬಹುದಾಗಿತ್ತು. ಜನಾಂಗಸಂಘವೇ ಆದರೂ, ವಾರ್ಸೆಲ್ಸ್ ಒಪ್ಪಂದದ ಕಾರಣದಿಂದ ಉಂಟಾಗಿದ್ದುದರಿಂದ, ಆ ಕರಾರಿನಲ್ಲಿದ್ದ ವಿಷಬೀಜವೇ ಕೊಳೆತು ಈಗ ಇಡೀ ಸಂಘವನ್ನೆ ಮುಚ್ಚಿ, ಅದು ಉಸಿರು ಕಟ್ಟಿ ಸಾಯುವಂತೆ ಮಾಡಿದೆ ಎನ್ನಬಹುದಾಗಿರುವಷ್ಟು ಬಲಹೀನವಾಗಿದೆ.

ಜನಾಂಗಗಳು ಎಲ್ಲ ಬಗೆಯ ಕಾನೂನುಗಳನ್ನು ಮುರಿದರೂ ಯಾವ ತಡೆಯೂ ಇಲ್ಲ, ಆಕ್ಷೇಪಣೆಗಳೇ ಇಲ್ಲವೆಂಬಂತಾಗಿದೆ. ಆಡಂಬರದ ಮಾತುಕತೆಗಳು ನಡೆದು, ಸಂಭ್ರಮದ ಗೋಷ್ಠಿಗಳಲ್ಲೇ ಜನಾಂಗಗಳು ಆಲೋಚನೆ ಮಾಡುತ್ತ, ಪತ್ರವ್ಯವಹಾರದ ಮೂಲಕ ನಾನಾ ಸೂತ್ರಗಳ ವ್ಯಾಖ್ಯಾನ ಮಾಡುವಾಗಲೇ ದುರ್ದೆಸೆಯವಾದ ಜನಾಂಗಗಳು ದುರ್ಬಲರನ್ನು ಕೆಣಕಿಸಿ ಅವನ್ನು ಧ್ವಂಸಮಾಡುತ್ತಿದ್ದುದು ಈ ವರ್ಷದ ವಿಚಿತ್ರ ಪರಿಣಾಮವಾಗಿದೆ. ಇಟೆಲಿಯು ಇಡೀ ಭೂಮಧ್ಯ ಸಮುದ್ರವನ್ನು ತನ್ನ ಹಿತ್ತಿಲ ಕೆರೆಯಂತೆ ಮಾಡಿದ್ದರೂ ಕೇಳುವವರಿಲ್ಲವಾಗಿದೆ, ಜನಾಂಗಗಳ ಕಾನೂನು ಹಾಗಿರಲಿ, ಇಂಡಿಯವು ತನ್ನದಾಗಿ ಉಳಿದರೆ ಯಥೇಷ್ಟವೆಂದು ಇಂಗ್ಲೆಂಡು ನಂಬಿದೆ ಎಂಬುದು ಇಟಲಿಗೇ ಚೆನ್ನಾಗಿ ಗೊತ್ತಿದೆ. ಹೀಗಾಗಿ ಇಂಗ್ಲೆಂಡ ಇಟಲಿಯೊಡನೆ ಸ್ವಲ್ಪ ಕಠಿನವಾದ ನ್ಯಾಯವನ್ನು ನುಡಿಯುವಂತಿಲ್ಲ.

ಜರ್ಮನಿಯು

ದಿನದಿನಕ್ಕೆ ಪ್ರಬಲವಾಗಿ ಬರುತ್ತ, ತನ್ನ ವಸಾಹತುಗಳನ್ನು ತಿರುಗಿ ಪಡೆಯುವ ಆತುರದಲ್ಲಿದೆ. ಹೆಲಿಫೆಕ್ಸ್ ಪ್ರಭುಗಳು ಹಿಟ್ಲರನನ್ನು ಕಂಡು ಬಂದುದರ ಹಿಂದೆ ಯಥೇಷ್ಟ ವಿಚಾರಗಳು ನಡೆದುವಂತೆ. ಇಟಲಿಯ ಸ್ನೇಹದಿಂದ ಹಿಟ್ಲರನನ್ನು ಬಿಡಿಸಿ ತರಲು ಉಪಾಯಗಳು ನಡೆದುವಂತೆ, ಪೂರ್ವ ಯುರೋಪಿನ ಕಡೆಗೆ ಜರ್ಮನಿ ಕಾಲು ನೀಡಿದರೂ ಇಂಗ್ಲೆಂಡು ಫ್ರಾನ್ಸುಗಳು ಸುಮ್ಮನಿರಬಹುದೆಂದೂ ನಂಬಲಾಗಿತ್ತು, ಅದೆಲ್ಲವೂ ಅಲ್ಲಿಗಲ್ಲಿಗೇ ನಾಯುವಾಗಿದೆ. ಇಟೇಲಿಯು ಇಂಗ್ಲೆಂಡಿಗೆ ವಿರುದ್ಧವಾಗಿ ಸಮೀಪದ ಮುಸ್ಲಿಮ ರಾಷ್ಟ್ರಗಳಲ್ಲೆಲ್ಲ ಅಸಂಬದ್ಧವಾದ ಅಭಿಪ್ರಾಯಗಳನ್ನು ಹರಡಿಸುವ ಅಭ್ಯಾಸವನ್ನೂ ಇನ್ನೂ ತೊರೆದಿಲ್ಲ. ಅಬಿಸೀನಿಯದ ರಾಜ್ಯಭಾರವನ್ನು ಹಿಂದಣ ನೆಗುಸರ ಮಗನಿಗೇ ಕೊಟ್ಟು, ಅವನೇ ಆಳುವ ಹಾಗೂ ಆದರೆ ಅವನ. ಇಟಲಿಯ ಸಮ್ರಾಜನ ಸಾಮಂತನಾಗಿರುವ ಹಾಗೂ ಪ್ರಯತ್ನಗಳಾಗುತ್ತಿವೆ ಎಂದೂ ಪ್ರಕಟವಾಗುತ್ತದೆ. ಫ್ರಾನ್ಸು ಇಂಗ್ಲೆಂಡಿನ ಸ್ನೇಹವನ್ನು ತೊರೆಯದು, ರಷ್ಯಕ್ಕೂ ಫ್ರಾನ್ಸಿಗೂ ಬಹಳ ಚೆನ್ನಾಗಿ ಬಾಂಧವ್ಯ ಉಂಟಾಗಿದೆ. ಹತ್ತಿರದ ಚಿಕ್ಕ ರಾಜ್ಯಗಳು ತಂತಮ್ಮೊಳಗೇ ಬೇಕುಬೇಕಾದ ಕರಾರುಗಳನ್ನು ಮಾಡಿಕೊಳ್ಳುತ್ತವೆ. ರಷ್ಯವು ಈಗ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿ, ಎಲ್ಲ ರಾಷ್ಟ್ರಗಳನ್ನೂ ಎದುರಿಸಬಲ್ಲಷ್ಟು ಸೈನ್ಯ ಬಲವನ್ನು ಬೆಳಸಿದೆ. ಅದರ ವಿಮಾನ ಬಲಕ್ಕೆ ಎಣೆಯಿಲ್ಲ. ನೌಕಾಬಲವೂ ಇನ್ನು ಒಂದೆರಡು ವರ್ಷಗಳಲ್ಲಿ ಎಲ್ಲರನ್ನೂ ಅಣಗಿಸುವಷ್ಟಾಗುವುದಾಗಿ ಸಿದ್ಧಾರವಾಗಿದೆ. 1913ರಲ್ಲಿ ಯುದ್ಧಸನ್ನಾಹಕ್ಕಾಗಿ ಖರ್ಚಾದ ದರ ದುಬಾರಿಯಷ್ಟು ಈಗ ಖರ್ಚಾಗುತ್ತದೆ. ವಾರ್ಷಿಕ 2400 ಮಿಲ್ಲಿಯ ಪವನ ಈಗ ಯುದ್ಧಸನ್ನಾಹಕ್ಕಾಗಿ ವ್ಯಯವಾಗುವಾಗ ಇದರಿಂದ ಶಾಂತಿಯೋ ಯುದ್ಧವೋ ಬೇಗನೆ ಉಂಟಾಗದಿರದು.

ಅಮೇರಿಕವು

ತನಗೆ ಇತರರ ಗೊಡವೆಯೆ ಬೇಡವೆಂದು ಕೂತಿದೆ. ಹಿಂದಣ ಮಹಾಯುದ್ಧದಿಂದ ಅಮೇರಿಕ ಲಾಭ ಹೊಂದದು. ಅಮೇರಿಕದ ಎಲ್ಲ ರಾಷ್ಟ್ರಗಳೂ ಅಮೇರಿಕದ ಸಾಲ ಪಡೆದವು. ಆದರೆ ಇವರೆಲ್ಲ ಹಿಂದಕ್ಕೆ ತೆರಲು ಒಪ್ಪಲಾರದಾದರು. ಒಂದು ಬ್ರಿಟನ್ ಹಿಜಾಪನ ತಂದಿರಲಿಲ್ಲ. ಮಾತ್ರವಲ್ಲದೆ, ಇವರೆಲ್ಲ ಕೈಗಾರಿಕೆಯಲ್ಲಿ ಜೀವಿಸುತ್ತಿರುವುದರಿಂದ ಕಾರಣ, ಪ್ರತಿಯೊಬ್ಬರೂ ಅವೇ ಕೈಗಾರಿಕೆಗಳನ್ನು ತಯಾರಿಸ ತಲೆದು ಒಬ್ಬರು ಮತ್ತೊಬ್ಬರಿಗೆ ಸಾಮಾನುಗಳನ್ನು ಸಹ ಮಾರಲಾರದಂತೆ ಎಲ್ಲರೂ ಬಡವರಾದರು. ಅಮೇರಿಕದ ಕಣ್ಣು ಈಗ ತೆರೆದಿದೆ ಎನ್ನಬಹುದು. ಯಾರೂ ಕಣ ಸಲ್ಲಿಸುತ್ತಿಲ್ಲ. ಯಾರ ಗೊಡವೆಯೂ ಇನ್ನು ತನಗೇಕೆ ಎಂದು ಹೀಗೆ ಕೂತ ಅಮೇರಿಕವನ್ನು ಜಪಾನ ಈಗ ಜಾಗ್ರತಗೊಳಿಸಿ, ಜಗವೆಲ್ಲ ಒಂದೇ ಎಂದೂ ಬೋಧಿಸಿಯದೆ.

ರಷ್ಯವನ್ನು ಜಪಾನು ಸೋಲಿಸಿದಾಗ,

ನಾವೆಲ್ಲ ಹಿಗ್ಗಿದುದುಂಟು. ಯುರೋಪಿಗೂ ಮಹತ್ವವುಳ್ಳ ಒಂದು ಪೌರ್ವಾತ್ಯ ರಾಜಪದಿ ಎಂದು ತಿಳಿದು ಯುರೋಪಿನ ದೊಡ್ಡತನಕ್ಕೆ ದಿನ ಮುಗಿಯಿತೆಂದು ಹೇಳಿದವರುಂಟು. ಇಷ್ಟು ವರ್ಷ ಜಪಾನು ಚೆನ್ನಾಗಿ ಮುಂಬರಿದಿರುವುದಕ್ಕೆ ಇಂಡಿಯದ ಸಹಾನುಭೂತಿಯು ಬಹಳವಾಗಿ ಕಾರಣವಾಗಿದೆ. ಜಪಾನಿನ ಸಾಮಾನೆಲ್ಲ ತಂದು ನಮ್ಮ ಉಗ್ರಾಣಗಳಲ್ಲಿ ತುಂಬುವಂತೆ ನಮ್ಮಲ್ಲಿ ಇದ್ದಷ್ಟು ಆತುರವು ಮತ್ತೆಲ್ಲಿಯೂ ಇರಲಿಲ್ಲ. ಹೀಗೆ ಪೌರ್ವಾತ್ಯರಾಜ್ಯಗಳ ಸಹಾನುಭೂತಿಯಿಂದಲೇ ಬೆಳೆದ ಜಪಾನು ಯುರೋಪಿನ ಮತ್ತು ಅಮೇರಿಕದ ವಿದ್ಯಮಾನಗಳನ್ನು ಚೆನ್ನಾಗಿ ತಿಳಿದೇ, ಚೀನವನ್ನು ನುಂಗತೊಡಗುವ ತುಂಟತನಕ್ಕೆ ಮುಂದಾಗಿದೆ. ಈ ಯುದ್ಧಕ್ಕೆ ಕಾರಣವೇನೆಂದು ಇದುವರೆಗೂ ಪ್ರಕಟವಾದುದಿಲ್ಲ. ಇಟೇಲಿಯು ಅಬಿಸೀನಿಯದಲ್ಲಿ ಮಾಡಿದುದನ್ನೆ ಜಪಾನು ಚೀನದಲ್ಲಿ ಮಾಡುತ್ತಲಿದೆ. ಕೇಳಿದರೆ, ಇಂಗ್ಲೆಂಡು ಇಂಡಿಯಾ ಮೊದಲಾದ ರಾಜ್ಯಗಳಲ್ಲಿ ಮಾಡಿದುದೇ ನೆನ್ನುತ್ತದೆ. ಜಪಾನಿನ ಜನಾಂಗವು ಬೆಳೆಯುತ್ತದೆ, ಅದು ನೆಲೆಸಲ್ಲುವಂತೆ ಭೂಮಿಯೂ, ಕೈಗಾರಿಕೆಗಳಿಗೆ ಬೇಕಾಗಿರುವ ಕಚ್ಚಾ ಸರಕೂ ಬೇಕಾದುದನ್ನು ಚೀನದಿಂದ ಅದು ಈ ರೀತಿ ಸೆಳೆವ ಯೋಚನೆಯಲ್ಲಿದೆ ಎಂದು ತಿಳಿಯದವರು ವಿರಳರು. ಸಾಗರಗಳಾಚೆ ಇರುವ ದೇಶಗಳಿಗೂ ತನ್ನ ಸರಕುಗಳನ್ನೊಯ್ದು ಮಾರುವ ಸೌಕರ್ಯಗಳನ್ನು ಅದು ಮಾಡುತ್ತದೆ. ಅಮೇರಿಕಕ್ಕೂ ಜಪಾನಿಗೂ ಇತ್ತೀಚೆಗೆ ಸ್ವಲ್ಪ ಮನಃಕ್ಲೇಶ ಉಂಟಾದರೂ, ಜಪಾನು ಅದಕ್ಕೆಲ್ಲ ಲಕ್ಷಿಸುತ್ತಿಲ್ಲ. ಉಪಚಾರಿಕ ಮಾತುಗಳನ್ನು ನುಡಿದು ಅಷ್ಟರಿಂದಲೇ ಕಣ್ಣು ಮಿಟಿಮಿಟಿ ನೋಡುವಂತೆ ಮಾಡುತ್ತದೆ.

ಚೀನವು

ಈ ರೀತಿಯಾಗಿ ಅನುಭವಿಸಬೇಕಾಗಿ ಬಂದಿರುವ ಕಷ್ಟಪರಂಪರೆಗಳನ್ನು ನೋಡುವಾಗ, ನಮ್ಮ ದೇಶದ ಅವಸ್ಥೆ ನೆನಪಾಗುತ್ತಿದೆ. ಭಾವಿಸಲು ಅವಕಾಶ ದೊರೆಯುತ್ತಿದೆ. ಜಪಾನು ಬಹಳವಾಗಿ ಜಯಿಸಿದರೆ ಇಂಡಿಯದ ತನ ಸಂಪತ್ತು, ರಾಜ್ಯವನ್ನು ನುಗ್ಗುವುದಕ್ಕೆ ಹಿಂತೆಗೆಯದು ನಿಜ. ಬ್ರಿಟಿಷ ಸೈನ್ಯಗಳ ನಮ್ಮನ್ನು ಕಾಪಾಡಬಹುದಲ್ಲದೆ ದೇಶ ಸಂರಕ್ಷಣೆಗೆ ನಮ್ಮದೇ ಎನ್ನುವ ಉಪಾಯವೂ ಇಲ್ಲ. ಪ್ರತಿಪಾದಿಸಿದರೂ, ತಮಗೆ ಪ್ರಯೋಜನವಿರುವಷ್ಟು ಕಾಲಕ್ಕೆ ಇಂಡಿಯವನ್ನು ಕಾಪಾಡುವರಲ್ಲದೆ, ಮುಂದೆ ಅಲ್ಲ. ಇಂಡಿಯವು ಸ್ವತಂತ್ರವಾಗಿದ್ದುಕೊಳ್ಳಬಹುದಾದರೂ, ಇಲ್ಲಿನ ಬಡತನವೇ ಹೆಚ್ಚುತ್ತ ಬರುವುದು. ಇಂಗ್ಲೆಂಡಿಗೆ ಇಲ್ಲಿಂದ ದೊರೆವ ಹಣ ಕಾಸುಗಳು ಕಡಮೆಯಾಗುತ್ತ ಬಂದರೆ, ಇಂಗ್ಲೆಂಡು ತನ್ನಲ್ಲಿ ಖರ್ಚನ್ನು ನೋಡುವುದೆ ನಮ್ಮ ಉದ್ಧಾರಕ್ಕೆ ಬರುವುದೆ? ಸ್ವತಂತ್ರವಾದ ಇಂಡಿಯವು ಪರರಾಷ್ಟ್ರಗಳೊಡನೆ ಮೈತ್ರಿ ಸಂಧಾನಗಳನ್ನು ಬೆಳಸುವಂತೆಯೆ, ಇಂಗ್ಲೆಂಡಿನೊಡನೆಯೂ ಮೈತ್ರಿಯಿಂದಲೇ ಬಾಳುವುದು ಕಷ್ಟವಾಗಿಲ್ಲ. ನಾವು ನಮ್ಮ ದೇಶರಕ್ಷಣೆ ಮಾಡುವ ಶಕ್ತಿಯುಳ್ಳವರಾದರೆ ಮಾತ್ರ, ಸ್ವತಂತ್ರವಾಗಿರಬಹುದೇ ಹೊರತು ಅನ್ಯಥಾ ಅಲ್ಲ. ಈ ಜನಾಂಗ ಸಂಘದ ಚರಿತ್ರದಿಂದ ದೊರೆತ ಪಾಠವಾಗಿ, ಪ್ರತಿಯೊಂದು ಜನಾಂಗವೂ ತನ್ನನು ತಾನೇ ಕಾಪಾಡಿಕೊಳ್ಳಬೇಕಾಗಿದೆ. ಹೊರತು ಬೇರೆ ಉಪಾಯಗಳಿಲ್ಲ. ಅಂತಹ ಸ್ವತಂತ್ರ, ಆತ್ಮರಕ್ಷಣಾತುರ ಜನಾಂಗಗಳು ಮೈತ್ರಿಯಿಂದ ಒಂದಾಗಿ ನಡೆದರೆ, ಅದೇ ಅತ್ಯುತ್ತಮ ಜನಾಂಗ ಸಂಘವಾಗುವುದೆನ್ನಬೇಕು. ಸಾಮ್ರಾಜ್ಯ ಭಾವನೆಯಿಂದಲೇ ಹೆಚ್ಚಿನ ಕೆಡುಕಿಗೆ ಕಾರಣವಿದೆ ಎಂದು ಯಾವುದೇ ಜನಾಂಗದ ಇಂತಹ ಭಾವನೆಗಳನ್ನು ತೂಗಿದರೆ ಕಾಣದಿರದು.

ಪ್ರಜಾಸತ್ತೆಯು

ಕುಂದುತ್ತ ಬರುತ್ತಿರುವ ಒಂದು ಸಲ್ಲಕ್ಷಣವು ಈ ವರ್ಷದಲ್ಲೇ ಪ್ರಕಟವಾಗಿದೆ. ಇದು ಒಂದು ಕ್ಷಣಿಕ ಭಾವವಾಗಿರಬಹುದು. ಆದರೆ, ಡಿಕ್ಟೇಟರರೆಂಬ ಸರ್ವತಂತ್ರ ಸ್ವತಂತ್ರರೇ ಪ್ರಜಾಸತ್ತೆಯನ್ನು ಅಡಗಿಸಿ ಬಿಡುವಷ್ಟು ಬಲಹೊಂದಿರುವಂತೆ ತೋರುವುದು. ಆದರೆ, ಫೆಸಿಸ್ಟ್ ರಾಜ್ಯಗಳಲ್ಲಿರುವ ಬದಲಾಗಿ, ಪ್ರಜಾಸತ್ತೆಯಲ್ಲಿರುವುದೇ ಮೇಲು. ಪ್ರಜೆಗಳ ಆಶ್ಯಗಳು ಲಯಹೊಂದುವಂತೆ ಪ್ರಯತ್ನಿಸುವುದು ಡಿಕ್ಟೇಟರರ ಲಕ್ಷಣವಾಗಿದೆ. ಯುರೋಪಿನ ಮುಂದರಿದ ಪ್ರಜಾಸತ್ತೆಯು ತಾನಿನ್ನೂ ಮೇಲಾಗಿದ್ದೇನೆಂಬುದನ್ನು ಪ್ರಕಟಿಸಲು ಪ್ರಯತ್ನಪಡುವುದೆ?

ಜಗತ್ತಿನಲ್ಲಿ ಹೆಚ್ಚಿನ ಹಾವಳಿಗೆ ಕಾರಣನೆಂದರೆ, ವ್ಯಾಪಾರದ ಸ್ಪರ್ಧೆ. ಅವರವರು ಅಲ್ಲಲ್ಲಿ ತಂತಮ್ಮ ವಾಣಿಜ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ತೊಡಗಿ ಎಲ್ಲ ಅನಾಹುತಗಳಿಗೂ ಕಾರಣವಾಗಿದೆ. ಎಲ್ಲ ಜನಾಂಗಗಳು ಸಹಕಾರ ಬುದ್ಧಿಯಿಂದ ವರ್ತಿಸಿದರೆ, ಈ ಅನಾಹುತಗಳಿಗೆ ಎಡೆತೋರದು. ಇನ್ನೊಂದು ಕಾರಣವೆಂದರೆ, ಮದ್ದು ಗುಂಡುಗಳನ್ನು ಸರಕಾರಗಳಲ್ಲದೆ, ಖಾಸಾ ವರ್ತಕ ಸಂಘಗಳೂ ಕಾರ್ಖಾನೆಗಳೂ ತಯಾರಿಸುತ್ತಿರುವುದು! ಇವರಿಗೆ ಲಾಭ ದೊರೆತರೆ, ಯಾರಿಗೆ ಬೇಕೋ ಅವರಿಗೆಲ್ಲ ಯುದ್ಧಸನ್ನಾಹವು ದೊರೆವ ಕಾರಣ, ಯುದ್ಧಗಳು ಮುಗಿಯುವಂತಿಲ್ಲ. ಇವರ ಸಭೆಗೂ ಅಂತ್ಯವಾಗುತ್ತಿಲ್ಲ.

ಮಹಾತ್ಮಾಜಿಯವರ ಸೂಚನೆ

...ಗಳಿಂದ ಇಂಡಿಯಾ ಅಕ್ಷ್ಯ ಹೇಗಿದೆ ಎಂದು ಜನತೆಗೆ ತೋರಿಸುವುದಕ್ಕಾಗಿಯೆ, ಏಳು ಸಂಸ್ಥಾನಗಳಲ್ಲಿ ಕೊಂಗ್ರೆಸ್ ಮಂತ್ರಿಮಂಡಲಗಳು ರಾಜ್ಯಭಾರ ವಹಿಸಿವೆ. ಲೋರ್ಡ ಲೋಧಿಯನರ ಈ ಶಕ್ತಿನಲ್ಲಿರುವ ರಕ್ಷಾಕವಚಗಳೆಂಬವು ಇನ್ನು ವ್ಯರ್ಥವೆಂದು ಭಾವಿಸುತ್ತಾರೆ. ಲೋರ್ಡ ಜೆಟ್ಲೆಂಡರು ಹಾಗೆಯೆ ಹೇಳುತ್ತಾರೆ. ನಮ್ಮ ಗವರ್ನರರು ಹಾಗೆಯೆ ವರ್ತಿಸುತ್ತಾರೆ. ಅಲ್ಪಸಂಖ್ಯಾತರನ್ನು ಇತರರಷ್ಟೆ ಚೆನ್ನಾಗಿ ನೋಡಿಕೊಳ್ಳಲೇಕೆಂದೂ, ಹಾಗೆ ಮಾಡದಲ್ಲಿ ಗವರ್ನರರ ತಮ್ಮ ಸ್ವಂತಾಧಿಕಾರದಿಂದ ತಿದ್ದುಪಡಿ ಮಾಡುವ ಹಾಗೆ ಈ ಅಲ್ಪಸಂಖ್ಯಾತರ ... ಆಕ್ಷೇಪ ಎತ್ತುವಂತಿಲ್ಲವೆಂದೂ ಕೊಂಗ್ರೆಸ್ ಮಂತ್ರಿಗಳ ಒಲ್ಲರು. ಪ್ರಜೆಗಳಿಗೆ ಸ್ವತಂತ್ರವಿರುವಂತೆ ಆಳುವುದಕ್ಕೆ ಕೊಂಗೆಸ ಕಲಿತ ಕೇಳಿವೆ, ಆದರೆ ಮನಸ್ವಿಯಾಗಿ ನಡೆಯಲು ಮಾತ್ರ ಕೊಂಗ್ರೆಸು ಬಿಡಲಾರದು. ಯಾವ ಪಾರಂತಿಕ ಸರಕಾರಕ್ಕೂ ತನ್ನಿಚ್ಛೆಯ ಸುಧಾರಣೆಗಳನ್ನು ಹೂಡಲು ಹಣವಿಲ್ಲ. ಆದರೂ, ಅದನ್ನು ಹುಡುಕುವ ಪ್ರಯತ್ನಗಳಾಗುತ್ತವೆ.

ಫೆಡರೇಶನಿನ ವಿಷಯ

ದಲ್ಲಿ ವೈಸ್ರಾಯರೂ ಈಗ ಅವಸರಪಡುತ್ತಿಲ್ಲ. ಲೋರ್ಡ ಲೋಧಿಯನರು ಇತ್ತಿಂದ ಹೀಗೆ ಅಭಿಪ್ರಾಯವಿದೆ ಎಂದು ಎಣಿಸುತ್ತಿದ್ದಾರೆ. ನಾವೆಲ್ಲರು ಮನಸ್ಸು ಮಾಡಿದಂತೆ ಫೆಡರೇಶನ ಊರ್ಜಿತಕ್ಕೆ ಬರುವುದು ಅಥವಾ ಬಾರದು ಎಂಬುದು ನಿಜ. ಕೊಂಗ್ರೆಸು ಇನ್ನೂ ಅಧಿಕಾರ ಪಡೆಯುತ್ತ ಬರುವಾಗ, ಅದು ಮುಂದರಿಯದಂತೆ ತಡೆಗಟ್ಟುವುದಕ್ಕಾಗಿಯೆ ದೇಶೀಯ ರಾಜರುಗಳನ್ನು ಫೆಡರೇಶನಿಗೆ ಸೇರಿಸುವ ಪ್ರಯತ್ನಗಳಾಗುತ್ತವೆ ಎಂದೇ ಎಲ್ಲರೂ ನಂಬುತ್ತಾರೆ.

ಕೊಂಗ್ರೆಸು ಮಂತ್ರಿ ಕೂಟಗಳಿಗೆ

ಹಿತ ಶತ್ರುಗಳು ಕಾಂಗ್ರೆಸಿನ ಒಳಗೇ ಇದ್ದಾರೆನ್ನಬಹುದು. ಅಕ್ಕಿನಲ್ಲಿ ತೋರುವ ಚತುರ್ಗದಿಗಳೊಳಗೆ ಮಾತ್ರ ಕೆಲಸ ಮಾಡಬಹುದಾದ ಅನುಕೂಲವಷ್ಟೆ ಇರುವಾಗ, ಹಣವಿಲ್ಲದಿರುವಾಗ, ಅಸಾಧ್ಯವಾದುದನ್ನು ಈ ಮಂತ್ರಿಗಳೂ ಇನ್ನೂ ಮಾಡುತ್ತಿಲ್ಲವೆಂದು ಅವರನ್ನು ದೂರುವ ಕೊಂಗ್ರೆಸ್ ಮೆಂಬರರೇ ಇದ್ದಾರಲ್ಲ! ಹಿಂದಣ ಮಂತ್ರಿಗಳು ಡಿಕ್ಟೇಟರರ ಸ್ಥಾನದಲ್ಲಿದ್ದರು; ಅವರು ಅಪ್ಪಣೆ ಕೊಡುವರಾಯಿತು. ಇವರು ವಿವರಿಸಿ ಬಚಿತಗೊಳಿಸಬೇಕಾಗಿದೆ ಹೊರತು, ಯಾವ ಒಗೆಯಲ್ಲೂ ಮುಂದರಿಸುವುದಕ್ಕಿಲ್ಲವಾಗಿದೆ.

ಅದೆಂತಹ ಬಲವೋ!

'ಎಳ್ಳನ್ನು ಮುಷ್ಟಿಯಲ್ಲಿ ಹಿಡಿದು ಎಣ್ಣೆಯನ್ನು ಹಿಂಡಿ ಅನ್ನಕ್ಕೆ ಹಾಕಿಕೊಳ್ಳುವ ವಾಡಿಕೆ ನಮ್ಮ ಅಜ್ಜನದು' ಎಂತ ಪೂರ್ವ ಕಾಲದವರು ಹೇಳುವುದುಂಟು ಅದು ಸತ್ಯವೋ ಅಸತ್ಯವೋ ಎಂಬುದನ್ನು ನಾವು ನೋಡದಿದ್ದರೂ, ಕಾಯಕಷ್ಟವನ್ನು ಮಾಡುತ್ತಿದ್ದ ಪೂರ್ವಿಕರು ಮಾತ್ರ ಶಕ್ತಿವಂತರಾಗಿದ್ದರೆಂಬುದನ್ನು ಒಪ್ಪಿಕೊಳ್ಳುತ್ತೇವೆ.

ಆದರೆ, ನಮ್ಮಲ್ಲಿ ಅನೇಕರಿಗೆ ಆಶಕ್ತಿಯೂ ಆ ಬಲವೂ ಪಟುತ್ವವೂ ಇರುವುದಿಲ್ಲ ನಮಗೆ ಕಾಯಕಷ್ಟ ಮಾಡಲಿಕ್ಕೆ ಅವಕಾಶವಿಲ್ಲವೆಂತ ತಿಳಿದು ಸುಮ್ಮನೆ ಈ ನೀರಸವಾದ ಜೀವನವನ್ನು ಕಳೆಯಬಾರದು ನಾವು ಉತ್ತಮ ಆರೋಗ್ಯವಂತರಾಗಿಯೂ, ತೇಜಸ್ಸುಳ್ಳವರಾಗಿಯೂ, ಕಳೆಕಾಂತಿಯುಳ್ಳವರಾಗಿಯೂ ಇರಬೇಕು ಅದಕ್ಕಾಗಿ 'ಅಮೃತ'ವನ್ನು ಸೇವಿಸಬೇಕು ಅಮೃತವನ್ನು ಸೇವಿಸಿದರೆ ಜೀವಿತ ಸೌಖ್ಯವನ್ನು ಅನುಭವಿಸಲಿಕ್ಕೆ ಬೇಕಾದ ಉತ್ತಮರಕ್ತವನ್ನೂ ಬಲವನ್ನೂ ಉಂಟುಮಾಡುತ್ತದೆ

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ—ರಾಯಪೇಟೆ—ಮದ್ರಾಸು.

ಮಂಗಳೂರು ಪ್ರವರ್ತಕರು ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಗಂಡನಿಗಾಗಿ ಗಡ್ಡ ಬೆಳೆಸಿದ ಹೆಂಡತಿ!

ಅಮೆರಿಕದ ಒಬ್ಬ ತರುಣಿಗೆ ಗಡ್ಡ ಬೆಳೆದಿತ್ತು. ಮದುವೆಯ ತನಕ ಅವಳು ಗಡ್ಡ ಬೆಳೆಸಿದ್ದಳು. ಮಂದಿಯ ಮುಂದೆ ಗಡ್ಡದ ಪ್ರದರ್ಶನ ಮಾಡಿ ಆಕೆ ಜೀವನ ಮಾಡುತಿದ್ದಳು ಆ ಮೇಲೆ ಒಬ್ಬನು ಅವಳಿಗೆ ಗಂಟುಬಿದ್ದ. ವಿವಾಹವಾಯಿತು ಎಲ್ಲಿ ಗಂಡನ ಪ್ರೇಮ ತನ್ನ ಮೇಲೆ ಕಡಿಮೆಯಾದೀತೋ ಎಂದು ಹೆದರಿ, ಗಡ್ಡ ಕೀಸಲಿಕ್ಕೆ ಹೋದಳು, ಒಂದು ದಿನ ಬೆಳಗಾಗ ಬೇಕಾದರೆ—ಒಬ್ಬ ಕ್ಷೌರಿಕನ ಅಂಗಡಿಗೆ! ಆಕೆಯನ್ನು ನೋಡಿದ ಕ್ಷೌರಿಕನು, ಅವಳ ಯಾರೋ ಭದ್ರಪುರುಷನಾಗಿರಬೇಕೆಂದು ಊಹಿಸಿದ ಶೋಕಿನ ಕ್ಷೌರಕ್ಕೆ ಎಲ್ಲ ಸನ್ನಾಹಗಳನ್ನು ಸಿದ್ಧಮಾಡಿದ ಗಲ್ಲಕ್ಕೆ ಸಾಬೂನು ಹಚ್ಚುತ್ತಾನಷ್ಟೆ—ಒಬ್ಬನು ಅವಸರವಸರವಾಗಿ ಮೆಟ್ಟಲು ಹತ್ತಿ—'ಕೂಡದು, ಕೂಡದು, ಆಕೆಯ ಗಡ್ಡ ಕೀಸಬಾರದು ಅವಳು ನನ್ನ ಹೆಂಡತಿ'' ಎಂದ ಕ್ಷೌರಿಕನಿಗೆ ಪರಮಾಶ್ಚರ್ಯವಾಯಿತು. ಎಲ್ಲಿಯಾದರೂ ಉಂಟೆ—ಹೆಂಗಸಿಗೆ ಗಡ್ಡ ಬೆಳೆಯುವದು, ಆಕೆ ಗಡ್ಡ ಬೆಳೆಸಿಕೊಳ್ಳುವದು' ಆಕೆಯ ಹೆಸರು ಹೆಲೆನ ಎಂದು ಒಂದು ಸರ್ಕಸ್ ಕಂಪೆನಿಯಲ್ಲಿ ಕೆಲಸಕ್ಕಿದ್ದಳು ಹೆನ್ರಿಬರ್ನನು ಗಡ್ಡದ ಆ ಹುಡುಗಿಯನ್ನು ನೋಡಿ ಹುಚ್ಚನಾಗಿ ಬಿಟ್ಟ, ಅವಳನ್ನು ಮೋಹಿಸಿ ವಿವಾಹವನ್ನು ಮಾಡಿಕೊಂಡ. ಪ್ರೇಮೋತ್ಸಾಗಿ ಗಡ್ಡ ಕೀಸುವೆನೆಂದು ಹೆಲೆನ ಹೇಳಿದಳು ಹೆಂಡತಿಗೆ ಗಡ್ಡವಿದ್ದರೆ ಗಂಡನಿಗೆ ಅಸಹ್ಯವಾಗುವದಲ್ಲವೆ? ಗಂಡನಿಗೆ ಅಸಹ್ಯವಾದರೆ ದಾಂಪತ್ಯಪ್ರೇಮ ಹೇಗೆ ಸ್ಥಿರವಾಗಿ ಉಳಿದೀತು? ಆದರೆ ಹೆನ್ರಿಬರ್ನ ಹೇಳಿದ—ಕೂಡದು! ನಿನ್ನನ್ನು ಮದುವೆಯಾದುದರಿಂದ ನನಗಿದ್ದ ಕೆಲಸ ಹೋಗಿ ಬಿಟ್ಟಿತು. ಈಗ ನಿನ್ನ ಆ ಗಡ್ಡದಿಂದಾಗಿಯೇ ನಮ್ಮ ಜೀವನ ಸಾಗಬೇಕು'' ಹೆಲೆನಳಿಗೆ ಗೊತ್ತಾಯಿತು ಅವಳು ಒಪ್ಪಿದಳು. ಆ ಗಂಡಹೆಂಡರಿಬ್ಬರು ಕ್ಷೌರಿಕನ ಅಂಗಡಿಯಿಂದ ಹೊರಗಿಳಿದು ಎಲ್ಲಿಗೋ ಹೋಗಿಬಿಟ್ಟರು. ಅವನು ಕಣ್ಮರೆಯಾಗುವ ತನಕ ಕ್ಷೌರಿಕ ಅವರನ್ನು ಪಿಳಿಪಿಳಿನೆ ನೋಡುತ್ತ ನಿಂತ. ಹೆನ್ರಿಗೆ ಕೆಲಸ ಸಿಕ್ಕುವ ತನಕ ಹೆಲನ ಗಡ್ಡ ಕೀಸುವದಿಲ್ಲವೆಂದು ಹೇಳಿದ್ದಾಳೆ. ಹೆಂಡತಿಯ ಗಡ್ಡವು ಗಂಡನ ಜೀವನಕ್ಕೆ, ಒಂದು ಮಾರ್ಗವಾಗಿದೆ.

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions, Pimples Eczema, Ringworm, Sinus Fistula auxillary-Abscess.

There is no need of dressing the wounds nor are baths prohibited

Price Rs. 2 Postage extra

TAHIR DIN,
Anarkali, LAHORE.



ಮುದ್ದು ಮಕ್ಕಳ
ಆಟಪಾಟಗಳು
ಮನಮೆಚ್ಚುವಂತೆ
ಇರಬೇಕೆಂದರೆ

ಆರೋಗ್ಯವೇ ಮುಖ್ಯ ಎಳೆಯ ಮಕ್ಕಳ ಆರೋಗ್ಯವು ಪ್ಲೀಹೋದರ ವ್ಯಾಧಿಗಳಿಲ್ಲದಿರುವಿಕೆಯ ಮೇಲೆಯೇ ಆಧಾರಪಟ್ಟಿರುತ್ತದೆ ಆದರೆ, ಈಗ

ಲಿವರ್ ಮತ್ತು ಸ್ಪ್ಲೀನ್
ವ್ಯಾಧಿಗಳು

ಅನೇಕ ಮಂದಿ ಶಿಶುಗಳನ್ನು ಬಾಧಿಸುತ್ತಿವೆ ಅಜೀರ್ಣ, ಹೊಟ್ಟೆಯುಬ್ಬರ, ಅಜೀರ್ಣ ಬೇಧಿಗಳು, ಕೈಕಾಲುಗಳು ಸಣ್ಣವಾಗಿರೋದು, ಇವುಗಳಿಂದ ನರಳಿ, ಬಳಲಿ ಎಷ್ಟೋ ಮುದ್ದಾಗಿ ಆಡುತ್ತಾ ಪಾಡುತ್ತಾ ಇರಬೇಕಾದ ಕಂದಯ್ಯಗಳು ನೊಯೋ ಎಂದಿರುತ್ತಾರೆ.

ಎಳೆಯ ಮಕ್ಕಳನ್ನು ಇವುಗಳಿಂದುಂಟಾದ ಬಲ್ಲ ಮಹತ್ತರವಾದ ಔಷಧವೆಂದರೆ 'ಬಾಲಭಾಸ್ಕರ'ವೊಂದೇ. ನಿಮ್ಮ ಮಕ್ಕಳಿಗೆ ಬಾಲಭಾಸ್ಕರವನ್ನು ಕೊಡಿರಿ.

ಎಳೆಯ ಮಕ್ಕಳನ್ನು ರಕ್ಷಿಸುವುದೆಂದರೆ—

ಬಾಲಭಾಸ್ಕರ

ಆಯುರ್ವೇದಾಶ್ರಮಂ,
೧೫೧ ಗೋವಿಂದಪ್ಪನಾಯಕ್ ಬೀದಿ,
ಜಿ. ಟಿ. ಮದ್ರಾಸು

ದ. ಕ. ಜಿಲ್ಲೆಯ ಏಜೆಂಟರು:—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ
ಮಂಗಳೂರು.

Ready for sale !

SHARADA DIARY 1938

ARE ISSUED IN THREE SIZES

Big size 0-8-0. **Small size 0-4-0.**

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ.

Interleaved big size DIARIES useful for Banks & Lawyers

ARE AVAILABLE AT 1-2-0 PER COPY

Sharada Press, Mangalore, S. Canara.

HOUNSA

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಕರ್ಣಟ್ಟಾ ಬಜಾರ್, ಮಂಗಳೂರು.

Use the soaps
KNOWN ALL OVER
WISICO'S.

MINAR
&
TAJAMAHAL 'Red'
Bar Soaps.

POPULAR IN THE MARKET

Sole Distributer:-

P. G. KAMATH,
Kashmir House,
Marnamikatta, MANGALORE.

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ಕೋಲಿಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ,
P. O. Peridepi (ನೆಲ್ಲೂರು ಜಿ.)

ಕಲೋಪಾಸಕರೊಬ್ಬರು ಕಣ್ಮರೆಯಾದರು!

ಕನ್ಹೈಯ್ಯಲಾಲ ವಕೀಲನ ನಿಧನಕ್ಕಾಗಿ

ಭಾರತ ಮಾತೆಯು ಕಣ್ಣೀರು ಮಿಡಿಯುತ್ತಾಳೆ

ಕನ್ಹೈಯಲಾಲ ವಕೀಲರ ಜನ್ಮವು ಮುಂಬಯಿ ಪ್ರಾಂತ್ಯದಲ್ಲಾಯಿತು. ಅವರ ತಂದೆ ಅಜ್ಜಂದಿರು ಒಳ್ಳೇ ಪ್ರಸಿದ್ಧಿಯನ್ನು ಪಡೆದ ಭದ್ರ ಪುರುಷರಾಗಿದ್ದರು. ಅವರ ಅಜ್ಜ ನಾನಾಬಾಯಿ ಹರಿದಾಸರು ಬೊಂಬಾಯಿ ಹ್ಯಾಕೋರ್ಟಿನ ಮೊದಲನೆ ಹಿಂದುಸ್ಥಾನಿ ನ್ಯಾಯಾಧೀಶರಾಗಿದ್ದರು. ಹೀಗಾಗಿ ಕನ್ಹೈಯ್ಯಲಾಲರು ಪ್ರತಿಷ್ಠಿತ ವಿದ್ಯಾವಂತ ಕುಟುಂಬದಲ್ಲಿ ಜನ್ಮಕ್ಕೆ ಬಂದಿದ್ದರು.

ಫ್ರೊ ಪ್ರ್ಯಾಟರಿ ಹ್ಯಾಸ್ಕೂಲಿನಲ್ಲಿ ಶಿಕ್ಷಣವನ್ನು ಮುಗಿಸಿದ ಬಳಿಕ ಕನ್ಹೈಯ್ಯಲಾಲರು ಎಲ್ಫಿನ್‌ಸ್ಟನ್ ಕಾಲೇಜನ್ನು ಸೇರಿ ಬಿ ಎ ಪರೀಕ್ಷೆ ಕೊಟ್ಟರು. ಆ ಮೇಲೆ ಯಲ್ ಯಲ್ ಬಿ. ಮತ್ತು ಸೊಲಿಸಿಟರ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾಗಿ ಕೆಲಕಾಲ ಬೊಂಬಾಯಿಯಲ್ಲಿ ವಕಾಲತು ನಡೆಸುತ್ತಿದ್ದರು. ಅಷ್ಟರಿಂದಲೂ ತೃಪ್ತರಾಗದೆ ಬೆರಿಸ್ಟರ್ ಪರೀಕ್ಷೆ ಕೊಡುವದಕ್ಕಾಗಿ ವಿಲಾಯತಿಗೆ ತೆರಳಿದರು.

ಕನ್ಹೈಯ್ಯಲಾಲರು ಹಣ ಸಂಪಾದಿಸಲಿಕ್ಕೆ ಬೆರಿಸ್ಟರನಾಗಲು ವಿಲಾಯತಿಗೆ ಹೋದರಾದರೂ, ಕಲೋಪಾಸಕನಾಗಿ ಅವರ ಮರಳಿದರು. ಪರಿಸ್ಥಿತಿಯು ಒಬ್ಬನನ್ನು ಒಂದೊಮ್ಮೆ ಒಂದೆಡೆಗೆ ಎಳೆದೊಯ್ದರೂ, ಸಂಸ್ಕಾರಗಳು ಅವರನ್ನು ಕಟ್ಟಕಡೆಗಾದರೂ ಜೀವನೋದ್ದೇಶದ ಪೂರ್ತಿಗಾಗಿ ಯಾವ ಮಾರ್ಗಕ್ಕೆ ಹೋಗಬೇಕಿತ್ತೋ ಅದೇ ಮಾರ್ಗಕ್ಕೆ ಕರೆದೊಯ್ಯುವವೆಂಬುದು ಕನ್ಹೈಯ್ಯಲಾಲರ ಜೀವನದಿಂದ ಸ್ಪಷ್ಟವಾಗುತ್ತದೆ. ಅವರು ಹುಟ್ಟಿದ್ದು ಕಲಾಸೇವೆಗಾಗಿ, ಕಲೋಪಾಸಕರಾಗಿ ಭಾರತದ ಲಲಿತ ಕಲೆಗಳ ಉದ್ಧಾರ ಮಾಡಲಿಕ್ಕಾಗಿ, ಆದ್ದರಿಂದ ಅವರು ಇಂಗ್ಲಂಡಿನಿಂದ ಮರಳಿದೊಡನೆ ವಕಾಲತ್ತು ನಡೆಸುವದರ ಬದಲಿಗೆ ಕಲಾಭ್ಯಾಸಕ್ಕಾಗಿಯೇ ತಮ್ಮ ಪೂರ್ಣ ಸಮಯನ್ನು ಕೊಡಹತ್ತಿದರು.

ಅಂದಿನಿಂದ ಕನ್ಹೈಯ್ಯಲಾಲರು ಲಲಿತ ಕಲೆಗಳ ಮೇಲೆ ವಿದ್ವತ್ಪೂರ್ಣ ಲೇಖನಗಳನ್ನೂ ಟೀಕೆ-ವಿಮರ್ಶೆ ಆಲೋಚನೆಗಳನ್ನೂ ಬರೆಯತೊಡಗಿದರು. ಕ್ರಮಕ್ರಮವಾಗಿ ಅವರ ಲೇಖಾದಿಗಳು ಜನಪ್ರಿಯವಾಗ ತೊಡಗಿ ದೇಶವಿದೇಶದ ಪತ್ರಪತ್ರಿಕೆಗಳು ಅವರ ಲೇಖಾದಿಗಳಿಗಾಗಿ ಬಾಯುಸೀರು ಸುರಿಸ ತೊಡಗಿದುವು, ಅವರ ಲೇಖಾದಿಗಳಿಗೆ ಅನೇಕ ಕಡೆಗಳಿಂದ ಬೇಡಿಕೆಗಳು ಬರತೊಡಗಿದುವು.

ಇನ್ನೂ ಹೆಚ್ಚಿನ ಅಭ್ಯಾಸ, ಅಧ್ಯಯನ ಮಾಡುವದಕ್ಕಾಗಿ ಅವರು ಪುನಃ ಇಂಗ್ಲಂಡಿಗೆ ಹೋದರು. ಅಲ್ಲಿ ಅವರಿಗೆ ಪಾಶ್ಚಾತ್ಯ ಕಲಾಕೋವಿದರೊಡನೆ ಸಮಾಗಮವೂ ಪರಿಚಯವೂ ಆಯಿತು. ಸಾಹಿತ್ಯ ಮತ್ತು ಸಂಗೀತಾಭ್ಯಾಸವು ಕಲೋಪಾಸನೆಗೆ ಅಗತ್ಯವೆಂಬುದು ಅವರಿಗೆ ಈ ಬಾರಿ ಇಂಗ್ಲೆಂಡಿನ ಸಂಚಾರ ಮಾಡುತ್ತಿದ್ದಾಗ ತಿಳಿಯಿತು. ಪಾಶ್ಚಾತ್ಯ ಕಲೆಯಲ್ಲಿ ಆದ ಉನ್ನತಿಯನ್ನು ನೋಡಿ ಅವರಿಗೆ ಸಂತೋಷವಾಗುತ್ತಿದ್ದಿತಾದರೂ ಹೃದಯವು ಭಾರತೀಯ ಲಲಿತ ಕಲೆಗಳ ಉದ್ಧಾರಕ್ಕಾಗಿ ತತ್ತರಿಸುತಲಿದ್ದಿತು. ಪಾಶ್ಚಾತ್ಯ ಕಲೆಯಲ್ಲಿದ್ದ ಅವರ ಜ್ಞಾನವು ಭಾರತೀಯ ಕಲೆಯ ಉದ್ಧಾರ ಕಾರ್ಯದಲ್ಲಿ ಅವರಿಗೆ ಬಹಳ ಸಹಾಯವಾದಿತು.

ಭಾರತಕ್ಕೆ ಹಿಂತಿರುಗಿ ಬಂದ ಮೇಲೆ ಕಲಾ ವಿಮರ್ಶೆ ಮಾಡುವದನ್ನು ಕನ್ಹೈಯ್ಯಲಾಲರು ತಮ್ಮ ಉದ್ಯೋಗವನ್ನಾಗಿಟ್ಟುಕೊಂಡರು. ವಿಮರ್ಶೆ ಮಾಡುವದೆಂದರೆ ಕಲಾಭ್ಯಾಸಿಗಳನ್ನು ಟೀಕಿಸುವದೆಂಬ ಅರ್ಥವನ್ನು ಅವರು ಇಟ್ಟುಕೊಂಡಿರಲಿಲ್ಲ. ಕಲೆಯ ಸೇವೆ ಮಾಡುವದೇ ಅವರ ಉದ್ದೇಶವಾಗಿತ್ತು. ಅವರ ವಿಮರ್ಶೆಯಿಂದಾಗಿಯೇ ಕತ್ತಲೆಯಲ್ಲಿ ಯಾರ ಕಣ್ಣಿಗೂ ಬೀಳದೆ ಇದ್ದ ಅನೇಕ ಮಂದಿ ಕಲಾಭ್ಯಾಸಿಗಳು ಬೆಳಕಿಗೆ ಬಂದರು. ಅವರು ಅವರಿಗೆ ಒಳ್ಳೆಯ ಪ್ರೋತ್ಸಾಹ ಕೊಟ್ಟು ಅವರ ಪ್ರಚಾರಕರಾಗಲಿಕ್ಕೂ ಹೆದರಲಿಲ್ಲ. ಆದ್ದರಿಂದ ಭಾರತಕ್ಕೆ ತುಂಬಾ ಉಪಕಾರವಾಯಿತು. ಕಲಾಪ್ರಪಂಚದಲ್ಲಿ ಭಾರತದ ಮಸ್ತಕವು ಉನ್ನತವಾಯಿತು.

ಕನ್ಹೈಯ್ಯಲಾಲರಿಗೆ ಪ್ರಪಂಚದ ಕಲೋಪಾಸಕರಲ್ಲಿ ಗಣನೀಯ ಸ್ಥಾನವು ಪ್ರಾಪ್ತವಾಗಿದ್ದಿತು. ಆದರೆ ಅವರು ತನ್ನ ಆ ಸ್ಥಾನದ ದುರುಪಯೋಗವನ್ನು ಮಾಡಲಿಲ್ಲ. ಲಲಿತ ಕಲೆಗಳನ್ನು ಟೀಕಿಸಿ ವಿವೇಚಿಸಲಿಕ್ಕಿದ್ದಾಗ, ವ್ಯಕ್ತಿಗಳ ಕಡೆಗೆ ಅವರ ದೃಷ್ಟಿಯು ಹರಿಯುತ್ತಿರಲಿಲ್ಲ. ಅವನ ವಿಮರ್ಶೆಯು ಅತ್ಯಂತ ಗಂಭೀರ ಮತ್ತು ನಿಷ್ಪಕ್ಷಪಾತವಾಗಿದ್ದುವು. ಅದಕಾರಣ ಜನರ ಮಾತ ಗಳಿಗೆ ಬೆಲೆ ಇದ್ದಿತ್ತು. ಇಂಥಿಂಥವನ ಕಲೆಯ ವಿಷಯವಾಗಿ ಕನ್ಹೈಯ್ಯಲಾಲರು ಏನ ಹೇಳುತ್ತಾರೆ ಎಂದ ಜನರು ತಿಳಕೊಳ್ಳಲು ಕುತೂಹಲ ಪಡುತ್ತಿದ್ದರು. ಅವರು ಜನರ ಕುತೂಹಲವನ್ನು ತಣಿಸಲು ಸಾಧನೋಪಾಯಗಳನ್ನು ಸಂಪಾದಿಸಿದ ಅಧಿಕಾರಿಯಾಗಿದ್ದರು.

ಲಲಿತ ಕಲೆಗಳನ್ನು ವಿಮರ್ಶಿಸಿ ತನ್ನ ಅಭಿಪ್ರಾಯಗಳನ್ನು ಕೊಡ ಪದರಲ್ಲಿ ಮಾತ್ರ ಕನ್ಹೈಯ್ಯಲಾಲರು ದಕ್ಷರಾಗಿದ್ದರು ಎಂದಲ್ಲ. ಕಲೆಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಅವರು ತಿಳಕೊಂಡವರಾಗಿದ್ದರು. ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಸಂಗೀತ ಕಲೆಗೆ ಸ್ಥಾನವೇ ಇದ್ದಿರಲಿಲ್ಲ. ಅದಕ್ಕೊಂದು ಯೋಗ್ಯ ಸ್ಥಾನವನ್ನು ಕೊಡಿಸುವದಕ್ಕಾಗಿ ಅವರು ಭಗೀರಥ ಪ್ರಯತ್ನಗಳನ್ನು ಮಾಡಿದರು. ವಿಶ್ವವಿದ್ಯಾಲಯಗಳ ಸ್ವಸ್ಥೆಗಳು ಹೇಳಿದ ಮಾತ್ರಕ್ಕೆ ಯಾವದಾದರೂ ಸುಧಾರಣೆಯನ್ನು ಒಪ್ಪುವಂಥವುಗಳಲ್ಲ. ಕನ್ಹೈಯ್ಯಲಾಲರು ಹಲ್ಲುದಿರುತ್ತಿದ್ದರೆ, ಅವರು ಲೇಖನ ಭಾಷಣಾದಿ ನಾನಾ ಉಪಾಯಗಳ ಮೂಲಕ ಕಾರ್ಯಮಾಡುತ್ತಿರಲಿಲ್ಲವಾಗಿದ್ದರೆ, ಇಂದಿಗೂ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಸಂಗೀತವು ಯಾವ ಸ್ಥಾನವನ್ನೂ ಪಡೆಯುತ್ತಿರಲಿಲ್ಲ. ಪರಂತು ತಾನು ಪಟ್ಟ ಪ್ರಯತ್ನಗಳ ಫಲವನ್ನು ನೋಡಲಿಕ್ಕೆ ಅವರು ಬಾಳಿ ಉಳಿಯಲಿಲ್ಲವೆಂಬುದು ಅತ್ಯಂತ ಖೇದದ ಸಂಗತಿಯಾಗಿದೆ.

ದೂರದಿಂದ ನೋಡಿದವರು ಕನ್ಹೈಯ್ಯಲಾಲರು ದೊಡ್ಡ ಅಭಿಮಾನಿ ಪುರುಷ. ಎಲ್ಲರೊಡನೆ ಕೂಡಿಕೊಂಡು ಸಲುಗೆಯಿಂದ ಇರುವದಿಲ್ಲ ಎಂದು ದೋಷಾರೋಪಣೆ ಮಾಡುವರು. ಆದರೆ ಅವರ ಸ್ವಭಾವ ಗುಣಗಳು ಹಾಗಿದ್ದಿರಲಿಲ್ಲ. ಹತ್ತಿರಕ್ಕೆ ಹೋಗಿ ಒಮ್ಮೆಗೆ ಬಾಳುವುದಾದರೆ ಸಾಕು, ಅವರಷ್ಟು ಸಜ್ಜನರೂ ವಿನಯವರರೂ ಆಗಿದ್ದರೆಂಬುದು ಗೊತ್ತಾಗುತ್ತಿತ್ತು. ಅವರು ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲ. ಯಾವ ಮನುಷ್ಯ, ಯಾವ ಸಂಸ್ಥೆಯ ಸೇವೆಗಾದರೂ ಸಿದ್ಧನಿರುತ್ತಿದ್ದರು. ಆದ್ದರಿಂದ ಕಲಾವಂತರನ್ನು ಹುಡುಕಿ ಅವರಿಗೆ ಶಿಕ್ಷಣ ರಕ್ಷಣೆಗಳನ್ನು ಕೊಟ್ಟು ಮುಂದೆ ತರುವದು ಕನ್ಹೈಯ್ಯಲಾಲರಿಗೆ ಬಹು ಸುಲಭದ ಕೆಲಸವಾಯಿತು.

ಕನ್ಹೈಯ್ಯಲಾಲರು ಸಾಹಿತ್ಯ ಸೇವಿಯೂ ಆಗಿದ್ದರು. ಅವರ ಮಾತಿನಲ್ಲಿ ಓಜವಿದ್ದಿತು, ಶೈಲಿಯು ಅವರದೇ ಒಂದು ಅಶಿಷ್ಟ ಪ್ರಕಾರದ್ದಾಗಿತ್ತು. ಆದ್ದರಿಂದ ಅವರ ಕೃತಿಗಳನ್ನು ಜನರು ಬಹಳ ರುಚಿಯಿಂದ ಓದುತ್ತಿದ್ದರು.

ಕನ್ಹೈಯ್ಯಲಾಲರಿಲ್ಲದಿರುತ್ತಿದ್ದರೆ ಹೊಸ ದಿಲ್ಲಿಯ ರಚನೆಯಲ್ಲಿ ಭಾರತೀಯ ಕಲಾಭ್ಯಾಸಿಗಳಿಗೆ ಯಾವ ಸ್ಥಾನವೂ ದೊರಕುತ್ತಿರಲಿಲ್ಲ. ಆದರೆ ವಿದೇಶಿಯ ರನ್ನು ಹೊರತು ಕಲಾಭ್ಯಾಸಿಗಳ ಭಾರತದಲ್ಲಿಯೂ ಇದ್ದಾರೆಂಬುದನ್ನು ತೋರಿಸಿಕೊಟ್ಟು ಅವರ ಭಾರತೀಯ ಕಲಾವಿದರಿಗೆ ಹೊಸ ದಿಲ್ಲಿಯ ರಚನಾ ಕಾರ್ಯದಲ್ಲಿ ಕೈ ಹಾಕುವಂತೆ ಮಾಡಿಕೊಟ್ಟರು. ಅವರ ಸಾಹಿತ್ಯ, ಚಿತ್ರ, ಸಂಗೀತ ಇತ್ಯಾದಿ ಲಲಿತ ಕಲೆಗಳ ಅಭ್ಯಾಸವನ್ನು ಮಾಡಿ ಕಲಾಕೋವಿದರ ಮಾತ್ರವಲ್ಲ, ಸಿನೇಮ, ಕೈಕೆಲಸ ಮೊದಲಾದವುಗಳಲ್ಲಿಯೂ ಪ್ರವೀಣತೆಯನ್ನು ಪಡೆದಿದ್ದರು. ಭಾರತೀಯ ಚಲಚಿತ್ರ ಸಂಘವನ್ನು ಸ್ಥಾಪಿಸುವದರಲ್ಲಿ ಅವರೇ ಅಗ್ರಗಣ್ಯರಾಗಿದ್ದರು. ಈ ಸಂಘಸ್ಥಾಪನೆಯಿಂದ ಚಲಚಿತ್ರ ಕೈಗಾರಿಕೆ ವಿಷ್ಟು ಪ್ರಯೋಜನವಾಯಿತೆಂಬುದನ್ನು ಬಲ್ಲವರೇ ಬಲ್ಲರು.

ಭಾರತೀಯ ಕಲೋಪಾಸಿಗಳ ಸಂಕ್ಷಿಪ್ತ ಪರಿಚಯ ಕೊಡುವ ಒಂದು ಕೃತಿಯನ್ನು ರಚಿಸಬೇಕು. ಭಾರತೀಯ ಕಲೋಪಾಸಿಗಳ ಒಂದು ಅಖಿಲ ಭಾರತ ಸಂಸ್ಥೆಯನ್ನು ಸ್ಥಾಪಿಸಬೇಕು, ಕಲೆಗೆ ಸಂಬಂಧಪಟ್ಟ ಉಚ್ಚಕೋಟಿಗೆ ಸೇರಿದ ಒಂದು ಮಾಸ ಪತ್ರಿಕೆಯನ್ನು ಹೊರಡಿಸಬೇಕು, ಎಂದು ಕನ್ಹೈಯ್ಯಲಾಲರಿಗೆ ಬಹಳ ಆಸೆಯಿದ್ದಿತು. ಈ ಅವರ ಆಸೆ ಮುಗಿಯುವ ಮೊದಲೇ ಮೃತ್ಯುವು ಅವರನ್ನು ತನ್ನ ಕಡೆಗೆ ಕರಕೊಂಡಿತು. ಇಂಥ ಕೆಲಸಗಳನ್ನು ಮಾಡಲಿಕ್ಕೆ ಅವರು ಪೂರ್ಣ ಸಮರ್ಥರಾಗಿದ್ದರೆಂಬುದರಲ್ಲಿ ಏನೂ ಸಂಶಯವಿಲ್ಲ. ಅವರು ಬರೆದ ಅನೇಕಾನೇಕ ಪುಸ್ತಕಗಳೇ ನಮ್ಮ ಮಾತಿಗೆ ಸಾಕ್ಷಿಯಾಗಿವೆ. ಕನ್ಹೈಯ್ಯಲಾಲರಿಗೆ ಭಾರತದಲ್ಲಿ ಮಾತ್ರವಲ್ಲ, ಅಂತರರಾಷ್ಟ್ರೀಯ ಖ್ಯಾತಿಯೂ ಪ್ರಾಪ್ತವಾಗಿತ್ತು.

ಈಗ ಕನ್ಹೈಯ್ಯಲಾಲರು ಇಲ್ಲ. ಜಗತ್ತಿನಲ್ಲೇ ಒಂದು ಉಚ್ಚ ಸ್ಥಾನವನ್ನು ಪಡೆದಿದ್ದ ಈ ಭಾರತೀಯ ಕಲೋಪಾಸಕರು ಈಗ ಕಣ್ಮರೆಯಾಗಿದ್ದಾರೆ. ಅದಕ್ಕಾಗಿ ಭಾರತ ಮಾತೆಯು ಕಣ್ಣೀರು ಮಿಡಿಯುತ್ತಾಳೆ. ಪುತ್ರಶೋಕವನ್ನು ಸಹಿಸುವದು ಕಷ್ಟಸಾಧ್ಯ. ಕನ್ಹೈಯ್ಯಲಾಲರಂಥ ಸತ್ಪುತ್ರರು ಮಡಿದ ದುಃಖವು ಅಸಹನೀಯವೇ ಸರಿ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲೆಂದು ಪರಮಾತ್ಮನನ್ನು ಪ್ರಾರ್ಥಿಸೋಣ. ಅವರ ವೃದ್ಧ ತಾಯಿಗೆ ಪ್ರಾಪ್ತವಾದ ಈ ದುಃಖದಲ್ಲಿ ನಾವೂ ಸಹಭಾಗಿಗಳಾಗಿರೋಣ.



ಜಗತ್ತಿನ ಆಶ್ಚರ್ಯಕರ ಹೊಟೇಲು

ಹತ್ತು ದಿನಗಳಿಂದ ಹದಿನಾಲ್ಕು ವರ್ಷ ಪ್ರಾಯದ ವರೆಗಿನ ಅಧಿತಿಗಳಿಲ್ಲ!

ಹೆಂಡನ್ ಎಂಬ ಲಂಡನ್ ನಗರದ ಬ್ಲಿನ ಒಂದು ಪ್ರದೇಶ. ಇಲ್ಲಿ ಅಧುನಿಕವೂ ಅತ್ಯಾಶ್ಚರ್ಯಕರವೂ ಆದ ಹೊಟೇಲು ಒಂದಿದೆ. ಇಲ್ಲಿನ ಅದಿತಿಗಳೆಲ್ಲ ಹತ್ತು ದಿನಗಳಿಂದ ಮೊದಲ್ಗೊಂಡ ಹದಿನಾಲ್ಕು ವರ್ಷ ಪ್ರಾಯದೊಳಗಿನವರು. ಧನಿಕರು ತಾವು ಊರೂರು ಸುತ್ತಾಡುವ ಹೊತ್ತು, ವಿವಾಹಿತರು—ತಾವು ಆ ಸಿಭಂದರಿಂದ ದೂರಾದಾಗ, ಅಥವಾ ಮಕ್ಕಳಲ್ಲಿ ಮಮತೆ ಇಲ್ಲದವರ ಮಕ್ಕಳನ್ನು ಇಲ್ಲಿ ತಂದು ಸೇರಿಸಬಹುದು.

ಇದರ ಮುಂದಾಳು ಕೆಲಸಗಾರರ ಸಂಘದ ಅಧ್ಯಕ್ಷನಾಗಿದ್ದ, ಸಮತಾವಾದಿ, ಕೈ ವಾವಿಲಿಯಮ್ ಗ್ರಹಮ್ ಎಂಬವನ ಭಟಿಕಳೆಂಕೆ ಬರ್ಡ ಜರ್ಮನ್ ಎಂಬಾಕೆ ಇದರ ಪ್ರೊಪ್ರೈಟರ್. ಅಲ್ಲಿರುವ ಮಕ್ಕಳಲ್ಲಿ ಹೆಚ್ಚಾಗಿ ವಿವಾಹ ವಿಚ್ಛೇದ ಮಾಡಿಕೊಂಡ ದಂಪತಿಗಳ ಮಕ್ಕಳೇ. ಆಗಾಗ ಅವರ ತಾಯಂದಿರ ಹಗಲು ಹೊತ್ತಿನಲ್ಲಿ ತಮ್ಮ ಮಕ್ಕಳನ್ನು ಕಾಣಲು ಬರುವರು. ರಾತ್ರಿಕಾಲ ತಂದೆ ಕಾಣಲು ಬರುವರು.

ಅವಳಿಜವಳಿ ಮಕ್ಕಳೂ ಅಲ್ಲಿ ಇವೆ. ಹೆಚ್ಚಿನ ಮಕ್ಕಳು ತಮ್ಮ ತಂದೆ ತಾಯಂದಿರ ಸಿನೆಮಾ ನಾಟಕಗಳಿಗೆ, ಅಥವಾ ಊರೂರ ತಿರುಗಾಡಿಕೊಂಡು ಬರಲು, ಹೋದಾಗ—ಅಲ್ಲಿದ್ದು ನಂತರ ತನ್ನ ಮನೆಗೆ ತೆರಳುವರು.

ಮೊನ್ನೆ ಮೊನ್ನೆ ಅದೊಬ್ಬ ವ್ಯಾಪಾರಿಯ ಮುಂಜಾನೆ ಎಚ್ಚತ್ತಾಗ ತನ್ನ ಪತ್ನಿಯನ್ನು ಕಾಣದಾದ. ಆಕೆ ತನ್ನ ನಾಲ್ವರು ಚಿಕ್ಕ ಚಿಕ್ಕ ಮಗುಗಳನ್ನು ಬಿಟ್ಟು ಬೇರೊಬ್ಬನೊಡನೆ ಪರಾರಿಯಾದ್ದಳು. ಈ ಮಕ್ಕಳು ಈ ಹೊಟೇಲಿಗೆ ಸೇರಿಸಲ್ಪಟ್ಟವು. ತಂದೆ ಮಾತ್ರ ಪ್ರತಿದಿನವೂ ಮಗುಗಳನ್ನು ನೋಡಿಕೊಂಡು ಹೋಗಿಯು ಬರುತ್ತಿರುವನು.

ಸಮತಾವಾದಿಗಳೆಂದು ಹೆಮ್ಮೆ ಕೊಚ್ಚಿಕೊಳ್ಳುವ, ಪರೋಪಕಾರಿಗಳೆಂದು ಸಾರುವ ಮ್ಯಾಲ್ಲಿನ ಮಹಾತ್ಮರು ಕಟ್ಟಿದವನ್ನು, ಹಣವನ್ನೂ ಇತ್ತರೆ ನರಳುವ ಅನೇಕ ಮಕ್ಕಳಿಗೆ ಆನಂದವನ್ನಿತ್ತು ಪುಣ್ಯಬರಬಹುದು. ಆದರೆ ಅದು ಅನ್ಯಾಯ ಕೃತ್ಯಗಳಿಗಾಗಿ ವ್ಯಯಿಸಲ್ಪಡುತ್ತಿದೆ!

ಸಿಂಟಾವ್ರೊ ಎಂಬಲ್ಲಿ ಕರ್ನ್ಯ ಗರಡಿಯಲ್ಲಿ ಸುಟ್ಟುಬಿಟ್ಟದ್ದಕ್ಕೆ ಪ್ರತೀಕಾರವಾಗಿ, ಜನರು, ಅದನ್ನು ಮತ್ತೆ ಅದಕ್ಕೆ ಆಹಾರ ಇತ್ಯಾದಿ ಸಾಮಾನುಗಳು ಸಿಗದಂತೆ, ಸಾಧಿಸುತ್ತಿದೆ.

ಕೊಲೆಗಡುಕರ ರಾಜ್ಯದಲ್ಲಿ ಭಯಂಕರ ಕೊಲೆ!

ಕಂಡು ಕೇಳಿ ಅರಿಯದ ಭೀಷಣ ಅತ್ಯಾಚಾರ!

ಬೆಳಗಾಗಬೇಕಾದರೆ ೪೮ ಮಂದಿಯನ್ನು ಗುಂಡುಹಾಕಿ ಕೊಂದರು.

೫ ಮಿಲಿಯ ಜನರು ಬರಗಾಲದಿಂದ ಪೀಡಿತರಾಗಿ ಸಾಯುತಿದ್ದಾರೆ!

ಮೊನ್ನೆ ತಾನೆ ರಷ್ಯದ ಬೊಲ್ಶೆವಿಕ ರಾಜ್ಯಕ್ರಾಂತಿಯ ೨೦ನೆ ಜನ್ಮದಿನೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಿತು. ಅದರೊಂದಿಗೆ ಸ್ಟಾಲೀನನು ಅಧಿಕಾರ ಪಟ್ಟವನ್ನೇರಿದ ಹತ್ತನೆ ದಿನಾಚರಣೆಯನ್ನೂ ರಷ್ಯವು ವಿಶೇಷ ಉತ್ಸಾಹ ಸ್ಫೂರ್ತಿಯಿಂದ ಕೂಡಿ ಮಾಡಿತು ಎಂದು ನಾವು ಅನೇಕ ಬಾರಿ ಓದಿದ್ದೇವೆ. ರಷ್ಯವು ಭೂಲೋಕದ ಅನುಪಮ ಸ್ವರ್ಗರಾಜ್ಯವಾಗಿರುವುದೆಂದು, ಇದನ್ನು ಓದಿದ ಅನೇಕ ಮಂದಿ ತಿಳಕೊಳ್ಳುತ್ತಾರೆ. ಆದರೆ ಅದು ಅನುಪಮ ಸ್ವರ್ಗರಾಜ್ಯವಾಗಿರುವುದರ ಬದಲಿಗೆ ಭಯಂಕರ ನರಕ ಕುಂಡವಾಗಿರಬಹುದೋ ಎಂಬ ಸಂದೇಹಕ್ಕೆ ಕಾರಣವಾಗಿದೆ.

ಸ್ಟಾಲೀನನ ಮತ್ತು ಅವನ ಆಡಳಿತ ಕ್ರಮಕ್ಕೆ ವಿರೋಧವಾದ ಯಾವ ವರ್ತಮಾನವೂ ರಷ್ಯದಿಂದ ಇದ್ದಕ್ಕಿದ್ದ ಹಾಗೆ ಹೊರ ಬರುವುದಿಲ್ಲ. ಆದ್ದರಿಂದ ಅಲ್ಲಿಯ ನಿಜಸ್ಥಿತಿಯನ್ನು ತಿಳಕೊಳ್ಳುವುದು, ಅಲ್ಲಿಯೇ ಕೆಲವು ದಿನ ಇದ್ದು ಬಂದವರಿಗಲ್ಲದೆ ಇತರರಿಗೆ ತಿಳಿಯುವುದು ಅಸಾಧ್ಯವೇ ಸರಿ; ಅಲ್ಲಿ ಇದ್ದು ಬಂದವರಿಗಾದರೂ ಪೂರ್ಣ ಸತ್ಯವು ಗೊತ್ತಿರುವುದಿಲ್ಲ. ಎಷ್ಟೋ ಸಂಗತಿಗಳು, ಯಾರಿಗೂ ಗೊತ್ತಾಗದಂತೆ, ಕಣ್ಮರೆಯಲ್ಲಿ ನಡೆದುಹೋಗುತ್ತವೆ.

ಇತ್ತೀಚೆಗೆ ಎಷ್ಟೋ ಮಂದಿ ರಾಜದ್ರೋಹದ ಅಪವಾದನೆಯ ಮೇಲೆ ಕೊಲೆಗಡುಕರ ಕೊಡಲಿಗೆ ಬಲಿಯಾದರು. ಅವರ ಅಪರಾಧವೇನು? ಏನೂ ಇಲ್ಲ. ಬರೀ ಸಂದೇಹ ಮಾತ್ರ. ಸುಧಾರಿತ ರಾಜ್ಯಗಳಲ್ಲಿ ಅವರೇ ಅಪರಾಧಿಗಳನ್ನು ಹಿಡಿದು ಯಾರಾದರೂ ನ್ಯಾಯಾಧಿಪತಿಯು ಅವರನ್ನು ಶಿಕ್ಷೆಗೆ ಗುರಿಪಡಿಸುತಿದ್ದರೆ, ಅವರಿಗೆ ಪ್ರಾಣದಂಡವಾಗುವ ಮಾತು ದೂರವೇ ಉಳಿಯುತು; ಒಂದು ಚಿಕ್ಕಾಸಿನ ದಾಲುಮಾನೆ ಮಾಡಿದ್ದರೂ ಕೂಡ, ಅನ್ಯಾಯದ ಶಿಕ್ಷೆ ಕೊಟ್ಟರೆಂದು ಆ ನ್ಯಾಯಾಧೀಶರನ್ನು ಪದವಿಯಿಂದ ತಳ್ಳಿಹಾಕುತಿದ್ದರು.

ಇದು ನೊನ್ನೆಯ ಮಾತಾಯಿತು. ೧೯೩೩-೩೪ನೇ ಇಸವಿಯ ಕಾಲದಲ್ಲಿ ರಷ್ಯವು ಶಾಂತಿಯ ಸಾಮ್ರಾಜ್ಯವಾಗಿತ್ತೆಂದು ಕೆಲವರು ಹೇಳುತ್ತಾರೆ. ತೋರಿಕೆಗೆ ಅದು ಹಾಗಿತ್ತು ನಿಜ. ಆದರೆ ಆ ಕಾಲದಲ್ಲಿಯೂ ಕೂಡ ರಷ್ಯದಲ್ಲಿ ಎಷ್ಟೋ ಮಂದಿ ನಿರಪರಾಧಿಗಳು ತಂಡ ತಂಡವಾಗಿ ಗಲ್ಲಿಗೇರಿಸಲ್ಪಟ್ಟರು. ಎಷ್ಟು ಮಂದಿ, ಎಲ್ಲಿ, ಹೇಗೆ ಗಲ್ಲಿಗೇರಿಸಲ್ಪಟ್ಟರೆಂಬ ಸತ್ಯವನ್ನು ಇದುವರೆಗೆ ಯಾರೂ ಕೇಳಿಲ್ಲ, ನೋಡಿಲ್ಲ. ಎಲ್ಲಿ ಯಾವಾಗ ಪ್ರಾಣಕ್ಕೆ ಸಂಚಕಾರವಾದೀತೋ ಎಂಬ ಭಯದಿಂದ ತತ್ತರಿಸುತ್ತ ಜನರು ಗುಲಾಮರಂತೆ ಹೇಳಿದ ಕೆಲಸವನ್ನು ಮಾಡಿದರು; ರಸ್ತೆಗಳನ್ನು ಕಡಿದರು, ಕಾಲುವೆಗಳನ್ನು ತೋಡಿದರು, ಸೇತುವೆಗಳನ್ನು ಕಟ್ಟಿದರು. ಒಮ್ಮೆಗೆ ಅವರು ಕೈಲಾಗದೆ ಉಸ್ಸಪ್ಪ ಎಂದು ಸುಮ್ಮನೆ ಕೂತರಾದರೂ, ರಾಜ್ಯದ್ರೋಹದ ಅಪವಾದನೆಯ ಮೇಲೆ ಪ್ರಾಣಾಂತ್ಯ ಘೋರ ಶಿಕ್ಷೆಯ ಭಯವು ಇದ್ದೇ ಇದ್ದಿತು. ಆದ್ದರಿಂದ ಕೂಡದಿದ್ದರೂ ಕೂಡಿದವರಂತೆ ಪಾಪದ ಆ ಜನರು ರಾತ್ರಿಹಗಳು ಕೆಲಸ ಮಾಡಿದರು.

ರಷ್ಯಾದಲ್ಲಿ ರಾಕ್ಷಸೀ ರಾಜ್ಯವು ನಡೆಯುತ್ತಿರುವುದೆಂಬುದಕ್ಕೆ ಸಂದೇಹವೇ ಬೇಡ. ರಾಜಾಜ್ಞೆಯನ್ನು ಪಡೆಯದೆ ಒಂದು ದನವನ್ನು ಕೊಂದರೂ ಫಾಶೀಶಿಕ್ಷೆ; ತಾಮ್ರದ ಬೆಳ್ಳಿಯ ನಾಣ್ಯಗಳನ್ನು ಸಂಗ್ರಹಿಸಿದರೂ ಫಾಶೀಶಿಕ್ಷೆ; ಒಂದು ಚಿಕ್ಕ ವಸ್ತುವನ್ನು ಕದ್ದರೂ ಫಾಶೀಶಿಕ್ಷೆ; ಅಪ್ಪಣೆಯನ್ನು ಪಡೆಯದೆ ರಾಜ್ಯವನ್ನು ಬಿಟ್ಟುಹೋಗಲಿಕ್ಕೆ ಪ್ರಯತ್ನಿಸಿದರೂ ಫಾಶೀ ಶಿಕ್ಷೆ; ರಾಜ್ಯವನ್ನು ಬಿಟ್ಟುಹೋದವರು ಬರಲಿಕ್ಕೆ ಹೇಳಿದಾಗ ಹಿಂದೆ ಬರದಿದ್ದರೂ ಫಾಶೀಶಿಕ್ಷೆ; ಆಡಳಿತ ಕ್ರಮವನ್ನು ಹೇಗೆ ವಿಮರ್ಶಿಸಿದರೂ ಫಾಶೀ ಶಿಕ್ಷೆ-ಹೀಗೆ ರಷ್ಯದಲ್ಲಿ ಫಾಶೀ ಶಿಕ್ಷೆಯಲ್ಲದೆ ಬೇರೆ ಶಿಕ್ಷೆಯಾಗುವುದು ತೀರ ಅಪರೂಪ.

ರಷ್ಯದ ಸರ್ವಾಧಿಕಾರಿ ಸ್ಟೇಲಿನ್.

ಸ್ಟೆಲೀನನು ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ಭಯಂಕರ ಅತ್ಯಾಚಾರ ದಬ್ಬಾಳಿಕೆಗಳನ್ನು ನಡೆಸಿ ಅವನು ರಷ್ಯದಲ್ಲಿ ವಿರೋಧ ಪಕ್ಷವು ತಲೆಎತ್ತದಂತೆ ಮಾಡಿಬಿಟ್ಟಿದ್ದಾನೆ. ಅವನ ಆಡಳಿತ ಕ್ರಮವನ್ನು ವಿರೋಧಿಸುತಿದ್ದ ಟ್ರಾಟಸ್ಕಿ ಜಿನೊವಿವ್, ಕಾಮನೆವ್, ರಾಡೆಕ್, ಮೊದಲಾದ ಧೀಮಂತರು ದೇಶಪ್ರೇಮಿಗಳು ಮಾತ್ರವಲ್ಲ ಅವರ ಲಕ್ಷಾಂತರ ಮಂದಿ ಅನುಯಾಯಿಗಳು ಕೂಡ ದೇಶತ್ಯಾಗ ಮಾಡಿ ವಿದೇಶಗಳಲ್ಲಿ ಕೊಳೆಯುತ್ತಿರಬೇಕಾಗಿದೆ.

ಕೊಲೆ, ಅತ್ಯಾಚಾರ, ದಬ್ಬಾಳಿಕೆ, ಗಡೀಪಾರು, ಇವು ಇಂದಿನ ರಷ್ಯದ ನಿತ್ಯದ ಘಟನೆಗಳಾಗಿವೆ. ಅವುಗಳನ್ನು ಕೇಳಿದ ನಮಗೆ ರೋಮಾಂಚನವಾಗುತ್ತದೆ, ಮೈ ಜುಮ್ಮೆನ್ನುತ್ತದೆ; ಕಣ್ಣು ಕತ್ತಲೆ ಬರಲೂ ಬಹುದು. ಆದರೆ ರಷ್ಯನರಿಗೆ ಅದನ್ನು ನೋಡಿ ಕೇಳಿ ಅಭ್ಯಾಸವಾಗಿರುವುದರಿಂದ, ಅವರಿಗೆ ಅದು ವಿಶೇಷ ಘಟನೆಯೆಂದೂ ಅನ್ನಿಸಿಕೊಳ್ಳುವುದೇ ಇಲ್ಲ. ರಷ್ಯದ ಜನರು ನರಕದ ಹುಳುಗಳಂತಾಗಿದ್ದಾರೆ. ನರಕದ ಹುಳುಗಳಿಗೆ ನರಕಯಾತನೆಯ ಅನುಭವವಾಗುವುದಿಲ್ಲ.

ಆದರೂ ಕೂಡ ಈ ಅತ್ಯಾಚಾರದಿಂದ ಲಕ್ಷಾಂತರ ಮಂದಿ ಪ್ರಾಣಗೊಟ್ಟರು. ಲಕ್ಷಾಂತರ ಮಂದಿಯ ಪ್ರಾಣಹೋಯಿತು. ರಷ್ಯದಲ್ಲಿ ಜೀವನವು ಅಸಹನೀಯವಾಗಿದೆ. ಸೈಬೀರಿಯ ಮೊದಲಾದ ಪ್ರದೇಶಗಳಲ್ಲಿ ನಿರ್ವಾಸಿತರಾದವರ ಕಷ್ಟಗಳನ್ನು ಹುಟ್ಟುಕಪಿಯಿಂದಲೂ ವರ್ಣಿಸಲಿಕ್ಕೆ ಸಾಧ್ಯವಿಲ್ಲ. ಅವರಿಗೆ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ; ಮನೆಯಿದ್ದರೆ ಜನವಿಲ್ಲ; ಆದ ಕಾರಣ ಮಕ್ಕಳುಮರಿಗಳು ವೃದ್ಧವೃದ್ಧೆಯರು ಸತ್ತುಹೋಗಿರುವುದಕ್ಕೆ ಲೆಕ್ಕವಿಲ್ಲ.

ಪ್ರಕಟವಾದ ಸುಪ್ರಸಿದ್ಧ ಕೊಲೆಗಳು ಇವು—೧೯೨೮ರಲ್ಲಿ ಶಾಕ್ತಿ ತಂಡದ ಕೊಲೆ; ೧೯೩೦ರಲ್ಲಿ ೪೮ ಮಂದಿ ಪ್ರೊಫೆಸರ ತಂಡದ ಕೊಲೆ; ೧೯೩೩ರಲ್ಲಿ ೩೫ ಮಂದಿ ವಿಶೇಷಜ್ಞರ ಕೊಲೆ; ಮತ್ತೆ ಇತ್ತೀಚೆಗಾದ ಪ್ರಸಿದ್ಧರ ಕೊಲೆಗಳು ಎಲ್ಲರ ನೆನಪಿನಲ್ಲಿರುವಂಥವಾಗಿವೆ. ೫ ಮಿಲಿಯ ಜನರು ಬಂಧನ ಕೇಂದ್ರಗಳಲ್ಲಿ ಕೊಳೆಯುತಿದ್ದಾರೆ. ಜೈಲುಗಳಲ್ಲಿರುವ ಸಂಖ್ಯೆ ಎಷ್ಟೆಂದು ಗೊತ್ತಿಲ್ಲ. ಬಾಲ್ಟಿಕ್-ವ್ಹ್ಯಾಟ್-ಸೀ ಕಾಲುವೆಯ ಕಾಮಗಾರಿಯಲ್ಲಿ ೨೫೦೦೦೦ ಜನರು ಕಾರಾಗ್ರಹಕ್ಕೆ ಅಟ್ಟಲ್ಪಟ್ಟರು. ಸಹಸ್ರಾರು ಮಂದಿ ಕೆಲಸ ಮಾಡುತ್ತಿರುವಾಗಲೇ ಸತ್ತರು.

ದೈವೀ ಪ್ರಕೋಪಕ್ಕೆ ಗುರಿಯಾಗಿ ಬರಗಾಲಗಳು ಬರುವುದಿದೆ. ನೆರೆ, ಭೂಕಂಪ ಇತ್ಯಾದಿಗಳಿಂದ ಬರಗಾಲಗಳು ಬರುವುದಾಗಿದ್ದರೆ ಅವುಗಳನ್ನು ತಪ್ಪಿಸುವುದು ಮನುಷ್ಯನಿಂದ ಸಾಧ್ಯವಲ್ಲ. ಆದರೆ ರಷ್ಯದ ಬರಗಾಲಗಳೆಲ್ಲ ಭೂಕಂಪ, ನೆರೆ ಇತ್ಯಾದಿಯಿಂದ ಬಂದುವುಗಳಲ್ಲ. ಅವೆಲ್ಲ ಮನುಷ್ಯನ, ಅಂದರೆ ರಾಜ್ಯಾಧಿಕಾರಿಗಳ ಮೂರ್ಖತನ, ಅವಿವೇಕ, ಛಲ ಕಪಟ, ಮತ್ತು ಮಹತ್ವಾಕಾಂಕ್ಷೆಯಿಂದ ಬಂದವುಗಳು. ಆದರೆ ಪಾಪ—ಕಾಲನ ಅಪರಾಧಕ್ಕೆ ರಷ್ಯದಲ್ಲಿ ಬೋಳಿಸು ತಲೆಕೊಡಬೇಕಾಗಿದೆ. ಅಪರಾಧ ಸರಕಾರದ್ದು—ದಂಡವನ್ನು ಅನುಭವಿಸಬೇಕಾದುದು ನಿರಪರಾಧಿಗಳಾದ ಜನರು. ಇಂಥ ಒಂದು ಬರಗಾಲದಿಂದಲೇ ರಷ್ಯದಲ್ಲಿ ಏಳು ಮಿಲಿಯ ಜನರು ಅನ್ನಬಟ್ಟೆಗಿಲ್ಲದೆ ಸತ್ತರು. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಉಂಟಾದ ಬರಗಾಲಗಳು ಎಷ್ಟೋ ಇವೆ.

ರಷ್ಯದ ಬೊಲ್ಶೆವಿಕ್ ರಾಜ್ಯಾಡಳಿತ ಕ್ರಮವು ಸರ್ವತ್ರ ಜಾರಿಗೆ ಬರುವುದರಿಂದಲೇ ಲೋಕದಲ್ಲಿ ಶಾಂತಿ ಸಮಾಧಾನಗಳು ನೆಲೆಗೊಳ್ಳುವವೆನ್ನುತಿದ್ದ, ಬೊಲ್ಶೆವಿಕರ ಪಕ್ಷಪಾತಿಗಳೇ ಈಗ ರಷ್ಯದ ಆ ಆಡಳಿತಕ್ರಮವನ್ನು ಬಹಳನಾಗಿ ದೂರುತ್ತಿದ್ದಾರೆ; ರಷ್ಯದ ತಳ್ಳಿಯೇ ನಮಗೆ ಬೇಡವೆನ್ನುತ್ತಿದ್ದಾರೆ. ಪ್ರಪಂಚದ ಸಹಾನುಭೂತಿಯನ್ನು ಕಳಕೊಳ್ಳುವುದರಿಂದ ರಷ್ಯಕ್ಕಾಗುವ ಲಾಭವೇನೋ? ಅದರಿಂದ ಅದಕ್ಕೆ ಹಾನಿಯಲ್ಲದೆ ಲಾಭವಿಲ್ಲ.

ಇನೋಸ್ ಫ್ರುಟ್ ಸಾಲ್ಟ್



ಜ್ವರ ಮತ್ತು ಶೀತದ ನಂತರ ಅಶಕ್ತಿ, ಅವನು ಉತ್ತಮ ಸ್ಥಿತಿಯಲ್ಲಿ ಬರಲು ಸಾಧ್ಯವಿರಲಿಲ್ಲ. ಅವನು ಯಾವಾಗಲೂ ದಣಿಯುತ್ತಿದ್ದು ರೇಗಿಸುವವನು.

ಇನೋ ಅವನ ಸುಧಾರಿಕೆಗೆ ಅಡ್ಡಿ ಬರುವ ವಿಷಗಳನ್ನು ಹೋಗಲಾಡಿಸಿತು, ಪುನಹ ಅವನಿಗೆ ಆರೋಗ್ಯಾವಸ್ಥೆಗೆ ತಂದಿತು.

ನಿಮ್ಮ ಹೊಟ್ಟೆಯನ್ನು ಸರಿಯಾಗಿ ಇಟ್ಟುಕೊಂಡಲ್ಲಿ

ನೀವು ಆರೋಗ್ಯದಲ್ಲಿರುವಿರಿ. ಇನೋಸ್ ಫ್ರುಟ್ ಸಾಲ್ಟ್ 'Eno's Fruit Salt' ಇದು ಹೊಟ್ಟೆಯ ಅಸ್ವಸ್ಥತೆಗಳ ಬಗ್ಗೆ ಮನೆಯ ಮಾದರಿಯ ಔಷಧವಾಗಿದ್ದು ಅಜೀರ್ಣ, ಮಲಬದ್ಧತೆ ತಲೆನೋವು, ನಿದ್ರಾಭಂಗ ಮುಂತಾದ ರೋಗಗಳನ್ನು ಬೇಗ ಸಹಿತ ತೆಗೆದುಹಾಕುವುದು.

ಇದು ಹಿಂದೂಸ್ಥಾನ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಡಾಕ್ಟರರುಗಳಿಂದ ಹೊಗಳಿಸಿಕೊಂಡಿದೆ. ನೀವು ಈ ಉತ್ತಮವಾದ ಪೇಯವನ್ನು ತೆಗೆದುಕೊಂಡಲ್ಲಿ ನಿಮ್ಮ ಹೊಟ್ಟೆಯು ಸ್ವಚ್ಛವಾಗುವುದು. ಇದೇ ಆರೋಗ್ಯವು.
ಇನೋ 'ENO' ಇದಕ್ಕೆ ಸೌಮ್ಯ,ಸ್ವಾಭಾವಿಕ, ಸುರಕ್ಷಿತವಾದ ಭೇದಿಯಾಗುವ ಗುಣವಿದೆ.
ಯಾವಾಗಲೂ ನಿಮ್ಮ ಮನೆಯಲ್ಲಿ ಇನೋಸ್ ಫ್ರುಟ್ ಸಾಲ್ಟಿನ 'Eno's Fruit Salt' ಒಂದು ಸೀಸೆಯನ್ನು ಇಟ್ಟುಕೊಳ್ಳಿರಿ.
ಇನೋಸ್ ಫ್ರುಟ್ ಸಾಲ್ಟಿನಲ್ಲಿ 'Eno's Fruit Salt' ಬಳ್ಳೀ ಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳು ಸೇರಿರುತ್ತವೆ.

EX. 15

Eno's 'Fruit Salt'

ಪರಮಾ

ಮೊದಲಾದ ಭಯಂಕರ ಮೂತ್ರರೋಗಗಳ ಭಯಂಕರ ಪರಿಣಾಮವನ್ನು ತಡೆಯುವುದಕ್ಕಾಗಿ (ಸಿಡಕಾರಿಯ ಹೊರತಾಗಿ)

ಗೊನೋಲೆಕ್ಸ (ರಜಿಸ್ಟರ್ಡ್)

ತೆಗೆದುಕೊಳ್ಳಿರಿ ಮತ್ತು ಶಾಶ್ವತವಾಗಿ ರೋಗದಿಂದ ಮುಕ್ತರಾಗಿರಿ. ಈ ಔಷಧವು ಎಲ್ಲ ತರಹದ ಪರಮಾ ಮೊದಲಾದ ಎಲ್ಲ ಮೂತ್ರರೋಗಗಳ ನಿವಾರಣೆಯಾಗಿ ಮೂತ್ರಗಳು ಸಾಫ ಆಗುತ್ತವೆ. ಮೊದಲಿನ ಒಂದೇ ಒಂದು ಬಾಟ್ಲಿಯಿಂದ ಗುಣವಾಗುತ್ತದೆ. ದಾ. ಕಿ. ರೂ. ೧–೦–೦ ಅಂಚೆವೆಚ್ಚ ಪ್ರತ್ಯೇಕ. ಹಳೇ ಮತ್ತು ಅಸಾಧ್ಯ ರೋಗಗಳಿಗೆ ಗೊನೋಲೆಕ್ಸ ಇಂ. ೧ನ್ನು ಉಪಯೋಗಿಸಿರಿ. ದಾ. ಕಿ. ರೂ. ೩–೦–೦ ಅಂಚೆವೆಚ್ಚ ಪ್ರತ್ಯೇಕ. ಎಲ್ಲ ಕಡೆಯಲ್ಲಿಯೂ ದೊರೆಯುತ್ತದೆ. ಪ್ರತಿಯೊಂದು ಊರಲ್ಲಿಯೂ ಏಜಂಟರು ಬೇಕು.

ಸೋಲ್ ಏಜಂಟರು:—ಸ್ಟಾರ್ ಏಜೆನ್ಸಿ, ೧೩೪ ಹಾರ್ನಬಿ ರೋಡ್, ಫೋರ್ಟ ಮುಂಬಾಯಿ.

ಸ್ಟಾಕಿಸ್ಟ:-ಎಂ. ಡಿ. ವ್ಹೊರಾ ಮತ್ತು ಕಂಪನಿ ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

ಮುಸ್ಲಿಮ್ ಲೀಗ್

ಆಶಯಗಳು—ಸಾಧನೆಗಳು—ವಿರೋಧಗಳು

ಮಿ। ಜಿನ್ನಾರವರು ಮತ್ತು ಪ್ರೊಫೆಸರ್ ಹ್ಯುಮಾಯುನ್ ಕಬೀರ ಇವರ ಪ್ರತಿದ್ವಂದ್ವಿತೆ

ಅಖಿಲ ಭಾರತದ ಮುಸ್ಲಿಮ ವಿದ್ಯಾರ್ಥಿಯರ ಸಮ್ಮೇಲನ

ಕಲ್ಕತ್ತದಲ್ಲಿ ಎರಡು ರಂಗಸ್ಥಳಗಳಾಗಿವೆ ಒಂದು ಕಡೆ, ಬಂಗಾಳದ ಮಂತ್ರಿಮಂಡಲ ಮತ್ತು ಅವರ ಪಕ್ಷ—ಇವರು ಸ್ವಾಗತ ಮಾಡಿ ಕರೆತಂದ ಅಧ್ಯಕ್ಷರು ಮಿ। ಜಿನ್ನಾರವರು ಮುಸ್ಲಿಮರಿಗಾಗಿಯೆ ವಿದ್ಯಾರ್ಥಿಗಳ ಸಮ್ಮೇಲನವೊಂದು ಪ್ರತ್ಯೇಕವಿರಬೇಕೆಂದು ಇವರ ಸಾಧನೆ ನನ್ನ ಹಿತವನ್ನು ಖಂಡಿತವಾಗಿ ಬರಹ ಮೂಲಕವಾಗಿ ದೃಢಗೊಳಿಸಬೇಕಾಗಿದೆ ಎಂದೇ ನನ್ನ ಅಭಿಮತ ಎಂದು ಇವರೆನ್ನುವರು ಮಾತೆಲ್ಲ ಮುಸ್ಲಿಮರ ಹಿತಕ್ಕಾಗಿ 'ಹಿತ'ವೆಂಬುದು, ಮುಸ್ಲಿಮರದೊಂದು ಬೇರೆಯೇ ಇಳೆಯೋ ಅಥವಾ ಇತರ ಸಮಾಜಗಳ ಹಿತವೂ ಮುಸ್ಲಿಮರದಲ್ಲವೊ ಎಂಬ ಪ್ರಶ್ನೆಯುಂಟಾಗಬಹುದು. ಮತ, ಸಂಸ್ಕೃತಿ, ಭಾಷೆ ಇಷ್ಟಲ್ಲದೆ ರಾಜಕೀಯ ಹಕ್ಕುಗಳನ್ನು ಕಾಪಾಡಬೇಕಾಗಿದೆ ಎಂದ ಮುಸ್ಲಿಮರ ಪರವಾಗಿ ಇವರೆನ್ನುವರು. ಮೊದಲನೆ ಮೂರು ವಿಷಯಗಳನ್ನು ಕುರಿತು ಯಾರೂ ಇದಿರಾಡುವ ಪಾಪ ಮಾಡಲಾರರು. ಅವರವರ ಮತ, ಸಂಸ್ಕೃತಿ ಭಾಷೆ ಅವರವರಿಗೆ ಸ್ವತಂತ್ರವಾಗಿ ಇರಲೇ ಬೇಕು ರಾಜಕೀಯ ಹಕ್ಕು ಎಂಬುದು ಮುಸ್ಲಿಮರಿಗೊಂದ ಬೇರೆ ಯೇನಿದೆ? ಕೊಮ್ಯುನಲ್ ಎವಾರ್ಡನ್ನು ಮುಸ್ಲಿಮರೇ ಒಪ್ಪುವ ವರೆಗೆ, ಕಾಂಗ್ರೆಸು ವಿರೋಧಿಸಿ, ತಿದ್ದಲು ಪ್ರಯತ್ನ ಮಾಡುವುದಿಲ್ಲವೆಂದು ನಿರ್ಧಾರ ಮಾಡಲಾಗಿದೆ ರಾಜಕೀಯದಲ್ಲಿ, ಸಾಮಾಜಿಕವಾದ ಪ್ರತ್ಯೇಕ ಹಕ್ಕುಗಳೆಂದು ಯಾರಿಗಾದರೂ ಇರಬಹುದೊ? ನಮ್ಮ ದೇಶವನ್ನು ಮತ್ತೊಂದು ಅಧಿಕಾರವು ಆಳುತ್ತಿರುವಾಗ, ನಾವು ಈ ಸಮಾಜಕ್ಕಿಷ್ಟು, ಆ ಸಮಾಜಕ್ಕಿಷ್ಟು ಎಂದು ಪ್ರತ್ಯೇಕ ಸ್ಥಾನಮಾನಗಳನ್ನು ಕುರಿತು ಜಗಳಾಡಬಹುದು. ದೇಶವು ಸ್ವರಾಜ್ಯ ಹೊಂದಬೇಕೆನ್ನುವಾಗ, ಈ ಮಾತುಗಳಿಗ ಆಸ್ಪದವುಂಟೆ? ಮುಸ್ಲಿಮರಿಗೆ ಬರೇ ವಿಭಾಯಿತಿಯಲ್ಲಿ ಜ್ಯಾರಿಗೆ ಬರುತ್ತಿರುವ ಕರಾರುಗಳಂತೆ ಹೆಚ್ಚಿನ ಮೂಲಕದ ಕರಾರುಗಳಿಗಿಂತ ಇತರ ಭದ್ರತೆಗಳು ಸಾವಿರಾರು ಇರುವಾಗ, ಮಿ। ಜಿನ್ನಾರವರು ಇದನ್ನು ತಿಳಿದೇ ಇದ್ದರೂ, ಇವನ್ನೆ ಕುರಿತಾಗಿ ನಿಷೇಧಿಸಿ ಸಾರುವಾಗ, ಮುಸ್ಲಿಮ ಸಮಾಜದಲ್ಲಿ ಅಷ್ಟು ತಿಳಿಯದಿರುವ ಜನಸಂಖ್ಯೆ ಬಹಳವಿದೆ ಎಂದು ಭಾವಿಸಿಯೇ ಅವರು ಮಾತಾಡುತ್ತಾರೆಂದು ಭಾವಿಸಬೇಡವೆ?

"ನಾನು ಯಾರೊಡನೆಯೂ ಸೆಣಸಾಡುತ್ತಿಲ್ಲ ಹಿಂದುಗಳನ್ನು ದೂರಗೆಡಿಸುವ ಕಾಂಗ್ರೆಸಿನ ನಾಯಕತ್ವವನ್ನೆ ನಾನು ವಿರೋಧಿಸುತ್ತಿರುವುದು ನನ್ನ ಹಕ್ಕುಗಳು ನನಗಿರಬೇಕು, ಅದನ್ನು ಲಿಪಿಬದ್ಧವಾಗಿ ಮಾಡಿಕೊಡಬೇಕು ಎಳೆಯ ಮುಸ್ಲಿಮರು ಸಾಂಪ್ರದಾಯಿಕ"ಗಳ ಶಕ್ತಿ ಮಾತಾಡುವಾಗ, [illegible] ಪಂಡಿತ ಜವಾಹರಲಾಲರಿಗೆ ಎಷ್ಟೋ [illegible] ಹಿಂದೆ ತಿಳಿಸಿದ್ದೇನೆ. ಈಗಲೂ ತಿಳಿ[illegible] ಅವರು ನಮ್ಮೊಡನೆ ಸೇರಿ, ಬಡವರ ಹಸಿವು ದಾರಿದ್ರ್ಯವನ್ನು ದೂರಗೊಳಿಸುವ ಕೊಸನ್ನು ಸಂಕಷ್ಟ ನಿವಾರಣೆ ಮಾಡಬಹುದಾದ ಉಪಾಯಗಳನ್ನು ನಮ್ಮನ್ನು ಸೇರಿಯೆ ಕೂಡಲಿ ರಚನಾಶೀಲ ಕಾರ್ಯಕ್ರಮವನ್ನು ಕೈಗೊಳ್ಳಲಿ ಸರ್ವರೂ ಸಮಾನರು, ಸೋದರರು, ಸ್ವತಂತ್ರರು ಎಂಬ ಮಾತುಗಳನ್ನು ಮುಸ್ಲಿಮ್ ಲೀಗ್ ಸಾರುತ್ತದೆ. ನಾವು ನಮ್ಮ ಬಂಧುಗಳಾದ ಹಿಂದುಗಳೊಡನೆ ಮುಂದರಿಸಿ, ಇತರರೊಡನೆ ಹೆಜ್ಜೆ ಇಡುತ್ತ ಸ್ವರಾಜ್ಯದ ಕಡೆಗೆ ನಡೆಯುವೆವು

ಸಿದ್ಧರು ಆದರೆ, ಹಿಂದುಗಳು ಆಳುವವರಾಗಬಾರದು. ಹಿಂದೂ ದೇಶದ ಜನರೇ ಆಳುವವರಂತಾಗಬೇಕು ಇದೇ ಮುಸ್ಲಿಮ ಲೀಗಿನ ಹೇಳಿಕೆ.

"ಮುಸ್ಲಿಮ ಲೀಗಿನ ಮಾತನ್ನು ಹಿಂದುಗಳು ಲಾಲಿಸಲಿ ಲಾಲಿಸದೆ ಹಿಂದುಗಳು ದಾರಿಗೆಡದಿರಲಿ ಮುಸ್ಲಿಮ್ ಲೀಗ್ ಕೇಳುವುದೇನು? ತಮ್ಮ ಧರ್ಮ, ಸಂಸ್ಕೃತಿ, ಭಾಷೆ ಮಾತ್ರವಲ್ಲದೆ ರಾಜಕೀಯ ಹಕ್ಕುಗಳೂ ಸುರಕ್ಷಿತವಿರಬೇಕೆಂದು

"ಭವಿಷ್ಯ ಇತಿಹಾಸದಲ್ಲಿ ಮುಸ್ಲಿಮರು ತಮ್ಮ ಕರ್ತವ್ಯವನ್ನು ನಡೆಸಿ, ಸಮಸ್ತರೂ ಮನ್ನಣೆಗೆಯ್ಯುವ ಭಯದಿಂದ ನೋಡುವಂತಹ ಸ್ಥಾನವನ್ನು ಲಭಿಸಿಕೊಳ್ಳುವರು."

ಮೇಲಣ ವಾಕ್ಯಗಳು ಮಿ। ಜಿನ್ನಾರವರು ಹಮ್ಮದಾಲಿ ಪಾರ್ಕ ಉದ್ಯಾನದಲ್ಲಿ ಕೊಟ್ಟ ಭಾಷಣದಿಂದಾಗಿವೆ

ಇನ್ನು ಪ್ರೊಫೆಸರ್ ಹ್ಯುಮಾಯುನ್ ಕಬೀರರವರು ಏನನ್ನುತ್ತಾರೆ, ನೋಡೋಣ

ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವಿಲ್ಲದೆ, ರಾಜಕೀಯ ಸ್ವಾತಂತ್ರ್ಯ ಎಂಬುವ ವ್ಯರ್ಥ ಆದರೆ, ರಾಜಕೀಯ ಸ್ವಾತಂತ್ರ್ಯವೇ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳಿಗೆ ಆಸ್ತಿವಾರವಾಗಿದೆ ರಾಜಕೀಯ ಸ್ವಾತಂತ್ರ್ಯ ದೊರೆತ ಕೂಡಲೆ ಸಾಂಸ್ಕೃತಿಕ ಸಮಾನತೆಗೆ ಸಾಧನೆಗಳಾಗುವುವು, ಇವೆರಡೂ ಒಂದಾಗಿ ಸಾಮಾಜಿಕ ನ್ಯಾಯವೂ ಸ್ವಾತಂತ್ರ್ಯವೂ ಸಿದ್ಧವಾಗುವುವು ಕಳೆದ 150 ವರ್ಷಗಳ ಇತಿಹಾಸವು ಮುಸಲ್ಮಾನರನ್ನು ಕುರಿತು ಏನು ಸಾರಿದೆ ಎಂಬುದು ನಿರ್ವಿವಾದವಾಗಿದೆ.

ನಾನಾ ಸಮಾಜಗಳೊಳಗೆ ಕರಾರು ಒಪ್ಪಂದಗಳೂ ಎರಡು ಪಕ್ಷ ಸ್ಪರ್ಧೆ ಒಂದ ವೇಳೆ ಇವು ದೊರೆತರೆ ಸಹ, ಮುಸ್ಲಿಮರಿಗ ಭದ್ರತೆಯುದ್ದೀತೆಂದು ನಾನು ಖಂಡಿತವಾಗಿ ಹೇಳಲಾರೆನು. ನಮ್ಮ ದೇಶವು ಜಗತ್ತಿನ ಒಂದು ಭಾಗ ಜಗತ್ತಿನ ಪ್ರತಿಯೊಂದು ಚಳವಳವೂ ನಮ್ಮ ದೇಶದ ವಿದ್ಯಮಾನಗಳನ್ನು ತಿದ್ದದೆ ಇರಲಾರದು

ಇಡೀ ಜಗತ್ತಿನ ಕಡೆಗೆ ನೋಡಿರಿ ನಮ್ಮಲ್ಲಿನ ನಿರುದ್ಯೋಗತೆ, ದಾರಿದ್ರ್ಯಗಳನ್ನು ನೋಡಿರಿ ಇಂಗ್ಲಂಡು ಜರ್ಮನಿಗಳಲ್ಲಿನ ವಿದ್ಯಮಾನಗಳೊಡನೆ ಇವನ್ನು ಹೋಲಿಸಿರಿ ಹಿಂದೀ ಸಮಾಜವನ್ನೆ ಪುನಃ ತಿದ್ದಿ ತರಬೇಕಾಗಿದೆ ಸರ್ವರೂ ಒಂದಾಗಿ ಸೋದರ ಭಾವದಿಂದ ಇರುವುದಕ್ಕೆ ಸ್ವಾತಂತ್ರ್ಯವನ್ನು ಸಾಧಿಸಬೇಕಾಗಿರುವುದು ಮೊದಲನೆ ಕರ್ತವ್ಯ.

ಮುಸ್ಲಿಮ ವಿದ್ಯಾರ್ಥಿಗಳಿಗೆ ಎಂದೇ ಪ್ರತ್ಯೇಕವೊಂದು ಸಮ್ಮೇಲನವೇತಕ್ಕೆ? ಜಿನ್ನಾ ಸಾಹೇಬರು ಇದನ್ನು ತೆರೆದು ಅಧ್ಯಕ್ಷರಾಗಿ ಈ ದಿನ ಮೆರೆಯುತ್ತಾರೆ ನಿಪುಣರೂ ದಕ್ಷರೂ ಆಗಿರುವ ಜಿನ್ನಾರವರು, ತಮ್ಮ ಸಮಾಜವನ್ನು ಇತರರೊಡನೆ ಸ್ಪರ್ಧೆಗೆ ನಿಲ್ಲಿಸಲೊಪ್ಪುವುದಿಲ್ಲ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅವರು ಹೋರಾಡದೆ, ಮೊದಲು ಬಲಗೊಳ್ಳಿರೆಂದೇ ಹೇಳುತ್ತಾರೆ ನಮ್ಮ ಸಮಾಜಕ್ಕೆ ಪ್ರತ್ಯೇಕವಾದ ಹಕ್ಕು ಮೊದಲಾದುವನ್ನು ಕೊಟ್ಟು ನಡಿಸಬೇಕೆನ್ನುವುದು ತಪ್ಪಾದರೂ, ಅದನ್ನು ಕೊಟ್ಟರೂ ನಾವು ನಮ್ಮ ಸಾಧನೆಗಳನ್ನೆಲ್ಲ ಕಳೆದುಕೊಳ್ಳುವಂತಾಗುವುದು

ವಿದ್ಯಾರ್ಥಿಗಳು ಹೀಗೆ ಎರಡು ದಾರಿಗಳ ನಡುವೆ ನಿಂತಿರುವರು. ಒಂದು ಕಡೆ ನಡೆದರೆ ಅವರು ಸ್ವಾರ್ಥವನ್ನು ಕೆಲವರ ಮಟ್ಟಿಗೆ ಮಾತ್ರ ಸಾಧಿಸಬಹುದು; ಈ ದಾರಿ ಅಂತರ್ಸಾಮಾಜಿಕ ಕರಾರುಗಳ ಮೂಲೆಗೆ ಹಾದುಹೋಗುವುದು ಮತ್ತೊಂದು ದಾರಿ, ಯಾವಾಗಲೂ ಮೋಸ ಹೊಂದ ದಾರಿಗೆಟ್ಟ ಮಹಾಜನ ಸಮೂಹವನ್ನು ಉದ್ಧರಿಸುವುದಕ್ಕೆ ಸಹಾಯಕವಾಗಿದೆ "ಇತರ ದೇಶಗಳ ಇತರ ಸಮಾಜಗಳ ಬಾಂಧವರೊಡನೆ ಮುಸ್ಲಿಮ ವಿದ್ಯಾರ್ಥಿಗಳು ಒಂದೇ ಸಾಲಾಗಿ ನಿಂತು, ಜಗತ್ತಿನ ಸಂಕಷ್ಟಗಳನ್ನು ನಿವಾರಿಸಬೇಕಾಗಿದೆ ಹೀಗಿರುವುದರಿಂದ, ಮುಸ್ಲಿಮ ವಿದ್ಯಾರ್ಥಿಗಳು ತಮ್ಮ ಸಮಾಜಕ್ಕಾಗಿ ಮಾತ್ರ ಒಕ್ಕಟ್ಟು ಮಾಡಿಕೊಳ್ಳುವ ಪ್ರಯತ್ನಗಳಲ್ಲಿ ಸೇರಿ ಪ್ರತ್ಯೇಕವಾಗದೆ, ಇಡೀ ಹಿಂದೂದೇಶದ ಎಲ್ಲ ಜಾತಿಗಳ ಎಲ್ಲ ವಿದ್ಯಾರ್ಥಿಗಳೊಡನೆ ಸೇರಿ ಒಂದಾಗತಕ್ಕದು" ಈ ಭಾಷಣ ಮಾಡಿದ ಬಳಿಕ, ಈ ಕೊನೆಯ ತೀರ್ಮಾನವನ್ನೆ ಸರ್ವರೂ ಮಂಜೂರು ಮಾಡಿದರು. ಅಲಿಘರದಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆ ಪ್ರಬಲವಾಗಿತ್ತು

ಸಕ್ಕರೆ ಕಾರ್ಖಾನೆಗಳ ದುಸ್ಥಿತಿ.

ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿನ ಸಕ್ಕರೆ ಕಾರ್ಖಾನೆಗಳ ಕಾನೂನಿನ ಪರಿಣಾಮಗಳು—ಶೋಚನೀಯ ಸ್ಥಿತಿ

೫೫ ಕಾರ್ಖಾನೆಗಳು ರಾಜೀನಾಮೆ ಕೊಟ್ಟಿವೆ

ನಮ್ಮ ದೇಶದಲ್ಲಿ ಒಟ್ಟು ೧೫೦ ಸಕ್ಕರೆ ಕಾರ್ಖಾನೆಗಳಿವೆ ಇವುಗಳಲ್ಲಿ ೮೨ ಕಾರ್ಖಾನೆಗಳು ಒಂದಾಗಿ ಸಕ್ಕರೆ ಸಿಂಡಿಕೇಟನ್ನು ಮಾಡಿಕೊಂಡಿದ್ದುವು ಈಗ ಇವುಗಳಲ್ಲಿ ೫೫ ರಾಜೀನಾಮೆ ಕೊಟ್ಟಿವೆ!

ಬಿಹಾರದಲ್ಲಿ ಇತ್ತೀಚೆಗೆ ಬಂದಿರುವ ಈ ಕಾರ್ಖಾನೆಗಳನ್ನು ಕುರಿತಿರುವ ನಿಯಮಗಳೂ ಅವನ್ನನುಸರಿಸಿ ಸಂಯುಕ್ತ ಪ್ರಾಂತ್ಯದ ಅಲ್ಲಿಗಲಿರುವ ಕಾನೂನೂ ಈ ಕಾರ್ಖಾನೆಗಳಿಗೆ ಸರಿಯಾಗಿಲ್ಲವೆಂದು ತೋರಿದೆ ತಯಾರಿಸುವವರಿಗೂ ಗಿರಾಕಿಗಳಿಗೂ ಒಂದೇ ಬಗೆಯ ಬೆಲೆ ದೊರೆಯುವಂತೆ ಮಾಡಲು, ಕಾರ್ಖಾನೆಗಳು ಒಂದಾಗಿ ಈ ಸಿಂಡಿಕೇಟನ್ನು ಮಾಡಿಕೊಂಡಿದ್ದುವು ಆದರೆ ಕಾನೂನು ಇದನ್ನು ಗಣನೆಗೆ ತಾರದೆ ತನ್ನ ನಿಯಮಗಳನ್ನು ಬೇರೆ ರೀತಿಯಲ್ಲಿ ವಿಧಾಯಿಸಿಯದೆ ಸಕ್ಕರೆಗೆ ಮಣಕ್ಕೆ ೫ ರಿಂದ ೭ ರೂಪಾಯಿ ವರೆಗೆ ಹಿಂದೆ ಕ್ರಯವಿದ್ದು, ಈ ಸಿಂಡಿಕೇಟು ಉಂಟಾದುದೇ ಮಣಕ್ಕೆ ೯೦ ರೂಪಾಯಿ ಬೆಲೆಯಾಯಿತು ಇತರ ಪ್ರಾಂತಗಳಲ್ಲಿರುವ ಈ ಸಿಂಡಿಕೇಟಿನ ಮೆಂಬರರಲ್ಲದ ಕಾರ್ಖಾನೆಗಳು ಬೆಲೆ ಇಳಿಸಿ ತಮ್ಮ ಸಕ್ಕರೆ ಮಾರ ಬಾಗ್ಯ ಕಾನೂನಿಗ ಒಳಪಟ್ಟಿರುವ ಕಾರ್ಖಾನೆಗಳು ಏನೂ ಮಾಡಲಾರದೆ ನಷ್ಟ ಹೊಂದಬೇಕಾಗುವುದು ಹೊರ ಪ್ರಾಂತ್ಯಗಳಲ್ಲಿ ಇನ್ನು ಬೇರೆ ಕಾರ್ಖಾನೆಗಳು ಉಂಟಾಗಬಹುದು ಕಳೆದ ಮಾರ್ಚಿಯಲ್ಲಿ ತಿಂಗಳಿಗೆ ೧॥ ಲಕ್ಷ ಮಣಗಳು ವಿಕ್ರಿ ಮಾರಾಟವಾಗುತ್ತಿದ್ದ ಸಕ್ಕರೆಯು ಈಗ ೫೨೦೦೦ (ನವಂಬರ) ಮಣ ಮಾತ್ರ ಮಾರಾಟವಾಗಿದೆ

ಇದೀ ಹಿಂದೂದೇಶಕ್ಕೆ ಅನ್ವಯಿಸಲಾದ ಕಾನೂನನ್ನು ಸೃಷ್ಟಿಸಿ ನಾನಾ ಬಾಧೆಗಳು ಉಂಟಾಗಬಹುದೆಂದು ಎಲ್ಲ ಕಾರ್ಖಾನೆಗಳು ತಿಳಿಯಲೇ ಬೇಕಾಗಿದೆ. ಇದೇ ದೇಶದಲ್ಲಿ ಉಂಟಾಗುವ ಸಕ್ಕರೆಯಲ್ಲಿ ನೂರಕ್ಕೆ ೫೦ರಂತೆ ಇವೆರಡು ಪ್ರಾಂತ್ಯಗಳಲ್ಲಿ ಮಾತ್ರ ತಯಾರಾಗುತ್ತದೆ

ಈ ವರ್ಷ ಕಬ್ಬಿನ ಪೈರು ನೇಕಡಾ ೧೦ ರಷ್ಟು ಇಳಿದಿದೆ ಎಂದೂ ಕೆಲವು ಕಡೆಗಳಲ್ಲಿ ನೇ ೩೦ರಷ್ಟು ಇಳಿದಿದೆಯೆಂದೂ ಗೊತ್ತಾಗಿದೆ. ಈ ವರ್ಷದಲ್ಲಿ ಇಲ್ಲಿ ಉಂಟಾಗುವ ಸಕ್ಕರೆಯು ಕಳೆದ ವರ್ಷದಲ್ಲಾದುದಕ್ಕಿಂತ ಹೆಚ್ಚಾಗದು ಎಷ್ಟೋ ಕಡಮೆಯಾದೀತೆಂದೂ ಅಂದಾಜು ಬೆಲೆ ಏರಬಹುದು, ತುಂಬ ಸ್ಪರ್ಧೆಯೂ ಉಂಟಾಗಲು ಅವಕಾಶವಿದೆ

ನಮ್ಮ ವ್ಯಾಪಾರ ಸ್ಥಿತಿ.

ಒಟ್ಟಾವಾ ಕರಾರಿನ ಹಾವಳಿಯು ಇನ್ನೂ ಮುಗಿದಿಲ್ಲ.

ಕೃತಕ ವಸ್ತುಗಳ ದೆಸೆಯಿಂದ ನಮ್ಮ ಮೂಲ ವಸ್ತುಗಳನ್ನು ಕೊಳ್ಳುವುದಿಲ್ಲ. ಸಾಟಿಯ ಮೂಲಕ ವ್ಯಾಪಾರ ಹೆಚ್ಚುತ್ತದೆ ಹೊರತು, ಸುಂಕದ ಹಾವಳಿಯಿಂದ ಕಡಮೆಯೇ ಆಗುತ್ತಲಿದೆ.

ಸರಕಾರವು ಮಾತೆತ್ತಬೇಡವೆ? ಹೊಸ ಕರಾರುಗಳಾಗಬೇಡವೆ?

ಜರ್ಮನಿ, ರುಮೇನಿಯಾ, ಚೆಕೊಸ್ಲೊವೆಕಿಯಾಗಳೊಳಗೆ ಕರಾರಾಗಿ,ಕೊನೆಯ ಎರಡೂ ದೇಶಗಳಲ್ಲಿ ಎಣ್ಣೆ ಕಾಳುಗಳನ್ನು ಬೆಳೆಸಿ, ಜರ್ಮನಿಗೆ ಮಾರುವುದಾಗಿ ನಿರ್ಧಾರವಾಗಿ ಒಪ್ಪಂದವಾಯಿತು ಹಾಗೆಯೆ ಅರ್ಜೆಂಟಿನಾಯಿನಾ ಇವುಗಳೊಡನೆ 'ಜರ್ಮನಿಯು ಕರಾರು ಮಾಡಿಕೊಂಡು ಸರಕುಗಳನ್ನು ಒದಗಿಸಿಕೊಳ್ಳುವುದೆಂದಾಯಿತು (ಸಾಟಿ) ಇದರಿಂದ ನಮ್ಮ ದೇಶದಿಂದ ಜರ್ಮನಿಗೆ ರಫ್ತಾಗುವ ಸರಕು ಕಡಮೆಯಾಗದೆ ಇರಲಾರದು ಎಂದರೆ, ಇವಿಷ್ಟು ದೇಶಗಳಿಗೆ ನಮ್ಮಲ್ಲಿಂದ ಮಾರಲಾಗುವ ಸರಕು ಪರಿಮಾಣದಲ್ಲಿ ಕುಂದುವುದು ಖಂಡಿತವಾಗಿದೆ

ಪರದೇಶಗಳೊಡನೆ ನಮ್ಮದೇ ಮಾತ್ರವಲ್ಲದೆ ಇತರ ದೇಶಗಳ ವ್ಯಾಪಾರ ಸ್ಥಿತಿಯು ಹೇಗಿದೆ ಎಂದು ಅಲ್ಲಿಂದ ಜಗ್ಗಾಗ ವೃತ್ತಾಂತ ಸಂಗ್ರಹ ಮಾಡಲು ಸರ್ ಪುರುಷೋತ್ತಮ ದಾಸರಂತಹರು ಸರಕಾರಕ್ಕೆ ಬರೆದುಕೊಂಡು ಒಂದು ವರ್ಷದ ಮೇಲಾಯಿತು. ಪ್ರಾಂತಿಕ ಸರಕಾರಗಳಾದರೂ ಈಗ ಇಂತಹ ವರದಿಗಳನ್ನು ಸಂಗ್ರಹಿಸಿಕೊಂಡು, ಕಮ್ಮಿಯಾಗುವಷ್ಟು ಪ್ರಯತ್ನಿಸಿ, ಹೆಚ್ಚಿನ ವ್ಯಾಪಾರವು ಮುಂದೆ ನಡೆಸಂತೆ ನೋಡಿಕೊಳ್ಳಬೇಕಾಗಿದೆ

ನಮ್ಮ ದೇಶದ ಮುಖ್ಯ ಗಿರಾಕಿಗಳಾಗಿರುವ ಇತರ ದೇಶಗಳೊಡನೆ ವ್ಯಾಪಾರಕ್ಕಾಗಿ ಪ್ರತ್ಯೇಕ ಕರಾರುಗಳಾಗವೆ ಇನ್ನು ಉಳಿದಿಲ್ಲ ಒಟ್ಟಾವಾ ಕರಾರಾದ ದಿನದಿಂದ ಇತರ ರಾಜ್ಯಗಳು ನಮ್ಮಿಂದ ದೂರವಾಗುವುದಕ್ಕೆ ಸಹಾಯ ಮಾಡಿಯೆ ಇವೆ ಕೆಳಗಣ ಅಂಕಸಂಖ್ಯೆಗಳಿಂದ ಸ್ಪಷ್ಟವಾಗುವುದೇನು?

	೧೯೩೫–೬ ನಮ್ಮ ರಫ್ತುಗಳು	೧೯೩೬–೭
ಜರ್ಮನಿ	೯ ೫	೮ ೪
ಫ್ರಾನ್ಸು	೩ ೧	೭ ೮
ಅಮೇರಿಕ	೧೬ ೧	೧೨ ೪
ಇಟಲಿ	೩ ೫	೪ ೬

ಕೋಟಿ ರೂಪಾಯಿ

ಇಂತಹ ಮುಖ್ಯ ಗಿರಾಕಿಗಳನ್ನು ನಾವು ದೂರವಿಡಲಾದೀತೆ?

ಇನ್ನೊಂದು ವಿಷಯವಿದೆ ನಾವು ಮುಖ್ಯವಾಗಿ ಮಾರುವ ಹತ್ತಿ, ಸೆಣಬು, ರಬ್ಬರು, ಚರ್ಮ ಎಣ್ಣೆ ಕಾಳುಗಳು ಮೊದಲಾದುವು ಈಗ ಇತರ ವಸ್ತುಗಳಿಂದ ಗಿರಾಕಿಗಳನ್ನು ಕಳೆದುಕೊಳ್ಳುತ್ತವೆ ರೆಯೊನ್ (ಕೃತಕ ರೇಷ್ಮೆ) ಜಪಾನ್ ಜರ್ಮನಿ, ಅಮೇರಿಕ, ಇಟಲಿಗಳಲ್ಲಿ, ನಮ್ಮ ಹತ್ತಿ ಸೆಣಬುಗಳ ಬದಲಾಗಿ ಹೆಚ್ಚಾಗಿದೆ ಸೋಯಾ ಅವರೆ ಕಾಳಿನ ಎಣ್ಣೆ, ತಾಳೆಯೆಣ್ಣೆ ಮೀನೆಣ್ಣೆಗಳೇ ಹೆಚ್ಚುತ್ತ ಬಂದ[illegible] ನಮ್ಮಲ್ಲಿನ ಎಣ್ಣೆಕಾಳುಗಳಿಗೆ ಗಿರಾಕಿಗಳ ಕಡಮೆಯಾಗುತ್ತ ಬರುತ್ತಾರೆ. ಜಪಾನದಲ್ಲಿ ಹೊಲ್ಲೆಂಡು ಬೆಳೆಸುವ ನಾನಾ ನಾರುಗಿಡಗಳ ದೆಸೆಯಿಂದ ಹತ್ತಿಗೆ ಗಿರಾಕಿಗಳಿಲ್ಲ ಜರ್ಮನಿಯು ನಮ್ಮಿಂದ ೧೫ ಲಕ್ಷ ಟನ್ನು ಸೆಣಬು ಕೊಂಡುಕೊಳ್ಳುತ್ತಿತ್ತು; ಈ ನಾರುಗಳನ್ನೆ ಈಗ ಪಡೆದ ನಮ್ಮ ಸೆಣಬನ್ನು ಬರೇ ೮ ಲಕ್ಷ ಟನ್ನು ಮಾತ್ರ ಈಗ ಆಮದು ಮಾಡುತ್ತಿದೆ ಪ್ರತಿಯೊಂದು ದೇಶವೂ ತನಗೆ ಗಿರಾಕಿಗಳನ್ನು ಹುಡುಕಿಕೊಂಡು ಅವರನ್ನು ಕಟ್ಟಿಕೊಳ್ಳುವಾಗ, ನಾವು ಮಾತ್ರ ಸುಮ್ಮನಿರುವುದು ವಿಹಿತವೆ?

ನಾಗರಿಕರೆಂದೆನ್ನುವವರ ನಾಗರಿಕತೆ

ಲಂಡನ್ ನಗರದ ವಿಲಾಸ ಮಂದಿರಗಳು

By: T. W. Mercer in "Reynolds News." (ಇವರ ಲೇಖನದ ಆಧಾರದಿಂದ.)

ಸಿನೆಮಾ, ನಾಟಕ, ಕ್ಲಬ್ ಮುಂತಾದ ವಿನೋದ ಮಂದಿರಗಳು ಲಂಡನ್ ನಗರದಲ್ಲಿ ಅಗಣಿತ ನಮ್ಮಲ್ಲಿ ಹೊಟೆಲ್ ಎಂದೆನ್ನುವವುಗಳೂ ಅಲ್ಲಿ ವಿಹಾರ ಮಂದಿರಗಳೇ. ಹೊಟೆಲುಗಳಲ್ಲಿ ತಿಂಡಿ ತೀರ್ಥಗಳಲ್ಲದೆ ಇತರ ಎಲ್ಲಾ ವಿಚಾರಗಳೂ ಅಲ್ಲಿ ಇವೆ ತಿಂದು ತೇಗಿದ ಮಂದಿ ಆನಂದದಿಂದ ಅಲ್ಲೇ ಕೆಲ ಹೊತ್ತು ಕಾಲಕಳೆಯಬಹುದು ಇನ್ನು ಕ್ಲಬ್ಬುಗಳು—

ಅಲ್ಲಿ ಮಾದಕ ದ್ರವ್ಯಪಾನ, ತಿಂಡಿ, ವಿಲಾಸ ಇವುಗಳು ಹೆಚ್ಚು. ನಾಟಕ ಮಂದಿರಗಳಲ್ಲಿ ನಾಟಕ, ನಗೆಯಾಟ, ನರ್ತನಗಳು ನಡಿಯುತ್ತಿರುತ್ತವೆ. ಸಿನೆಮಾ ಗೃಹಗಳು ಸಿನೆಮಾದ ಮೂಲಕ ಮಂದಿಗೆ ಆನಂದವನ್ನೊದಗಿಸುತ್ತವೆ. ಇವುಗಳಲ್ಲಿ ಮೊದಲನೆಯದನ್ನುಳಿದು ಉಳಿದ ಮೂರರ ವಿಚಾರವನ್ನು ತಿಳಿಯುವುದು ಅಗತ್ಯ ಕಾರಣ ಅವು ಅವರ ನಾಗರಿಕತೆಯನ್ನು ಸರಿಯಾಗಿ ಸೂಚಿಸಿ ತೋರಿಸುತ್ತವೆ.

ನಾಟಕ ಮಂದಿರಗಳ ವಿಚಾರ ಅಷ್ಟೊಂದು ಅಗತ್ಯವಿಲ್ಲದಿದ್ದರೂ ಅಲ್ಲಿನ ನರ್ತನಗಳ ಕುರಿತಾಗಿ ತಿಳಿಯುವುದು ಅಗತ್ಯ. ಇವುಗಳಲ್ಲಿ ನರ್ತನವೆಂಬುದು ಕ್ಲಬ್ ಎಂಬಲ್ಲಿ ವಿಚಿತ್ರವಾಗಿಯೂ, ವಿಶೇಷವಾಗಿಯೂ ನಡಿಯುತ್ತಿರುತ್ತದೆ.

ನರ್ತನವು ಮನಸ್ಸಿಗೆ ಆನಂದವನ್ನೂ ಉಲ್ಲಾಸವನ್ನೂ ಕೊಡುತ್ತಿರುವುದು ದ ಈ ಗಾನ ನರ್ತನಗಳನ್ನು ನೋಡಿ ಆನಂದಪಟ್ಟು ಮದ್ಯಪಾನದಲ್ಲಿ ತಲ್ಲೀನರಾಗಲು ಧನಾಢ್ಯರು ಸದಾ ಕಾಯುತ್ತಿರುವರು. ಇವರು ಕುಡಿದು ಮತ್ತರಾಗಿ ನಾಟಕ—ನರ್ತನಗಳನ್ನು ನೋಡಿ— ಬೇಕಾದ ಹಣವನ್ನು ಚೆಲ್ಲಿ ನರ್ತಕಿಯರೊಡನೆ ವಿಲಾಸದಿ ಕಾಲಹರಣ ಮಾಡುವ ಪದ್ಧತಿ ಹೀಗೆ ನರ್ತಕನ್ನು ಬರುವ ವಯಸ್ಸು ಎಲ್ಲಾ 40 ರಿಂದ 50 ವರುಷಗಳೊಳಗಿನ ಮಂದಿ.

ಇಂಗ್ಲಾಂಡಿನ ನರ್ತನ ಮಂದಿರಗಳಲ್ಲಿನ ನರ್ತನವು ಅಧೀ ತರ ವಿಶೇಷವೆಂದೆನ್ನುವಿರಾದರೆ ಅದು ಸನ್ಯಾಸಿಗೆ ಕಾಮವಾಸನೆಯನ್ನು ಹತ್ತಿಸುವಂತಹದು. ಸುಂದರ ಸ್ತ್ರೀಯರು, ತಮ್ಮ ದೇಹದ ಚೆಲುವನ್ನು ತೋರಿ, ಮೈಮೇಲೆ ಒಂದು ಚೂರೂ ಬಟ್ಟೆ ಇರದೆ ಹುಟ್ಟಿದ ಮಗುವಿನಂತೆ ಪೂರ್ಣವಾಗಿ ಬತ್ತಲೆಯಾಗಿ ರಂಗಭೂಮಿಯ ಮೇಲೆ ಬಂದು ನರ್ತಿಸುವ ರೂಢಿ. ಇಂಗ್ಲೀಷ್ ನರ್ತನವೆಂದರೆ ಭಾರತೀಯ ನೃತ್ಯದಂತೆ ಕೈಗಳ ಭಂಗಿ ದೇಹದ ಅಲುಗಾಟಗಳು ಮಾತ್ರವಲ್ಲದೆ ಕಾಲುಗಳನ್ನು ಬೇಕು ಬೇಕಾದಂತೆ ಮೇಲಕ್ಕೂ ಬದಿಗೂ ಎತ್ತುವ ವಿಚಿತ್ರ ನರ್ತನೆಗಳಿಂದ ಕೂಡಿದೆ. ಹಾಗಿರಲು ಬಲಿತ ದೇಹದ 30 ವರುಷಕ್ಕೆ ಹತ್ತಿರವಾದ ನವಯೌವನಯುತ ಸುಂದರಿಯರು ತಮ್ಮ ದೇಹದ ಸಂಪೂರ್ಣ ಸೌಂದರ್ಯವನ್ನು ತೋರಿ ಮುದುಕರಲ್ಲಿ ಕಾಮ ಜ್ವರವನ್ನುಂಟುಮಾಡದಿರಲಿಕ್ಕಿಲ್ಲ.

? ? ?

ಇಂತಹ ನರ್ತನಗಳು ಹೆಚ್ಚುಕಡಿಮೆ ಎಲ್ಲಾ ನಾಟಕ ಮಂದಿರಗಳಲ್ಲೂ ನಡೆದೇ ನಡೆಯುತ್ತವೆ. ಮುಪ್ಪಿನ ಧನಿಕರು ತಮ್ಮಲ್ಲಿನ ಹಣದ ಮತ್ತು ಕುಡಿದ ಮಾದಕ ಪದಾರ್ಥಗಳ ಮತ್ತಿನಿಂದ ಅಲ್ಲಿ ಕೂಡಿದ್ದು ಬತ್ತಲೆಯಾಗಿದ್ದುಕೊಂಡು ಅಂಗಸೌಂದರ್ಯವೆಲ್ಲ ಬಹಿರಂಗವಾಗಿ ತೋರುವ ಮೇಲುಡವನ್ನು ಧರಿಸಿದ ಹುಡುಗಿಯರೊಡನೆ ನಲಿದು ಅತ್ತ ನರ್ತನವಾಗುತ್ತಿದ್ದಂತೆಯೇ ಇತ್ತ ಬೇಕುಬೇಕಾದಂತೆ ವರ್ತಿಸುವರು. ಈ ನರ್ತನಗಳನು ನೋಡುವ ಕುತೂಹಲದಿಂದ ಒಟ್ಟಂಟಿಗರಾಗಿ ಬಂದ ಯುವತಿ ಯುವಕರಲ್ಲಿ ಕೂಡಾ ಇವುಗಳ ದೆಸೆಯಿಂದ ಕಾಮವಾಸನೆಯು ಉಂಟಾಗಿ ಅವರವರೊಳಗೆ ದೃಷ್ಟಿಗಳಾಟ ಆರಂಭವಾಗಿ ಕಾಮನ ಆಟವು ಮೊದಲಾಗುವುದು.

ಇಂತಹ ಮಂದಿರಗಳಲ್ಲಿ ತರುಣಿಯರನ್ನು ಕೆಲಸಕ್ಕಾಗಿ ನೇಮಿಸಿಕೊಳ್ಳುವುದು ಅವರು ಬೇಕುಬೇಕಾದಂತೆ ವರ್ತಿಸಿ ಜನರ ಮನವೊಲಿಸಿ ಸದಾ ಅಲ್ಲಿ ಕೂಡಿರುವಂತೆ ಮಾಡಲು ಈ ಹುಡುಗಿಯರು ರಂಗಭೂಮಿಯ ಮೇಲೆ ಆದೆಂತು ಇರುವರೋ ಅದೇ ರೀತಿ ರಂಗಭೂಮಿಯನ್ನು ಬಿಟ್ಟು ಮಂದಿರದೊಳಗೆ ಅಡ್ಡಾಡುವಾಗಲೂ ಇರುವರು. ಇವರಿಗೆ ಜಗತ್ತಿನ ಅದಾವ ವಿಚಾರಗಳು ತಿಳಿದಿಲ್ಲವಾದರೂ ಕೂಡಾ ಯಜಮಾನನು, ಅಂದರೆ ಮಂದಿರದ ಮ್ಯಾನೇಜರನು ಅಪ್ಪಣೆ ಕೊಡಿಸಿದಂತೆ ತಮ್ಮ ದೇಹವನ್ನು ಪಶುಗಳಂತೆ ಒಡ್ಡಿ ಅದಾರ ಕೈ ಅತ್ತ ನೃತ್ಯಗೀತ ವಿನೋದಗಳು ನಡೆಯುತ್ತಿರುವಾಗ ತಮ್ಮ ದೇಹದ ಅದಾವ ಭಾಗದ ಮೇಲೆ ಸಂಚರಿಸಿ ಸುಮ್ಮನಾಗಿರಲು ಮಾತ್ರ ಅರಿತಿದೆ. ಈ ತಹ ಸ್ತ್ರೀಯರು ದಿನದಲ್ಲಿ ಹೆಚ್ಚು ಕಡಿಮೆ ಹನ್ನೆರಡು ತಾಸ ಗಳ ಕಾಲ ಹೀಗೆ ಬತ್ತಲೆಯಾಗಿಯೇ ಇರುವರು. ಕಾರಣ—ವಿನೋದ ವಿಚಾರಗಳೆಲ ಸ ಜೆ ಆದಕ್ಕೆ ಆರ ಭವಾಗುತ್ತದೆ.

ಇದು ಹೊಲಸೇ ಎಂದು ಕೊಚ್ಚಿಕೊಳ್ಳುವವರು—ಅಲ್ಲಿನ ನಾಟಕ ಮಂದಿರಗಳ ಮಂದಿ ಇದು ಆನಂದವೆಂದು ಅದನ್ನ ನೋಡಿ ಪರು ಅಲ್ಲಿನ ಮಂದಿ. ಇದು ಉತ್ತಮ ತೆರನ ನೃತ್ಯವೆಂದು ಹೊಗಳಿಕೊಳ್ಳುವವರ ಅಲ್ಲಿನ ನಾಗರಿಕರು. ಇಂತಹ ಸ್ಥಳಗಳಲ್ಲಿ ವಿಷಯಸುಖವನ್ನು ಪಡೆದುಕೊಂಡು ಖರ್ಚುಮಾಡಿತಾವು ವಿದ್ಯೆ ಕಲಿಯುತ್ತಿರುವೆವು ಎನ್ನುವರು ಭರತ ಖಂಡದ ಸ್ತ್ರೀ ಪುರುಷರು ಇದರ ಕೊನೆ ಯೆಂದರೆ ಹಿಂದೂದೇಶದ ಶ್ರೇಷ್ಠ ಕುಟುಂಬದಲ್ಲಿ ಜನಿಸಿ ಅಲ್ಲಿನ ಅಲ್ಲರೊಡನೆ ಪ್ರೇಮವನ್ನು ಕಂಡೆನೆಂದು ಸಾರುವುದು ನಮ್ಮ ಭಾರತಸ್ತ್ರೀಯರ ವಿದ್ಯೆ!

ಇದೀಗ ಇಂತಹ ನೃತ್ಯಗಳು ನಿಲ್ಲಬೇಕೆಂಬ ಯತ್ನಗಳಾಗುತ್ತಿವೆ. ನಗರದ ಬಿಷಪರು ಇದರ ವಿರುದ್ಧವಾದ ಚಳವಳಿಯನ್ನು ಹೂಡಿದ್ದಾರೆ. ಆದರೆ ಧರ್ಮಗುರುಗಳು, ಧರ್ಮಮಂದಿರಗಳೊಳಗೆ, ಧರ್ಮದ ಮೇಲಿನ ಅಭಿಮಾನ-ಭಕ್ತಿ, ಶ್ರದ್ಧೆಗಳಿಂದ ಹಾಗೂ ಧರ್ಮಗುರುಗಳಲ್ಲಿನ ಭಕ್ತಿಯಿಂದ, ಬಂದಾಗ ಅಂತಹ ಧರ್ಮಗುರುಗಳೆನ್ನುವರೇ ಅತ್ಯಾಚಾರವನ್ನು ಮಾಡುತ್ತಿರುವಲ್ಲಿ ಧರ್ಮಗುರುಗಳಿಂದ ಬಿಷಪರು ಅದೇ ಕೆಲಸಕ್ಕೆ ಕೈಹಾಕ್ಕಿ-ತನ್ನ ಮಂದಿಯ ಮೂರ್ಖತೆಯನ್ನು ನಿಲ್ಲಿಸಲು ಯತ್ನಿಸುತ್ತಿರುವರೋ ತಿಳಿಯದು. ಅಂತೂ ಇಂತಹ ಉತ್ತಮ ಕೆಲಸದಿಂದ ತನ್ನ ದೇಶದ ಪ್ರಜೆಗಳಿಗೆ ದಾರಿ ತೋರಿಸಿ ಜಗತ್ತಿನ ಅನೇಕಾನೇಕ ಧರ್ಮಗುರುಗಳಿಗೆ ಬೆಳಕು ತೋರಿದರು.

ಇತರ ದೇಶೀಯರು ಅನಾಗರಿಕರೆಂದೆನ್ನುವ ಬಿಳಿ ಜನಾಂಗದವರು,— ಭಾರತವು ತನ್ನನ್ನು ತಾನೇ ಆಳಿಕೊಳ್ಳಲು ಶಕ್ತವಾಗಿಲ್ಲವೆನ್ನುವ ಬ್ರಿಟನ್ನು ಅದೆಷ್ಟು ನಾಗರಿಕತೆಯನ್ನೂ, ಶ್ರೇಷ್ಠತೆಯನ್ನೊ ಪಡೆಯುತ್ತಾ ಇದೆ ಎಂದು ತೋರುವುದೇ ಈ ಲೇಖನದ ಸಾರ.

ಕಾಂಗ್ರೆಸ್ಸಿನಲ್ಲಿ ಸೌಮ್ಯವಾದಿ ಮತ್ತು ಗಾಂಧಿ ಮತವೆಂಬ ಪಕ್ಷಗಳುಂಟಾದ ಕುರಿತು ಸೌಮ್ಯವಾದಿ ಶ್ರೀ ಮಸಾನಿಯವರು ತುಂಬಾ ವಿಷಾದಿಸುತ್ತಾರೆ.

ಪ್ರಕಟಣೆ.

ಕಲೆಕ್ಟರರು ಈ ಜಿಲ್ಲೆಯೊಳಗಣ ಸುಪಾರಿ ಹಾನಿ ಕೊಳೆರೋಗ ತಗಲಿದ ಅಡಿಕೆ ತೋಟಗಳ ಸಂದರ್ಶನೆಯ ಬಗೆ ಹೋದಾಗ ಅನೇಕ ವೇಳೆ ರೋಗ ತಗಲಿದ ಮರಗಳಿಗೆ ಚಿಮುಕಿಸಲು ತಯಾರಿಸಿದ ಬೋರ್ಡೊ ಮಿಶ್ರಣವು ಮಳೆಯ ದೆಸೆಯಿಂದ ಚಿಮುಕಿಸಲಿಕ್ಕಾಗದೆ ಹಾಳಾಗಿ ಹೋಗುವುದೆಂದು ಅವರಿಗೆ ತಿಳಿಸಿದ್ದರು. ಈ ಕುರಿತು ಕೃಷಿ ಇಲಾಖಾ ಡೈರೆಕ್ಟರರು "ಬೋರ್ಡೊ ಮಿಶ್ರಣಕ್ಕೆ ೫೦ ಗೆಲನುಗಳಿಗೆ ಅರ್ಧ ರಾತ್ತಲಿನಂತೆ ಸಕ್ಕರೆಯನ್ನು ಬೆರಸುವಿಕೆಯಿಂದ ಸದ್ರಿ ಮಿಶ್ರಣದ ಸಂರಕ್ಷಣೆಯ ಗುಣಗಳನ್ನು ಹೆಚ್ಚಿಸಬಹುದೆಂದು, ಮತ್ತು ಆ ಮಿಶ್ರಣವನ್ನು ಹೆಚ್ಚು ಸಮಯ ಉಳಿಸಿಡಬಹುದೆಂದು" ಕಲೆಕ್ಟರರಿಗೆ ತಿಳಿಸಿದ ಸಂಗತಿಯನ್ನು ಎಲ್ಲರ ತಿಳುವಳಿಕೆಯ ಬಗ್ಗೆ ಪ್ರಕಟಿಸಲು ಕಲೆಕ್ಟರರು ಇಷ್ಟಪಡುತ್ತಾರೆ.

Sd). M. V. Vellodi,
Collector

ಹೊಲಸು ಕಸಗಳ ಉಪಯೋಗ

ಉತ್ತಮ ಗೊಬ್ಬರ ಮಾಡಬಹುದು.

ಬ್ರಿಟನ್ ಇದೀಗ ತನ್ನ ಹೊಲಸೆಂದು ಒಗೆಯುವ ಪದಾರ್ಥಗಳನ್ನು ಉಪಯೋಗಕ್ಕೆ ಬೀಳುವಂತೆ ಮಾಡುವ ಹಂಚಿಕೆಗೆ ಮುಂದಾಗಿದೆ. ಬ್ರಿಟನ್ ವರುಷವರುಷವೂ ಸುಮಾರು ೩೫ ಲಕ್ಷ ಟನನು ಬೆಲೆಬಾಳುವ ವಸ್ತುಗಳನ್ನು ಒಗೆಯುತ್ತಿದೆ. ಇವುಗಳಲ್ಲಿ ಹಾಳಾದ ಲೋಹ ಸಾಮಗ್ರಿಗಳು, ಕಾಗದದ ಚೂರುಗಳು, ಚಿಂದಿ ಬಟ್ಟೆಗಳು, ಕುಪಿ ಚೂರು, ಎಲುಬು, ಬೂದಿ, ಸಾಬೂನು ಮುಂತಾದುವುಗಳು ಕೆಲವು. ಈಗ ಬ್ರಿಟನ್ನಿನ ಹೊಸ ಶೋಧದಂತೆ, ಈ ಪ್ರತಿವರ್ಷವೂ, ಹಾಳಾದುದರಿಂದ ಒಗೆಯಲ್ಪಡುವ ಸುಮಾರು ೧೬೦ ಲಕ್ಷ ಟನ್ ಹೊಲಸಿನಿಂದ ಉತ್ತಮವಾದ ೨೦ ಸಾವಿರ ಟನ್ ಗೊಬ್ಬರವನ್ನು ತಯಾರಿಸಬಹುದಂತೆ. ಇದರಿಂದಾಗಿ ತೆರಿಗೆ ತೆರುವವರಿಗೆ ಸುಮಾರು ೩೫ ಸಾವಿರ ಪವನುಗಳ ಆದಾಯವಿದೆಯಂತೆ.

ಲಂಡನ್ ನಗರವೊಂದರಲ್ಲೇ ವರುಷಂಪ್ರತಿ ಒಗೆಯಲ್ಪಡುವ ಹೊಲಸು ೧೨೦ ಲಕ್ಷ ಟನ್ನುಗಳು, ಅಂದರೆ ಸಾಧಾರಣ ೩೫೦ ಸಾವಿರ ಪವನುಗಳ ಬೆಲೆಯ ವಸ್ತು. ಇದರ ಉಪಯೋಗವನ್ನು ಹಿಂದೂದೇಶದಲ್ಲೂ ಮಾಡಿದರೆ ನರಳುವ ಭಾರತಕ್ಕೆ ಕೊಂಚ ನೆಮ್ಮದಿಯಾದರೂ ಆಗಬಹುದು.

ವಾರ್ತೆಗಳು

ಹರಿಜನ ಸೇವೆಗಾಗಿ ಅಖಿಲ ಭಾರತ

ಹರಿಜನ ಸೇವಾ ಸಂಘದವರು ಸರ್ವೆಂಟ್ಸ್ ಒಫ್ ಇಂಡಿಯದ ತರದಲ್ಲಿ ಒಂದು ಯೋಜನೆಯನ್ನು ಮಾಡುವರಂತೆ. ಹರಿಜನ ಸೇವೆಯನ್ನು ಮಾಡಲು ಇಚ್ಛೆಯುಳ್ಳವರು ಇದರೊಡನೆ ಸೇರಬಹುದಂತೆ. ಈ ತರದಲ್ಲಿ ಸಮಸ್ತ ಭರತ ಖಂಡದಲ್ಲೆಲ್ಲಾ ಹರಿಜನ ಸೇವಾ ಕಾರ್ಯವು ಬಿರುಸಾಗಿ ನಡೆಯುವ ಏರ್ಪಾಡ ಮಾಡಲಾಗುವುದಂತೆ.

ಮೆಕ್ಸಿಕೊವಿನ ಹತ್ತಿರ ಜಪಾನೀಯರು ಹಡಗವೊಂದನ್ನು ಸೆರೆಹಿಡಿದಿರುವರು. ಈ ಹಡಗವು ಯಾವುದೋ ರಹಸ್ಯಗಳನ್ನು ತಿಳಿಯುಕೊಳ್ಳುವ ಮೀನು ಹಿಡಿಯುವ ನೆಪದಲ್ಲಿ ಅಲ್ಲಿ ಬಂದಿತ್ತಂತೆ.

ದ. ಕನ್ನಡಾ ಜಿಲ್ಲಾ ರಾಜಕೀಯ ಪರಿಷತ್ತು.

ಮಹಾರಾಜಶ್ರೀ ಟಿ. ಎ. ರಾಮಲಿಂಗಂ ಚೆಟ್ಟಿಯಾರ್,
ಬಿ. ಎ., ಬಿ. ಎಲ್., ಎಮ್. ಎಲ್. ಎ.

ಅವರ

ಅಧ್ಯಕ್ಷ ಭಾಷಣ

ಮೂಲ್ಕಿಯಲ್ಲಿ ನಡೆದ ರಾಜಕೀಯ ಪರಿಷತ್ತಿನ ಒಂದು ದೃಶ್ಯ.

ಮಹನೀಯರೇ,

ಈ ಪರಿಷತ್ತಿಗೆ ಅಧ್ಯಕ್ಷನಾಗಲು ನನ್ನನ್ನು ಆಹ್ವಾನಿಸಿ ಗೌರವಿಸಿದುದಕ್ಕಾಗಿ ನಾನು ನಿಮಗೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ನನ್ನ ಗೆಳೆಯರಾದ ಶ್ರೀ ಎ. ಬಿ. ಶೆಟ್ಟರು ನನ್ನನ್ನು ಕೇಳಿಕೊಂಡಾಗ, ಇಷ್ಟರ ವರೆಗೂ ಕಾಂಗ್ರೆಸ್ಸಿನ ಹಿನ್ನೆಲೆಯಲ್ಲಿದ್ದ ನನಗೆ ರಾಜಕೀಯ ವಿಚಾರಗಳಲ್ಲಿ ಮುಂದುವರಿದ ಈ ಕನ್ನಡ ಜಿಲ್ಲೆಯಲ್ಲಿ ಅಧ್ಯಕ್ಷನಾಗಲು ಹಿರಿಮೆಯುಂಟೆಂದು ನೋಡಬೇಕಾಯಿತು. ಅಲ್ಲದೆ ಈ ಜಿಲ್ಲೆಯ ಭಾಷಾಜ್ಞಾನವೂ ನನಗೆ ತಿಳಿದಿಲ್ಲವಾದುದರಿಂದ ನೀವೇನು ಹೇಳುವಿರಿ ಎಂಬುದನ್ನು ತಿಳಿಯಲಾರದೆ ಸುಧಾರಿಸಿ ಕೊಂಡುಹೋಗಲು ಅನಾನುಕೂಲವಾದೀತೆಂಬ ಅಂಜಿಕೆಯೂ ನನ್ನಲ್ಲಿತ್ತು. ಆದರೆ ಕನ್ನಡ ಜಿಲ್ಲೆಯವರೆಲ್ಲರೂ ನನ್ನ ಮೇಲಿನ ಕುಂದುಕೊರತೆಗಳನ್ನು ಉದಾರ ಮನಸ್ಸಿನಿಂದ ಕ್ಷಮಿಸಿ, ಪ್ರೀತಿ ತೋರಿಸಿ, ಕರೆದುದರಿಂದ ನಾನು ಉಪಾಯವಿಲ್ಲದೆ ಒಪ್ಪಿದೆ. ಈ ದಿನ ನೀವೆಲ್ಲರೂ ನನ್ನೊಡನೆ ಸಹಕರಿಸಿ ಈ ಪರಿಷತ್ತು ಯಶಸ್ವಿಯಾಗುವಂತೆ ಮಾಡುವಿರಿ ಎಂಬುದು ನಿಸ್ಸಂಶಯ.

ಕಳೆದ ವರುಷ ಕಾಂಗ್ರೆಸ್ಸು ಸಭೆಸೇರಿ, ಈಗ ಪ್ರಯೋಜನಕ್ಕೆ ಬಿದ್ದಂತಹ, ಮುಂದಕ್ಕೆ ಉಪಕಾರವಾಗುವಂತಹ, ಕೌನ್ಸಿಲು ಪ್ರವೇಶದ ವಿಷಯ ತೀರ್ಮಾನ ಕೊಟ್ಟಿತು. ಕೌನ್ಸಿಲು ಪ್ರವೇಶದಿಂದ ನಮ್ಮ ಕೈಗೆಟ್ಟಿ ಹೋಗುವದು ಎಂದು ಮೊದಮೊದಲು ಕಾಂಗ್ರೆಸ್ಸು ಅದಕ್ಕೆ ಬಹಿಷ್ಕಾರ ಹಾಕಲು ಕಾರಣ. ಆದರೆ ಇದರಿಂದ ನಮ್ಮ ವಿರೋಧಿಗಳು ಅಧಿಕಾರಕ್ಕೆ ಬಂದು ಜನರ ಹೆಸರಲ್ಲಿ ಜನರಿಗೆ ಹೆಚ್ಚಿನ ಕೇಡನ್ನುಂಟು ಮಾಡದಿರಲಾರರು ಎಂದು ತಿಳಿದು ಬಂದದರಿಂದ, ಕ್ರಮೇಣ ಕೌನ್ಸಿಲು ಪ್ರವೇಶವು ಜನತೆಗೆ ಹೆಚ್ಚಿನ ಉಪಕಾರವನ್ನು ಮಾಡದೆ ಹೋದರೂ, ಅಪಕಾರವಾಗುವುದನ್ನು ತಪ್ಪಿಸಬಹುದೆಂದು ತಿಳಿದು ಬಂದಿತು. ಇತ್ತ ಬ್ರಿಟಿಷ್ ಸರಕಾರವೂ ಕೂಡಾ ತಾನು ಕೈಕೊಂಡ ಧೋರಣೆಯನ್ನು ಕೊಂಚಮಟ್ಟಿಗೆ ಸುಧಾರಿಸಿ, ಸರಕಾರವು ಜನಮೆಚ್ಚುಗೆಯುಳ್ಳದ್ದಾದರಿಂದ ತಕ್ಕ ಬೆಂಬಲವನ್ನು ಕೊಡುವುದೆಂದಿತು. ಕಾಂಗ್ರೆಸ್ಸು ಬಹುಮತದಿಂದ ಜನಮೆಚ್ಚುಗೆಯನ್ನು ಪಡೆಯಿತು. ಕೌನ್ಸಿಲು ಪ್ರವೇಶವು ಕೇಂದ್ರ ಸರಕಾರದ ಧೋರಣೆಯನ್ನು ಜಾರಿಗೆ ತರಲಾರದೆ ಹೋದರೂ ಸಂಬಂಧಪಟ್ಟ ಸಂಸ್ಥಾನಗಳಲ್ಲಿ ಸ್ವಲ್ಪ ಮಟ್ಟಿಗೆ ಅಧಿಕಾರವನ್ನು ಕೊಟ್ಟಿದೆ.

ಪೂರ್ಣ ಸ್ವರಾಜ್ಯಕ್ಕಾಗಿ ಜನರ ಚಳವಳವನ್ನು ಬಲಪಡಿಸುವುದಕ್ಕಾಗಿಯೂ, ವಿರೋಧಿಗಳ ಕೇಡನ್ನು ವ್ಯಾಪಿಸಬಾರದೆಂತಲೂ ಕಾಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಿತು. ಆರು ಸಂಸ್ಥಾನಗಳಲ್ಲಿ ಕಾಂಗ್ರೆಸ್ಸು ಬಹುಮತದಿಂದ ಅಧಿಕಾರ ಸ್ವೀಕರಿಸಿದೆ. ಅಖಿಲ ಭಾರತ ಕಾಂಗ್ರೆಸ್ಸು ಕಮಿಟಿಯು ಸಭೆಸೇರಿ ಕೌನ್ಸಿಲು ಪ್ರವೇಶದಿಂದ ಜನಾದರಣೆ ಉಪಕಾರವಾದೀತೋ ಎಂದು ಎಲ್ಲ ಬಗೆಯ ಸ್ಥಿತಿಗಳನ್ನು ಕೂಲಂಕಷವಾಗಿ ತರ್ಕಿಸಿ ನೋಡಿ ಕೊನೆಗೆ ಆಯಾಯಾ ಸಂಸ್ಥಾನಕ್ಕೆ ಸಂಬಂಧಪಟ್ಟ ಗವರ್ನರುಗಳ ಮೇರೆವರಿದ ಮಂತ್ರಿಗಳ ರಾಜ್ಯಾಡಳಿತದಲ್ಲಿ ಕೈಹಾಕಲಾರರೆಂದು ಮನಗಂಡಾಗ ಕಾಂಗ್ರೆಸ್ ಕೌನ್ಸಿಲು ಪ್ರವೇಶ ಮಾಡಬಹುದೆಂದು ತೀರ್ಮಾನಿಸಿತು. ಅದಕ್ಕೆ ಸರಿಯಾಗಿ ಬಂದರೆ ಸೆಕ್ರೆಟರಿ ಆಫ್ ಸ್ಟೇಟ್ ವೈಸರಾಯ ಗವರ್ನರುಗಳು ಹೇಳಿಕೆಗಳನ್ನು ಹೊರಡಿಸಿದುದನ್ನು ಕಂಡು, ಅವು ಪೂರ್ಣ ಹಿತಕಾರಿಯಾಗಿಲ್ಲದಿದ್ದರೂ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದೆಂದು ಮಂತ್ರಿಪದವಿಯನ್ನು ಸ್ವೀಕರಿಸಲಾಯಿತು. ಈಗ ಭಾರತದ ಇತಿಹಾಸದಲ್ಲಿ ಇದೇ ಮೊದಲು ಕಾಂಗ್ರೆಸ್ ಸರಕಾರವು ಆರು ಪ್ರಾಂತ್ಯಗಳಲ್ಲಿ ಮಾತ್ರ ಇತ್ತೀಚೆಗೆ ಗಡಿನಾಡಿನಲ್ಲಿಯೂ ಕೂಡಾ ಅಧಿಕಾರ ನಡೆಸುತ್ತಿದೆ.

ಇಷ್ಟರ ವರೆಗೂ ಕಾಂಗ್ರೆಸ್ಸು ಜನರ ಹಕ್ಕುಬಾಧ್ಯತೆಗಳನ್ನು ಎತ್ತಿಹಿಡಿದಿದ್ದಿತು. ಈಗ ಇದೇ ಮೊದಲು ಬಹುಮತದಿಂದ ಆರಿಸಿಬಂದ ಪ್ರತಿನಿಧಿಗಳು ಅಧಿಕಾರಕ್ಕೆ ಬಂದುದರಿಂದ ಜನರ ಆಶೆಯು ಹೆಚ್ಚಿ, ಅವರು ಸರಕಾರದ ಚಟುವಟಿಕೆಗಳನ್ನು ಕುತೂಹಲದಿಂದ ನೋಡುತ್ತಿದ್ದಾರೆ. ತಮ್ಮ ಕಷ್ಟಗಳ ನಿವಾರಣೆಗಾಗಿ ಹಾತೊರೆಯುತ್ತಿದ್ದಾರೆ. 'ಅಪ್ಪರ್ ಕೌನ್ಸಿಲಿ'ನಲ್ಲಿ ನಮ್ಮ ಅಧಿಕಾರವಿರುವುದರಿಂದಲೂ, ಹೆಚ್ಚು ಪ್ರತಿನಿಧಿಗಳು ಕೌನ್ಸಿಲಿನಲ್ಲಿರುವುದರಿಂದಲೂ ಮದ್ರಾಸು ಸಂಸ್ಥಾನದ ಜನರ ಆಶೆ ಇನ್ನಷ್ಟು ಹೆಚ್ಚಿದೆ. ಇನ್ನಿತರ ಎಲ್ಲ ಕಡೆಗಳಿಗಿಂತಲೂ ಮದ್ರಾಸು ಸಂಸ್ಥಾನದ ಮಂತ್ರಿಗಳಿಗೆ ತಮ್ಮ ಜನರನ್ನು ಸಮಾಧಾನಿಸುವುದು ಬಹಳ ಕಷ್ಟದ ಕೆಲಸವಾಗಿರುತ್ತದೆ. ಆದರೆ ನಮ್ಮ ಪುಣ್ಯದಿಂದ ರಾಜಕೀಯ ಮುತ್ಸದ್ದಿಗಳೂ ಪ್ರಜಾಸೇವಾ ಚಿಂತಕರೂ, ದೂರದರ್ಶಿಗಳೂ ಆದ ಸಿ. ರಾಜಗೋಪಾಲಾಚಾರ್ಯರವರು ದೊರಕಿದ್ದಾರೆ. ಅವರ ಸೂತ್ರದಿಂದ ಸರಕಾರವು ಸುಸರಾಗವಾಗಿ ನಡೆಯುವುದರಲ್ಲಿ ಸಂಶಯವಿಲ್ಲ."

ಈ ಮಂತ್ರಿಮಂಡಲವು 'ಅಧಿಕಾರಕ್ಕೆ ಬಂದು ಇಷ್ಟು ಅಲ್ಪ ಕಾಲದೊಳಗೆ ಪ್ರಶಂಸನೀಯವಾದ ಎಷ್ಟೋ ಕೆಲಸಗಳನ್ನು ಮಾಡಿರುತ್ತದೆ. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದರು, ಮಲಬಾರಿನ ಮೊಪ್ಲೆ ದಂಗೆಯ ಕಾಲದಲ್ಲಿ ಜನರಿಗೆ ಬಂದಿದ್ದ ಕಾನೂನು ರದ್ದುಮಾಡಲ್ಪಟ್ಟಿತು. ಹಳ್ಳಿಗಾಡಿನ ನೀರಾವರಿ ಸೌಕರ್ಯಗಳಿಗೆ ತಕ್ಕ ಏರ್ಪಾಡನ್ನು ಮಾಡುತ್ತಿದ್ದಾರೆ. ಹಳ್ಳಿಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ಪಾಡುಪಟ್ಟಿಗೆ 2 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಲಾಯಿತು. ಅಲ್ಲದೆ, ಕೈಮಗ್ಗದವರಿಗೆ ಪ್ರೋತ್ಸಾಹ ಕೊಡಲು 'ಟಿಟ್ಟ ಕಾನೂನು' ಎಂಬುದನ್ನು ಜಾರಿಗೆ ತಂದು ಪರದೇಶಿ ವಸ್ತ್ರಗಳಿಗೆ ಸುಂಕವನ್ನು ಹೇರಿಸಿದರು. ನಮ್ಮ ದೇಶದ ಆಯಾ ಸ್ಥಿತಿಗತಿಗಳನ್ನರಿತು ಅಧಿಕಾರಿಗಳಿಗೆ ದಾರಿ ತೋರಿಸುವ ಉದ್ದೇಶದಿಂದ ಮಂತ್ರಿಗಳಿಂದ ಹಿಡಿದು ಅಧ್ಯಕ್ಷರ ವರೆಗೂ ಕಡಿಮೆ ಸಂಬಳವನ್ನು ಗೊತ್ತುಮಾಡಿದರು. ಪ್ರಯೋಗಕ್ಕಾಗಿ ಮದ್ಯಪಾನ ನಿಷೇಧ ಪ್ರಾರಂಭವನ್ನು ಸೇಲಂ ಜಿಲ್ಲೆಯಲ್ಲಿ ಪ್ರಕೃತ ಜಾರಿಗೆ ತಂದಿದ್ದಾರೆ. ಸೇಲಂ ಜಿಲ್ಲೆಯಲ್ಲಿ ಜನರೆಲ್ಲರೂ ಅದನ್ನು ಸ್ವಾಗತಿಸಿರುವುದರಿಂದಲೂ ಅದರಿಂದ ಹೆಚ್ಚಿನ ಜನತೆಗೆ ಉಪಕಾರವಾಗಿದ್ದುದು ತಿಳಿದುಬರುತ್ತಿದೆ. ನಾವೀಗ ನಮ್ಮ ಜಿಲ್ಲೆಗಳಲ್ಲಿಯೂ ಅದು ಬೇಗನೇ ಬರಲೆಂದು ಹಾರೈಸುತ್ತೇವೆ. ಮಂತ್ರಿಗಳೂ ಕಾರ್ಯದರ್ಶಿಗಳೂ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸಿ ಪ್ರಚಾರ ನಡೆಸುತ್ತಿದ್ದಾರೆ. ಜನರ ಕಷ್ಟವನ್ನು ದಾರಿದ್ರ್ಯವನ್ನು ಕಣ್ಣಾರೆ ಕಂಡ ಮಂತ್ರಿಗಳಿಗೆ ಈ ರೀತಿ ಸಂಚಾರದಿಂದ ದೊರೆತ ಅನುಭವಗಳು ಮುಂದಕ್ಕೆ ಹೆಚ್ಚಿನ ಸುಧಾರಣೆಯನ್ನು ಕೈಕೊಳ್ಳುವ ಚಿಂತನೆಗೆ ಹೆಚ್ಚಿನ ಉಪಯೋಗಕ್ಕೆ ಬೀಳದಿರದು.

ಸರಕಾರವು ಬಹಳ ಮುಖ್ಯ ವಿಷಯಗಳನ್ನು ಕೈಕೊಂಡಿಲ್ಲವೆಂದು ಅಸಮಾಧಾನವನ್ನು ವ್ಯಕ್ತಗೊಳಿಸುತ್ತಿದ್ದಾರೆ. ಅವರ ಈ ಅಸಮಾಧಾನದಲ್ಲಿ ಅವರು ಸಮಯವೂ ತಾಳ್ಮೆಯೂ ಇಲ್ಲದೆ ಜನಸೇವೆಯ ಪ್ರಯತ್ನವು ಸಫಲವಾಗುವುದಿಲ್ಲವೆಂಬುದನ್ನು ಮರೆತು ಬಿಡುತ್ತಾರೆ. ಪ್ರಧಾನಮಂತ್ರಿಗಳು ಪ್ರತಿಯೊಂದು ವಿಷಯಕ್ಕೂ ಗಮನಕೊಡುತ್ತಿದ್ದಾರೆ, ಅವರು ಗುರುತರವಾದ ಹೊರೆಯನ್ನು ಹೊತ್ತಿದ್ದಾರೆ, ಅವರಲ್ಲದೆ ಬೇರೆಯವರಿಂದ ಈ ಹೊರೆಯನ್ನು ಹೊರಲು ಸಾಧ್ಯವಿಲ್ಲ. ಪ್ರತಿಯೊಂದು ಸಂಗತಿಯಲ್ಲಿಯೂ ಅವರೇ ಸಂಚಾಲಕರಾಗಿರುವರು. ಆದುದರಿಂದ ಜವಾಬ್ದಾರಿಕೆಯೂ ಅವರಲ್ಲೇ ಕೇಂದ್ರೀಕರಿಸಿದೆ. ಅವರ ಸಹೋದ್ಯೋಗಿಗಳು ಹೆಚ್ಚು ಜವಾಬ್ದಾರಿಯನ್ನೇ ವಹಿಸಿ ಸರಕಾರದ ಅಭಿಪ್ರಾಯವನ್ನು ವ್ಯಕ್ತಗೊಳಿಸಿ, ಸರಕಾರದ ಧ್ಯೇಯವು ಹೇಗಿದೆ ಎಂಬುದನ್ನು ತೋರಿಸಿ ಆ ಮೂಲಕ ಪ್ರಧಾನಮಂತ್ರಿಯ ಜವಾಬ್ದಾರಿಕೆಯ ಹೊರೆಯನ್ನೇ ಸ್ವಲ್ಪಮಟ್ಟಿಗೆ ಕಡಿಮೆಮಾಡಬಹುದು.

ಜನರಿಗೆ ಯಾವ ಯಾವ ರೀತಿಯಲ್ಲಿ ಸಹಾಯ ರಕ್ಷಣೆಗಳನ್ನು ಕೊಡಬೇಕೆಂಬುದನ್ನು ಸರಕಾರವು ನಿರ್ಧರಿಸಿದೆ. ಅಂತಹ ಸಹಾಯದ ಪಟ್ಟಿಯು ಸುದೀರ್ಘವಾಗಿದೆ. ಉದ್ದೇಶಗಳನ್ನು ಹೇಗೆ ಜಾರಿಗೆ ತರಬೇಕೆಂಬ ಆಲೋಚನೆಯೂ ಅದು ಗೊತ್ತುಮಾಡಿದೆ. ಹಣದ ಅಭಾವವು ಅನೇಕ ವಿಷಯಗಳನ್ನು ಜಾರಿಗೆ ತರುವುದಕ್ಕೆ ಅಡ್ಡಿಯನ್ನುಂಟು ಮಾಡಿದೆ ಎಂಬುದನ್ನು ನಾನು ಬಲ್ಲೆ. ಈಗ ಕೈಕೊಳ್ಳಬೇಕಾದ ಅನೇಕ ಕೆಲಸಗಳಿಗೆ ಸರಕಾರದಿಂದ ಹಣವನ್ನು ಒದಗಿಸುವ ಯೋಚನೆಯಲ್ಲಿದ್ದಾರೆಂದು ನನ್ನೆಣಿಕೆ. ಹೊಸ ಕಂದಾಯವನ್ನು ಜನರು ಮೆಚ್ಚುವುದಿಲ್ಲ. ಆದದ್ದರಿಂದ ಆರ್ಥಿಕ ಮುಗ್ಗಟ್ಟು ಅಂತ್ಯವಾಗಿ ಕಾಂಗ್ರೆಸ್ಸಿನವರು ಬಡಜನರ ಮೇಲಿನ ತೆರಿಗೆಯ ಹೊರೆಯನ್ನು ಕಡಿಮೆಮಾಡುವರೆಂಬ ಭರವಸೆಯಲ್ಲಿರುವಾಗ ಹೊಸ ಕಂದಾಯವನ್ನು ಹೊರಿಸುವುದು ಸಾಧ್ಯವಲ್ಲ. ವೆಚ್ಚ ಕಡಿಮೆಮಾಡುವ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಬೇಕಾಗಿದೆ. ಹಿಂದಿನನುಭವದಿಂದ ಹೇಳುವುದಾದರೆ ಈ ವಿಷಯದಲ್ಲಿ ಇಲಾಖೆಗಳ ಸಹಾಯವು ಹೆಚ್ಚು ಲಾಭದಾಯಕವಾಗುವುದೆಂದು ಹೇಳಬರುವುದಿಲ್ಲ. ಆದ್ದರಿಂದ ಒಂದು ಸಮಿತಿಯನ್ನೇ ಏರ್ಪಡಿಸಿ ಎಲ್ಲಾ ವೆಚ್ಚವನ್ನು ವಿಮರ್ಶೆಮಾಡಿ ಸ್ವಲ್ಪ ದಕ್ಷತೆಗೆ ಬಾಧೆ ತಟ್ಟಿದರೂ ತಕ್ಕಷ್ಟು ಹಣವನ್ನು ಮಿಗಿಸಲು ಯತ್ನಮಾಡುವುದು ಅವಶ್ಯ. ಪ್ರಧಾನ ಸಚಿವರ ಆರ್ಥಿಕ ಮಂತ್ರಿಗಳಾಗಿರುವುದರಿಂದ ವೆಚ್ಚ ಕಡಿಮೆಮಾಡಿ ಹಣವನ್ನು ಮಿಗಿಸುವ ವಿಷಯಕ್ಕೆ ತುಂಬಾ ಗಮನ ಕೊಡುವರೆಂದು ನನಗೆ ಭರವಸೆಯಿದೆ. ಈಗ ಆರಂಭಿಸಲ್ಪಟ್ಟ ಮದ್ಯಪಾನ ನಿರೋಧದಿಂದ ನಾಲ್ಕು ಕೋಟಿ ರೂಪಾಯಿಗಳ ನಷ್ಟವಾಗಿರುವುದು. ಸಂಯುಕ್ತ ರೀತಿಯಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಆದಷ್ಟು ಬೇಗನೇ ಕೊಡಬೇಕಾಗಿದೆ. ಮಹಾತ್ಮಾಗಾಂಧಿಯವರ ಸ್ವಾವಲಂಬನ ವಿದ್ಯಾಭ್ಯಾಸ ಕ್ರಮದ ಅಭಿಪ್ರಾಯದ ಗೌರವಕ್ಕೆ ಅರ್ಹವಾದುದಾದರೂ ಅದು ಸದ್ಯದಲ್ಲಿ ಕಾರ್ಯರೂಪಕ್ಕೆ ಬರುವುದು ಸಂಶಯಾಸ್ಪದ. ವಾರ್ಧಾ ಸಮಿತಿಯವರೂ ಸಹ ಮಹಾತ್ಮರ ಯೋಜನೆಯನ್ನು ತಿದ್ದುಪಡಿಮಾಡಿ ಕಾಲಕ್ರಮೇಣ ಉದ್ಯೋಗ ಶಿಕ್ಷಣದ ಶಾಲೆಗಳಿಂದ ಬರತಕ್ಕ ಉತ್ಪತ್ತಿಯಿಂದ ಕೊಡಬಹುದೆಂದೂ ತರ್ಕಿಸಿದ್ದಾರೆ. ಯಾವ ಧೋರಣೆಯನ್ನು ಕೈಕೊಳ್ಳುವುದಾದರೂ ಸರಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ವೆಚ್ಚಮಾಡಬೇಕಾಗುವುದು. ಗ್ರಾಮಾಂತರಗಳಲ್ಲಿ ಆರೋಗ್ಯ ರಕ್ಷಣೆ ವೈದ್ಯ ಪ್ರಮಾಣವನ್ನು ಏರ್ಪಾಡು ಮಾಡುವುದಕ್ಕೂ ಗ್ರಾಮಾಂತರಗಳಲ್ಲಿ ನೀರಿನ ಸರಬರಾಯಿಗೂ ಮತ್ತಷ್ಟು ಹಣವು ಬೇಕಾಗುವುದು. ಇವೆಲ್ಲಕ್ಕೂ ಧಾರಾಳ ಹಣವು ಬೇಕು. ಸರಕಾರವು ಇವುಗಳಿಗೆ ಮೊದಲು ಗಮನ ಕೊಡಬೇಕು.

ವ್ಯವಸಾಯವು ಜನರ ಮುಖ್ಯ ಕಸಬು. ಆದುದರಿಂದ ಸರಕಾರದವರ ಗಮನವು ಮುಖ್ಯವಾಗಿ ವ್ಯವಸಾಯದಭಿವೃದ್ಧಿಯ ಕಡೆಗೂ, ರೈತರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೂ ಕೊಡಲ್ಪಡಬೇಕಾಗುವುದು. ವ್ಯವಸಾಯವು ಹೆಚ್ಚು ಉತ್ಪತ್ತಿಯನ್ನು ಕೊಡುವಂತೆ ಮಾಡಲು ವಿಜ್ಞಾನದ ಉಪಯೋಗ ಮಾಡಬೇಕಾದುದು. ರೈತರಿಗೆ ಉಪಕರಣಗಳನ್ನು ಒದಗಿಸಬೇಕು. ಬೆಳೆಸಿದ ವಸ್ತುಗಳು ಸರಿಯಾಗಿ ವಿಕ್ರಯವಾಗುವಂತೆ ಮಾಡಬೇಕು. ಮನೆಗಳಲ್ಲಿ ಕೆಲಸವಿಲ್ಲದಿರುವವರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ಮತ್ತು ಬಿಡುವಿನ ವೇಳೆ ಕೆಲಸಮಾಡುವ ಅನುಕೂಲತೆಯನ್ನು ರೈತರಿಗೂ ಒದಗಿಸಿಕೊಡಬೇಕಾಗುವುದು. ಇದಲ್ಲದೆ ದೇಶೀಯ ವೃತ್ತಿಗೆ ಬೇಕಾದ ಸಹಾಯ ಮಾಡುವುದು ಮತ್ತೊಂದು ದೊಡ್ಡ ವಿಷಯ. ರೈತರಿಂದು ಭೂಕಂದಾಯದ ಭಾರದಿಂದಲೂ, ಸಾಲಗಳಿಂದಲೂ, ಮತ್ತು ಅಧಿಕವಾದ ಬಡ್ಡಿಯ ದರದಿಂದಲೂ ಕುಸಿದು ಬಿದ್ದಿದ್ದಾರೆ. ದೊಡ್ಡ ಮತ್ತು ಚಿಕ್ಕ ನೀರಾವರಿ ಕೆಲಸಗಳಿಗೆ ಬೇಕಾದ ಏರ್ಪಾಡು ಮಾಡುವುದು, ಈ ರೈತರನ್ನು ಸರಿಯಾದ ಸ್ಥಿತಿಯಲ್ಲಿಡುವುದು ಇವು ಮುಖ್ಯವಾದ ವಿಷಯಗಳು. ಎಲ್ಲರೂ ನಿರೀಕ್ಷಿಸುತ್ತಿದ್ದಂತೆ ಇದೇ ಸಮಯದಲ್ಲಿ ರೈತರಿಗೆ ಇದು ಅತ್ಯಗತ್ಯವಾದದ್ದಾಗಿದೆ. ರೈತರನ್ನು ಸಾಲದ ಹೊರೆಯಿಂದ ತಪ್ಪಿಸುವ ಸಲುವಾಗಿ ಸರಕಾರವು ಒಂದು ಮಸೂದೆಯನ್ನು ತಂದಿದೆ. ಈ ಮಸೂದೆಯಲ್ಲಿ ನಿರೂಪಿಸಿದ ಮೇರೆಗೆ ರಕ್ಷೆಯನ್ನು ಕೊಡುವ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಇದುವರೆಗೆ ರಾಜಿಯಿಂದ ಸಾಲತೀರುವೆ ಮಾಡುವ ಯತ್ನವನ್ನು ಮಾಡುತ್ತಿದ್ದೆವು. ಆ ಮೂಲಕ ಕೆಲವು ಪ್ರಾಂತ್ಯಗಳಲ್ಲಿಯೂ ಸಂಸ್ಥಾನಗಳಲ್ಲಿಯೂ ಅಲ್ಪಸ್ವಲ್ಪ ಪ್ರಯೋಜನ ದೊರೆತಿದೆ. ಅದೇ ತರದ ಸಹಾಯವು ನಮ್ಮ ಅಧಿಪತ್ಯಕ್ಕೆ ಬರಬೇಕೆಂದು ನಾನು ನನ್ನ (ಡೆಟ್ ಕನ್ಸಿಲಿಯೇಷನ್ ಬಿಲ್) ರಾಜಿಯಿಂದ ಸಾಲ ತೀರಿಸುವ ಮಸೂದೆಯನ್ನು ತಂದವನಾಗಿದ್ದೆನು. ನಾನು ಇಚ್ಛಿಸಿದ ಕೆಲವು ಶರತ್ತುಗಳು ಇಲ್ಲದೆ ಅದು ಮಂಜೂರಾದರೂ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದಂತೆ ತೋರುವುದಿಲ್ಲ. ಹಿಂದಿದ್ದ ಸರಕಾರವು ಅದಕ್ಕೆ ಅವಕಾಶವನ್ನು ಕೊಡಲಿಲ್ಲ. ಆದರೆ ಆ ಮಸೂದೆಗನುಸಾರವಾಗಿ ಸಾಲವನ್ನು ತೀರಿಸುವುದು ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ರಕ್ಷೆಯು ಬೇಕಾಗಿದ್ದರೆ ಸಾಲಕೊಟ್ಟವನಾಗಲೀ ಅಥವಾ ಸಾಲಪಡೆದವನಾಗಲೀ ಅರ್ಜಿಮಾಡಬೇಕಿತ್ತು. ಹೆಚ್ಚು ಅರ್ಜಿಗಳು ಬಂದರೆ ಈ ಸಾಲವಿಮೋಚನೆಯ ಯಂತ್ರವೇ ಜಗ್ಗುಬೀಳುವ ಸಂಭವವಿದೆ. ರೈತರನ್ನು ಸಾಲದಿಂದ ತಪ್ಪಿಸುವುದು ಬಹುದೊಡ್ಡ ವಿಷಯ. ಅದು ಹೆಚ್ಚು ಜನರಿಗೆ ಅನ್ವಯಿಸತಕ್ಕದ್ದು. ಅದು ಜನಸಂಖ್ಯೆಯ ಹೆಚ್ಚು ಭಾಗಕ್ಕೆ ಸಂಬಂಧಪಟ್ಟದ್ದಾಗಿದೆ. ಕೂಡಲೇ ಇದನ್ನು ಇತ್ಯರ್ಥಗೊಳಿಸುವ ವಿಧಾನವು ಅತ್ಯಗತ್ಯವಾಗಿದೆ. ಅಂತಹ ಮಸೂದೆಯೊಂದನ್ನು ಪ್ರಧಾನ ಸಚಿವರು ತಂದಿದ್ದಾರೆಂದು ನನಗೆ ಅತ್ಯಂತ ಸಂತೋಷವಾಗಿದೆ. ಈ ಮಸೂದೆಯು ಅನೇಕರ ಹಿತಕ್ಕೆ ಸಂಬಂಧಪಟ್ಟುದಾದ್ದರಿಂದ ಅದರೊಡನೆ ಸ್ವಲ್ಪ ವಿರೋಧವೂ ಇದೆ. ಈ ರೀತಿಯ ಮಸೂದೆಗಳಲ್ಲಿ ಕಷ್ಟಗಳು ಇಲ್ಲದಂತೆ ಮಾಡುವುದು ಸಾಧ್ಯವಲ್ಲ. ಈ ಎಲ್ಲಾ ಸಂಗತಿಯನ್ನು ಬುದ್ಧಿವಂತರಿಂದ ಕೂಡಿದ ಒಂದು ಸಮಿತಿಯು ವಿಮರ್ಶಿಸಿ, ಪರೀಕ್ಷಿಸಿ, ಅದರಲ್ಲಿ ನಿರೂಪಿಸಿದ ಸಂಗತಿಗಳಲ್ಲಿ ಜನಮತವು ಹೇಗೆ ಇರುವುದೆಂಬುದನ್ನು ತಿಳಿದು ಮಸೂದೆಯ ಶರತ್ತುಗಳನ್ನು ತಯಾರಿಸಬಹುದಾಗಿತ್ತು. ಆದರೆ ಜನರು ಬಹು ಕಷ್ಟಕ್ಕೀಡಾಗಿರುವುದರಿಂದ ತ್ವರೆಯಿಂದ ಅವರಿಗೆ ಅನುಕೂಲವನ್ನು ಕಲ್ಪಿಸಿ ಕೊಡುವುದು ಆಗತ್ಯವಾದ್ದರಿಂದಲೂ, ಪ್ರತಿಯೊಂದು ದಿನದ ವಿಳಂಬವು ಕೋರ್ಟುಗಳ ಮೂಲಕ ಇಲ್ಲವೆ ಒಫೀಶಿಯಲ್ (official) ರಿಸೀವರರಿಂದ ಅನೇಕ ಕುಟುಂಬಗಳ ಆಸ್ತಿಗಳ ನಾಶವು ಸಂಭವಿಸುವುದರಿಂದಲೂ, ಮಸೂದೆಯನ್ನು ಬೇಗನೇ ತರಬೇಕಾಗಿ ಬಂತು. ಸಿಲೆಕ್ಟ ಕಮಿಟಿಯವರು ಮಸೂದೆಯಿಂದ ಬರಬಹುದಾದ ಸಂಕಷ್ಟಗಳನ್ನು ಸಂಪೂರ್ಣವಾಗಿ ಪರ್ಯಾಲೋಚಿಸುವುದೆಂದು ಪ್ರಧಾನಮಂತ್ರಿಗಳು ತಿಳಿದಿದ್ದಾರೆ. ಈ ಮಸೂದೆಯಿಂದ ಬಾಧಿತರಾಗುವವರು ರಚನಾತ್ಮಕವಾದ ಟೀಕೆಗಳನ್ನು ಮಾಡಿ ಮಸೂದೆಯನ್ನು ತಿದ್ದುಪಡಿ ಮಾಡುವುದು ಆಗತ್ಯ. ಈ ಸಂದರ್ಭದಲ್ಲಿ ಮಸೂದೆಯು ಸಾಕಷ್ಟು ರಕ್ಷೆಯನ್ನು ಕೊಡುವುದಿಲ್ಲವೆಂಬ ಟೀಕೆಯನ್ನು ಸಹ ನಾವು ಗಮನಿಸದೆ ಇರಬಾರದು. ನ್ಯಾಯವಾಗಿ ಆಗತ್ಯವಿರುವಲ್ಲಿ ಮಸೂದೆಯಲ್ಲಿ ನಿರೂಪಿಸಿದ ಶರತ್ತುಗಳು ರಕ್ಷೆಯನ್ನು ಕೊಡುವುದಿಲ್ಲವೆಂದು ಅವರ ಅಭಿಮತ. ಇಂತಹ ಸಂದರ್ಭಗಳಲ್ಲಿ ರಕ್ಷೆ ಬೇಕೆಂದು ಕೇಳಲು ಅವರ ಅಭಿಪ್ರಾಯವನ್ನು ಗಮನಿಸುವುದು ಆಗತ್ಯ. ಸಿಲೆಕ್ಟ ಕಮಿಟಿಯವರು ಇಂತಹ ನ್ಯಾಯವಾದ ಟೀಕೆಗಳನ್ನು ತಿಳಿದು ಮಸೂದೆಯನ್ನು ಎಲ್ಲರಿಗೂ ಅನುಕೂಲವಾಗುವ ಹಾಗೆ ಸರಿಪಡಿಸಬೇಕು. ರೈತರಿಗೆ ಸಹಾಯವಿತ್ತು ಅವರು ತಮ್ಮ ಕಾಲಿನ ಮೇಲೆ ನಿಲ್ಲುವ ಹಾಗೆ ಮಾಡಬೇಕೆಂಬ ತತ್ವದ ಮೇಲೆ ಈ ಮಸೂದೆಯನ್ನು ಸಿದ್ಧಪಡಿಸಬೇಕಾಗಿದೆ. ಆಸ್ತಿಯ ವಿಷಯದಲ್ಲಿ ನಾವು ಗೌರವವನ್ನು ತೋರಿಸುವುದು ನ್ಯಾಯವಾದುದೆಂದೂ ಒಪ್ಪಂದದ ವಿಷಯದಲ್ಲಿ ಪವಿತ್ರತೆಯನ್ನು ಎಲ್ಲಾ ಸಂದರ್ಭದಲ್ಲಿಯೂ ಇಟ್ಟುಕೊಳ್ಳಬೇಕೆಂಬುದು ಒಪ್ಪತಕ್ಕದ್ದಲ್ಲ. ಏಕೆಂದರೆ ಸಾಲಕೊಟ್ಟವನೂ ಪಡೆದವನೂ ಒಂದೇ ತರಗತಿಗೆ ಸೇರಿದವರಲ್ಲ. ಇದನ್ನು ಲೋಕದ ಎಲ್ಲಾ ಸರಕಾರವು ತಿಳಿದಿದೆ. ಮತ್ತು ಸಾಲ ಹಿಡಿದವನ ಸಂಕಷ್ಟಗಳನ್ನು ಕಾನೂನಿನ ಮೂಲಕ ಹೋಗಲಾಡಿಸಿವೆ. ರೈತನು ವ್ಯವಸಾಯದ ಕಸಬನ್ನು ನಡೆಸುವುದಕ್ಕೆ, ಭೂಮಿಯನ್ನು ವೃದ್ಧಿಪಡಿಸುವುದಕ್ಕೂ, ಸಾಲ ಪಡೆಯುವ ಸಂಗತಿಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ವ್ಯವಸಾಯ ವೃತ್ತಿಯಲ್ಲಿ ಬೇಸಾಯವನ್ನು, ಕೆಲಸ ಕೊಡುವ ಬೇಸಾಯಗಾರನೂ, ಬಂಡವಾಳವನ್ನು ಸಾಲಕೊಡುವವನೂ ಸಮಭಾಗಿಗಳೆಂದು ತಿಳಿಯಬೇಕು. ಗ್ರಾಮಗಳ ಆರ್ಥಿಕ ಸ್ಥಿತಿಯನ್ನು ಬಲ್ಲವರು ಭೂಮಿಯ ಉತ್ಪತ್ತಿಯು ಸೇಕಡ 3ರಿಂದ 5ರ ವರೆಗೆ ಇರುವುದೆಂದು ಹೇಳುತ್ತಾರೆ. ಸೇಕಡ ಮೂರು ಬಡ್ಡಿಯಾದ ಸರಾಸರಿ ಎಂಬುದನ್ನು ಬಿಟ್ಟರೂ ಅಂತಹ ಸಂದರ್ಭದಲ್ಲಿ ರಕ್ಷೆಯು ಆಗತ್ಯವೆಂದೂ ಬೇಗನೇ ಬರತಕ್ಕದ್ದೆಂದೂ ಇರುವಾಗ ಒಪ್ಪಂದದ ಪವಿತ್ರತೆಯು ಮುಖ್ಯವಾಗಿ ತೋರಿಸಬೇಕಾಗಿಲ್ಲ. ಏಕೆಂದರೆ ಬಡ್ಡಿಯ ದರವು ಸೇಕಡ 12ರಿಂದ 24ರ ವರೆಗೆ ಇರುವುದು. ಮಸೂದೆಯು ವ್ಯವಸಾಯದಲ್ಲಿ ಭಾಗವಹಿಸುವ ಕೂಲಿಯವರ ಕಡೆಗೆ ಗಮನ ಕೊಡಬೇಕೆಂದು ಸರಿಯಾದ ಟೀಕೆ. ಸಾಲ ಹಿಡಿದ ಬೇರೆ ವಿಧದ ಜನರಿಗೂ ರಕ್ಷೆಯನ್ನು ಕೊಡುವುದು ಆಗತ್ಯ. ಸಾಲಕೊಡುವವರ ಮಸೂದೆಯನ್ನು ತಿದ್ದುಪಡಿಮಾಡುವ ಮೂಲಕವಾಗಿಯೂ, ಬಡ್ಡಿಯ ದರವನ್ನು ಇಳಿಸುವ ಮೂಲಕವಾಗಿಯೂ ಸಾಲ ಹಿಡಿದವರಿಗೆ ರಕ್ಷೆಯನ್ನು ಕೊಡಬಹುದಾಗಿ ತೋರುತ್ತದೆ. ರೈತರ ಹಿತದೃಷ್ಟಿಯಿಂದಲೂ ಕೂಡ, ಸಾಲ ಕೊಡುವವರ ಮಸೂದೆಯನ್ನು ತಿದ್ದುಪಡಿ ಮಾಡಿ, ಸಾಲ ಕೊಡುವವರು ಲೈಸನ್ಸನ್ನು ಪಡೆಯಬೇಕೆಂಬ ನಿಯಮವನ್ನು ಮಾಡಿ, ಮತ್ತು ಅವರು ಸರಿಯಾದ ರೀತಿಯಲ್ಲಿ ಲೆಕ್ಕವನ್ನು ಇಡುವಂತೆಯೂ, ಮತ್ತು ಆ ಲೆಕ್ಕಗಳು ಶೋಧಿಸಲ್ಪಡುವಂತೆಯೂ ಮಾಡತಕ್ಕದ್ದು ಆಗತ್ಯವಿರುತ್ತದೆ. ಪ್ರಕೃತದ ಮಸೂದೆಯು ಕಾಲವಿಳಂಬವಾಗದಂತೆ ಕೂಡಲೇ ಜಾರಿಗೆ ತರಲ್ಪಡುವುದು ಅತ್ಯಗತ್ಯ. ಸಾಲ ಕೊಟ್ಟವರು ಈ ಮಸೂದೆಯ ಉದ್ದೇಶವನ್ನು ಪಡೆಯುವುದಕ್ಕೆ ತಕ್ಕ ಮಾರ್ಗವನ್ನು ಹುಡುಕುತ್ತಾರೆ. ಈ

(12ನೇ ಪುಟದಲ್ಲಿ ಮುಂದರಿದಿದೆ)

ಅನುಕ್ರಮಣಿಕೆ.

ನೋಟುಗಳು ೯
೧೯೩೭ ೯
ಕಲೋಪಾಸಕರೊಬ್ಬರು ಕಣ್ಮರೆಯಾದರು ೫
ಕೋಲೆಗಾರರ ರಾಜ್ಯದಲ್ಲಿ ಭಯಂಕರ ಕೊಲೆ ೬
ಚೀನಾ ಜಪಾನ್ ಯುದ್ಧದ ಗೂಢವೇನು? ೬
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು.
ಅಗ್ರಲೇಖ.
ಜಿಲ್ಲಾ ಬೋರ್ಡುಗಳು ಬೇಕೆ? ೧೦
ಸ್ಫುಟವಿಚಾರಗಳು ,,
ತಾಲೂಕುಗಳಿಂದ ೧೧
ನಮ್ಮ ಶಿಕ್ಷಣ ೧೪
ಜರ್ಮನಿಯಲ್ಲಿ ಬೋಕಶಿಕ್ಷಣ ೧೬
ಯೋಗಿಡಯರ್ ಕಿಚನರ್ ಮೊರೆ ೧೮

ಸ್ವದೇಶಾಭಿಮಾನಿ.

ತಾ. ೩೧ ನೇ ಶುಕ್ರವಾರ ದಶಂಬರ ೧೯೩೭

ಜಿಲ್ಲಾಬೋರ್ಡುಗಳು ಬೇಕೇ?

ಗ್ರಾಮಪಂಚಾಯತುಗಳೇ ಸಾಲವೇ?

ಎಲ್ಲ ಗ್ರಾಮಗಳಲ್ಲಿ ಗ್ರಾಮಪಂಚಾಯತುಗಳು ನಿರ್ಮಾಣವಾಗಿ, ಅವುಗಳಿಗೆ ಪ್ರಾಥಮಿಕವಿದ್ಯಾಭ್ಯಾಸವನ್ನೂ ಹಳ್ಳೀಮಾರ್ಗಗಳನ್ನೂ ಒಪ್ಪಿಸಿಕೊಟ್ಟರೆ, ಮತ್ತೆ ಜಿಲ್ಲಾ ಬೋರ್ಡುಗಳಿಗೆ ಸೆಕೆಂಡರಿ ವಿದ್ಯಾಭ್ಯಾಸ ಮತ್ತು ಸೆಕೆಂಡ್‌ಕ್ಲಾಸು ರಸ್ತೆಗಳ ಆಡಳಿತ ಮಾತ್ರವೇ ಉಳಿಯುವುದು. ಖರ್ಚಿಗೆ ಸಾಕಷ್ಟು ಉತ್ಪನ್ನವಿಲ್ಲದೆ ಸೆಕೆಂಡರಿ ಶಾಲೆಗಳನ್ನು ವಜಾಮಾಡುವ ನಿಯಮವುಂಟಾಗಿರುವ ಕಾರಣ, ಆ ಎರಡನೆ ತರಗತಿಯ ರಸ್ತೆಗಳ ಮತ್ತು ಗ್ರಾಮಾಸ್ಪತ್ರೆಗಳ ಮೇಲ್ವಿಚಾರಣೆಗಾಗಿ ಮಾತ್ರ ಜಿಲ್ಲಾಬೋರ್ಡುಗಳನ್ನು ಇಟ್ಟು ಕಂದಾಯವನ್ನು ವ್ಯಯಿಸುವುದು ವ್ಯರ್ಥವಲ್ಲವೆ? ಎಂಬ ಅಭಿಪ್ರಾಯವು ದಕ್ಷಿಣ ಆರ್ಕಾಡು ಜಿಲ್ಲಾ ಪಂಚಾಯತುಗಳ ಪರಿಷತ್ತಿನಲ್ಲಿ ಅಧ್ಯಕ್ಷರು ಕೇಳಿರುವ ಪ್ರಶ್ನೆಯಾಗಿದೆ.

ಇನ್ನೊಂದು ಮಾತಿದೆ. ಸರಕಾರವು ಆಡಳಿತವನ್ನು ಮಾಡುತ್ತಿರುವ ವ್ಯವಸ್ಥೆಯಲ್ಲಿ ಜಿಲ್ಲಾ ಬೋರ್ಡುಗಳಿಗೆ ಮೂಲತಃ ಸ್ಥಾನವಾಗುವುದೋ ಇನ್ನೂ ಸ್ಪಷ್ಟವಾಗಿಲ್ಲ. ಸರಕಾರವು ರಾಜ್ಯಾಡಳಿತ ಮಾಡುವಂತೆಯೆ, ಇದೂ ಒಂದು ದುಬಾರಿ ವ್ಯವಸ್ಥೆ; ದುಬಾರಿ ಖರ್ಚು, ಇಮ್ಮಡಿ ಕಟ್ಟಡಗಳ ವ್ಯಯಕ್ಕಾಗಿದೆ. ಸರಕಾರದ ಆಡಳಿತವನ್ನು ಬಿಟ್ಟುಕೊಡದೆ ತಮ್ಮ ಸ್ವಾಧೀನ ಇಟ್ಟುಕೊಂಡು, ಮಂತ್ರಿಗಳ ವಶಕ್ಕೆ ಸ್ಥಳೀಯ ಸಂಸ್ಥೆಗಳನ್ನು ಬಿಟ್ಟುಕೊಟ್ಟುದರ ದ್ವಿದಲ ರಾಜ್ಯಪದ್ಧತಿಯ ಉಂಬಳಿಯಾಗಿ ಇದು ಉಳಿದಿದೆ. ಇದರ ಫಲವಾಗಿ, ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟುಕೊಟ್ಟ ವಿಷಯಗಳನ್ನು ಜಿಲ್ಲಾ ಕಲೆಕ್ಟರರ ಸುವ್ಯವಸ್ಥಿತವಾದ ನೋಕರರ ಕೈಯಿಂದ ತಪ್ಪಿಸಲಾಯಿತು. ಈಗಲೂ ಈ ದ್ವಿದಲಪದ್ಧತಿಯು ಇರಬೇಕೆ? ಅವಶ್ಯವೆ? ಒಂದೇ ಸೂತ್ರದಲ್ಲಿ ಆಡಳಿತ ನಡೆವಾಗ, ಈ ರೀತಿಯ ಏರ್ಪಾಡು ಅವಶ್ಯವಾಗಿದೆಯೆಂದು ಹೇಳಬರುವುದಿಲ್ಲ.

ಗ್ರಾಮವೂ ನಗರವೂ ತಮ್ಮ ತಮ್ಮ ಕರ್ತವ್ಯಗಳನ್ನು ತಾವು ತಾವಾಗಿ ನೋಡಿಕೊಳ್ಳುವಂತಾಗಬೇಕು. ಇದಕ್ಕೆ ಮಾತ್ರ ಪ್ರತಿನಿಧಿಗಳುಳ್ಳ ಜಾಡಾ ಸಂಸ್ಥೆಗಳಿರುವುದು ಅಗತ್ಯ. ಉಳಿದ ಕರ್ತವ್ಯಗಳೆಲ್ಲವೂ ಪ್ರಾಂತಿಕ ಸರಕಾರಕ್ಕೆ ಸಂಬಂಧಪಟ್ಟವು. ಆದರೂ, ಎಲ್ಲ ಗ್ರಾಮಗಳು ಮತ್ತು ನಗರಗಳ ಚಟುವಟಿಕೆಗಳನ್ನು ಒಮ್ಮೊಗವಾಗುವಂತೆ ತಿದ್ದುವುದಕ್ಕೊಂದು ಸಂಸ್ಥೆ ಬೇಕಾಗಬಹುದು. ಜಿಲ್ಲೆಯ ಮುಖ್ಯಾಧಿಕಾರಿಗಳು, ಜಿಲ್ಲೆಯ ನ್ಯಾಯಸಭಾ ಪ್ರತಿನಿಧಿಗಳು, ನಿಷ್ಠ ಮುಖಂಡ ಬಿನ್ ಸರಕಾರಿ ಗೃಹಸ್ಥರು ಇವರನ್ನೊಳಕೊಂಡ ಒಂದು ಸಂಸ್ಥೆ ಸಾಕಾಗುವುದು. ಜಿಲ್ಲೆಯ ವಿಷಯವಾದ ಯಾವತ್ತು ನ್ಯೂನಾತಿರಿಕ್ತಗಳನ್ನು ಪ್ರಾಂತಿಕ ಸರಕಾರಕ್ಕೆ ತಿಳಿಸುವ ಕರ್ತವ್ಯ ಇವರದು. ಸರಕಾರದ ಸೂಚನೆಗಳನ್ನೂ ಈ ಸಂಸ್ಥೆಯೇ ಜನ್ಮಕ್ಕೆ ತರುವುದಾಗಬೇಕು. ಪಂಚಾಯತುಗಳು ಮತ್ತು ಮ್ಯುನಿಸಿಪಾಲಿಟಿಗಳು ಈ ಸಂಸ್ಥೆಯ ಆಡಳಿತಕ್ಕೊಳಪಡಬೇಕು. ಹೀಗಾದರೆ,– ಆಡಳಿತವೂ ಒಂದೇ ಕೈಯಲ್ಲಿ ಉಳಿದು, ಖರ್ಚೂ ಕಡಿಮೆಯಾದೀತು, ಎಂಬುದೇ ಆ ಪ್ರಶ್ನೆಗೆ ಉತ್ತರ.

ಸ್ಫುಟವಿಚಾರಗಳು

ಸ್ವದೇಶೀ ಪಡಪೆಗಳು

ಕಾಂಗ್ರೆಸು ಮಂತ್ರಿಮಂಡಲಗಳು ಆಯಾ ಪ್ರಾಂತೀಯ ಸರಕಾರಕ್ಕೆ ಬೇಕಾಗುವ ಒಡವೆಗಳನ್ನು ವಿದೇಶದಿಂದ ತರಿಸಿಕೊಳ್ಳುವ ಬದಲಾಗಿ ದೇಶೀಯ ಕೈಗಾರಿಕೆಯ ಉತ್ಪನ್ನಗಳನ್ನೇ ಕೊಂಡುಕೊಳ್ಳುವುದು ಅಗತ್ಯವೆಂದು ಸರ್ಕ್ಯುಲಾರು ಹೊರಡಿಸಿವೆ. ಈ ಭಾಗದಲ್ಲಿ, ಚಿಕ್ಕ ಗುಡಿಕೈಗಾರಿಕೆಗಳ ಕಡೆಗೆ ಸರಕಾರದ ಇಲಾಖಾಧಿಕಾರಿಗಳು ಗಮನಕೊಡಬೇಕಾಗುವುದು ಅತ್ಯಾವಶ್ಯಕವಾಗಿದೆ, ಏಕೆಂದರೆ ಪ್ರಬಲವಾಗಿರುವ ಕಾರ್ಖಾನೆಯೊಂದರಿಂದಲೇ ಎಲ್ಲ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಬದಲಾಗಿ, ಅಲ್ಲಲ್ಲಿನ ನೂರಾರು ಚಿಕ್ಕ ಮನೆಗಳಲ್ಲಿ ತಯಾರಾಗುವ ಇಂತಹ ವಸ್ತುಗಳನ್ನು ಕೊಂಡುಕೊಂಡು ಅವುಗಳಿಗೆ ಪ್ರೋತ್ಸಾಹಕೊಡುವುದು ಉತ್ತಮವಾಗಿದೆ ಎಂದು ತಿಳಿಸಬೇಕಾಗಿದೆ. ಇದರಿಂದ ಗುಡಿಕೈಗಾರಿಕೆಗಳೂ ಸುವ್ಯವಸ್ಥಿತವಾಗಿ, ಅವುಗಳು ಅಭ್ಯುದಯ ಹೊಂದುವುದಕ್ಕೂ ಅವಕಾಶವುಂಟು. ಸರಕಾರವು ದೇಶೀ ವಸ್ತುಗಳನ್ನು ಕೊಂಡುಕೊಳ್ಳುವುದರಿಂದ ಹಣವನ್ನು ಉಳಿಸಿಕೊಳ್ಳಬರುವುದಲ್ಲದೆ, ಇಂತಹ ಕೈಗಾರಿಕೆಗಳಿಗೆ ಸ್ವಲ್ಪ ಸಂಪತ್ತು ಒದಗುವಂತೆ ಮಾಡಲೂ ಅವಕಾಶವುಂಟಾಗುವುದು. ಖಾದಿಯ ಪೂರೈಕೆ ಹೆಚ್ಚುವಂತೆ ಎರಡು ಲಕ್ಷ ರೂಪಾಯಿಗಳನ್ನು ಮದ್ರಾಸು ಸರಕಾರವು ಸಹಾಯಕ್ಕೆ ವಿಂಗಡಿಸಿಟ್ಟಿದೆ. ಸರಕಾರದ ಆಳುಗಳೆಲ್ಲರ ಯುನಿಫಾರ್ಮುಗಳು ಖಾದಿಯಾಗಬೇಕೆಂದು ಸಂಯುಕ್ತಪ್ರಾಂತ್ಯದ ಸರಕಾರವು ಅಪ್ಪಣೆಕೊಟ್ಟಿದೆ. ಮುಂಬಾಯಿ ಸರಕಾರವು ಈ ಭಾಗದಲ್ಲಿ ಏನು ಮಾಡಿರುವುದೆಂಬುದು ಇನ್ನೂ ತಿಳಿದಿಲ್ಲ. ಎಲ್ಲ ಕಾಂಗ್ರೆಸ್ ಮಂತ್ರಿಮಂಡಲಗಳೂ ಈ ವಿಷಯವನ್ನು ಒಂದೇ ಪ್ರಕಾರವಾಗಿ ಇತ್ಯರ್ಥಿಸಿದರೆ ಚೆನ್ನಾಗುತ್ತಿದ್ದಿತು.

ವಾಣಿಜ್ಯ ಸಂಧಾನ?

ಬ್ರಿಟಿಷರೂ ಹಿಂದೀಯರೂ ಪ್ರತಿನಿಧಿಗಳ ಮೂಲಕವಾಗಿ, ವ್ಯಾಪಾರಾಭಿವೃದ್ಧಿಗೆಂದು ನಡೆಸುವ ಸಂಧಾನದಲ್ಲಿ ಮಾತೆಲ್ಲವೂ ಪ್ರಕ್ಕಗೊಳಿಸುವುದೇನೆಂದರೆ, – ಬ್ರಿಟಿಷರಿಗೆ ಸುಂಕವನ್ನು ಇಳಿಸಿಕೊಡಲೇಬೇಕೆನ್ನುವುದು. ಇದರಿಂದಾಗುವ ಹಾನಿಯೆಂದರೆ, ಇತರ ರಾಷ್ಟ್ರಗಳು ನಮ್ಮಿಂದ ಕೊಂಡುಕೊಳ್ಳುವ ಸರಕನ್ನು ಕಡಮೆಮಾಡುತ್ತ ಬರುತ್ತವೆ. ಅವೆಲ್ಲ, ಇಂತಹ ಜಾಡಾ ರಿಯಾಯಿತಿಯು ಬ್ರಿಟಿಷರಿಗಿಲ್ಲದೆ ಬೇರೆ ದೇಶಗಳಿಂದಲಿ ತಮಗೆ ಬೇಕಾದುದನ್ನು ಆಮದು ಮಾಡಿಕೊಳ್ಳುತ್ತವೆ. ಕೆಲವಾದರೂ ಯುರೋಪೀಯ ರಾಷ್ಟ್ರಗಳೊಡನೆ ಇಂಡಿಯಾ ಸರಕಾರವು ಪ್ರತ್ಯೇಕ ವಾಣಿಜ್ಯ ಸಂಧಾನಗಳನ್ನು ಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ಇಂತಹ ರಾಷ್ಟ್ರಗಳೊಡನೆ ಇದುವರೆಗೆ ನಡೆದ ವ್ಯಾಪಾರದ ಕೂಲಂಕಷ ಅಂಕಸಂಖ್ಯೆಗಳನ್ನು ಪಡೆದು ಈ ವಿಷಯ ಸ್ವಲ್ಪ ವಿಮರ್ಶಿಸಲೇಬೇಕಾಗಿದೆ. ಏಂದರೆ, ಪ್ರತಿಯೊಂದು ರಾಷ್ಟ್ರದಿಂದಲೂ ನಮ್ಮಲ್ಲಿನ ವ್ಯಾಪಾರಕ್ಕೆ ಸಂಬಂಧಪಡುವ ಮಾಹಿತಿಯನ್ನೆಲ್ಲ ಸರಕಾರವು ಕೂಡಿಸಬೇಕು. ಹೊರತು ಬ್ರಿಟಿಷರೊಡನೆ ಮಾತ್ರ ವ್ಯಾಪಾರಕ್ಕೆ ಅನುಕೂಲವಾಗುವಂತೆ ಹವಣಿಸುವುದರಿಂದ ನಮ್ಮ ವ್ಯಾಪಾರದ ಮೊತ್ತವು ಸಂಕೋಚವಾಗುವುದರಲ್ಲಿ ಸಂದೇಹವಿಲ್ಲ.

1-1-1938

ಹೊಸ ಸಂಪುಟವು ಪ್ರಾರಂಭವಾಗುವುದು

ಸಮಸ್ತರಿಗೂ

ಸ್ವದೇಶಾಭಿಮಾನಿಯ

ಹೊಸ ಸಂಪುಟದ

ಅಭಿವಂದನೆಗಳು

1-1-1938

ಲೋರ್ಡ್ ಜೆಟ್ಲೆಂಡರ ಮನಸ್ಸಾಕ್ಷಿ.

"ಪ್ರಾಂತಿಕ ಸರಕಾರಗಳು ಹೇಗೆ ಅಕ್ರಿಯಂತೆ ಸಾಕಷ್ಟು ಸ್ವಾತಂತ್ರ್ಯ ನಡೆದ ಕೂಡಲೆ ಕ್ರಾಂತಿಕಾರಕರ ಮಾಯವಾಗುವರೆಂದು ನಾನಂತೂ ಏನಿಂದಲೂ ನಂಬಿದ್ದೆ ಎಂದು ಇಂಡಿಯಾ ಸೆಕ್ರಿಟರಿಯವರು ಹೇಳಿರುವುದರಲ್ಲಿ ಎರಡು ಅಭಿಪ್ರಾಯಗಳನ್ನು ಹೊರಗೆಡದಂತಾಗಿದೆ. ಪ್ರಾಂತಿಕ ಸ್ವರಾಜ್ಯವನ್ನು ಪಡೆಯಲು ಕಾಂಗ್ರೆಸ ಪ್ರಯತ್ನಿಸುವಾಗಲೇ ಈ ಕ್ರಾಂತಿಕಾರರ ನಡೆನುಡಿಗಳನ್ನು ಪ್ರೋತ್ಸಾಹಿಸಿದ್ದರೇ? ಎಂದು ಇತರರು ಕೇಳುವಂತಾಗಿದೆ. ಸರ್ವಿಸುಗಳು (ನೋಕರರು) ಈಗ ಪ್ರಾಂತಿಕ ಸರಕಾರಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ಆಜ್ಞೆಯಂತೆ, ಕ್ರಾಂತಿಕಾರಕರ ಕಡೆಗೆ ದೃಷ್ಟಿಯನ್ನು ಅಷ್ಟು ಚೆನ್ನಾಗಿ ಒಡದೆ, ಒಟ್ಟಾಗಿ ಕೆಲಸಮಾಡುತ್ತಿರುವ ಕಾರಣ, ಕ್ರಾಂತಿಕಾರಕರು ಅಡಗಿದ್ದಾರೆ, ಅಥವಾ ಗಣನೆಗೆ ಒರುವಂತಿಲ್ಲ ಎಂದೂ ಇತರರು ವಿಮರ್ಶಿಸುತ್ತಾರೆ. ಒಟ್ಟಾಯರ ಪ್ರವೃತ್ತಿಗಳೆಂತೂ, ಸಾಮ್ರಾಜ್ಯವೇ ಹೋಯ್ತೆಂದು ಗೋಳಿಡುತ್ತಾ ಒಂದ ಕರ್ಕಶ ಕೂಗನ್ನು ಇಂಗ್ಲೆಂಡಿನಲ್ಲೆಲ್ಲ ಎಬ್ಬಿಸಿರುವಾಗ, ಸೆಕ್ರೆಟರಿಯವರು ಈ ರೀತಿಯಾಗಿ ಪಾರ್ಲಿಮೆಂಟಿನಲ್ಲಿ ವಿವರಿಸಿರುವುದರಿಂದ ಸರಕಾರಕ್ಕೆ ಸ್ವಲ್ಪ ಧೈರ್ಯ ಹೆಚ್ಚಿ, ಒಟ್ಟಾಯರ ಮಾತಿನ ಬಲೆ ಇಳಿಯುವಂತಾಗಿದೆ. ಕಾಂಗ್ರೆಸ್ಸಿಗೆ ಈಗ ಇರುವ ಅಡಚಣೆ ಎಂದರೆ, ಹಣದ್ದು, ಮಾತು ಕೊಟ್ಟಂತೇನೂ ನಡೆಸಬಾರದೆ ಇದ್ದುದು ಎಂದರೆ, ಮುಂಬಿನ ಗೋಜುಗೊಡವೆಯೇನೂ ಇಲ್ಲದೆ ಕಾಂಗ್ರೆಸು ಚುನಾವಣೆಗೆ ನಿಂತಾಗ ನಾನಾ ರೀತಿಯಾಗಿ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು ಗದ್ದುದು ತಪ್ಪಾಗಿದೆ ಎಂದೂ ಸೂಚಿತವಾಗುತ್ತದೆ. ಅಕ್ಕಿನ ಹಣೆಯ ಬರಹದ ಮಟ್ಟಿಗೆ ವಿಶೇಷವಾದ ಬದಲಾವಣೆಗಳನ್ನು ಮಾಡುವುದು ಎಂತಹ ಮಂತ್ರಿಗಳಿಗೂ ಸಾಧ್ಯವಿಲ್ಲದರಿಂದ, ಈ ವಿಚಾರವನ್ನು ಇಲ್ಲಿ ನೆನಪಿನಲ್ಲಿಟ್ಟುಕೊಳ್ಳುವುದು ಉಚಿತವಾಗಿದೆ.

ಶ್ರೀ ಸುಭಾಷಚಂದ್ರ ಬೋಸರು

ಇಂಗ್ಲೆಂಡಿಗೆ ಬರಬಹುದೆಂದೂ ಸೆಕ್ರಿಟರಿ ಪ್ರಭುಗಳು ಅಪ್ಪಣೆಕೊಡಿಸಿರುವುದೂ ಸಂತೃಪ್ತಿಕರವಾಗಿದೆ. ಹೊಸ ವರ್ಷದ (ಮುಂದಣ ವಾರ)ಲ್ಲಿ ಬೋಸರು ಲಂಡನಿಗೆ ತಲಪುವರು. ಅಲ್ಲಿ ಅವರನ್ನು ಉತ್ತಮ ರೀತಿಯಲ್ಲಿ ಸ್ವಾಗತ ಮಾಡಿಕೊಳ್ಳಬೇಕೆಂದು ಬಹಳ ಮಂದಿ ಕುತೂಹಲಗೊಂಡಿರುವರು. ಇವರು ಇದುವರೆಗೆ ಇಂಗ್ಲೆಂಡಿನೊಳಗೆ ಕಾಲಿಡಬಾರದೆಂದು ಸಾರಿದ್ದೇಕೆಂದು ಯಾರಿಗೂ ತಿಳಿದಿಲ್ಲ. ಇಂಡಿಯದಿಂದ ವೈದ್ಯಕೀಯ ಉಪಚಾರಕ್ಕಾಗಿ ಮಾತ್ರ ಅವರು ವಿಯನ್ನಾಕ್ಕೆ ಹೋಗಲು ಅವರಿಗೆ ಅಪ್ಪಣೆ ದೊರೆತಾಗ, ಇವರು ತಾಜಾ ಕ್ರಾಂತಿಕಾರರೆಂಬ ಭಾವನೆಯು ಸರಕಾರದ ತಲೆಯಲ್ಲಿದ್ದಿರಬೇಕು. ಏನಂಗಳ ವಿಶಲಭಾಯಿ ಪಟೇಲರನ್ನೂ ಹೀಗೆ ಭಾವಿಸಿದ್ದರಿಂದ ಮೇಲೆ ಸರಕಾರದ ಮನಸ್ಸು ಎಂತಹ ಭಾವನೆಗಳಿಂದ ಮಗ್ನವಾಗಬಹುದೆಂದು ಹೇಳಬರುವುದುಂಟೆ? ಅತಿ ಪ್ರಸಿದ್ಧ ಯುರೋಪೀಯ ಕಿಡಿಗಳೂ ಕೂಡ ಇಂಗ್ಲೆಂಡಿನಲ್ಲಿ ತುಂಬ ಇರುವರೆಂದೂ, ಮತ್ತೂ ಮತ್ತೂ ಬರುತ್ತಿರುವರೆಂದೂ ಕೋರ್ಟುಗಳೆಲ್ಲ ಅಲ್ಲಿ ಸಾರುತ್ತಿವೆಯಾದರೂ,– ಇವರೊಬ್ಬರಿಗೆ ಅತ್ತ ಹೋಗದಂತೆ ಮಾಡಿದುದರಿಂದ, ಲಂಡನಿನ ವಾತಾವರಣಕ್ಕೇನೂ ಹಾನಿಯಾಗಿಲ್ಲವಷ್ಟೆ, ಅಥವಾ ಹಾನಿಯಾಗುತ್ತಿದ್ದುದೂ ತಪ್ಪಿತಷ್ಟೆ–ಎನ್ನಬೇಕು. ಇಂಗ್ಲೆಂಡಿನ ರಾಜಕೀಯ ಅಭಿಪ್ರಾಯಗಳನ್ನು ಸಾರುವವರಿಗೆ ಯಾವ ತರದ ತಡೆಯೂ ಇಲ್ಲ, ಏಕೆಂದರೆ, ಎಂತಹನ ವಾಗ್ಜಾಲದಿಂದಲೂ ಬ್ರಿಟಿಷರು ಮೋಸಹೋಗುವಂತಿಲ್ಲ, ಕ್ರಿಕೆಟ್ ಫೂಟ್‌ಬೋಲ್‌ಗಳಿಗೆ ಮನಸ್ಸು ಕೊಡುವಷ್ಟು ಚೆನ್ನಾಗಿ ರಾಜಕೀಯ ಅದರಲ್ಲೂ ಇಂಡಿಯದ ರಾಜಕೀಯ ವಿಷಯಗಳಿಗೆ ಇಂಗ್ಲೆಂಡು ಮನಗೊಡುವಂತಿಲ್ಲ, ಮುಖ್ಯವಾಗಿ, ಇಂಡಿಯಾ ಸರಕಾರದ ಮನಸ್ಸಿಗೆ ಸರಿತೋರಿದವರನ್ನ ಮಾತ್ರ ಇಂಗ್ಲೆಂಡಿನ ಗಾಳಿ ಕಟ್ಟದಂತೆ ಮಾಡುವರು ಎಂದರ್ಥವಾಗುವುದು.

ಜಪಾನಿನ ವಿನೋದ

ಪೂರ್ವ ಏಷ್ಯಾ ಖಂಡದ ನೈತಿಕ ತತ್ವಗಳನ್ನು ಸಾರುವುದಕ್ಕಾಗಿಯೆ, ಸಮತಾವಾದವನ್ನು ಅಡಗಿಸಿ, ನೆರೆಯ ರಾಜ್ಯಗಳೊಡನೆ ಮೈತ್ರಿಯಿಂದ ಇರಬೇಕೆನ್ನುವ ಸದುದ್ದೇಶದಿಂದ ಮಾತ್ರವೇ ಜಪಾನು ಚೀನದ ಒಳನುಗ್ಗಿದೆ ಎಂದು ಜಪಾನು ವಿನೋದವಾಗಿ ಸಾರುತ್ತಿದೆ. ಸಮತಾವಾದಗಳಲ್ಲಿ ಮುಖಂಡರಾದವರನ್ನು ಚೀನೀಯ ಸರ್ವಾಧ್ಯಕ್ಷ ಚಿಯಾಂಗ್ ಕೈಶೆಕ್ ನೇ ಎಂದೋ ಕೊಂದಿಕ್ಕಿರುವನು. ಆದರೂ ಸಮತಾವಾದ ವಿರೋಧಿಗಳೆಂದು ಸಾರಿಕೊಂಡ ನಾತ್ಸಿಕ್ಕೆ ಜಪಾನಿಗೆ ಅನುಕೂಲವಾಗಿ ಕೆಲವು ರಾಷ್ಟ್ರಗಳು ಬೆಂಬಲಕ್ಕೆ ದೂರೆಯಬಹುದೆಂಬ ನಂಬುಗೆ ಜಪಾನಿಗೆ ಇದ್ದೇ ಇದೆ, ಜರ್ಮನಿ ಇಟೆಲಿಗಳೂ ಇದೇ ಬಗೆಯ ನಂಬುಗೆ ಹಬ್ಬಿಸಿವೆ. ನಿಜವಾಗಿ, ಸಮತಾವಾದವನ್ನು ಅಡಗಿಸಬೇಕಾದರೆ, ಅದರ ಕಾರ್ಯಸ್ಥಾನವಾಗಿರುವ ರಷ್ಯವನ್ನೇ ಜಪಾನು ನುಗ್ಗಬಾರದು? ರಷ್ಯವನ್ನು ಧ್ವಂಸಮಾಡಿದರೆ, ಲೋಕದಲ್ಲೆಲ್ಲಿಯೂ ಮತ್ತೆ ಸಮತಾವಾದವೇ ಇಲ್ಲವೆಂದಾಗುವುದಿಲ್ಲವ? 'ಏಶ್ಯದ ನೈತಿಕ ತತ್ವಗಳು ಯಾವುದೊಂದು ನಿಷ್ಕಾರಣವಾಗಿ ನೆರೆಯವರನ್ನು ಧ್ವಂಸಮಾಡುವ ಜನಾಂಗಗಳಿಗೇ ಮಾತ್ರ ಗೊತ್ತೇ? ಸ್ಪೆಯಿನಿನ ವಿಷಯ ಮುಸ್ಸೋಲಿನಿಯು ಮಾತಾಡುವಾಗಲೂ, ಮಡಿಟರೇನಿಯನ್ನು ತಾನೆ ಭದ್ರಪಡಿಸಿಕೊಳ್ಳಬೇಕೆನ್ನುವಾಗಲೂ, ಇವೇ 'ಏಶ್ಯದ ನೈತಿಕ ತತ್ವಗಳನ್ನ ಅನುಸರಿಸುತ್ತಿರುವನೇ' ಎಲ್ಲಕ್ಕೂ ಹೆಚ್ಚಾಗಿ,–ಜಪಾನಿಗೆ ವಿರುದ್ಧವಾಗಿರುವ ಯಾವ ಪ್ರಸಂಗವೂ ಎಲ್ಲಿ ನಡೆಯುವುದೋ ಆ ರಾಷ್ಟ್ರವನ್ನು ಬಗ್ಗು ಬಡಿವುದೇ ಜಪಾನಿನ ಕರ್ತವ್ಯವೆಂದು ಮಂತ್ರಿಗಳೊಬ್ಬರು ಸಾರಿದ್ದಾರೆ. ನಿಜ ಅಭಿಪ್ರಾಯವೆಷ್ಟಿರಬಹುದು ಹಾಗೆಂದು, ಮತ್ತೊಂದು ಜನಾಂಗದ ನಿರಸ್ತ್ರರಾದ ಹೆಂಗಸು ಮಕ್ಕಳನ್ನು ಸಹ ಗುಂಡಿಕ್ಕಿ ಧ್ವಂಸಮಾಡಿದ ಕೂಡಲೆ, ಅವರ ಜಪಾನಿನ ಆರಾಧಕರಾಗುವರೆ? ಎಂಬುದನ್ನೇ ಈ ಮಂತ್ರಿಗಳು ಆಲೋಚಿಸಲಾರರು? ಇದಲ್ಲದೆ ಈಗ ಬ್ರಿಟಿಷರು ವಿರುದ್ಧವಾಗಿ ಜಪಾನಿನಲ್ಲಿ ಎಷ್ಟೋ ಮಂದಿ ಸಾರುವವರಿದ್ದಾರೆಯೆ ಇಲ್ಲವೆ? ಹಾಗೆಂದು ಬ್ರಿಟಿಷರೂ ಜಪಾನಿಗೆ ನುಗ್ಗಿ, ಅವರನ್ನು ಅಡಗಿಸಿದರೆ, ಜಪಾನು ಬ್ರಿಟಿಷರ ಮೈತ್ರಿಯನ್ನು ಪಡೆವುದೆ? ಅಥವಾ ಜಪಾನು ಸರಕಾರವೆ ಅಂತಹ ಬ್ರಿಟಿಷ ದ್ರೋಹಿಗಳನ್ನ ದಂಡಿಸಿ ಬ್ರಿಟಿಷರ ಮೈತ್ರಿಯನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನಿಸಬಾರದೆಂದಿದೆಯೆ?

ವಾರದ ವಾರ್ತೆಗಳು:

ಸ್ವದೇಶಿಗೆ ಸರಕಾರದ ಪ್ರೋತ್ಸಾಹ— ಸೇಲಮಿನಲ್ಲಿ ಪುಂಡರ ಗಲಾಟೆ— ಇನ್ನೊಂದು ಮಹಾ
ಯುದ್ಧವಾಗುವುದಿಲ್ಲ— ಜಪಾನಿಯರ ಕುರಿತು ಬ್ರಿಟಿಷ ಮುತ್ಸದ್ದಿ, ಅಮೇರಿಕದ ಭೀತಿ.
. ಹಿಂದೂ ಮುಸ್ಲಿಂ ಐಕ್ಯ— ಖಾದಿ ಪ್ರದರ್ಶನದಲ್ಲಿ ಗವರ್ನರರು— ಮಂತ್ರಿಗಳಿಗೆ ಜಖಂ!

ಅಹಮ್ಮದಾಬಾದಿನಲ್ಲಿ ಮುಷ್ಕರ ಕಾರಣಗಳು ಹೆಚ್ಚುತ್ತಾ ಬಂದಿವೆ. ಮುಂಬೈ ಕಾಂಗ್ರೆಸ್ ಸರಕಾರವು ಮುಷ್ಕರಗಳನ್ನು ತಡೆಯುವರೆ ಪ್ರಯತ್ನಗೊಳ್ಳುತ್ತದೆ

ಮಜೂರ ಸಂಘಗಳಿಗೆ ಮನ್ನಣೆ ಕೊಡಲು, ಗಿರಣಿ ಮಾಲಕರು ಸಿದ್ಧವಿಲ್ಲದರೆ ಪರಿಣಾಮವಾಗಿ ಕಾನಪುರದಲ್ಲಿ ಭಯಂಕರ ಮುಷ್ಕರ ಪರಿಸ್ಥಿತಿ ಉಂಟಾಗಬಹುದೆಂದು ಮಜೂರ ನಾಯಕರ ಎಚ್ಚರಿಕೆ ಕೊಟ್ಟಿರುವರು

ಸೆಡಿಶನ್‌ವುಳ್ಳ ಭಾಷಣಗಳನ್ನು ಮಾಡಬಾರದಾಗಿ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸರಕಾರದ ಅಪ್ಪಣೆ ಹೊರಟಿರುತ್ತದೆ

ಚೀನಾದಿಂದ ಮೈತ್ರಿ ಮಂಡಳವೊಂದು ರಷ್ಯಾಕ್ಕೆ ತೆರಳುವುದ. ಚೀನಾ ಸೈನ್ಯ ಮಂಡಳದಲ್ಲಿ ಅನೇಕ ಕೊಮ್ಯುನಿಷ್ಟ ಸಂಗ್ರಾಮಿಕರ ನೇಮಕವಾಗಿ, ಚೀನಾವು ಜಪಾನನ್ನು ಎದುರಾಯಿಸಿ, ಹೊರಗಟ್ಟಲು ಮಹಾಸಿದ್ಧತೆಗಳನ್ನು ಮಾಡುತ್ತಿದೆ ಚೀನಾ ಸರಕಾರಕ್ಕೆ ರಷ್ಯಾ ದೇಶದಿಂದ ಸರ್ವಸಹಾಯವು ಒದಗುವುದಂತೆ

ದಕ್ಷಿಣ ಚೀನಾದ ಅತಿಕ್ರಮವನ್ನು ಜಪಾನು ಈಗ ಕೈಕೊಳ್ಳುವುದಿಲ್ಲ ಕಾರಣ ಅದರೊಡನೆ ಅದಕ್ಕೆ ಬೇಕಾದಷ್ಟು ಸೈನ್ಯ ಮತ್ತು ಶಸ್ತ್ರ ಸಂಗ್ರಹವು ಇರವುದಿಲ್ಲ

ಸಂಯುಕ್ತ ಪ್ರಾಂತದ ಒಂದು ಹಳ್ಳಿಯಲ್ಲಿ ಒಕ್ಕಲು ಧನಿಗಳೊಳಗೆ ಮಹಾ ಗಲಭೆ ಉಂಟಾಗುತ್ತುದು, ಗೋಳಿಬಾರಿನಿಂದ ತಡೆಯಲಾಯಿತು

ಮುಂಬೈಯಲ್ಲಿ ಜನವರಿ ತಾ ೨೦ರಲ್ಲಿ ಜರಗುವ ಅ ಭಾ ಕಾ ವರ್ಕಿಂಗ್ ಕಮಿಟಿಗೆ ಹೋಗಲು, ಅನಾರೋಗ್ಯದಿಂದ ರಾಜಾಜಿಯವರಿಗೆ ಅಸಾಧ್ಯವಾದುದರಿಂದ ಅವರನ್ನು ಕಾಣಲು ಸರದಾರ್ ಪಟೇಲರು ಮದ್ರಾಸಿಗೆ ಚಿತ್ತೈಸಿರುವರು

ಜಪಾನೀಯರ ಚೀನದಲ್ಲಿ ಇನ್ನೆರಡು ನಗರಗಳನ್ನು ಹಿಡಿದಿರುವರು ಯುದ್ಧಜಹಜು, ಸೈನ್ಯಮಂಡಳ, ವಿಮಾನಗಳು, ಇತ್ಯಾದಿ ಉಪಾಯಗಳಿಂದ ಜಪಾನೀಯರು ಘೋರ ಅತಿಕ್ರಮವನ್ನು ನಡೆಯುಸುತ್ತಿದ್ದಾರೆ

ಕೆಲವು ಮಾರ್ಪಾಟುಗಳಾಗಿ ಬಿಹಾರಿನ ಅಸೆಂಬ್ಲಿಯಲ್ಲಿ ಮಂಜೂರಾದ ಒಕ್ಕಲುಗಳ ಉಪಶಮನ ಬಿಲು ಅಸಮಾಧಾನಕರವೆಂದೂ, ಅದು ಕಾಂಗ್ರೆಸ್ ನಿರ್ಣಯಗಳಿಗೆ ತಕ್ಕುದಾಗಿಲ್ಲವೆಂದೂ, ಕೆಲವು ಅಸೆಂಬ್ಲಿಯ ಕಾಂಗ್ರೆಸ್ ಸಭಾಸದರು, ಪ್ರತಿಕೂಲಿಸಿ ಹೋರಡಿಸಿರುವರು

ಬೆಳಗಾಂವಿನಲ್ಲಿ ಪ್ರಸಿದ್ಧ ಲಿಂಗಾಯತ ಮಹನೀಯರು ಕಾಂಗ್ರೆಸ್ಸಿಗೆ ಸೇರಿರುವರು

ಸಂಯುಕ್ತ ಪ್ರಾಂತ್ಯದ ರಾಜಕೀಯ ಪರಿಷತ್ತು ಅಲಿಗ್ರಾಹದಲ್ಲಿ ನಡೆಯುತ್ತಿದೆ ರಾಷ್ಟ್ರಪತಿ ಜವಾಹರಲಾಲ ನೆಹರು, ಎಂ. ಎನ್. ರಾಯ್ ಮೊದಲಾದ ಮಹನೀಯರು ಆ ಪರಿಷತ್ತಿಗೆ ಚಿತ್ತೈಸಿರುವರು

ಎಲ್ಲಾ ಪ್ರಾಂತ್ಯಗಳ ಆರೋಗ್ಯ ಸಚಿವರ ಪರಿಷತ್ತು ಪ್ರಧಾನಮಂತ್ರಿ ರಾಜಾಜಿಯವರಿಂದ ಪ್ರಾರಂಭಿಸಲ್ಪಟ್ಟು ಮದ್ರಾಸಿನಲ್ಲಿ ನಡೆಯುತ್ತದೆ.

ಅಖಿಲ ಭಾರತ ಖಾದಿ ಮತ್ತು ಸ್ವದೇಶಿ ಪ್ರದರ್ಶನವು ಮದ್ರಾಸಿನಲ್ಲಿ ಬಹಳ ಯಶಸ್ವಿಯಾಗಿ ಜರಗಿತು. ಮದ್ರಾಸ್ ಗವರ್ನರರಾದ ಲಾರ್ಡ್ ಎರಸ್ಕಿನರು ಓರ್ವ ಪ್ರೇಕ್ಷಕರಾಗಿ ಪ್ರದರ್ಶನಕ್ಕೆ ಚಿತ್ತೈಸಿದ್ದರು

ಡಾ॥ ಸುಬ್ಬರಾಯನರು.

ಚೀನಾವನ್ನು ರಷ್ಯದೊಡನೆ ಕೂಡಿಸಲು ೩೦೦೦ ಮೈಲು ಉದ್ದದ ಒಂದು ಪಕ್ಕಾರಸ್ತೆಯ ಸಿದ್ಧತೆಯಲ್ಲಿ ೭ ಲಕ್ಷ ಚೀನಿಯ ಮಜೂರರು ದುಡಿಯುತ್ತಿದ್ದಾರೆಂದು ವಾರ್ತೆ ಬಂದಿದೆ

ಉತ್ತರ ಚೀನದ ಸಾಂಪತ್ತಿಕ ಸಫಲಕರಣೆಯನ್ನು ನಡೆಸುವದೇ ಜಪಾನಿಯ ಸರಕಾರವು ಒಂದು ಯೋಜನೆಯನ್ನು ಕಲ್ಪಿಸಿರುವುದು

ವಿಮಾನಧಾಳಿಯಿಂದ ತಪ್ಪಿಸಿಕೊಳ್ಳುವರೆ ಜನರನ್ನು ತರಬೇತು ಮಾಡಲು ಮುಂಬಾಯಿಯಲ್ಲಿ ಮೊನ್ನೆರಾತ್ರೆ 'ಬ್ಲೇಕ್ ಔಟ್' ನಡೆಯಿತು ನಗರ ಎಲ್ಲಾ ದೀಪಗಳನ್ನು ನಂದಿಸುವುದೆ 'ಬ್ಲಕ್ಔಟ್'

ಹೀಗೆ ಹಿಂದೂದೇಶದ ಅನೇಕ ಪ್ರಮುಖ ನಗರಗಳಲ್ಲಿ ವಿಮಾನಧಾಳಿಯ ಭಯವುಂಟಾಗಿರುತ್ತದೆ ಜಪಾನಿಯರು ಈಗ ಚೀನಾದಲ್ಲಿ ಯುದ್ಧವನ್ನು ನಡೆಸುತ್ತಿರುವುದೇ ಈ ಭೀತಿಗೆ ಕಾರಣ

ಬಿಹಾರಿನ ಹಣಕಾಸಿನ ಸಚಿವರಾದ ಶ್ರೀ ಅನುಗ್ರಸಿನ್ಹರವರು ಮೊನ್ನೆ ದಿನ ಮೋಟಾರು ಅಪಘಡಕ್ಕೆ ತುತ್ತಾಗಿ ಭಯಂಕರ ರೀತಿಯಲ್ಲಿ ಗಾಯಗೊಂಡಿರುವರು ಇವರು ರಾತ್ರಿಸಮಯ ತನ್ನ ಕಾರಿನಲ್ಲಿ ಪ್ರವಾಸಗೈಯ್ಯುತ್ತಿರುವಾಗ ಈ ಅಪಘಡವು ನಡೆದು, ಕಾರಿನ ಎದುರುಸೀಟಿನಲ್ಲಿ ಕುಳಿತಿದ್ದ ಓರ್ವ ಪತ್ರಿಕೋದ್ಯಮಿಗಳು ಕೂಡಲೆ ಮೃತರಾದರು ಮಂತ್ರಿವರ್ಯರ ಕಾಲುಗಳೆರಡೂ ತುಂಡಾಗಿವೆ ಮಂತ್ರಿಗಳ ಸ್ಥಿತಿಯ ಕುರಿತು, ಪ್ರಥಮತ ವೈದ್ಯರಿಗೆ ಭಯವಿದ್ದುದು ಈಗ ನ್ಯಾಯವಾಗಿರುತ್ತದೆ. ಮಂತ್ರಿಯರು ಪಾಟ್ನಾದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು

ಲೋರ್ಡ್ ಲೋಥಿಯನರು ರಾಷ್ಟ್ರಪತಿಯರೊಡನೆ ನಡೆಸಿದ ಸಂಭಾಷಣೆಯಲ್ಲಿ ಫೆಡರೇಶನಿನ ಕುರಿತು ಚರ್ಚಿಸಿದರಂತೆ, ಸಮಸ್ತಹಿಂದೂದೇಶವನ್ನು ಪ್ರವಾಸಗೈದು, ಕಾಂಗ್ರೆಸ್ ನಾಯಕರನ್ನು ಕಂಡು ಫೆಡರೇಶನಿನ ಕುರಿತು ಇರುವ ಕಾಂಗ್ರೆಸ್ಸಿನ ವಿರೋಧಾಭಿಪ್ರಾಯವನ್ನು ತಿಳಿದು ಕಾಂಗ್ರೆಸ್ಸಿಗೆ ಬೇಕಾದ ಕೆಲವು ಬದಲಾವಣೆಗಳನ್ನು ಮಾಡಿ, ಫೆಡರೇಶನನ್ನು ರೂಢಿಗೆ ತರುವುದೇ ಲೋಥಿಯನರ ಪ್ರವಾಸದ ಉದ್ದೇಶವೆಂದು ಕೆಲವೆಡೆಗಳಲ್ಲಿ ಊಹನೆಗಳಿವೆ

ಕೊಮ್ಯುನಿಷ್ಟ ಚಳವಳಿಕ್ಕೆ ವಿರೋಧವಾಗಿ ಜಪಾನೀ ಸರಕಾರವು ಕಠಿಣ ಕ್ರಮಗಳನ್ನು ಮಾಡಿರುವುದು. ಮೊನ್ನೆ ಅನೇಕರು ಸೆರೆಹಿಡಿಯಲ್ಪಟ್ಟಿರುವರು ಕೊಮ್ಯುನಿಷ್ಟವಾದಿಗಳಿಗೆ ಭಯಂಕರ ತರದ ಶಿಕ್ಷೆಯನ್ನು ವಿಧಿಸಬೇಕೆಂದು ಜಪಾನ ಸರಕಾರದ ಅಪ್ಪಣೆಯಾಗಿರುತ್ತದೆ

ಬ್ರಿಟನು ಚೀನಾ ಸಮರರಂಗದಲ್ಲಿ ಇಳಿದರೆ, ಜಪಾನರು ತಮ್ಮ ಚಟುವಟಿಕೆಗಳನ್ನು ಬಿಟ್ಟುಬಿಡಬಹುದೆಂದು ಚೀನಾದಲ್ಲಿರುವ ಬ್ರಿಟಿಷ ಮಾಜಿ ರಾಯಭಟರ ಅಭಿಪ್ರಾಯವಾಗಿರುತ್ತದೆ

ಹಿಂದೂದೇಶದ ಜನರಲ್ಲಿ ಸಾಮಾಜಿಕ ಇತ್ಯಾದಿ ಸುಧಾರಣೆಗಳಿಗಾಗಿ ಒಂದು ತರದ ನವಜಾಗೃತಿಯುಂಟಾಗಿರುವುದೆಂದು ಅಂತರ್ರಾಷ್ಟ್ರೀಯ ಮಜೂರ ಸಂಸ್ಥೆಯ ಚಾಲಕರಾದ ಎಂ. ಬಟ್ಲರ್ ಇವರ ಹಿಂದೂದೇಶದ ಪ್ರವಾಸದ ಅನುಭವವಾಗಿರುತ್ತದೆ

ಬ್ರಿಟಿಷ್ ಪಾರ್ಲಮೆಂಟಿನ ಕ್ರಿಸ್ ಮಸ್ ಅಧಿವೇಶನದಲ್ಲಿ ಅಂತರ್ರಾಷ್ಟ್ರೀಯ ವಿಚಾರವು ವಿಮರ್ಶೆಗೆ ಬಂದಾಗ, ಮುಸಲೋನಿಯ ಕುರಿತು ವಿಶೇಷ ಖಂಡನೆಯ ನಡೆಯಿತು

ಗ್ರಾಮ ಪಂಚಾಯತುಗಳಿಗೆ ಹೆಚ್ಚಿನ ಅಧಿಕಾರಗಳು ದೊರಕಬೇಕೆಂದ ಸೇಲಂನಲ್ಲಿ ಜರಗಿದ ಸ್ಥಳೀಯ ಸಂಸ್ಥೆಗಳ ನೋಕರರ ಪರಿಷತ್ತಿನಲ್ಲಿ ಕೋರಲಾಯಿತು

ಸರಕಾರದ ಉಪಯೋಗದ ಬಗ್ಗೆ ಯಾವತ್ತು ಸಾಮಾನುಗಳನ್ನು ಸ್ವದೇಶಿಯಲ್ಲೆ ಪಡಕೊಳ್ಳಬೇಕಾಗಿ ಮದ್ರಾಸು ಸರಕಾರದ ಪ್ರಕಟಣೆಯಾಗಿರುತ್ತದೆ

ಒಕ್ಕಲುಗಳಿಗೆ ಉಪಶಮವ ದೊರಕಿಸುವ (ಗೇಣಿ ಕುರಿತ ಒಂದು ಬಿಲು) ಬಿಹಾರಿನ ಕಾಂಗ್ರೆಸ್ ಸರಕಾರದಿಂದ ಮಂಜೂರ ಮಾಡಲ್ಪಟ್ಟಿರುವುದು

ಜಪಾನಿನ ಉತ್ಪತ್ತಿಯ ಮೇಲೆ ಅಧಿಕ ತೆರಿಗೆಯನ್ನು ಹೇರಿಸುವ ಕ್ರಮದ ಕುರಿತು ಬಿಹಾರ್ ಎಸೆಂಬ್ಲಿಯಲ್ಲಿ ಚರ್ಚೆ ನಡೆಯಿತು

ಶಾಲೆಗಳಲ್ಲಿ ಕಾಯಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆಂಬ ಸೂಚನೆಯು ಮುಂಬಾಯಿ ಕಾಂಗ್ರೆಸ್ ಸರಕಾರದ ಮುಂದೆ ಬಂದಿರುತ್ತದೆ

ಕರಾಚಿಯ ಡಿ ಜೆ. ಸಿಂಧ್ ಕಾಲೇಜಿನಲ್ಲಿ ನಡೆಯುತ್ತಿರುವ ಮುಷ್ಕರವು ಕೊನೆಗೊಂಡಿರುತ್ತದೆ

ಚೀನಾ ಪ್ರದೇಶದಲ್ಲಿ ತಮಗೆ ಜಪಾನೀಯರಿಂದ ಅನೇಕ ಅವಮಾನ, ನಷ್ಟಗಳು ಲಭಿಸಿದ್ದರೂ, ಬ್ರಿಟಿಷರ ಜಪಾನಿಯರ ಬರೆ ಕ್ಷಮಾಪಣೆಯಿಂದ ತೃಪ್ತರಾಗಿರುವರು ಚೀನಾ ಸಮುದ್ರದಲ್ಲೂ ಶಾಂತಸಾಗರದಲ್ಲೂ ಸಂಗ್ರಾಮಕಾರ್ಯದಲ್ಲಿ ತೊಡಗಲು ಬ್ರಿಟನಿಗೆ ಅಷ್ಟು ಧೈರ್ಯವಿರುವುದಿಲ್ಲವಂತೆ ಕಾರಣ ಅಲ್ಲಿ ಜಪಾನಿಯರ ಬಲವು ಅತ್ಯಧಿಕವಾಗಿದೆ

ಅಂತೆಯೇ, ಸಂಯುಕ್ತ ಅಮೇರಿಕವು ತನ್ನದೊಂದು ಹಡಗದ ಮೇಲೆ ಜಪಾನಿಯರಿಂದ ಅತ್ಯಾಚಾರ ನಡೆದ ದಕ್ಕೆ ಬಹಳವಾಗಿ ರೇಗಿ ಜಪಾನಿನೊಡನೆ ಪ್ರತಿಕೂಲಿಸಿ ಅಮೇರಿಕವೇನೊ ಚೀನಾ ಯುದ್ಧಕ್ಕೆ ಇಳಿಯಬಹುದೆಂಬ ನಿರೀಕ್ಷೆಗಳುಂಟಾಗಿದ್ದವಷ್ಟೆ ಅಮೇರಿಕಕ್ಕೂ ಕೂಡ ಚೀನಾದಲ್ಲಿ ಜಪಾನನ್ನು ಎದುರಾಯಿಸಲು ಧೈರ್ಯಸಾಲದೆಂಬುದು ಈಗ ವ್ಯಕ್ತವಾಗುತ್ತದೆ ಅವರೀಗ ಜಪಾನೀಯ ಕ್ಷಮಾಪಣೆಯಿಂದಲೆ ಸಮಾಧಾನಹೊಂದಿರುವರು

ಹಾಂಗ್ಕೊ ಎಂಬಲ್ಲಿ ಚೀನೀಯರಿಗೂ ಜರ್ಮನಿಯರಿಗೂ ಭೀಕರ ಕದನವು ನಡೆಯುತ್ತಿದೆ ದೇಶದ ಎಲ್ಲಾ ಕೈಗಾರಿಕೆಗಳು ಯುದ್ಧಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ನಡೆಯುವಂತೆ ಚಿಯಾಂಗ್ ಕೈ ಶೇಕ್ ಸರಕಾರದ ಕಟ್ಟಪ್ಪಣೆಯಾಗಿರುತ್ತದೆ

ಮಧ್ಯಪ್ರಾಂತ್ಯದ ಕಾಂಗ್ರೆಸ್ ಪ್ರಧಾನ ಮಂತ್ರಿ ಡಾ॥ ಯನ್. ಬಿ. ಖಾರೆ.

ಮಧ್ಯಪ್ರಾಂತ್ಯದ ಪ್ರಧಾನ ಸಚಿವ ಡಾ॥ ಎನ್ ಬಿ ಖಾರೆಯವರು ಪೂನೆಗೆ ಬಂದವರು ಒಂದೆಡೆ ಭಾಷಣಮಾಡುತ್ತಾ, ಹಿಂದಿನ ಡ್ಯಾರ್ಕಿಯು ಮಾಯವಾಗಿದ್ದರೂ ಅದರ ಭೂತವು ಇನ್ನು ಪ್ರಾಂತ್ಯಗಳಲ್ಲಿರುತ್ತದೆಂದೂ, ಕಾಂಗ್ರೆಸ್ ಸರಕಾರಗಳ ಪ್ರಜೆಗಳಿಗೆ ಕೊಟ್ಟ ವಾಗ್ದಾನಗಳನ್ನು ನಡೆಯಿಸಿಕೊಡಲು ಬಹಳ ಪ್ರಯತ್ನಗಳನ್ನು ಮಾಡುತ್ತಿರುವಾಗ ಅವರಿಗೆ, ನವರಾಜಶಾಸನದ ಅಡ್ಡಂತರಗಳು, ದಾಷಣಗಾರರು ಎಂಬ ಎರಡು ಮಹಾ ತಡೆಗಳಿವೆ ಎಂದೂ, ಒಳಗೆ ಗವರ್ನರರ ವಿಶಿಷ್ಟ ಅಧಿಕಾರಗಳ ತಡೆಯಿರುವಾಗ, ಹೊರಗೆ ನಮ್ಮದೇ ಜನರಾದ ಕೊಮ್ಯುನಿಷ, ಸೌಮ್ಯವಾದಿಗಳ ತಡೆಗಳಿರುವವೆಂದೂ ಅಭಿಪ್ರಾಯಪಟ್ಟು ಭಾಷಣವಿತ್ತರು

ಇಟಲಿ, ಜರ್ಮನಿ, ಜಪಾನು ಈ ಮೂರು ಜನಾಂಗಗಳು ಜನಾಂಗಸಭೆಯನ್ನು ತ್ಯಜಿಸಿದ್ದರೂ, ಜನಾಂಗ ಸಭೆಯ ಆಧಾರ ಉಳ್ಳ ಜನಾಂಗಗಳು ಭಾರಿ ಯುದ್ಧಶಸ್ತ್ರ ಇತ್ಯಾದಿಗಳಿಂದ ಕೂಡಿದವರಾಗಿ ಅತ್ಯಂತ ಬಲಿಷ್ಠರಾಗಿರುವುದರಿಂದ ಇನ್ನೊಂದು ಮಹಾಯುದ್ಧವುಂಟಾಗದೆಂದ ಲೋರ್ಡ್ ಲೋಥಿಯಾನರ ಅಭಿಪ್ರಾಯ ಜಗತ್ತಿನ ಎಲ್ಲಾ ಜನಾಂಗಗಳಿಗೆ ಯುದ್ಧದ ಕುರಿತು ಮಹಾ ಭಯವಿರುವುದರಿಂದ ಎಲ್ಲರೂ ಶಾಂತಿಪ್ರೇಮಿಗಳಾಗವರೆಂದು ಅವರ ಮತ

ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ತೆಗೆದುದಾದ ಹಿಂಡಿ ಉಳಿಯುವ ಮಡ್ಡಿಯಿಂದ ಮೋಟರು ವಾಹನಗಳ ಉಪಯೋಗದ ಬಗ್ಗೆ ಒಂದು ತರದ ಪೆಟ್ರೋಲನ್ನು ತಯಾರಿಸುವ ಕುರಿತು ಬಿಹಾರಿನ ಸರಕಾರವು ಆಲೋಚಿಸುತ್ತದೆ ಹೀಗಾದರೆ, ಈಗ ಕಠಿಣ ಸ್ಥಿತಿಯನ್ನು ಹೊಂದಿದ ಸಕ್ಕರೆ ಕೈಗಾರಿಕೆಯ ಸ್ವಲ್ಪ ಊರ್ಜಿತ ಸ್ಥಿತಿಗೆ ಬರಬಹುದೆಂದೂ ಊಹಿಸಲಾಗಿದ

ಸೇಲಮಿನಲ್ಲಿ ಉದ್ಯಾನ ಮಂತ್ರಿಗಳಾದ ಮಾನ್ಯ ಡಾ॥ ಸುಬ್ಬರಾಯನರು ಒಂದು ಸಭೆಯಲ್ಲಿ ಭಾಷಣ ನಡಸುತ್ತಿರುವಾಗ, ಕಾಂಗ್ರೆಸ್ ವಿರೋಧಿಗಳಾದ ಪುಂಡರು ಅನೇಕರು ಕೂಡಿಬಂದು ಕಲ್ಲುಗಳನ್ನೆಸೆದು ಬಹಳ ಗಲ್ಲಾಪೆಯನ್ನು ನಡೆಸಿದರು. ಮಂತ್ರಿವರ್ಯರ ಕಡೆಗೆ ಎಸೆಯಲಾದ ಕಲ್ಲೊಂದನ್ನು ಅವರು ಕ್ರಿಕೆಟ್ ಚೆಂಡಿನಂತೆ ಹಿಡಿದುಬಿಟ್ಟರಂತೆ.

ಬಂಗಾಳದ ಹಿಂದೂ-ಮುಸ್ಲಿಂ ಐಕ್ಯ ಸಂಘದ ಪರಿಷತ್ತೊಂದು ಮುರ್ಶಿದಾಬಾದಿನ ನವಾಬರಿಂದ ಕರೆಯಲ್ಪಟ್ಟಿದೆ. ಈ ಪರಿಷತ್ತು ಜನವರಿ ತಾ. ೨ರಲ್ಲಿ ಸೇರುವುದು

ಮುಖ್ಯ ರೈತರು ತಮ್ಮ ಅಗತ್ಯಕ್ಕೆ ಬೇಕಾದ ಅನುಕೂಲತೆಯನ್ನು ಪಡೆಯಲು ಕಷ್ಟಪಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ 'ಪ್ರೋ ನೋಟಿನ್' ಬಾಬ್ತು ಅದರಲ್ಲಿ ನಿರೂಪಿಸಿರುವುದಕ್ಕಿಂತಲೂ ಹೆಚ್ಚಾಗಿ ಬರೆಸಿಕೊಂಡಿರುವ ವಿಷಯವನ್ನು ನಾನು ಕೇಳಿದ್ದೇನೆ. ಅದ್ದರಿಂದಲ್ಲಿ ಇಂತಿಷ್ಟೇ ಹಣವು ಕೊಡಲ್ಪಟ್ಟಿದೆ ಎಂಬುದನ್ನು ನಿರ್ಧರಿಸುವುದು ಕೂಡ ಕಷ್ಟವಾಗುತ್ತದೆ.

ಸಾಲವನ್ನು ಇಳಿಸುತ್ತಾ ಅದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದಕ್ಕೆ ಮುಖಾಡೆಯಲ್ಲಿ ಅನುಕೂಲವಿಲ್ಲವೆಂದು ಹೇಳುವವರ ಮಾತನ್ನು ಇಲ್ಲಿ ಗಮನಿಸಬೇಕಾಗಿದೆ. ಇದು ಬಹಳ ಕಷ್ಟವೆಂಬುದರಲ್ಲಿಯೂ, ಅದರೆ ಅತ್ಯಗತ್ಯವೆಂಬುದರಲ್ಲಿಯೂ ಸಂದೇಹವಿಲ್ಲ. ಸಾಲವನ್ನಿಳಿಸಿದ ಮೇಲೂ ಕೊನೆಗೆ ಅನೇಕ ರೈತರು- ಅಸಲು ಹಣವನ್ನೇ ಪಾವತಿ ಮಾಡಲು ಕಷ್ಟಪಡುತ್ತಿರುವ ಸಂಗತಿಯು ಗೋಚರಕ್ಕೆ ಬಾರದಿರಲಾರದು. ಇಂಥವರ ಉದ್ಧಾರಕ್ಕಾಗಿ ಒಂದು ಹಾಸ್ತ್ರ ಕಾನೂನು ಅಗತ್ಯ ರೈತರಿಗೆ ತಮ್ಮ ಸಾಲವನ್ನು ಇಳಿಸಿದ ಮೇಲೂ ಕೊಡುವುದು ಕಷ್ಟವಾದ್ದಲ್ಲಿ ಅವರು ತಮ್ಮ ಆಸ್ತಿಯನ್ನೆಲ್ಲಾ ಸರಕಾರದಿಂದ ನೇಮಕಹೊಂದಿದ ಒಬ್ಬ ವರನಿಗೆ (Public receiver) ಒಪ್ಪಿಸಿದ್ದಲ್ಲಿ ಅವರ ಸಾಲವು ಸಂಪೂರ್ಣವಾಗಿ ಸಂದಾಯವಾದಂತಾಗಬೇಕು ಕಾನೂನು ಪ್ರಕಾರ ಪ್ರತ್ಯೇಕ ಇರಿಸಲ್ಪಡಬಹುದಾದ ಕೆಲವು ಎಕ್ರೆ ಭೂಮಿಯು ಆ 'ಪಾಟ್ರಿಗೆ' ಪ್ರತ್ಯೇಕವಾಗಿ ದಕ್ಕಬೇಕು ಉಳಿದ ಆಸ್ತಿಯನ್ನು ಸಾಲಗಾರರು ತಮ್ಮೊಳಗೆ ಹಂಚಿಕೊಳ್ಳಬಹುದು, ಇಲ್ಲವೆ ಅವನ್ನು ಮಾರಿ ಬಂದ ಹಣವನ್ನು ಹಂಚಿಕೊಳ್ಳಬಹುದು ಈ ಮುಖಾಂತರ ಮೂಲಕ ಇಳಿಯೂ ದೊಡ್ಡ ಸಾಲ ಉಳಿಯುವ ದೊಡ್ಡ ವರ್ಗದಾರರ ಎರಡನೆಯ ತರಗತಿಯೊಂದಿದೆ ಇವರ ಸಾಲಗಳನ್ನು ಸಂಪೂರ್ಣ ನಿವೃತ್ತಿ ಮಾಡುವುದಕ್ಕೆ ಸರಕಾರದವರಾಗಲೀ ಇನ್ನಿತರ ಯಾವುದಾದರೂ ಸಾರ್ವಜನಿಕ ಸಂಸ್ಥೆಗಳಾಗಲೀ ಸಾಧ್ಯವೂ ಇಲ್ಲ ಮತ್ತು ಇದು ಅಗತ್ಯವೂ ಇಲ್ಲ, ಮೊದಲನೆಯ ತರಗತಿಗೆ ಸೇರುವ ರೈತರ ಸಾಲನಿವಾರಣೆಗೆ ಮಾತ್ರವೇ ವ್ಯವಸ್ಥೆಯಾಗತಕ್ಕದ್ದು ಎಲ್ಲಾ ಸಂಸ್ಥಾನಗಳ ಧ್ಯೇಯವು ತಮ್ಮ ಜನರು ಸ್ವತಂತ್ರ್ಯಗಳಾಗಿರಬೇಕು ಪ್ರಸ್ತುತದ ಭಾವನಾಪ್ರವಾಹವು ಬೇರೆ ದೇಶಗಳ ಮೇಲೆ ತಮ್ಮ ಪ್ರಾಧಾನ್ಯವನ್ನು ಸ್ಥಾಪಿಸಬೇಕೆಂಬ ಜರ್ಮನಿ ಮತ್ತು ಇಟಲಿಯಂತೆಯಾಗಲೀ ಸಾಮಾನ್ಯ ಜನರ ಪ್ರಾಧಾನ್ಯವನ್ನು ಸ್ಥಾಪಿಸುವುದಕ್ಕಾಗಿ ಕಲಹವನ್ನೆಬ್ಬಿಸಲಿಚ್ಛಿಸುವ ರಶ್ಯಾದಂತೆಯಾಗಲೀ ಅಧಿಕಾರ ಪ್ರಿಯ ರಾಜ್ಯಪದ್ಧತಿಯ ಕಡೆಗೆ ಒಲಿಯುವಂತಹುದಾಗಿದೆ ಈ ಎರಡರಲ್ಲೂ ವ್ಯಕ್ತಿ ಸ್ವಾತಂತ್ರ್ಯಕ್ಕೆಡೆಯಿಲ್ಲ ಒಬ್ಬ ವ್ಯಕ್ತಿ ಸ್ವಾತಂತ್ರ್ಯ ಸಂದರ್ಭಗಳನ್ನು ಕಳಕೊಂಡು ದೊರೆಯತಕ್ಕ ಫಲವು ಹೊಂದಲು ಯೋಗ್ಯವಾದುದೋ ಎಂಬುದು ಒಂದು ಪ್ರಶ್ನೆಯಾಗಿದೆ. ನಾನು ಹೇಳುವುದಾದರೆ ಸಂಪೂರ್ಣ ಪ್ರಜಾಸತ್ತೆಯೇ ಬೇಕಾದುದು ಪ್ರಜಾಸತ್ತೆಯೆಂದರೆ ಜನರ ಹಿತಕ್ಕಾಗಿ ಸ್ಥಾಪಿತವಾದ ಜನ ಸರಕಾರ ಸರಕಾರದ ಕಾರ್ಯ ಕ್ಷೇತ್ರವು ಎಷ್ಟರ ಮಟ್ಟಿಗೆ ವಿಸ್ತೃತವೋ ಅಷ್ಟರ ಮಟ್ಟಿಗೆ ಸರಕಾರದ ಕಾರ್ಯಕಲಾಪಗಳಲ್ಲಿ ಜನರ ಸಹಭಾಗಿಗಳಾಗುವುದು ಕಷ್ಟವಾಗ ಬಹುದು. ವೈಯುಕ್ತಿಕ ಭಾಗವನ್ನು ಪ್ರತಿನಿಧಿ ಸರಕಾರವು ವಹಿಸಬೇಕಾಗುತ್ತದೆ ರಾಜ್ಯವು ದೊಡ್ಡದಾಗಿದಷ್ಟಕ್ಕೆ ಜನರು ಹಿತದ ಕಡೆಗೆ ಕೊಡುವ ಲಕ್ಷ್ಯವು ಕಡಿಮೆಯಾಗುವುದು ಆದುದರಿಂದ ಸಾಧ್ಯವಿದ್ದ ಮಟ್ಟಿಗೆ ಕಾರ್ಯಭಾಗವನ್ನು ಚಿಕ್ಕ ಚಿಕ್ಕ ಸಂಸ್ಥೆಗಳಿಗೊಪ್ಪಿಸಿಕೊಡತಕ್ಕದ್ದು. ಈ ದೃಷ್ಟಿಯಿಂದ ಗ್ರಾಮಪಂಚಾಯತಿಗಳನ್ನು ನಿರ್ಮಿಸಿ ಅವುಗಳಿಂದಾಗಬಹುದಾದ ಕಾರ್ಯಗಳನ್ನೆಲ್ಲಾ ಅವಕ್ಕೆ ಒಪ್ಪಿಸಿ ಕೊಟ್ಟು ಸಾಕಷ್ಟು ಹಣವನ್ನು ಅವುಗಳಿಗೆ ಕೊಡುವುದು ಅಗತ್ಯ ಹೀಗೆ ಮಾಡಿದರೆ ಇಂತಹ ಪಂಚಾಯತಿಗಳ ಕಾರ್ಯಕಲಾಪಗಳ ಮೇಲ್ವಿಚಾರಣೆಯ ಬಗ್ಗೆ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕಾಗುವುದೇನೋ ನಿಜ ಅದರೆ ಈ ರೀತಿ ಮಾಡಿದ ವೆಚ್ಚವು ಸ್ಥಳೀಕ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಬೇಕಷ್ಟು ವ್ಯವಸ್ಥೆಯನ್ನು ಮಾಡುವುದಕ್ಕೂ ನಿಜವಾದ ಪ್ರಜಾಸತ್ತೆಯನ್ನುಂಟುಮಾಡುವುದಕ್ಕೂ ಅನುಕೂಲವಾಗುವುದರಿಂದ ನಿರರ್ಥಕವಾಗಲಾರದು. ಸ್ವಾವಲಂಬನ ಮತ್ತು ಪರಸ್ಪರ ಸಹಕಾರವಂಬವು ಜನಾಂಗದ ಏಳಿಗೆಯ ಮೂಲಾಧಾರಗಳಾಗಿವೆ ಮತ್ತು ಇವನ್ನು ಗ್ರಾಮಸಂಸ್ಥೆಗಳ ಮೂಲಕವಾಗಿ ಮಾತ್ರವೇ ಸಾಧಿಸಬಹುದು ಒಬ್ಬ ಹಳ್ಳಿಗನು ಜನಾಂಗದ ಜೀವನದ ಒಂದು ಸಜೀವ ಅಂಗವಾಗಬೇಕೆಂಬ ಉದ್ದೇಶವನ್ನು ಪ್ರಾಂತೀಕ ಸರಕಾರದ ಹಣದ ಬೆಂಬಲದಿಂದಾದರೂ ಯಾವುದೇ ಒಂದು ಹೊರಗಣ ಸಂಸ್ಥೆಯಿಂದ ನೆರವೇರಿಸುವುದು ಅಸಾಧ್ಯ ಎಲ್ಲಾ ಆಡಳಿತೆಗೂ ಗ್ರಾಮಪಂಚಾಯತಿಗಳನ್ನು ಮೂಲಾಧಾರವಾಗಿ ಮಾಡಿ ಅಂತಹ ಗ್ರಾಮಪಂಚಾಯತಿಗಳನ್ನು ಕೂಡಲೇ ಸ್ಥಾಪಿಸಿ ಯೋಗ್ಯ ರೀತಿಯಲ್ಲಿ ನಡೆಯುವಂತೆ ಅವನ್ನು ಮಾಡುವುದು ಅತೀ ಅಗತ್ಯವೆಂದು ನಾನು ಎಣಿಸುತ್ತೇನೆ. ಇದೇ ಕಾರಣದಿಂದಲೇ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕೆಂದೂ ನನ್ನ ಅಭಿಪ್ರಾಯ. ಹೀಗೆ ಮಾಡಿದರೆ ಮಾತ್ರವೇ ಸಾಮಾನ್ಯ ಜನರು ಕೂಡಾ ದೇಶದ ಆಡಳಿತದಲ್ಲಿ ಉತ್ಸಾಹವುಳ್ಳವರಾಗಿ ತಮ್ಮ ಪಾಲಿನ ಹವಾಲೆಗಳನ್ನು ವಹಿಸಲು ಶಕ್ತರಾಗುವರು ಈಗಿರುವಂತೆ ಬೇರೆ ಬೇರೆ ಭಾಷೆಗಳನ್ನಾಡುವ ಪ್ರಾಂತ್ಯಗಳನ್ನು ಒಂದೇ ಸರಕಾರಕ್ಕೊಳಪಡಿಸುವುದರಿಂದ ಪರದೇಶಭಾಷೆಗೊಂದು ಕೃತಕ ಪ್ರಾಶಸ್ತ್ಯವನ್ನು ಕೊಟ್ಟಂತಾಗುವುದು. ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಿಸುವ ವಿಚಾರದಲ್ಲಿ ಆರ್ಥಿಕ ಪ್ರಶ್ನೆಯು ಅಡ್ಡಿಯನ್ನೊಡ್ಡುವುದು ಮದ್ರಾಸ್ ಸಂಸ್ಥಾನದಲ್ಲಂತೂ ಸಮಂಜಸವಲ್ಲವೆಂದು ನನಗೆ ತೋರುತ್ತದೆ. ಒಂದು ವೇಳೆ ಸ್ವಲ್ಪ ಹೆಚ್ಚಿಗೆ ತಗಲಿದರೂ ಚಿಂತೆಯಿಲ್ಲ. ಆದರೆ ಬಹಳ ಹೆಚ್ಚು ಖರ್ಚು ಬೀಳಲಿಕ್ಕಿಲ್ಲವೆಂದು ಕಾಣುತ್ತದೆ.

ಪ್ರಜಾಸತ್ತೆಯು ಹಿತದ ದೃಷ್ಟಿಯಿಂದ ನ್ಯಾಯವಿಚಾರಣಾ ಮತ್ತು ಕಾರ್ಯ ನಿರ್ವಾಹಕ ಅಧಿಕಾರಗಳನ್ನು ಪ್ರತ್ಯೇಕಿಸುವುದು ಅತ್ಯಗತ್ಯವಾಗಿದೆ. ಎಲ್ಲಿಯೂ ಕಾರ್ಯನಿರ್ವಾಹಕ ಸರಕಾರವು ವ್ಯಕ್ತಿ ಸ್ವಾತಂತ್ರ್ಯವನ್ನು ಕಸಿಯುತ್ತಿರುವಾಗ ಈ ಪ್ರಶ್ನೆಯನ್ನು ಇತ್ಯರ್ಥಿಸುವುದು ಮತ್ತಷ್ಟು ಅಗತ್ಯವಾಗಿದೆ. ಈಗ ಪಾರ್ಟಿ ಸರಕಾರವು ಜಾರಿಗೆ ಬಂದಿರುವುದರಿಂದ ಇದರ ಅವಶ್ಯಕತೆಯನ್ನು ಮತ್ತಷ್ಟು ಸ್ಪಷ್ಟಪಡಿಸಲಾಗಿದೆ ಪ್ರತಿಪಕ್ಷದವರ ಅಭಿಪ್ರಾಯಗಳಿಗೆ ಎಡೆಗೊಡದ ಪ್ರತಿ ಪಕ್ಷದವರನ್ನು ಅಯೋಗ್ಯ ರೀತಿಯಿಂದ ಮೂಲೆಗೊತ್ತುವುದರ ಬದಲಾಗಿ ಅಧಿಕಾರದಲ್ಲಿರುವವರು ಈ ಎರಡು ಅಧಿಕಾರಗಳನ್ನು ಪ್ರತ್ಯೇಕಿಸಿ ನ್ಯಾಯವಿಚಾರಣಾ ಭಾಗವನ್ನು ಹೈಕೋರ್ಟಿನಂತಹ ಪ್ರತ್ಯೇಕ ಒಂದು ಸಂಸ್ಥೆಯ ಕೈಕೆಳಗಿಡುವುದು ಒಳ್ಳೆಯದು ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಮಾಡದಂತೆ ನೋಡಿಕೊಳ್ಳುವುದಕ್ಕೆ ಈ ಏರ್ಪಾಡು ಅಗತ್ಯವಾಗಿದೆ. ಈ ಕೋರಿಕೆಯು ಕಾಂಗ್ರೆಸ್ಸಿನಷ್ಟೇ ಹಳೆಯದಾಗಿರುತ್ತದೆ ಮತ್ತು ಕಾಂಗ್ರೆಸಿನವರು ಅಧಿಕಾರವನ್ನು ಸ್ವೀಕರಿಸಿದೊಡನೆಯೇ ಅದನ್ನು ಮೂಲೆಗೊತ್ತುವುದು ನ್ಯಾಯವಲ್ಲ. ಹೀಗೆ ಮಾಡಿದರೆ ಬ್ರಿಟಿಷರು ಈ ಕೋರಿಕೆಯನ್ನು ವಿರೋಧಿಸುವುದು ಅನ್ಯಾಯವೆಂದು ಹೇಳಲಾಗುವುದಿಲ್ಲ.

ಪ್ರಜಾಸತ್ತೆಯೆಂದರೆ ಜನರ ಅಭಿಪ್ರಾಯವನ್ನು ಪಡೆದು ನಡೆಸುವ ಸರಕಾರವೆಂದರ್ಥ. ಪ್ರಜಾಸತ್ತೆಯಲ್ಲಿ ಬೇರೆಯವರ ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದೂ ತಮ್ಮ ಅಭಿಪ್ರಾಯಗಳನ್ನು ಬೇರೆಯವರಿಗೆ ಮನದಟ್ಟುಮಾಡಿ ಅವರನ್ನು ತಮ್ಮ ಪಕ್ಷಕ್ಕೆ ತರುವುದೂ ಕಾರ್ಯನಿರ್ವಾಹಕರ ಕೆಲಸಗಳಾಗಿವೆ. ಒಂದು ಪಾರ್ಟಿ ಸರಕಾರದಲ್ಲಿ ಪಾರ್ಟಿಯ ಸದಸ್ಯರಲ್ಲಿ ಪರಸ್ಪರ ಚರ್ಚೆಯ ಒಂದು ನಿರ್ಧಾರಕ್ಕೆ ಬಂದ ನಂತರ ಬೇರೆಯವರನ್ನು ಕೂಡ ತಮ್ಮ ಪಕ್ಷಕ್ಕೆ ಎಳೆಯುವ ಚಳವಳವನ್ನು ನಡೆಸತಕ್ಕದ್ದು. ಒಂದು ಪಾರ್ಟಿ ಸರಕಾರವು ಯಶಸ್ವಿಯಾಗಬೇಕಾದರೆ ಪಾರ್ಟಿಯ ಮುಂಬರಲ್ಲಿ ಅಸಮಾಧಾನವುಂಟಾಗದಂತೆ ನೋಡಿಕೊಂಡು ಪ್ರತಿಯೊಬ್ಬ ಮೆಂಬರನಿಗೂ ವಿಷಯಗಳನ್ನು ತಿಳಿಸಿ ಅವನ ಅಭಿಪ್ರಾಯವನ್ನು ತೆಗೆದುಕೊಳ್ಳುವ ಏರ್ಪಾಡು ಇರಬೇಕು. ಅಲ್ಲದೆ ಪಾರ್ಟಿಯ ಕಾರ್ಯಕಲಾಪಗಳಿಗೆ ಉತ್ತಮ ಫಲವು ದೊರೆಯಬೇಕಾದರೆ ಆ ಪಾರ್ಟಿಯಲ್ಲಿ ನವ ಮೇಧಾವಿಗಳ ಮತ್ತು ಸಂಘಟನಾ ಶಕ್ತಿಯುಳ್ಳವರ ಸ್ಥಾನಗಳನ್ನೊಟ್ಟುಗೂಡಿಸಬೇಕು. ಅದರಿಂದ ಉತ್ತಮ ಫಲವು ದೊರೆಯಬೇಕಾದರೆ ಪ್ರತಿಯೊಂದು ಪಾರ್ಟಿಯಲ್ಲೂ ಯೋಗ್ಯ ವ್ಯವಸ್ಥೆಯಿರಬೇಕು.

ನನ್ನ ಭಾಷಣವನ್ನು ಕೊನೆಗೊಳಿಸುವ ಮೊದಲು ಇನ್ನೊಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ಈ ವಿಚಾರದಲ್ಲಿ ಕೂಡಲೇ ಗಮನಕೊಡದಿದ್ದರೆ ಮುಂದೆ ಗಂಡಾಂತರವುಂಟಾಗಬಹುದು. ಬೇರೆ ದೇಶಗಳಂತೆ ನಮ್ಮ ದೇಶದಲ್ಲಿ ಕೂಲಿಕಾರರಿಗೆ ಸಾಕಷ್ಟು ಸಂಬಳವು ದೊರೆಯುವುದೂ ಇಲ್ಲ. ಅವರ ಜೀವನವು ಉಚ್ಚಸ್ಥಿತಿಯಲ್ಲಿರುವುದೂ ಇಲ್ಲ. ಆದರೆ ಕೂಲಿಕಾರರ ಸಂಬಳವು ಅವರ ಕಾರ್ಯದಕ್ಷತೆಯ ಮೇಲೆ ಹೊಂದಿರುತ್ತದೆ. ಬೇರೆ ದೇಶದೊಂದಿಗೆ ಹೋಲಿಸಿದರೆ ನಮ್ಮ ದೇಶದ ಕೂಲಿಕಾರರ ಕೆಲಸವು ಬಹಳ ಕೀಳಾದುದೆನ್ನುತ್ತಾರೆ. ನಾವು ನಮ್ಮ ದೇಶವನ್ನೂ ಅದರ ಸಂಪತ್ತುಗಳನ್ನೂ ವೃದ್ಧಿಮಾಡುವುದಕ್ಕೆ ಯತ್ನಿಸುತ್ತಲಿದ್ದೇವೆ. ಯಾವುದಾದರೊಂದು ಉತ್ಪತ್ತಿಯಾದರೆ ಅದನ್ನು ಮಾಡುವುದಕ್ಕೆ ಯಾರೆಲ್ಲಾ ಕಾರಣರೋ ಅವರೆಲ್ಲರಿಗೂ ಅದರ ಲಾಭವು ಸಲ್ಲತಕ್ಕದ್ದು. ಎಲ್ಲಾ ದೇಶಗಳಲ್ಲೂ ಇಂತಹ ಉತ್ಪತ್ತಿಯ ಹೆಚ್ಚಿನ ಅಂಶವು ಬಂಡವಾಳವನ್ನು ಹಾಕಿದವರಿಗೆ ಹೋಗತಕ್ಕದ್ದಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಉತ್ಪತ್ತಿಯ ಲಾಭಾಂಶವನ್ನು ನ್ಯಾಯವಾದ ರೀತಿಯಲ್ಲಿ ಹಂಚಬೇಕೆಂದು ಸೂಚನೆಗಳನ್ನು ಮಾಡುವಾಗ ಇಡೀ ಉತ್ಪತ್ತಿಯನ್ನೇ ಹಂಚುವುದಲ್ಲ. ಹಂಚಲಿಕ್ಕೆ ಉಳಿಯಬಹುದಾದುದನ್ನು ಮಾತ್ರ ಹಂಚತಕ್ಕದ್ದೆಂಬುದನ್ನು ಮರೆಯಬಾರದು. ನಮ್ಮ ದೇಶದಲ್ಲಿ ಕೂಲಿಕಾರರು ಉತ್ಪತ್ತಿಯಲ್ಲಿ ಹೆಚ್ಚಿನ ಅಂಶವನ್ನು ತಮ್ಮ ಪಾಲಿಗೆ ಹಂಚಬೇಕೆಂದು ಚಳವಳವನ್ನೆಬ್ಬಿಸಲಿಕ್ಕೆ ಆರಂಭಿಸಿದ್ದಾರೆ. ನಮ್ಮಲ್ಲಿ ಯೋಗ್ಯ ವ್ಯವಸ್ಥೆಯೂ ಬಂಡವಾಳವೂ ತಕ್ಕಷ್ಟು ಸರಕಾರೀ ಸಹಾಯವೂ ಇಲ್ಲದಿರುವುದರಿಂದಲೂ ನಮ್ಮನ್ನು ಹಿಂದಕ್ಕೆ ಹಾಕುವ ಪರದೇಶಗಳೊಂದಿನ ಸ್ಪರ್ಧೆಯಿಂದಲೂ, ನಮ್ಮಲ್ಲಿ ಯೋಗ್ಯ ತರಬೇತಿಯಿಲ್ಲದಿರುವುದರಿಂದಲೂ ನಮ್ಮ ಉತ್ಪತ್ತಿಯು ಕುಂದಿ ಹೋಗಿದೆ. ಉತ್ಪತ್ತಿಯನ್ನು ಹೆಚ್ಚಿಸುವ ವಿಚಾರದಲ್ಲಿ ಎಲ್ಲರೂ ಸಹಕರಿಸಿದರೆ ಮಾತ್ರವೇ ಎಲ್ಲಾ ಜನರ ಜೀವನದ ಸ್ಥಿತಿಯನ್ನು ಸುಧಾರಿಸುವ ಕಾರ್ಯದಲ್ಲಿ ಮುಂದುವರಿಯಬಹುದು. ಅನೇಕ ಗಿರಣಿಗಳಲ್ಲಿ ಸಾಕಷ್ಟು ಬಂಡವಾಳವಿಲ್ಲದಿರುವುದರಿಂದ ಉತ್ಪತ್ತಿಯು ಕಡಿಮೆಯಾಗಿ ಮೆನೇಜರರು ಪಾಲುಮಾಲಿಕರು ಮತ್ತು ಕೂಲಿಕಾರರೊಳಗೆ ಹಂಚತಕ್ಕ ಲಾಭಾಂಶವು ಅಲ್ಪವಾಗಿದೆ. ಚಾಲ್ತಿಯಲ್ಲಿರುವ ಕೂಲಿಕಾರರ ಮುಷ್ಕರಿಯಾಗಲೀ ಮೆನೇಜರರ ಬೊಡಲಿನ ಇತರರಿಗೆ ಸಿಕ್ಕುವ ಲಾಭ ಏರ್ಪಾಡು ನ್ಯಾಯವಾದುದೆಂದು ನಾನು ಎಣಿಸುವುದಿಲ್ಲ. ವ್ಯಾಪಾರ ಎಲ್ಲರಿಗೂ ತೃಪ್ತಿಕರವಾದ ರೀತಿಯಲ್ಲಿ ಲಾಭಾಂಶವನ್ನು ಹೇಗೆ ಹಂಚಬಹುದೆಂಬುದಕ್ಕೆ ಒಂದು ಮಾರ್ಗವನ್ನು ಎಲ್ಲರ ಅವಗಾಹನೆಗೆ ಒಪ್ಪಿಸಬೇಕೆಂದಿದ್ದೇನೆ. ಈಗ ಕೂಲಿಕಾರರಿಗೆ ಕೊಡುವ ಸಂಬಳವನ್ನು ಇಳಿಸಲು ಸಾಧ್ಯವಿಲ್ಲವೆಂದು ಗಿರಣಿಮಾಲೀಕರು ಅನ್ನುತ್ತಾರೆ. ಆದರೆ ಲಾಭದಲ್ಲಿ ಹೆಚ್ಚಿನ ಅಂಶವನ್ನು ಗಿರಣಿಮಾಲಿಕರು ಉಪಯೋಗಿಸುತ್ತಾರೆಂದು ಕೂಲಿಕಾರರ ಹೇಳಿಕೆ. ಪ್ರತಿಯೊಂದು ಕಡೆಗೂ ಮೊದಲನೆಯದಾಗಿ ಒಂದನ್ನು ನಿಶ್ಚಯಿಸಬೇಕು. ಕೂಲಿಕಾರರಿಗೆ ಈಗಿರುವ ಸಂಬಳವು ಇಂತಹ ಪಾಲು ಸಂಬಳವಾಗಿರಬೇಕು ಅಂತೆಯೇ ಮೆನೇಜರರ ಲಾಭಾಂಶಕ್ಕೂ ಕನಿಷ್ಟಮಿತಿಯೊಂದನ್ನು ಸ್ಥಿರ ಪಡಿಸತಕ್ಕದ್ದು. ಈ ಕನಿಷ್ಟಮಿತಿಯಂತೆ ಹಂಚಿ ಉಳಿಯುವ ಹೆಚ್ಚಿನ ಲಾಭಾಂಶವನ್ನು ಎಲ್ಲರಿಗೂ ಹಂಚಿಕೊಡತಕ್ಕದ್ದು. ಉದಾಹರಣೆಗಾಗಿ ಈಗಿರುವ ದರದಲ್ಲಿ ಕೂಲಿಕಾರರ ಸಂಬಳವನ್ನು ಕೊಟ್ಟು ಮೆನೇಜರರ ಸಂಬಳವನ್ನು ಕೊಟ್ಟು ಪಾಲುಗಾರರಿಗೆ ಬಂಡವಾಳದ ಮೇಲೆ ಶೇಕಡಾ 6 ರ ಬಡ್ಡಿಯನ್ನು ಕೊಟ್ಟು ಮತ್ತೂ 1000 ರೂಪಾಯಿ ಲಾಭಾಂಶ ಉಳಿದರೆ ಅದನ್ನು ಕೂಲಿಕಾರರಿಗೆ ರೂಪಾಯಿ 100 ಮೆನೇಜರರಿಗೆ ರೂಪಾಯಿ 100 ಅಥವಾ ರೂಪಾಯಿ 150 ಹೀಗೆ ಪಾಲುಗಾರರಿಗೆ ಎಂಬಂತೆ ತೀರ್ಮಾನಿಸಿ ಹಂಚಲ್ಪಡತಕ್ಕದ್ದು. ಇದು ಎಲ್ಲರಿಗೆ ತರಬಹುದಾದ ಸಮಸ್ತ ತೃಪ್ತಿಕರವಾದ ಉಪಾಯವೆಂದು ನನಗೆ ತೋರುತ್ತದೆ. ಇದರಿಂದ ಸಂಬಂಧಪಟ್ಟವರೂ ಸರಕಾರವೂ ಈ ಸೂಚನೆಯನ್ನು ತೆಗೆದುಕೊಂಡು ಅಗತ್ಯವಿರುವ ಏರ್ಪಾಡನ್ನು ಮಾಡಬೇಕೆಂದು ನನ್ನ ವಿನಂತಿ.

ನಮ್ಮ ಪ್ರಾಂತ್ಯದಲ್ಲೂ ಈ ಜಿಲ್ಲೆಯಲ್ಲೂ ಕೆಲವು ಮುಷ್ಕರಗಳಾದವು. ಇವುಗಳಿಂದ ಒಬ್ಬ ತಮ್ಮ ಸಂಕಷ್ಟಗಳನ್ನು ಮತ್ತು ತಮ್ಮ ಬೇಡಿಕೆಗಳನ್ನು ಎಂಬೀ ವಿಚಾರಗಳನ್ನು ಮೆನೇಜರರಿಗೆ ತಿಳಿಸಲೇ ಇಲ್ಲ. ಈ ರೀತಿಯ ವರ್ತನೆಯಿಂದ ಗಿರಣಿಗೆ ಸಂಬಂಧಪಟ್ಟವರೆಲ್ಲರಿಗೂ (ಕೂಲಿಕಾರರಿಗೆ ಕೂಡಾ) ನಷ್ಟವುಂಟಾಗುವುದು ಉತ್ಪತ್ತಿಯಲ್ಲಿ ನಷ್ಟವಾಗುವುದು. ಕೂಲಿಕಾರರ ಮತ್ತು ಮೆನೇಜರರೊಳಗಿನ ವಿಶ್ವಾಸವು ಹಾಳಾಗುವುದು. ಗಿರಣಿಯೊಂದಿಗೆ ವ್ಯವಹಾರ ನಡೆಸುವವರಿಗೆ ಕೂಡ ಗಿರಣಿಯಲ್ಲಿ ವಿಶ್ವಾಸ ಕಡಿಮೆಯಾಗುವುದು. ಸಂಬಂಧಪಟ್ಟ ಗಿರಣಿಗೆ ಮಾತ್ರವಲ್ಲದೆ ಇತರ ಗಿರಣಿಗಳ ಮೇಲಿನ ವಿಶ್ವಾಸ ಕೂಡ ಹಾಳಾಗಿ ಗಿರಣಿಯ ಮಾಲಿಕರಿಗೆ ಮಾತ್ರವಲ್ಲದೆ ಇಡೀ ಕೈಗಾರಿಕೆಗೇ ಹಾನಿಯಾಗುವುದು. ಇಂತಹ ಪ್ರಸಂಗಗಳನ್ನು ತಪ್ಪಿಸುವುದಕ್ಕಾಗಿ ಏನಾದರೊಂದು ಏರ್ಪಾಡು ಮಾಡುವುದಗತ್ಯ. ಆದರೆ ಕೂಲಿಕಾರರ ಕುಂದುಕೊರತೆಗಳನ್ನು ತಿಳಿದುಕೊಂಡು ಅವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದಕ್ಕೆ ಒಂದು ಸಂಸ್ಥೆ ಅಗತ್ಯವಿದೆ. ಪಾಶ್ಚಿಮಾತ್ಯ ದೇಶಗಳ ಅನುಭವದಿಂದ ಈ ಕಾರ್ಯವನ್ನು ಮಾಡುವುದಕ್ಕೆ ಕೂಲಿಕಾರರ ಸಂಘಗಳು ಉತ್ತಮವೆಂದು ಕಂಡುಬರುತ್ತದೆ. ಆದುದರಿಂದ ದೇಶದಲ್ಲಿ ಅವ್ಯವಸ್ಥೆಗಳನ್ನುಂಟುಮಾಡುವುದಕ್ಕೆ ಕಾರಣವಾದ ಪರಿಸ್ಥಿತಿಗಳನ್ನುಂಟುಮಾಡುವ ಕ್ರಾಂತಿಕಾರರ ಬಲಿಗೆ ಬೀಳದೆ ಕ್ರಮಬದ್ಧವಾದ ನಿಯಮಗಳಿಂದ ಬದ್ಧವಾದ ಕೂಲಿಕಾರರ ಸಂಘಗಳನ್ನು ಸ್ಥಾಪಿಸುವುದು ಅಗತ್ಯ. ಇಂತಹ ಸಂಘಗಳನ್ನು ಸ್ಥಾಪಿಸಿ ಅವು ಯೋಗ್ಯರೀತಿಯಲ್ಲಿ ಕೆಲಸ ಮಾಡುವಂತೆ ಮಾಡುವುದು ಸದ್ಯ ಸ್ಥಿತಿಯಲ್ಲಿ ಅಗತ್ಯವಾಗಿದೆ.

ಸಂಕಷ್ಟಗಳನ್ನು ಅಲ್ಲಲ್ಲೇ ಇತ್ಯರ್ಥಿಸುವುದಕ್ಕೆ ಇನ್ನೊಂದು ಏರ್ಪಾಡಿರುವುದು ಒಳ್ಳೆಯದೆಂದು ನನಗೆ ತೋರುತ್ತದೆ. ಪ್ರತಿಯೊಂದು ಗಿರಣಿಯಲ್ಲೂ ಕೂಲಿಕಾರರ ಮತ್ತು ಆಡಳಿತೆದಾರರ ಪ್ರತಿನಿಧಿಗಳಿಂದ ಕೂಡಿದ ಒಂದು ಕಮಿಟಿಯಿದ್ದು ಪ್ರಶ್ನೆಗಳು ಯಾವುವಾಗಲೀ ತಿಂಗಳಿಗೊಮ್ಮೆಯಾಗಲೀ ಇದರ ಮೀಟಿಂಗು ಕೂಡುವುದು ಒಳ್ಳೆಯದು. ಇಂತಹ ಸಭೆಗಳಲ್ಲಿ ಕೂಲಿಕಾರರ ಪ್ರತಿನಿಧಿಗಳು ಅಧಿಕಾರಿಗಳ ಪ್ರತಿನಿಧಿಗಳ ಮುಂದೆ ಕೂಲಿಕಾರರ ಸಂಕಷ್ಟಗಳನ್ನು ಅವುಗಳ ನಿವೃತ್ತಿಯ ಉಪಾಯಗಳನ್ನು ಹೇಳಿಕೊಳ್ಳಬಹುದು. ಇದರಿಂದ ಕೂಲಿಕಾರರ ಸಂಕಷ್ಟ ನಿವಾರಣೆಯಾಗದಿದ್ದರೆ ಕೂಲಿಕಾರರ ಸಂಘವು ಆ ವಿಷಯವನ್ನು ಕೈಕೊಳ್ಳಬಹುದು. ಕೂಲಿಕಾರರ ಸಂಘವು ಬೇಗನೆ ವಿಚಾರಮಾಡಿ ಒಂದು ಇತ್ಯರ್ಥವನ್ನು ಮಾಡಿ ಆ ವಿಷಯ ಅದಕ್ಕೆ ದಾರಿಗೆ ಕ್ರಮ ಪ್ರಕಾರ ನೋಟೀಸು ಕೊಟ್ಟು ಅದಕ್ಕೂ ಅವರು ಒಪ್ಪದೆ ಕೂಲಿಕಾರರ ಕೋರಿಕೆಯನ್ನು ಸಲ್ಲಿಸದಿದ್ದಲ್ಲಿ ಮಾತ್ರವೇ ಮುಷ್ಕರದಂತಹ ಕಾರ್ಯವನ್ನು ಕೈಕೊಳ್ಳತಕ್ಕದ್ದು. ಆಡಳಿತೆದಾರರು ಕೂಡ ತಮಗೆ ಇಷ್ಟ ಬಂದಾಗ ಇಷ್ಟ ಬಂದಂತೆ ಸಂಬಳ ಇಳಿತ ಮೊದಲಾದುವನ್ನು ಮಾಡಕೂಡದು. ಕೈಗಾರಿಕೆಯ ವಿಷಯದಲ್ಲಿ ಈಗ ಉಂಟಾಗಿರುವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ನನಗೆ ಕಂಡ ಉಪಾಯಗಳನ್ನು ಹೇಳುತ್ತೇನೆ. ಮಾಲೀಕರು ಮತ್ತು ಕೂಲಿಕಾರರೊಳಗೆ ಉತ್ಸಾಹವು ಬೆಳೆಯುತ್ತಿದೆ. ಇದರಿಂದ ಇಕ್ಕಡೆಗೂ ಶ್ರೇಯಸ್ಸಿಲ್ಲ. ಇದರಿಂದ ಇಡೀ ಕೈಗಾರಿಕೆಯೇ ನಷ್ಟವಾಗುವುದು. ಆದುದರಿಂದ ಈ ವಿಚಾರ ಕೂಡಲೇ ಆಲೋಚಿಸತಕ್ಕದ್ದು. ಮಾಲೀಕರು ಮತ್ತು ಕೂಲಿಕಾರರೊಳಗಿದ್ದ ಈ ಕಲಹವನ್ನು ಹೋಗಲಾಡಿಸಿ ಶಾಂತಿಯನ್ನುಂಟುಮಾಡುವುದಕ್ಕೆ ಅಗತ್ಯವಿರುವ ಸಂಸ್ಥೆಗಳನ್ನು ಏರ್ಪಡಿಸುವ ಕಾರ್ಯ ಸರಕಾರದವರದ್ದು ತಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

ನನ್ನ ಭಾಷಣವನ್ನು ಕೊನೆಗೊಳಿಸುವ ಮೊದಲು ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈ ಜಿಲ್ಲೆಗೆ ಸಂಬಂಧಪಟ್ಟ [illegible] ಇನ್ನು [illegible] ಈಗಾಗಲೇ ನಿಮ್ಮ [illegible] ನಿಮ್ಮನ್ನು [illegible] ಅವಶ್ಯಕತೆಯನ್ನು [illegible] ಸಂದರ್ಭಕ್ಕೋಸ್ಕರ [illegible] ಹೇಳುತ್ತೇನೆ.

[illegible] ಪತ್ರಿಕೆಗಳಲ್ಲಿ ಪ್ರಕಟಿಸಿ [illegible], ಈಗ ಪತ್ರಿಕೆಗಳ [illegible] ಸುದ್ದಿಗಳನ್ನು [illegible] ಅಭಿಪ್ರಾಯ. ಪತ್ರಿಕೆಗಳ [illegible] ಸತ್ಯಾಂಶಗಳನ್ನು ತಿಳಿದುಕೊಳ್ಳಲು ಅವಕಾಶವಿಲ್ಲವೇ? ಇಂದೇ ವಿರೋಧಿಗಳೆಂದರೆ, ಪತ್ರಿಕೆಗಳಲ್ಲಿ ಬರುವುದನ್ನೆಲ್ಲಾ ಜನರು ಇನ್ನೂ ಹೆಚ್ಚಾಗಿ ನಂಬುವ ತಿಂಗಳಿನ ಸತ್ಯಸ್ಥಿತಿ ಹೇಳಲು ಇವರು ಏಕೆ ಹಿಂಜರಿಯಬೇಕು.

ಬಂಗಾಳದಲ್ಲಿ ಹೊಸ ರೋಗವೊಂದು ಹರಡುತ್ತಿದೆ. ಮುಸ್ಲಿಮರಲ್ಲಿ ಕೆಲವರು ಶಿಕ್ಷಿತರು ಸಹ ಸುಳ್ಳುಗಳನ್ನು ಹರಡಿಸತೊಡಗಿದ್ದಾರೆ, ಕಾಂಗ್ರೆಸ್ಸು, ಹಿಂದೂ ಮಹಾಸಭೆ, ಶ್ರೀಮಂತರು, ಕ್ರಾಂತಿಕಾರರು ಒಂದಾಗಿ ಮುಸ್ಲಿಮರನ್ನು ಅಡಗಿಸುವ ಪ್ರಯತ್ನದಲ್ಲಿದ್ದಾರೆಂದು. ಈ ಸುಳ್ಳುಗಳನ್ನು ಸುಮಾರು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಯಾವ ಬಗೆಯಲ್ಲೂ ಮುಸ್ಲಿಮರು ಹಿಂದೂವಿಗ್ರಹಗಳನ್ನು ಕೆಡವಿಲ್ಲವೆಂದೂ ಇದರಲ್ಲದೆ ಆದರೆ, ಇದಕ್ಕಾಗಿಯೇ ಹಲವರು ಜೈಲುವಾಸಕ್ಕೆ ಸೇರುವಂತೆ ಸರಕಾರವೇ ಅವರನ್ನು ದಂಡಿಸಿದ್ದರೆಯಾದರೂ ಈ ಸುಳ್ಳು ಹರಡುತ್ತದೆ ಮಾತ್ರವಲ್ಲದೆ, ಈ ಪತ್ರಿಕೆಗಳು ಮುಸ್ಲಿಮು ಲೀಗಿನ ಪರವಾಗಿಯೂ ಬಂಗಾಳದ ಮಂತ್ರಿಗಳ ಪರವಾಗಿಯೂ ಪ್ರಕಟವಾದುವೆಂದೂ ಅವುಗಳಲ್ಲಿದೆ. ಇಂಥವನ್ನು ತಡೆಯದಿದ್ದರೆ ಇನ್ನಷ್ಟು ಅನಾಹುತಗಳಿಗೆ ಕಾರಣವಾದೀತೆಂದು ಹಿಂದೂಸ್ಥಾನ ಸ್ಟೇಂಡಾರ್ಡ್ ಎಂಬ ಪ್ರಿಟಿಷ ಪತ್ರಿಕೆಯೇ ಅನ್ನುತ್ತಿದೆ!

ಮಾಲ್ಪೆಯಲ್ಲಿ ಜರಗಿದ ೧೩ನೇ ರಾಜಕೀಯ ಪರಿಷತ್ತಿನ ರಾಷ್ಟ್ರಧ್ವಜಾರೋಹಣದ ಸಮಾರಂಭದ ದೃಶ್ಯ

ಮಂಗಳೂರು.

ಸಭೆ:—ದಕ್ಷಿಣ ಕನ್ನಡಾ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ೧೯೩೮ ಜನವರಿ ತಾ ೫ರಲ್ಲಿ ಜರಗಲಿದೆ

ಸಹಾಯಾರ್ಥ ನಾಟಕ:—

ಬಂಟವಾಳ ಎಸ್ ವಿ. ಎಸ್. ಎಮೆಚ್ಯೂರ್ ನಾಟಕ ಸಂಘದವರು ಬಂಟವಾಳ ಎಸ್ ವಿ ಎಸ್ ಹ್ಯಾಸ್ಕೂಲಿನ ಸಹಾಯಾರ್ಥವಾಗಿ ತಾ ೧-೧-೩೮ನೇ ಶನಿವಾರ ಗಂಟೆ ೯ ೩೦ಕ್ಕೆ ಕೆನರಾ ಹ್ಯಾಸ್ಕೂಲಿನಲ್ಲಿ, ಭಕ್ತ ತುಲಸೀದಾಸ ಮತ್ತು ಪ್ರತೀಕಾರ (ಜಯದ್ರಥ ವಧೆ) ಎಂಬ ಎರಡು ಪೌರಾಣಿಕ ನಾಟಕಗಳನ್ನು ಅಭಿನಯಿಸಲಿರುವರು ಮಹಾಜನರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ

ಉಪನ್ಯಾಸ:—

೧೯೩೮ನೇ ಜನವರಿ ೩ನೇ ತಾರೀಖು ಆದಿತ್ಯವಾರ ಬೆಳಿಗ್ಗೆ ೭ ೩೦ಕ್ಕೆ ಸರಿಯಾಗಿ ಮಂಗಳೂರು ಬ್ರಹ್ಮಮಂದಿರದಲ್ಲಿ ಮದ್ರಾಸಿನಿಂದ ಬಂದಿರುವ ರಾವ್ ಬಹದ್ದೂರ್ ಎಂ ವೆಂಕಟಪ್ಪನವರು ಇಂಗ್ಲಿಷಿನಲ್ಲಿ ದೇವಾರಾಧನೆ ಮತ್ತು ಉಪನ್ಯಾಸವನ್ನು ನಡಿಸುವರು ಎಲ್ಲವರಿಗೂ ಸುಸ್ವಾಗತವಿದೆ

ಉಪನ್ಯಾಸದ ವಿಷಯ – The Clastening root'

ವಸ್ತ್ರದಂಗಡಿಗಳಿಗೆ ಲೈಸನ್ಸು ತೆಗೆದುಕೊಳ್ಳುವ ಸಮಯವನ್ನು ಮುಂದುವರಿಸಲಾಗಿದೆ ರೂ ೫ ಮತ್ತು ರೂ ೨ಗಳನ್ನು ತೆತ್ತು ಪಡೆವ ಎರಡು ತರದ ಲೈಸನ್ಸುಗಳಿವೆ ಅದರಿಂದ ಸಂಬಂಧಪಟ್ಟ ವರ್ತಕರು ಜುಲುಮಾನೆಯಿಲ್ಲದೆ ಲೈಸನ್ಸನ್ನು ಪಡೆಯಬಹುದೆಂದು ಪ್ರಕಟಿಸಲಾಗಿರುತ್ತದೆ

ದ ಕ. ಜಿಲ್ಲೆಯಿಂದ ಹರಿಪುರ ಕಾಂಗ್ರೆಸಿಗೆ ಆರಿಸಲ್ಪಟ್ಟ ಪ್ರತಿನಿಧಿಗಳು

ಮಂಗಳೂರು ಟೌನು ೧ ಯು ಎಸ್ ಮಲ್ಯ, ೨ ಕಮಲಾದೇವಿ ೩ ಭೋಜರಾವ್ ಬೋಳಾರ ೪ ರಂಗರಾವ್ ತಲಚೇರಿಕರ ಮಂಗಳೂರು ತಾಲೂಕು ೧ ಕೋಚಣ್ಣ ಶೆಟ್ಟಿ ೨ ಎಂ ರಾಮಕೃಷ್ಣ ಪೂಂಜ ೩ ಪಿ ಮಾಧವ ಪಡಿಯಾರ್ ಕಾರ್ಕಳ ತಾಲೂಕು — ೧ ಶಂಕರನಾರಾಯಣ ಹೊಳ್ಳ ೨ ... ರಾಮ ಪಡುವಾಳ್ ೩ ಕೇಶವ ರಾಮಚಂದ್ರ ಪಿಲ್ಗೆ ಭಾ ಉಡುಪಿ ಟೌನ್ — ೧ ಎಲ್ ಎಸ್ ನಾಯಕ್ ೨ ಕೆ ಶ್ರೀನಿವಾಸ ಪೈ ಉಡುಪಿ ತಾಲೂಕು — ೧ ಪಿ ಮಂಜುನಾಥ ನಾಯಕ್ ೨ ಪಿ ಲಕ್ಷ್ಮೀನಾರಾಯಣ ನಾಯಕ್ ೩ ಬಿ ಕೃಷ್ಣರಾಯ ಹೆಗ್ಡೆ ೪ ಬಿ ಸದಾಶಿವ ಹೆಗ್ಡೆ ಕುಂದಾಪುರ ತಾಲೂಕು — ೧ ಬಿ ನಾರಾಯಣ ಶೆಟ್ಟಿ ೨ ಕೆ ಕೃಷ್ಣ ಶೆಟ್ಟಿ ಕಾಸರಗೋಡು ತಾಲೂಕು — ೧ ಬಿ ಮಾಧವರಾವ್ ೨ ಯುನ್ ಉಮೇಶರಾವ್ ೩ ಬಿ ಅನಂತ ರೈ ಪುತ್ತೂರು ತಾಲೂಕು — ೧ ಕೆ ಗಣೇಶ ಸುಬ್ಬಪ್ಪಯ್ಯ, ೨ ಎಮ್ ಎನ್ ಭಿಡೆ

ಕುಂದಾಪುರ, ಮೂಲ್ಕಿ ಮುಂಡಾಜೆ ಮತ್ತು ಸುರತ್ಕಲ್ ಸರ್ಕಲುಗಳ ಉಮೇದುವಾರರಾದ ರಾ ಯು. ಸಿ ಸುಬ್ರಮಣ್ಯ ಭಟ್, ನರಹರಿ ಶೆಣೈ, ಯು ನರಸಿಂಹ ಭಟ್ ಮತ್ತು ಟಿ ಮಾರಪ್ಪ ಶಕ್ಕಿಳ ಈ ನಾಲ್ಕು ಮಂದಿ ತಮ್ಮ ಉಮೇದುವಾರಿಕೆಯನ್ನು ಹಿಂದೆಗೆದಿರುತ್ತಾರೆ ತಾ ೨೬ರ ನಂತರ ಚುನಾವಣೆಯನ್ನು ಇಡಲಾಗುವುದಿಲ್ಲವೆಂದು ಪ್ರಾಂತಿಕ ಕಮಿಟಿಯವರು ತಿಳಿಸಿದ್ದರಿಂದಲೂ ತಾ ೨೪, ೨೫ರಲ್ಲಿ ಪರಿಷತ್ತು ಜರಗಲಿರುವುದರಿಂದಲೂ ಚುನಾವಣೆಗೆ ಬೇಕಾದ ಏರ್ಪಾಡುಗಳನ್ನು ಮಾಡುವುದು ಜಿಲ್ಲೆಯ ಆಫೀಸಿಗೂ ಕಷ್ಟಕ್ಕೂ ಕಾರಣವಾಗುವುದೆಂದು ನಾನು ಅವರಿಗೆ ತಿಳಿಸಿದ್ದನ್ನು ಮಾನ್ಯಮಾಡಿ ಅವರು ಅವರ ನಾಮಪತ್ರಗಳನ್ನು ಹಿಂದೆ ತೆಗೆದುದಕ್ಕಾಗಿ ಅವರಿಗೆ ನಾನೂ ತುಂಬಾ ಆಭಾರಿಯಾಗಿದ್ದೇನೆ ಎಂದು ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ರಿಟರ್ನಿಂಗ್ ಆಫೀಸರರಾದ ಎಂ. ಉಮೇಶರಾಯರು ತಿಳಿಸುತ್ತಾರೆ

ಕೆನರಾ ಹ್ಯಾಸ್ಕೂಲು, ಮಂಗಳೂರು.

ಇದೇ ತಾರೀಕು ೨೩ರಲ್ಲಿ ಜರಗಿದ ವರ್ಷೋತ್ಸವದ ಅಧ್ಯಕ್ಷ ಮದ್ರಾಸು ಸರಕಾರದ ಮಂತ್ರಿವರ್ಯ ಶ್ರೀ ರಾಮನ್ ಮೆನೋನ್‌ರವರ ಭಾಷಣದ ಸಾರಾಂಶ

ಬಹುಮಾನಗಳನ್ನು ವಿದ್ಯಾರ್ಥಿಗಳಿಗೆ ಕೊಡುವುದು ವಿಹಿತವಲ್ಲವೆನ್ನುವವರಿದ್ದಾರೆ ಇದರಿಂದ ಸ್ಪರ್ಧೆಗೆ ಅವಕಾಶವಾಗುತ್ತಾ, ಅದರ ಪರಿಣಾಮಗಳು ಹಿತಕರವಾಗುವುದಿಲ್ಲ ನನ್ನ ವಿದ್ಯಾರ್ಥಿ ದಶೆಯಲ್ಲಿ ನಾನು ಬಹುಮಾನಗಳನ್ನು ಹೊಂದುದಿಲ್ಲದರಿಂದ ಈ ವಿಷಯದ ಪರಿಣಾಮಗಳನ್ನು ಹೇಳಲಾರೆ ಆದರೆ, ಅನೇಕ ಬಹುಮಾನಗಳನ್ನೂ ಗೆದ್ದವರಿದ್ದಾರಲ್ಲ! ಇವರನ್ನು ನೋಡಿ ಇತರರಲ್ಲೂ ಪ್ರವೀಣರಾಗಲು ಉತ್ತೇಜನವುಂಟಾಗಲೆನ್ನುವೆನು.

ವರದಿಯನ್ನು ಕೇಳಿರುವಿರಿ. ಇಲ್ಲೀ ಇರುವ ನಿಮಗೆ ಈ ಶಾಲೆಯ ವಿಷಯ ಇನ್ನಷ್ಟು ಚೆನ್ನಾಗಿ ಗೊತ್ತಾಗಿರುವುದು ಖಂಡಿತ ಹೈಸ್ಕೂಲುಗಳು ಮಾಡಬೇಕಾದ ಚಟುವಟಿಕೆಗಳಿಲ್ಲದರಲ್ಲೂ ಇದು ಮುಂದರಿದಿದೆ ಸರಕಾರದ ಇನ್ಸ್‌ಪೆಕ್ಟರರ ವಿಮರ್ಶೆ ಖಾಸಗಿ ಹೈಸ್ಕೂಲುಗಳ ಮಟ್ಟಿಗೆ ಬಹಳ ಜೋರಾಗಿಯೇ ಇರುವುದು. ಆದರಲ್ಲೂ ಈ ಶಾಲೆ ತುಂಬ ಹೆಗ್ಗಳಿಕೆ ಪಡೆದಿರುವುದು ಶಾಲೆಗೆ ತುಂಬ ಅಭಿನಂದನೀಯವಾಗಿದೆ

ಹಿಂದಣ ವಿದ್ಯಾರ್ಥಿಗಳ ಕಡೆಗೆ ನೋಡಿದರೆ, ಈ ಜಿಲ್ಲೆಯಿಂದ ೪೦ ೫೦ ವರ್ಷಗಳಲ್ಲಿ ಮುಂದೆ ಅಭ್ಯುದಯ ಹೊಂದಿರುವವರನ್ನು ನೋಡಿದರೆ ನಾವೆಲ್ಲವರು ಕೀರ್ತಿಶೇಷ ಎ ಸುಬ್ರಾಯ ಪೈಯವರ ಹೆಸರಲ್ಲಿ ಸ್ಮರಿಸಬೇಕಾಗಿದೆ ತ್ಯಾಗ ಮತ್ತು ಕರ್ತವ್ಯಬುದ್ಧಿಯಿಂದ ಉಪಾಧ್ಯಾಯರು ಮುಂದಾಗಿದ್ದು ಈ ಶಾಲೆಯಲ್ಲಿ ಕೆಲಸಮಾಡಿದವರು ಸ್ಪರ್ಧೆಮಯವಾಗಿರುವ ಈ ಕಾಲದಲ್ಲಿ ಈ ಶಾಲೆ ಇಷ್ಟು ಮುಂದರಿವುದಕ್ಕೆ ಅದೇ ಹಿಂದಣ ರೀತಿಯ ಅನುಸರಣವೇ ಕಾರಣವಾಗಿದೆ ಇಂತಹ ನಿಶ್ಚಯಿಂದ ನಡೆದು ಬಂದಿರುವ ಈ ಶಾಲಾಕಾರ್ಯವು ಕರೆದಂತೆ ನೋಡಿಕೊಳ್ಳುವುದು ನಿಮ್ಮೆಲ್ಲವರ ಕರ್ತವ್ಯ ಧರ್ಮವಾಗಿದೆ

ಎಂತೆಂತಹ ವೃತ್ತಿಗಳನ್ನು ಅನುಸರಿಸಲು ನಮ್ಮ ಶಾಲೆಗಳು ವಿದ್ಯಾರ್ಥಿಗಳನ್ನು ತರಬೇತು ಮಾಡುತ್ತವಾದರೂ ಉತ್ತಮ ನಾಗರಿಕರನ್ನು ರೂಪಿಸುತ್ತಿಲ್ಲವೆಂಬ ಒಂದು ದೋಷವನ್ನು ನಮ್ಮ ಶಿಕ್ಷಣಸಂಸ್ಥೆಯನ್ನು ಕಂಡವರು ಹೇಳುವರು. ಇಲ್ಲೀಗ [illegible] ನಂದನ ಭಾಷಣಮಾಡಿರುವ ಶ್ರೀ [illegible] ಇಂಗ್ಲಿಷನ್ನು [illegible] ಕೇಳಿದರೆ ಇವರಲ್ಲಿ ಈ ಶಕ್ತಿಯು ಈ ಶಾಲೆಯಲ್ಲಿ [illegible] ಕಲಿತುದರ ಫಲವಾಗಿದೆಯೆಂದೇ [illegible] ಇಂಗ್ಲೆಂಡಿನಲ್ಲಿ ಎಷ್ಟೋ ಕಲ್ಲುಗಳನ್ನು [illegible] ಕಲಿಸದಲ್ಲದೆ ಭಾಷೆ ವ್ಯಾಕರಣ [illegible] ಕಲಿಸುತ್ತಾರೆಯೆ? ಹೀಗೆ ಸರ್ವತೋಮುಖವಾಗಿ [illegible] ಬಲ್ಲ ಪರಿಯ ವಿದ್ಯಾರ್ಥಿಗಳನ್ನು [illegible] ಯನ್ನು ಅಗತ್ಯವಾಗಿಯೂ ಇಲ್ಲಿ [illegible] ಸರ್ವತೋಮುಖ [illegible] ಬೇಕಾಗುತ್ತದೆ

ಅಸ್ಪೃಶ್ಯ ಶಿಕ್ಷಣ [illegible] ಶಾಲೆಬಂದಿದೆ ಶಿಕ್ಷಣಮುಗಿದ ಬಳಿಕ ವಿದ್ಯಾರ್ಥಿಗಳು ಜೀವನಭಾರವನ್ನು ಹೊರಲು [illegible] ವೇನು ಮಾಡಬಹುದು? ಎಂಬುದೊಂದೇ ಸಮಸ್ಯೆ ದೇಶಕ್ಕಾಗಿ ದುಡಿದು [illegible] ನಮಗೆ ಬೇಕಾಗಿರುವವು ವಾರ್ಧಾ ಸ್ಕೀಮು ಅಥವಾ ಇನ್ನಾವ ಸ್ಕೀಮೋ ಇದರಲ್ಲಿ ಕಾಲೇಜಿನಿಂದ ಹೊರಬೀಳುವಂದು ವ್ಯರ್ಥ ಕಲಿತವರಲ್ಲ ಎನ್ನುವ ಬದಲಾಗಿ ಜನಾಂಗದ ಸಂಪತ್ತಿಗೆ ಇಂದೇ ಒಂದು ಪೈಯಷ್ಟಾದರೂ ಕೂಡಿಸುವ ಶಕ್ತಿ ನಮಗುಂಟೆಂದು ಹೇಳುವ ಧೈರ್ಯವುಳ್ಳ ವಿದ್ಯಾರ್ಥಿಗಳು ಇನ್ನು ಶಿಕ್ಷಣ ಮುಗಿಸಿ ಹೊರಡುವವರಾಗಬೇಕು ಯಾವ ಸ್ಕೀಮಿನಿಂದ ಈ ಆಶಯವು ಕೈಗೂಡುವುದೋ ಆ ಸ್ಕೀಮು ನಮಗೆ ಬೇಕಾದುದು ಇಂಗ್ಲೆಂಡಿನಲ್ಲಿ ಇಂಗ್ಲಿಷ ವಿದ್ಯಾರ್ಥಿಗಳಿಗೂ ಅಮೇರಿದಲ್ಲಿ ಅಮೇರಿಕದ ಬಾಲಕರಿಗೂ ಸಿಗುವ ಶಿಕ್ಷಣದಂತೆ ನಮ್ಮ ದೇಶದಲ್ಲಿ ನಮ್ಮದಾದ ಶಿಕ್ಷಣಕ್ರಮವಿರಬೇಕು ಅದಿಲ್ಲದೆ, ನಾವೀಗ ಕಷ್ಟಕ್ಲೇಶಗಳನ್ನು ಅನುಭವಿಸುತ್ತಿದ್ದೇವೆ ಜೀವನಕ್ಕೂ ನಮಗೂ ಯಾವ ಸಂಬಂಧವೂ ಇಲ್ಲವೆಂಬಂತೆ, ದೇವರು ನಮ್ಮನ್ನು ಸೃಷ್ಟಿಸಿದುದೇಕೆಂದು ತಿಳಿಯದವರಂತೆ ನಾವು ಅಲೆದಾಡುವುದು ಮುಗಿಯಬೇಕಾಗಿದೆ ಹಾಗಾದರೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ದೇಶಕ್ಕೂ ಭಾಗ್ಯವುಂಟು

ಮುಖ್ಯವಾಗಿ ನ್ಯಾಯ ಇತ್ಯಾದಿ ತತ್ವಗಳನ್ನೆತ್ತಿ ಚೀನದಲ್ಲಾಗುವುದೇನು ನೋಡಿರಿ. ಈಗಲೆ ಕಲ್ಕತ್ತಾ ಬೊಂಬಾಯಿಗಳಲ್ಲಿ ಕತ್ತಲನ್ನುಂಟುಮಾಡಿ ವಿಮಾನಗಳ ಹಾವಳಿ ತಡೆಯಲು ಅನುಕೂಲ ವರ್ತನ ಕಲಿಸಲು ತೊಡಗಿದ್ದಾರೆ ನಮ್ಮ ದೇಶಕ್ಕೆ ನಾಳೆಯೆ ಏನಾಗಬಹುದೋ ಗೊತ್ತಿಲ್ಲ ಆ ನಾಳೆ ಮಾಡುವ ಮೊದಲೆ ಈಗ ಇರುವ ಸಮಯದಲ್ಲಿ ದೇಶದ ವಿಷಯವಾಗಿ ಸದ್ಭಾವನೆಗಳನ್ನು ನಮ್ಮ ವಿದ್ಯಾರ್ಥಿಗಳನ್ನು ಚಿತ್ತ ಬೆಳೆಸಬೇಕಾಗಿದೆ ಇದು ಇಂತಹ ಶಾಲೆಗಳ ಕರ್ತವ್ಯಕ್ಕೆ ಸೇರಿದುದು ಅದುದರಿಂದಲೇ ಶಿಕ್ಷಕರು ಭವಿಷ್ಯವನ್ನು ಸರಿಯಾಗಿ ಭಾವಿಸಿ ನೋಡಬಲ್ಲರಾದರೆ ಅವರಲ್ಲಿ ದೂರದೃಷ್ಟಿಯೂ ವಿಶಾಲ ಭಾವನೆಗಳೂ ಉಂಟಾದರೆ ಹಳೆಯ ದಿನಗಳಂತೆ ಕೆಲಸಕ್ಕೆ ಬಾರದ ವಿದ್ಯಾರ್ಥಿಗಳನ್ನು ಶಾಲೆಗಳಿಂದ ಹೊರಬೀಳುವಂತಾಗುವುದು

ತಾಲೂಕುಗಳಿಂದ

ಉಡುಪಿ:—

ಉಡುಪಿ ತಾಲೂಕು ಕೃಷಿಕರ ಮತ್ತು ಮಜೂರರ ಸಂಘದ ಮತ್ತು ಮುನಿಸಿಪಲ್ ಸಂಕಷ್ಟ ನಿವಾರಣಾ ಕಮಿಟಿಯ ವತಿಯಿಂದ ತಾ ೨೪ನೇ ಸಾಯಂಕಾಲ ರಥಬೀದಿಯಲ್ಲೂ ತಾ ೨೫ನೇ ಪ್ರಾತಃಕಾಲ ಕಿನ್ನಿಮೂಲ್ಕಿಯಲ್ಲೂ ಮಹಾಸಭೆ ಸೇರಿದ್ದು ತಾ ೨೫ನೇ ಪೂರ್ವಾಹ್ನ ಉಡುಪಿಗೆ ಚಿತ್ತೈಸಲಿದ್ದ ಮಾನ್ಯಮಂತ್ರಿವರ್ಯರಾದ ಶ್ರೀ ಕೆ ರಾಮನ್ ಮೆನೋನರಿಗೆ ಸ್ವಾಗತವೀಯುವ ಮಾನಪತ್ರವನ್ನರ್ಪಿಸುವ ಏರ್ಪಾಡುಗಳಾದುವು ಅನಿವಾರ್ಯ ಕಾರಣದಿಂದಾಗಿ ಮಾನ್ಯ ಮಂತ್ರಿವರ್ಯರು ಬರುವರೆ ಒಂದು ತಾಸಿನ ವಿಳಂಬವಾಗಿ ೧೦ ತಾಸಿಗೆ ತಲಪಿದೊಡನೆ ಕಿನ್ನಿಮೂಲ್ಕಿಯಲ್ಲಿ ನೆರೆದ ಜನಸಂದಣಿಯಲ್ಲಿ ಮುಖಂಡರ ಪರಿಚಯ ಮಾಡಿಕೊಟ್ಟೊಡನೆ ಮಾನಪತ್ರ ಅರ್ಪಿಸಲಾಯಿತು ಕೋಂಗ್ರೆಸು ಮುಖ್ಯತಃ ಕೃಷಿಕರ ಮತ್ತು ಮಜೂರರ ಹಿತಗಳನ್ನೇ ಗಮನಿಸುವ ಸಂಸ್ಥೆಯಾಗಿ ಯಾವತ್ತೂ ಅವರ ಶ್ರೇಯಸ್ಸಿಗೆ ಕಾರ್ಯ ಮಾಡುತ್ತಿದೆಯಾಗಿ ಹಲವು ವಿಷಯಗಳನ್ನೊಡಗೊಂಡು ಮಂತ್ರಿವರ್ಯರ ಉತ್ತರವೀಯಲಾಯಿತು ತದನಂತರ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಏರ್ಪಡಿಸಲಾಗಿದ್ದ ಪಟ್ಟಣಿಗರ ಮಹಾಸಭೆಗೆ ಚಿತ್ತೈಸಿ ಸಾರ್ವಜನಿಕ ಭಾಷಣವಿತ್ತರು ಅಲ್ಲೂ ಕೋಂಗ್ರೆಸು ಧ್ಯೇಯದ ಕುರಿತು ಪ್ರಸ್ತಾಪಿಸುತ್ತ ಕೃಷಿಕರ ಸಾಲರಿಯಾಯತಿ ಬಿಲ್ಲಿನ ಕುರಿತು ವಿವರಿಸಿದರು ಅಲ್ಲಿಂದ ಮಲ್ಪೆ ಬಂದರನ್ನು ಸಂದರ್ಶಿಸಿ ಅಲ್ಲಿ ನೆರೆದ ಬಡವರೇ ಹೆಚ್ಚಾಗಿರುವ ಮಹಾಸಮುದಾಯವನ್ನು ಕಂಡು ಆನಂದ ಪ್ರದರ್ಶಿಸಿ ಅಲ್ಲೂ ಕೂಡ ಕೋಂಗ್ರೆಸು ಸಂದೇಶದ ಕುರಿತು ಒಳ್ಳೆ ಭಾಷಣವನ್ನು ಮಾಡಿದರು ಮಲ್ಪೆಯಿಂದ ಡಾ ಸುಬ್ಬರಾಯರ ರಸ್ತೆಯಿಂದಾಗಿ ಕಲ್ಯಾಣಪುರ ಸಕ್ಕರೆ ಕಾರ್ಖಾನೆಯನ್ನು ಸಂದರ್ಶಿಸಿದರು ಶ್ರೀ ಮಂಗಳ ಗೋಪಾಲ ನಾಯಕರಲ್ಲಿ ಮಧ್ಯಾಹ್ನದ ಊಟ ವಿಶ್ರಾಂತಿಯನ್ನು ಪಡೆದು ಮಧ್ಯಾಹ್ನ ನಂತರ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ತೆರಳಿದರು. ಮೂಲ್ಕಿಯಿಂದ ಉಡುಪಿಗೆ ಬರ [illegible] ಕಟ್ಟಡದಲ್ಲಿ ಕೋಂಗ್ರೆಸ್ ಕಮಿಟಿ ವರಿಂದ ಏರ್ಪಡಿಸಲ್ಪಡದ ಮಹಾ ಮಹಾಸಭೆಯವರಲ್ಲಿ [illegible]

ಜನವರಿ ೨ನೇ ಆದಿತ್ಯವಾರ ಉಡುಪಿ ಬಂದರು [illegible] ಪ್ರಾಥಮಿಕ ಕಾಂಗ್ರೆಸು ಸದಸ್ಯರ ಸಭೆಯು ಸೇರಿ ನವೀನವಾದ ಟೌನ್ ಕೋಂಗ್ರೆಸು ಕಮಿಟಿಯು ರಚಿಸಲ್ಪಡಲಿದೆ ತಾ ೫ರಿಂದ ೯ರ ವರೆಗೆ ಟೌನ್ ಕಮಿಟಿಯಿಂದ ತಾಲೂಕು ಮತ್ತು ಜಿಲ್ಲಾ ಕಮಿಟಿಗಳಿಗೆ ಪ್ರತಿನಿಧಿಗಳನ್ನು ಚುನಾಯಿಸಲೂ ಇರುವುದು ಆದ್ದರಿಂದ ಕೋಂಗ್ರೆಸು ಸದಸ್ಯರೆಲ್ಲರೂ ಬಹು ಸಂಖ್ಯೆಯಿಂದ ಸಭೆಗೆ ಹಾಜರಾಗಿ ಯೋಗ್ಯ ಕಮಿಟಿಯನ್ನು ಸ್ಥಾಪಿಸುವುದರಲ್ಲಿ ಮತ್ತು ಬೇರೆ ಪ್ರತಿನಿಧಿಗಳನ್ನು ಆರಿಸುವುದರಲ್ಲಿ ಉತ್ಸಾಹಗೊಳ್ಳುವರೆಂದು ಹಾರೈಸಲಾಗುತ್ತದೆ

ಬರುವ ಜನವರಿ ತಾ ೮ಕ್ಕೆ ಶ್ರೀ ಕೃಷ್ಣ ಸನ್ನಿಧಿಯಲ್ಲಿ ಕಾಲಾವಧಿ ರಥೋತ್ಸವಕ್ಕೆ ಪ್ರಾರಂಭವಾಗಿ, ತಾ ೧೩ಕ್ಕೆ ಮಕರ ಸಂಕ್ರಮಣ ಉತ್ಸವವೂ ತಾ. ೧೪ಕ್ಕೆ ಅವಭೃತ ಉತ್ಸವವೂ ತಾ. ೧೭ಕ್ಕೆ ಪರ್ಯಾಯ ಮಹೋತ್ಸವಗಳೂ ಜರುಗಲಿಕ್ಕಿದ್ದಿವೆ

ಜಿಲ್ಲಾ ೮ನೆ ರಾಜಕೀಯ ಪರಿಷತ್ತು, ಮೂಲ್ಕಿ.

ಇದೇ ತಾ ೨೪ ೨೫ರಲ್ಲಿ ಜರಗಿದ ಈ ಪರಿಷತ್ತಿನಲ್ಲಿ ಮಂಜೂರಾದ ಹಲವು ನಿರ್ಣಯಗಳಲ್ಲಿ ಮುಖ್ಯವಾದ ಕೆಲವು –

ಕಾರ್ನಾಡು ಸದಾಶಿವ ರಾವ್ ಸ್ಮಾರಕನಿಧಿಗೆ ದಾನಗಳು ಉದಾರಭಾವದಿಂದ ತುಂಬ ದೊರೆಯುವಂತೇ ಜನತೆಗೆ ಅರಿಕೆ ಫೆಡರೇಶನ್ ನಮಗೆ ಆಗತ್ಯವಿಲ್ಲ, ಮದ್ಯಪಾನ ನಿವಾರಣೆಗೆ ಈ ಜಿಲ್ಲೆಯಲ್ಲಿ ಬರುವ ವರ್ಷ ಕಾರ್ಯಾರಂಭಮಾಡುವಂತೆ ಸರಕಾರಕ್ಕೆ ಒತ್ತಾಯ. ಬೊಂಬಾಯಿ, ಮದ್ರಾಸು ಕೇಂದ್ರ ಸರಕಾರಗಳು, ಕರ್ನಾಟಕ ಪ್ರಾಂತ್ಯವು ಕೂಡಲೆ ಉಂಟಾಗುವಂತೆ ಪ್ರಯತ್ನಿಸಬೇಕೆಂದು ನಮಗೆ ನಮ್ಮ ಪ್ರತಿನಿಧಿಗಳಿಗೆ ಸೂಚನೆ ದೇವಳಭಕ್ತರುಗಳಲ್ಲಿ ಬಹುಸಂಖ್ಯಾತರ ಅಭಿಮತದಂತೆ ಹರಿಜನರಿಗೆ ದೇವಳಪ್ರವೇಶಕ್ಕೆ ಅನುಕೂಲವಾಗುವ ಕಾನೂನನ್ನು ಮಂತ್ರಿಗಳು ಮುಂತರಬೇಕಾಗಿದೆ ಗೇಣಿ ಕಾನೂನು ನಮ್ಮ ಜಿಲ್ಲೆಯ ಒಕ್ಕಲಿಗರ ಭದ್ರತೆಗೆ ಆಗತ್ಯ ಅಖಿಲಭಾರತದ ಕಾಂಗ್ರೆಸ್ ಕಮಿಟಿಯ ಸೂಚನೆಯನ್ನು ವಿರೋಧಿಸಿ ನಮ್ಮ ಕಾಸರಗೋಡು ತಾಲೂಕನ್ನು ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಮಗಾಗಿ ಸೆಳೆಯಲೆತ್ನಿಸುವುದನ್ನು ತುಂಬ ಆಕ್ಷೇಪಿಸಬೇಕಾಗಿದೆ

ಮದ್ರಾಸು ರೈತರ ಋಣವಿಮೋಚನಾ ಬಿಲ್ಲು – ಪ್ರತಿ ತೆರಿಗೆಯನ್ನು ೧೦ರಿಂದ ೩ ರೂಪಾಯಿಗೆ ಇಳಿಸಿ ಅದನ್ನು ರೈತರಿಗೆ ಕೊಡುವ ವಿನಾಯತಿಗೆ ಮಿತಿಯಾಗಬೇಕು, ೧-೧೦-೩೭ರಿಂದ ಭದ್ರತೆಯಿಲ್ಲದ ಸಾಲಗಳಿಗೆ ಭದ್ರತೆಯುಳ್ಳದಕ್ಕೆ ೩ ಸಲೆ ಬಡ್ಡಿಯಿರಬೇಕು, ದಿವಾಳಿ ಅರ್ಜಿಗಳಲ್ಲಿ ಗಣನೆಗೆ ಬರುವ ಸಮಸ್ತ ವಿಷಯಗಳಿಗೂ ಈ ಮಸೂದೆ ಅನ್ವಯವಾಗಬೇಕು ರೈತರು ಒಕ್ಕಲುಗಳಿಗೂ ಗೇಣಿಯ ಬಾಕಿಗಳು ಮಸೂದೆಯಲ್ಲಿರುವಂತೆ ಅನ್ವಯಿಸಬೇಕು ಅಲ್ಪ ಬಡ್ಡಿಯಲ್ಲಿ ರೈತರಿಗೆ ಬಹಳ ವರ್ಷಗಳ ಅವಧಿಯ ಸಾಲಗಳನ್ನು ಕೊಡಲು ಸರಕಾರವು ವ್ಯವಸ್ಥೆಗೊಳಿಸಬೇಕು ಎಲ್ಲಾ ಬೇರೆ ಸಹಕಾರೀ ಸಂಘಗಳಿಗೂ ಈ ಮಸೂದೆ ಅನ್ವಯಿಸಬೇಕು ಸಾಲದ ಅಸಲು ಬಡ್ಡಿ ತೆರಲು ೩೫ ವಾರ್ಷಿಕ ವರ್ಷಗಳನ್ನು ವಿಧಿಸಬೇಕು ಧಾರ್ಮಿಕ ಅಥವಾ ಮತದಾನ ಸಂಘ ಸಂಸ್ಥೆಗಳಿಗೂ ಕಾನೂನು ಅನ್ವಯಿಸಬೇಕು ಇತ್ಯಾದಿ ನಾನಾ ಸೂಚನೆಗಳಿಂದ ಅಂಗೀಕೃತವಾಗಿದೆ

ತೀವ್ರ ರಿಯಾಯತಿ–ಕಾಂಗ್ರೆಸ್ ಮಂತ್ರಿಗಳು ಕೊಟ್ಟವು ನಮ್ಮ ಜಿಲ್ಲೆಯ ಮಟ್ಟಿಗೆ ಹಿಂದಿನ ಮಾರ್ಚ್ ಬೆಂಕ್ ರಿಪೋರ್ಟಿನಲ್ಲಿ ನಮೂದಾದ ರಿಯಾಯತಿ [illegible] ತೀವ್ರವಾಗಿ [illegible] ಬೆಳೆ ನಾಶದ ತೋಟಗಳು ಈ ವಿಷಯವಾಗಿ ರಿಯಾಯತಿ ದೊರೆತಿಲ್ಲ ರಿಯಾಯತಿಯನ್ನೆಲ್ಲ ಈ ಫಸಲಿಯಿಂದ ಗುಣಿಸಬೇಕು.

ಆರಾವಧಿ ಕೆಲಸಗಳಿಗೆ ಇಲ್ಲೇನೂ ವರ್ಗ ಮಾಡುತ್ತಿಲ್ಲದ ಸರಕಾರವು ಹೊಳೆ ತೋಡುಗಳಲ್ಲಿನ ರೈತರಿಗೆ ಹಿಂದಿನಂತೆ ಕಲ್ಲು ಮರಳನ್ನು ಬಿಡುವ ರಿಯಾಯತಿ ಕೊಡತಕ್ಕದ್ದು ಸರಕಾರದಂತೆ ಇಲ್ಲಿ [illegible] ಕಾಡುಗಳಲ್ಲಿ ಗೋಚರಾವಿಗೆ ಕೀಸು ಮನ್ನಾಮಾಡಬೇಕು

ವಾರ್ಧಾ ಸ್ಕೀಮಿನ ಶಿಫಾರಸಿಗೆ ಒಪ್ಪಿ ನಮ್ಮ ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣವನ್ನು ವಿಧಿಸಬೇಕು

ಪ್ರತ್ಯೇಕ ಪ್ರೆಸ್ ರಾಜಕೀಯ ವಿಭಾಗವನ್ನು ರದ್ದು ಮಾಡಬೇಕು ಪ್ರಾಂತೀಯ ಸರಕಾರವು ಕೋಂಗ್ರೆಸ ಸಂಸ್ಥೆಯನ್ನು ಚಳವಳಿಸಿದಂತೆ ದಾಳಿ ನಡೆಸಿದ ಪಟ್ಟಣಗಳಿಗೆ ಕೈಹಚ್ಚಿರುವುದು ಆಕ್ಷೇಪಾರ್ಹವಾಗಿದೆ ಹರಿಜನರಿಗೆ ದೇವಳ ಪ್ರವೇಶಕೊಟ್ಟ ತಿರುವಾಂಕೂರು ಮಹಾರಾಜರಿಗೆ ವಂದನೆಗಳು, ಚೀನಿಯರ ಮೇಲೆ ಅತ್ಯಾಚಾರ ನಡೆಸುವ ಪೈಶಾಚಿಕ ಕೃತ್ಯಗಳನ್ನು ಕೈಕೊಂಡ ಜಪಾನದ ಸಾಮ್ರಾಜ್ಯಾಧಿಕಾರಿಗೆ ತುಂಬ ನಿಂದೆ

ಉಪ್ಪು ಮತ್ತು ಎಲೆ ಮಡುವಾಗ ಯಾವನೊಬ್ಬನ ಬರೀ ಜೀವನಕ್ಕೆ ಅವಶ್ಯಕವಾದಷ್ಟು ಪ್ರಮಾಣವನ್ನು ಮುಟ್ಟುವಾಗ ಗೋವಾ ಇತ್ಯಾದಿ ಪರದೇಶೀಯ ಸೋಡ್ತಿ ಟಿಕೇಟುಗಳನ್ನು ಮಾಡದಂತೆ ಸರಕಾರವು ತಡೆಯಬೇಕು

ಕೋಂಗ್ರೆಸು ಮಂತ್ರಿಮಂಡಲದಲ್ಲಿ ಸಂಪೂರ್ಣ ಭರವಸೆ ಇವೆ ೧೯೩೫–A ಕೆಕ್ಷನಿಗೆ ಇವರು ಮುಟ್ಟಿದರಲಿ ಒಕ್ಕಲಿಗರ ಸಹಕಾರ ಸಮಿತಿಯ ಕಾರ್ಯಭಾರಕ್ಕೆ ಮನ್ನಣೆ ಇರಲಿ

ಕಾರ್ಕಳ.

ಕಾರ್ಕಳ ಕೇಂದ್ರ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಮಾಸಿಕ ಸಭೆಯು ತಾ ೧೮–೧೨ ೩೭ರ ದಿನ ನಡೆದು ಶ್ರೀ ಪಂಜೆ ಮಂಗೇಶರಾಯರ ನಿಧನ ಸಂಬಂಧ ಸಂತಾಪಸೂಚಕ ಠರಾವು ಸರ್ವಾನುಮತಿಯಿಂದ ಮಂಜೂರಾದ ಬಳಿಕ ಶ್ರೀ ಎಂ ಎಸ್ ಕಾಮತ ಬಿ ಎ ಎಲ್. ಟಿಯವರು ಮೈಸೂರಿನ ಭೂಗೋಳವನ್ನು ಕುರಿತು ಮಾದರಿ ಪಾಠ ಕೊಟ್ಟರು.

ಶ್ರೀಮತ ಭುವನೇಂದ್ರ ಸಂಸ್ಕೃತ ವ ಹಾ ವಿದ್ಯಾಶಾಲೆಯದ ವಿದ್ಯಾರ್ಥಿಗಳೊಳಗೆ ನಡೆದ ಗೀತಾಸ್ಪರ್ಧೆಯಲ್ಲಿ ಶ್ರೀ ಕೆ ಆರ್. ಜ್ಯೋತಿ, ಎಂ ಎಸ್ ಕಾಮತ ಎಂ ಎ ಭಟ್ಟ ಇವರಿಗೆ ಪ್ರಥಮ ಬಹುಮಾನವೂ ಎಂ ಎಲ್ ಜೈನ್ಸ, ಎಚ್. ವಿ ಶೆಟ್ಟಿ ರಾಮಯ್ಯ ನಾಯ್ಕ ಇವರಿಗೆ ದ್ವಿತೀಯ ಬಹುಮಾನವೂ ದೊರಕಿರುತ್ತವೆ

ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ೫೦–೬೦ ವರ್ಷದ ಒಬ್ಬ ಮುದುಕನಿಗೆ ಒಡಂಬಡಿಕೆಯಂತೆ ೧೩–೧೪ ವರ್ಷ ಪ್ರಾಯದ ಒಬ್ಬ ಬಾಲಕಿಯನ್ನು ಕೊಟ್ಟು ಇಲ್ಲಿಯ ಕೆಲವೆ ಜನ ಶಿಕ್ಷಿತರೂ ಅಧ್ಯಕ್ಷರೂ ಒಪ್ಪಿಕೊಳ್ಳುವ ವರೆಗೆ ತಾ ೧೭–೧೨–೩೭ರ ದಿನ ವಿವಾಹ ನಡೆಸಿಕೊಟ್ಟದುದಕ್ಕಾಗಿ ಸಾಧ ದಪ್ಪಿಯವರೂ ವಿಶೇಷ ರೀತಿಯಿಂದ ಅಭಿನಂದನೆಗೊಂಡಿದ್ದಾರೆ ಇಂತಹ ವಿವಾಹವು ಈ ಸಮಾಜದಲ್ಲಿ ಆಗ್ಗೆ ಕೆಲವು ವರ್ಷಗಳಿಂದ ನಡೆದಿರುವುದು ಇದೇ ಮೊದಲನೆಯ ಬಾರಿ ಎನ್ನಬಹುದು

ನಮ್ಮ ಶಿಕ್ಷಣ ಸ್ಥಿತಿ.

ಪಂಜಾಬು ಸರಕಾರದ ಮುಖ್ಯ ಮಂತ್ರಿಗಳ ಹಿತವಾದ-

ವಿದ್ಯಾರ್ಥಿಗಳು ಜನಸೇವೆ ಮಾಡದಿದ್ದಲ್ಲಿ ವಿದ್ಯಾಭ್ಯಾಸವು ಸಂಪೂರ್ಣವಾಗದು.

ಸರ್ ಸಿಕಂದರ್ ಹಯಾತ್‌ಖಾನರ ಭಾಷಣ: ವಿಶ್ವವಿದ್ಯಾಲಯದ ಪದವೀಧರರಿಗೆ ಉಪದೇಶ.

ಪ್ರತಿಯೊಬ್ಬ ವಿದ್ಯಾರ್ಥಿಯೂ ಆತ್ಮವಿಶ್ವಾಸವುಳ್ಳವನಾಗಿ, ಧೀರನಾಗಿ, ವ್ಯವಹಾರ ಚತುರನಾಗಬೇಕು ದೇಶದ ಅಥವಾ ಜನಾಂಗದ ಸಮಸ್ಯೆಗಳನ್ನು ಸರಿಯಾಗಿ ತಿಳಿದು ವರ್ತಿಸತಕ್ಕವನಾಗಬೇಕು

ವಿದ್ಯಾಭ್ಯಾಸಕ್ಕಾಗಿ ವ್ಯಯವಾಗುವ ವೆಚ್ಚದ ಒಂದಂಶದಷ್ಟೂ ಫಲಕಾರಿಯಾಗುವುದಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ ಸರಕಾರವನ್ನು ಕಂಡಂತೆ ದೂರುವ, ಮತ್ತು ವ್ಯರ್ಥಲಾಪಗಳಲ್ಲೇ ಆಸಕ್ತರಾಗುವ ವಿದ್ಯಾರ್ಥಿಗಳೇ ಹೆಚ್ಚುತ್ತ ಬರುತ್ತಾರೆ ಇದರ ಬದಲಾಗಿ, ಈ ಹಣದ ಒಂದಂಶವನ್ನು ಕೃಷಿ ಕೈಗಾರಿಕೆ ವ್ಯಾಪಾರ ಮೊದಲಾದುವುಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದ್ದರೆ ಎಷ್ಟೋ ಚೆನ್ನಾಗುತಿತ್ತು ಎಷ್ಟೋ ಮಂದಿಗೆ ಉದ್ಯೋಗವೂ ಸಿಗುತಿತ್ತು

ಶಾಲೆಗೆ ಹೋಗುವ ಮಕ್ಕಳಿಗೆ ಮಾತ್ರವಲ್ಲ ಇತರರಿಗೂ ಅನ್ವಯಿಸುವಂತೆ ಶಿಕ್ಷಣ ಪ್ರಚಾರ ಮಾಡಬೇಕೆಂದು ಈಗ ಸರಕಾರವು ನಿರ್ಧರಿಸಿಯದೆ ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಶಿಕ್ಷಣವು ಸಾಗತಕ್ಕದು ವಯಸ್ಕರ ಶಿಕ್ಷಣವು ಹೆಚ್ಚುವಂತೆ, ಈಗ ಮೆಟ್ರಿಕ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳೆಲ್ಲರು ತಮ್ಮ ರಜಾ ಕಾಲಗಳಲ್ಲಿ ಇತರರಿಗೆ ಶಿಕ್ಷಣಕೊಟ್ಟ ರಿಕಾರ್ಡಿನ ಶಿಫಾರಸಿಲ್ಲದೆ ಹಾಜರಾಗಬಾರದಂತೆ ನೋಡಬೇಕಾಗಿದೆ ಯೂನಿವರ್ಸಿಟಿ ವಿದ್ಯಾಭ್ಯಾಸವು ಅತ್ಯುತ್ತಮ ವಿದ್ಯಾರ್ಥಿಗಳಿಗೇ ಮಾತ್ರ, ಅವರಿಗೆ ಅದರಿಂದ ಹಿತವಾದೀತೆಂದು ತೋರಿದಲ್ಲಿ ಸಲ್ಲಬೇಕು ಅಥವಾ ಅಧಿಕ ವೆಚ್ಚವನ್ನು ವಹಿಸುವ ಶ್ರೀಮಂತರಿಗೆ ಸಲ್ಲಬಹುದು

ಸ್ವಾತಂತ್ರ್ಯ ಮತ್ತು ಮನಸ್ವಿ ವರ್ತನಗಳೊಳಗಣ ಭೇದವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು ತಮ್ಮ ಕರ್ತವ್ಯಪಾಲನೆಗೆ ಅವರು ಗಮನಕೊಡಬೇಕೇ ಹೊರತು, ತಮ್ಮ ಹಕ್ಕುಗಳಿಗಾಗಿ ಅಲ್ಲ ದೇಶಭಕ್ತಿಯ ಹೆಸರನ್ನು ಉಚ್ಚರಿಸುತ್ತ ದೆಸೆಗೆಡಿಸಬಲ್ಲ ಮುಖಂಡರೆಂಬವರಿಂದ ವಿದ್ಯಾರ್ಥಿಗಳು ದೂರವಾಗಬೇಕು

ಅತಿ ಸಂಕುಚಿತವಾದ ಸ್ವಜಾತಿಪ್ರೇಮದ ಅಂಟುರೋಗದಿಂದ ದೂರವಾಗಿರಿ ಏಕೆಂದರೆ ಈ ರೋಗದಿಂದ ಸಹನೆಯಿಲ್ಲವಾಗುವುದು, ಇತರರಿಗೆ ಅನ್ಯಾಯಮಾಡುವ ಬುದ್ಧಿ ಉಂಟಾಗುವುದು

ನೇಗಸ್

ಆತನೇನು ಇನ್ನೂ ಅಬಿಸೀನಿಯಾದ ಚಕ್ರವರ್ತಿಯೇ?

ಗೆಕ್ಕಜಂರಲ್ಲಿ ಲಿಯೋ ವೈ ಚೆರ್‌ಟೋಕ್ ಎಂಬ ಅಮೇರಿಕೆಯ ಜ್ಯೂ ಜನಾಂಗಿಯು ಅಬಿಸೀನಿಯದಲ್ಲಿ ಸುಮಾರು ೧೫ ಸಾವಿರ ಚದರ ಮೈಲು ಪ್ರದೇಶವನ್ನು ೧೦ ಲಕ್ಷ ಪವನಿಗೆ ಕ್ರಯಕ್ಕೆ ಪಡೆದಿದ್ದನು ಇದರ ಬೆಲೆ ಈಗ ಸುಮಾರು ೫ ಲಕ್ಷ ಪವನುಗಳಾಗುವುದಿದ್ದರೂ ಕೂಡಾ ಅವುಗಳಲ್ಲಿ ಹೆಚ್ಚಿನ ಅಂಶವು ತನಗೆ ಬೇರೆ ರೀತಿಯಿಂದ ಬಂದಿದೆಯೆಂದು ಈತನು ಒಪ್ಪಿಕೊಳ್ಳುತಿದ್ದಾನೆ ಈ ಪ್ರದೇಶದಲ್ಲಿನ ಲೋಹ ಮುಂತಾದ ಭೂಗರ್ಭ ನಿಧಿಗಳಿಗಾಗಿ ಆತನು ಅದನ್ನು ಕೊಂಡುಕೊಂಡಿದ್ದನು.

ಈಗ ಆತನು ಇದರಲ್ಲಿ ಸುಮಾರು ೨೩ ಸಾವಿರ ಪವನುಗಳಷ್ಟು ನೇಗಸ್‌ನಿಂದಲೇ ತನಗೆ ಬರಲಿರುವುದೆಂದು ಪ್ರಕಟಿಸಿ ಆ ಬಗ್ಗೆ ಲಂಡನ್ ನಗರದಲ್ಲಿ ದಾವೆ ಹಾಕಲಿರುವನೆಂದು ತಿಳಿದುಬಂದಿದೆ ಈತನು ಕೊಂಡುಕೊಂಡ ಪ್ರದೇಶಗಳು ಜಗತ್ತಿನ ಅನೇಕ ರಾಷ್ಟ್ರಗಳ ಮುಂದಿಗೆ ಕೊಡಲ್ಪಟ್ಟಿರುವುದರಿಂದ—ಹಾಗೆ ದಾವೆಯನ್ನು ತಂದಾಗ ಅದರಲ್ಲಿ ಅಂತರಾಷ್ಟ್ರೀಯ ವಿಚಾರವು ಹುಟ್ಟಿ ಅನೇಕ ರಾಷ್ಟ್ರಗಳು ವಿಚಾರಗಳಿಗೆ ಎಡೆಕೊಡಬೇಕಾಗಿದೆ ಎಂದು ತಿಳಿದುಬಂದಿದೆ ಜ್ಯೂ ಜನಾಂಗದ ಅಜನ್ಮ ವೈರಿಯಾದ ಮುಸಲೋನಿಗೆ ತನ್ನ ಶಕ್ತಿಯನ್ನು ತೋರಬೇಕೆಂಬುದೇ ಈತನ ಅತುಳವಾದ ಆಶೆ

ಆದರೆ ಬ್ರಿಟನ್ನಿನ ಯಾವ ನ್ಯಾಯಸ್ಥಾನಕ್ಕೂ ಚಕ್ರವರ್ತಿಯರ ಕುರಿತಾದ ದಾವೆಯನ್ನು ತೀರ್ಮಾನಿಸುವ ಅಧಿಕಾರವಿಲ್ಲದುದರಿಂದ ಈಗ "ನೇಗಸ್" ಚಕ್ರವರ್ತಿಯೇ—ಅಲ್ಲವೇ ಎಂಬ ತೀರ್ಮಾನವು ಮೊದಲು ಆಗಬೇಕಾಗಿದೆ

ಹೀಗೆ ದಾವೆಯು ಆಗುವುದಿದ್ದರೂ ಕೂಡಾ "ನೇಗಸ್" ತಾನು ನ್ಯಾಯಸ್ಥಾನದಲ್ಲಿ ಹಾಜರಾಗದೆ ಚೆರ್‌ಟೋಕ್‌ನ ಕಡೆಗೆ ತೀರ್ಮಾನವಾಗುವಂತೆ ಮಾಡಲೂ ಬಹುದು ಅಥವಾ ಹಾಜರಾಗಿ ತನ್ನ ವಕೀಲನ ಮುಖಾಂತ್ರ ವಾದಿಸಲೂ ಬಹುದು ಎಂಬುದೊಂದು ಊಹೆ

ಅಂತೂ ನ್ಯಾಯಸ್ಥಾನವು ನೇಗಸ್—ಅಥವಾ ಹೈಲ್ ಸೆಲಾಸಿಯು ಅಬಿಸೀನಿಯಾದ ಚಕ್ರಾಧಿಪತಿ ಹೌದೇ ಎಂಬ ಕುರಿತಾಗಿ ತೀರ್ಮಾನಿಸುವ ಕಾರ್ಯಕ್ಕೆ ತೊಡಗದೆ ಉಪಾಯವಿಲ್ಲದಾಗಿದೆ

ಭೂತಪ್ರೇತಗಳು!!

ಉಣ್ಣುತ್ತವೆ—ಉಡಿಗೆ ಉಡುತ್ತವೆ—ಉಪದೇಶಿಸುತ್ತವೆ.

ಭೂತ ಪ್ರೇತಗಳನ್ನು ನಂಬುವುದೇ ಅನಾದಿಯಾದ ನಮ್ಮಲ್ಲಿ ಅದರ ನಂಬಿಕೆ ಮಾಯವಾಗುತ್ತಿದ್ದಂತೆ, ಇದೀಗ ನಾಗರಿಕರೆಂದೆನ್ನುವವರಲ್ಲಿ ಅದು ಬೆಳೆಯುತ್ತ ಬರುತ್ತಿದೆ ಅದು ಸತ್ಯವೆಂದು ಇದೀಗ ಪುಸ್ತಕ ರೂಪದಲ್ಲೂ ಅನೇಕ ರೀತಿಯಿಂದ ಪ್ರಕಟವಾಗಿದೆ

ಸುಮಾರು 40 ವರ್ಷಗಳ ಕಾಲ ರಸಾಯನ ಶಾಸ್ತ್ರ ಪಂಡಿತನಾಗಿ ಕೆಲಸ ಮಾಡಿದ್ದ ಸರ್. ವಿಲಿಯಮ್ ಬಾರೆಟ್ ಎಂಬಾತನು 1925ರಲ್ಲಿ ತೀರಿಕೊಂಡನು. ಆದರೆ ಆತನಿಗೆ ತನ್ನ ಪತ್ನಿಯಲ್ಲಿದ್ದ ಅನನ್ಯ ಪ್ರೇಮವು ಅಳಿಯಲಿಲ್ಲ ಅದರಿಂದ ಇದೀಗ ತನ್ನ ಮರಣವಾದ ಹನ್ನೆರಡು ವರುಷಗಳಿಂದಲೂ ಆಕೆಯೊಡನೆ ಸರಸ ಸಲ್ಲಾಪಗಳನ್ನು ಮಾಡುತ್ತಲೇ ಇದ್ದ ಆತನ ಭೂತದೊಡನೆ ಮಾತನಾಡಿ ಆತನ ಮಡದಿ ಅನೇಕ ವಿಚಾರಗಳನ್ನು ತಿಳಿದುಕೊಂಡಿರುವಳು

'ನಾವು ಅದೇನೂ ಉಣಿಸುಗಳನ್ನೂ ತಿನಿಸುಗಳನ್ನೂ ಬಾಯಿಯ ಮೂಲಕ ತಿನ್ನುವುದಿಲ್ಲ ಬದಲು ನಮ್ಮ ದೇಹವನ್ನು ಕಾಪಾಡಿಕೊಳ್ಳಲು ಬೇಕಾದ ಆಹಾರವನ್ನು ನಮ್ಮ ಚರ್ಮವೇ ತನ್ನೊಳಗೆ ಸೆಳೆದುಕೊಳ್ಳುವುದು ಚರ್ಮದಲ್ಲಿ ರೋಮಕೂಪವು ದೇಹಕ್ಕೆ ಬೇಕಾದ ಆಹಾರವನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತದೆ ನಾವು ಬಟ್ಟೆಗಳನ್ನುಡುತ್ತೇವೆ ಆದರೆ ಅದನ್ನು ಯೋಚನೆಯ ಮೂಲದಿಂದ ತಯಾರಿಸುತ್ತೇವೆ ನಮಗೆ ಯಾವುದು ಸರಿಯೆಂದು ತೋರುವುದೋ ಆ ಉಡಿಗೆಗಳನ್ನು ನಾವು ಧರಿಸಿಕೊಳ್ಳಬಹುದು ನಾನು ಇಜಾರನ್ನು ಧರಿಸುತ್ತೇನೆ ನಾವು ತೆಳುವಾದ ಬಿಳೀ ಉಡಿಗೆಗಳನ್ನು ಧರಿಸಿಕೊಳ್ಳಬಹುದು ಆದರೆ ಅದು ನನಗೆ ಹಿತವಾಗಿ ತೋರುವುದಿಲ್ಲ

ನಮಗೆ ಯೋಗ್ಯವೆಂದು ಕಂಡುಬಂದ ಉದ್ಯೋಗದಿಂದ ನಾವುಸಂತೃಪ್ತರಾಗಬಹುದು ನಮ್ಮ ಮೊದಲಿನ ಮನೆಯಂತಹದೇ ಆದ ಮನೆಯೊಂದು ನನಗಿದೆ ಅದು ನಿನ್ನ ಮನೆಯ ಪಕ್ಕದಲ್ಲೇ ಇದೆ—'ಎಂದು ವಿಲಿಯಮ್ ಭೂತವು ಆತನ ಮಡದಿಗೆ ತನ್ನ ಚರಿತ್ರೆಯನ್ನು ಹೇಳಿತ

ಇನ್ನೊಂದು ಬಾರಿ ಆಗ ಅದು ಆರೋಗ್ಯದ ಕುರಿತಾಗಿ ಉಪದೇಶವಿತ್ತಿತು- ತನ್ನ ಪತಿಯೊಡನೆ ಮಾತಾಡಲು ಆಕೆ ಏಕಾಂತದಲ್ಲಿ ಕುಳಿತುಕೊಳ್ಳುತಿದ್ದಳ—ಹಣ್ಣಿನ ರಸವೂ ಎಪ್ಪಲ್ ಪಿಯರ್ಸ್ ಮುಂತಾದ ಹಣ್ಣುಗಳೂ ಆರೋಗ್ಯವನ್ನುಂಟು ಮಾಡುವುವು ಕಾಯಿಗಳ ಉಲ್ಲಾಸವನ್ನು ಕೊಡುತ್ತವೆ—ಎಂದ ಆ ಭೂತ ಆಕೆಗೆ ಆರೋಗ್ಯದ ಕುರಿತಾಗಿ ಉಪದೇಶಿಸಿತು

ಇನ್ನೊಂದು ವಿಚಿತ್ರವೆಂದರೆ ಇವುಗಳಿಗೆ ಭವಿಷ್ಯತ್ತು ತಿಳಿದಿದೆ 1931ನೇ ಇಸವಿಯ ಅದೊಂದು ದಿನ ಆಕೆ—ಏಕಾಂತದಲಿದ್ದಾಗ ಭೂತವು ಹೀಗೆ ನುಡಿಯಿತು—'ಪೂರ್ವದಿಕ್ಕಿನಲ್ಲಿ ಜನರು ಮಂದಿಗೆತ್ತುತ್ತಿದ್ದಾರೆ ಅದರಿಂದ ಯುದ್ಧವಾಗಲಿದೆ ಇಂಗ್ಲೆಂಡು ಇದನ್ನು ತಪ್ಪಿಸಿಕೊಳ್ಳುವ ಹಂಚಿಕೆ ಮಾಡಿಕೊಳ್ಳಬಹುದು ಆದರೆ ಅದು ಸಾಧ್ಯವಿಲ್ಲ'

ವಿಲಿಯಂ ಬೆರೆಟ್ ಭೂತವಾಗಿ ತನ್ನ ಪತ್ನಿಗೆ ಹೇಳಿದ ವಿಚಾರಗಳೆಲ್ಲವೂ ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ ಅದನ್ನು ಪ್ರಕಟಿಸಿದವಳು ಆತನ ಮಡದಿಯೇ!!

ಮಗಳಿಗೆ ಉನ್ಮಾದ ಕಾಯಿಲೆಯಿದ್ದಿತು

ಒಂದು ತರದ ವ್ಯಥೆಯಿಂದ ಈ ಕಾಯಿಲೆಯು ಉಂಟಾಗುತಿತ್ತು

ಕ್ರುಶನ್ ಸೇವನೆಯ ನಂತರ—ಆಕೆಯ ಸ್ಥಿತಿಯು ಸಂಪೂರ್ಣ ಬದಲಾಗಿರುವುದು

ಓರ್ವ ಸ್ತ್ರೀಯು ಹೀಗೆ ಬರೆಯುತ್ತಾಳೆ—ಶರತ್ಕಾಲದ ಪ್ರಾರಂಭದಲ್ಲಿ ನನ್ನ ಮಗಳಿಗೆ ಉನ್ಮಾದ ಬಾಧೆಯು ಉಂಟಾಯಿತು ಐದು ವಾರಗಳ ಚಿಕಿತ್ಸೆಯಿಂದಲೂ ಅವಳಿಗೆ ಒಂದಿಷ್ಟು ಉಪಕಾರವಾಗಲಿಲ್ಲ ಆಕೆಯು ಅಳುವುದೂ ಆಗಾಗ್ಯೆ ನಿಸ್ತೇಜಭಾವವನ್ನು ಹೊಂದುವುದೂ ನಿಲ್ಲಲಿಲ್ಲ ನಂತರ ನಾನು ಕ್ರುಶನ್ ಲವಣವನ್ನು ಪರೀಕ್ಷಾರ್ಥ ಉಪಯೋಗಿಸಬೇಕೆಂದು ನಿರ್ಣಯಿಸಿದೆ ಪ್ರತಿ ದಿನ ಪ್ರಾತಃಕಾಲ ಬಿಸಿನೀರಿನಲ್ಲಿ ಅರ್ಧ ಚಮಚೆಯಷ್ಟು ಕ್ರುಶನ್ ಲವಣಗಳನ್ನು ಕೊಡಲು ಪ್ರಾರಂಭಿಸಿದೆ ಒಂದೇ ಒಂದು ವಾರದಲ್ಲಿ ಆಕೆಯು ಅಳುವುದನ್ನು ನಿಲ್ಲಿಸಿದಳು, ಸುಖವಾಗಿ ನಿದ್ರಿಸಲು ಪ್ರಾರಂಭಿಸಿದಳು ಇದು ೩ ತಿಂಗಳ ಹಿಂದೆ ಈಗ ಆಕೆಯು ಶಕ್ತಿಯಿಂದ ತುಂಬಿರುವಳು ಸರಿಯಾಗಿ ಉಣ್ಣುತಿನ್ನುತ್ತಿದ್ದಾಳೆ ಆಕೆಯು ಈಗ ಸಂಪೂರ್ಣ ಮಾರ್ಪಟ್ಟಿರುವಳು ಈಗಲೂ ಪ್ರತಿದಿನ ಆಕೆಗೆ ಒಂದಿಷ್ಟು ಕ್ರುಶನನ್ನು ಕೊಡುತಿದ್ದೇನೆ

ಯಂ ಎಲ್

ನರಗಳ ಕಾಯಿಲೆಗೆ ಮಲಬದ್ಧತೆಯು ಒಂದು ಕಾರಣವು. ಇದು ಯಾರಿಗೂ ತಿಳಿಯುವುದಿಲ್ಲ ಮಲಬದ್ಧತೆಯಿಂದ ದೇಹದೊಳಗೆ ಹಲವು ಕಶ್ಮಲಗಳ ಶೇಖರವಾಗಿ ಅವುಗಳಿಂದ ಹೊರಡುವ ವಿಷವು ಅನೇಕ ಮಹಾಪೀಡೆಗಳಿಗೆ ಕಾರಣವಾಗುತ್ತದೆ ನಿಮ್ಮಲ್ಲಿರುವ ಶಕ್ತಿ ತೇಜಸ್ಸನ್ನು ಕುಂದಿಸುತ್ತದೆ

ಕ್ರುಶನ್ ಸೇವನೆಯಿಂದ ಮಲಬದ್ಧತೆಯು ಉಂಟಾಗುವುದೇ ಇಲ್ಲ ರಕ್ತವು ಪರಿಶುದ್ಧವಾಗಿರವಂತೆ ದೇಹದ ಅಂಗಾಂಗಗಳನ್ನೆಲ್ಲಾ ಸರಿಯಾಗಿ ಕಾರ್ಯ ವಿಷ ಕಶ್ಮಲಗಳನ್ನು ಹೊರದೂಡುವಂತೆ ಕ್ರುಶನ್ ಲವಣಗಳ ಸಹಕರಿಸುತ್ತವೆ ಕ್ರುಶನ್ ಲವಣಗಳನ್ನು ಸೇವಿಸಿದರೆ, ನಿಮ್ಮಲ್ಲಿ ಮನೋಕಲಂಕವೂ, ನಿಸ್ತೇಜಭಾವವೂ ಎಂದಿಗೂ ಉಂಟಾಗದು



ಕ್ರುಶನ್ ಲವಣಗಳು ಎಲ್ಲಾ ಕೆಮಿಸ್ಟರರಲ್ಲಿ ಸ್ಟೋರುಗಳಲ್ಲಿ ಮತ್ತು ಬಜಾರುಗಳಲ್ಲಿ ದೊರೆಯುತ್ತದೆ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸುತ್ತಿರುವ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್ ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ... ವಿಕೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತಾಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಗದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಖರ್ಚು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N JASANI,** Vithalbhai Patal Road, BOMBAY 4

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು.

ಅತ್ಯುತ್ಕೃಷ್ಟ ವಾರಪತ್ರಿಕೆಯಾದ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬತ್ತ ಜೋನ ಗುಡ್ಡ ಮ.	1 —10	1 —10
ರಾಶಿ ಅಕ್ಕಿ	3— 8	4— 0
ಸುಗ್ಗಿ	4— 6	4— 8
ಗುಡ್ಡು	4— 2	4— 2
ಊರ ಅಪ್ಪಲ್ ಬೆಳ್ತಿಗೆ	4— 7	4— 7
ರಂಗೂನು ಬೆ. ಗೋ. ಗಳ್ಳ	6 — 8	7— 4
ಎಲ್ಲೂರು ಬೆ. ಮು. ಗಳ್ಳ	3—14	4— 0
ಗೋಧಿ ಗೋಣಿ ಗಳ್ಳ	12— 8	15— 8
ತೊಗರಿ ಗೋಣಿ ಗಳ್ಳ	11— 8	18— 8
ಹುರುಳಿ ಗೋಣಿ ಗಳ್ಳ	5—10	5 —10
ಕಡಲೆ ಗೋಣಿ ಗಳ್ಳ	9 — 8	10 — 8
ತೊಗರಿಬೇಳೆ ಗೋಣಿ ಗಳ್ಳ	11— 8	18— 0
ಉದ್ದು ಗೋಣಿ ಗಳ್ಳ	9— 0	9 — 8
ಹೆಸರು ಗೋಣಿ ಗಳ್ಳ	9—12	10— 8
ಊರುಬೆಲ್ಲ ಖಂಡಿ ಗಳ್ಳ	28— 0	30— 0
ಉಪ್ಪು ಗೋಣಿ ಗಳ್ಳ	4— 8	5— 4
ಮೆಣಸು ಖಂಡಿ ಗಳ್ಳ	52 — 8	0— 0
ಎಳ್ಳೆಂಡಿ ಖಂಡಿ ಗಳ್ಳ	25 —	26 — 0
ತೆಂಗಿನ ಎಣ್ಣೆ ಮುಡಿ ಗಳ್ಳ	3 —12	3—10
ಎಳ್ಳೆಣ್ಣೆ ಮುಡಿ ಗಳ್ಳ	6— 0	7— 0
ಚಿಮಿಣಿಎಣ್ಣೆ ಪಟ್ಟಿಗೆ ಗಳ್ಳ	6— 5	7— 5
ಮೋರಿಸ ಸಕ್ಕರೆ ಮು. ಗಳ್ಳ	2— 13	2 —14
ಮೆಣಸು	4— 8	6— 0
ಸಾಸಿವೆ ಮುಡಿ ಗಳ್ಳ	5 — 8	6— 8
ಕಾಳುಮೆಣಸು ಹ ಮ್ಡೇಗೆ	17 — 0	18— 8
ಮೆಂತ್ಯಬೀಜ ಮುಡಿಗಳ್ಳ	80— 0	85— 0
ಗೇರುಬೀಜ ಮು. ಗಳ್ಳ	2— 1	[illegible]—13
ಕಬ್ಬಿಣ ಖಂಡಿ ಗಳ್ಳ	50— 0	55— 0
ಶಾಂಪ್ರತಗ[illegible] ಮು ಗಳ್ಳ	14— 12	15— 0
ಶಾಂಪ್ರಬಾತ್ರಗಳು ಮು ಗಳ್ಳ	17— 0	18— 0
ಚೀನಬೆಳ್ಳಿ ಸೇರು ಗಳ್ಳ	13— 8	14— 0
ಓತ್ನಾಳ ತಗಡು ಮು ಗಳ್ಳ	12— 0	12— 0
ಪವನು ಗಳ್ಳ	22— 1	22— 6
ಹುಣಸೆ ಹುಳಿ ಖಂಡಿ ಗಳ್ಳ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳ	140— 0	148— 0
ಫಾರೇನ ಕಾಫಿ ಖಂಡಿ ಗಳ್ಳ	185— 0	198— 0
ಮಡಿಕೇರಿ ಏಲಕ್ಕಿ	45— 0	47 — 8

ತಿನ್ನಬೇಕಾದುದು ಹೇಗೆಂದು ತಿಳಿಯಿರಿ.

ತಿನ್ನಲಿಕ್ಕೆ ತಿಳಿದ ಒಬ್ಬ ಹೇಗೆ ತಿನ್ನಬೇಕೆಂದು, ಹೀಗೆ ಹೇಳುತ್ತಾನೆ—

ಮೆಲ್ಲಗೆ ತಿನ್ನಿರಿ, ಚೆನ್ನಾಗಿ ಜಗಿದು ತಿನ್ನಿರಿ
ರುಚಿಯಿಂದ ತಿನ್ನಿರಿ, ತಿಂದುದರ ರುಚಿ ನೋಡಿ ಸುಖಪಡಿರಿ.
ಬೇಕಾದಷ್ಟೇ ತಿನ್ನಿರಿ, ಹೆಚ್ಚು ತಿಂದರೆ ಹೊಟ್ಟೆ ಉಬ್ಬಿಕೊಳ್ಳುವುದು.
ಆಯಾಸವಿಲ್ಲದಾಗ ತಿನ್ನಿರಿ, ಮನಸ್ಸಿಗೆ ಸುಖವಿದ್ದಾಗ ತಿನ್ನಿರಿ.
ತಿಂದಾಯಿತೆ? ಸ್ವಲ್ಪ ಆರಾಮ ತೆಗೆದುಕೊಳ್ಳಿರಿ.
ತಿಂದಾಯಿತೆ? ಆ ಕೂಡಲೆ ಕೆಲಸಕ್ಕೆ ಹೋಗಬೇಡಿರಿ.
ಸಂತೋಷ ಇದ್ದಾಗ ತಿನ್ನಿರಿ, ಸಂತೋಷವಿಲ್ಲದಾಗ ತಿನ್ನಬೇಡಿರಿ
ತಿನ್ನುವಾಗಿನ ಮಾತು ವಿನೋದಪರವಾಗಿರಬೇಕು
ತಿನ್ನುವಾಗಿನ ಮಾತು ಉಲ್ಲಾಸಕರವಿರಬೇಕು
ಸಂತೋಷವೇ ಯೌವನ, ಚಿಂತೆಯೇ ಮುಪ್ಪು,
ಸಂತೋಷವೇ ಜೀರ್ಣೌಷಧಿ, ಚಿಂತೆಯೇ ಅಜೀರ್ಣಕಾರಿ

ಇದನ್ನೆಲ್ಲ ನೆನಪಿಟ್ಟು, ಉತ್ತಮವಾದ್ದನ್ನು ಬೇಕಾದಷ್ಟು ತಿಂದರೆ, ಮನುಷ್ಯನಿಗೆ ರೋಗವೇ ಇಲ್ಲ, ಊಟ ಬಲ್ಲವನಿಗೆ ರೋಗವಿಲ್ಲವೆಂದು ನಮ್ಮ ಹಿರಿಯರೂ ಹೇಳಿದ್ದಾರೆ.

ಶೀತಭಯವಿದ್ದರೆ ಏನು ಮಾಡಬೇಕು?

ಶೀತವಾದರೆ, ಚಳಿಗಾಲ ಬಂದರೆ, ಕೆಲವರಿಗೆ ಪ್ರಾಣಭಯ ಕಂಬಳಿಗಳನ್ನು ಹೊದ್ದುಕೊಂಡು ಕತ್ತಲೆಯ ಕೋಣೆಯಲ್ಲಿ ಬಿದ್ದುಕೊಳ್ಳುವರು ಆದರೆ ರೋಗ ಬರುವುದು ಇದರಿಂದಾಗಿಯೇ. ಅದು ಮಾತ್ರ ಅವರಿಗೆ ಗೊತ್ತಿಲ್ಲ.

ಶೀತವಾದರೆ, ಶೀತ ಗಾಳಿ ಬಂದರೆ ಯಾರೂ ಹೆದರುವ ಕಾರಣವಿಲ್ಲ. ಶೀತವೆಂಬುದು ಒಂದು ರೋಗವಲ್ಲ. ಆದರೆ ಮುಂದೆ ರೋಗ ಬಂದೀತೆಂಬುದರ ಒಂದು ಪೂರ್ವಸೂಚನೆ ಆದ್ದರಿಂದ ಶೀತಕ್ಕೆ ಯಾರೂ ಹೆದರಬಾರದು, ಔಷಧಿ ಮೊದಲಾದ್ದು ಕೊಟ್ಟು ಶೀತವನ್ನು ತಡೆಯಬಾರದು

ಶರೀರವನ್ನು ಗಾಳಿಬೆಳಕುಗಳಿಗೆ ಚೆನ್ನಾಗಿ ಒಡ್ಡಿರಿ ಮೈಮೇಲೆ ತೆಳ್ಳಗಾದ ಬಟ್ಟೆಗಳನ್ನೇ ಹೊದ್ದುಕೊಳ್ಳಿರಿ. ಏಳಬೇಕಾದರೆ, ಮಲಗಬೇಕಾದರೆ ಐದೈದು ನಿಮಿಷ ಉಸಿರಾಟದ ಅಭ್ಯಾಸ ಮಾಡಿರಿ ಮೈ ಕೈ ಕಾಲುಗಳನ್ನು ಮೆಲ್ಲಮೆಲ್ಲಗೆ ತಿಕ್ಕಿಕೊಂಡು ಬೆಚ್ಚಗಿರಿಸಿರಿ ಅಂದರೆ ಶೀತಗಾಳಿ ಬೀಸಿದರೂ ನಿಮಗೆ ಶೀತದ ಭಯವಿಲ್ಲ ಶೀತವಾದರೂ ಬೇರೆ ರೋಗಗಳು ಬರಲಾರವು, ಶರೀರದಲ್ಲಿ ಸಂಗ್ರಹವಾದ ಕಲ್ಮಶಗಳು ಆ ಶೀತದೊಂದಿಗೆ ಹೊರಗಾಗುವವು.

ನೈಸರ್ಗಿಕ ಜೀವನವನ್ನು ಅನುಸರಿ ನಿಸರ್ಗದೇವಿಯನ್ನು ಮರೆಯಬೇಡಿರಿ ಅವಳ ಕೃಪಾಕಟಾಕ್ಷವು ನಿಮ್ಮ ಮೇಲಿದ್ದರೆ ನಿಮಗೆ ಜೀವನದಲ್ಲಿ ಯಾವುದಕ್ಕೂ ಕೊರತೆಯಿಲ್ಲ ಜೀವನವೆಲ್ಲ ಸುಖಮಯವಾಗುವುದು

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಮಾರ್ಗಶಿರ ಬ. ೩೦ ಶನಿವಾರದಿಂದ, ಪುಷ್ಯ ಶು. ೬ ಶುಕ್ರವಾರದ ವರೆಗಿನ ಪಂಚಾಂಗ (೧೯೩೮ನೇಯ ಧನು ಮರಾರ್ಗ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
1	ಶನಿ	೩೦	೪೩	ಮೂಲ	೫೧	೧೭	ಧನುರ್ಮಾಸ
2	ರವಿ	೧	೪೭	ಪೂ ಷಾ	೫೪	೧೮	
3	ಸೋಮ	೨	೫೧	ಉ ಷಾಢ	೫೩	೧೯	
4	ಕುಜ	೩	೫೪	ಶ್ರವಣ	೩೭	೨೦	
5	ಬುಧ	೪	೫೫	ಧನಿಷ್ಠ	೪೦	೨೧	
6	ಗುರು	೫	೫೬	ಶತಭಿಷ	೪೨	೨೨	
7	ಶುಕ್ರ	೬	೫೫	ಪೂ ಭಾ	೪೩	೨೩	

ಗರ್ಭಿನೋಲ್ ಅಥವಾ ಸತ್ಸಂತಾನದಾಯಿನಿ

ಇದನ್ನು ಪ್ರಾಚೀನ ಒಂದು ಮಲೆಯಾಳ ವೈದ್ಯಗ್ರಂಥದ ಪ್ರಯೋಗಕ್ಕನುಸರಿಸಿ ಶ್ರೇಷ್ಠವಾದ ವನಮೂಲಿಕೆಗಳಿಂದಲೂ ಪುಷ್ಪಗಳಿಂದಲೂ ಪರಿಶ್ರಮಪೂರ್ವಕ ತಯಾರಿಸಿದ ಸಿದ್ಧೌಷಧವು.

ಇದು ಸ್ತ್ರೀಯರ ಗರ್ಭಾಶಯ ಸಂಬಂಧವಾದ ಋತು ಶೂಲೆ, ಶ್ವೇತಪ್ರದರ, ರಕ್ತಪ್ರದರ, ಗರ್ಭಸ್ರಾವ, ಗರ್ಭಾಶಯ ವ್ರಣ, ಮೂತ್ರದ್ವಾರ ಉರಿ, ನರಗಳ ಶಿಥಿಲ, ಪ್ರಸಾವ ನಂತರ ಉಂಟಾಗುವ ಕ್ಷಯ ಚಿಹ್ನ, ಅಜೀರ್ಣ, ಮಲಬದ್ಧತೆ, ಎದೆನೋವು, ಬೆನ್ನುನೋವು, ತಲೆನೋವು, ತಲೆ ತಿರುಗುವಿಕೆ, ಮೋಹಾಲಸ್ಯ (Hysteria) ಮೊದಲಾದ ನಾನಾ ತರದ ಮೆದುಳಿನ-ವಿಕಾರಗಳು, ಅಶಕ್ತತೆ, ಮುಂತಾದ ಎಲ್ಲಾ ರೋಗಗಳನ್ನು ಪರಿಪೂರ್ಣವಾಗಿ ಗುಣಪಡಿಸುವ ಅದ್ವಿತೀಯ ಔಷಧವು.

ಹೆಚ್ಚೇನು? ವಿಜಯ ಗರ್ಭಿನೋಲ್ ಎಂಬುದು ಸ್ತ್ರೀಯರ ಸಕಲ ವ್ಯಾಧಿಗಳಿಗೆ ಅಮೃತತುಲ್ಯವಾದ ಒಂದೇ ಒಂದು ಔಷಧವೆಂದರೆ ಅತಿಶಯೋಕ್ತಿಯಾಗಲಾರದು ಇದರ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಅನೇಕ ಆಯುರ್ವೇದ ಪಂಡಿತರೂ, ಮತ್ತು ಇಂಗ್ಲಿಷ ವೈದ್ಯರು ಕೂಡಾ

"ವಿಜಯ ಗರ್ಭಿನೋಲ"

ನ್ನು ಧಾರಾಳವಾಗಿ ಉಪಯೋಗಿಸುತ್ತಾರೆ ಒಂದೇ ಒಂದು ಬಾಟ್ಲಿಯನ್ನು ಉಪಯೋಗಿಸಿ ನೋಡಿದಲ್ಲಿ ಗುಣಕಾರಿಯಾಗಿ ಕಂಡುಬರುವುದು.

ಒಬ್ಬ ವೈದ್ಯರು ಹೀಗೆಂದು ಬರೆಯುತ್ತಾರೆ. "ಬೇರೆ ಅನೇಕ ಔಷಧಗಳಿಂದ ಗುಣಹೊಂದದೆ ಇರುವ ಗರ್ಭಾಶಯ ಸಂಬಂಧ ವ್ಯಾಧಿಯುಳ್ಳ ಸ್ತ್ರೀಯರಿಗೆ ನಿಮ್ಮ ಗರ್ಭಿನೋಲ್ ಕೊಟ್ಟಲ್ಲಿ ಅವರೆಲ್ಲರೂ ತ್ವರಿಯಾಗಿ ಗುಣಹೊಂದಿದ್ದಾರೆ ಸ್ತ್ರೀಯರ ರೋಗಗಳಿಗೆ ಈ ಔಷಧವು ಶ್ರೇಷ್ಠವಾದುದೆಂದು ನನ್ನ ಅನುಭವಕ್ಕೆ ಗೋಚರಿಸಿದೆ'

ಕ್ರಯ 1 ಪೌಂಡು ಬಾಟ್ಲಿ 1ಕ್ಕೆ ರೂ. 2—8—0.
ಅರ್ಧ ಪೌಂಡು ಬಾಟ್ಲಿ 1ಕ್ಕೆ ರೂ. 1—6—0.

ತಯಾರಿಸುವವರು:—

ವಿಜಯ ಫಾರ್ಮಸಿ, ಕೊಚ್ಚಿನ್.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರೆಯುವುದು.

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 months 3½%

Auction chit Funds ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars— **K. R. GURU,** *Managing Director*.

ಪೈಂಟರ್ಸ್

Whenever you require the service of

PAINTERS

Please call on or write to:—

Simon & Co.,
Painters.

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸೈನ್ ಬೋರ್ಡ್ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡೆಯಿರಿ.

ಕೆಟ್ಟಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

ಜರ್ಮನಿಯಲ್ಲಿ ಲೋಕಶಿಕ್ಷಣ!

ಪಠ್ಯಪುಸ್ತಕಗಳ ಉದ್ದೇಶ ಜ್ಞಾನದಾನವಲ್ಲ— ಯುದ್ಧಕಲೆಯನ್ನು ಕಲಿಸುವದು!

ಲೋಕಶಿಕ್ಷಣದ ಉದ್ದೇಶವು ಮಕ್ಕಳು ಉತ್ತಮ ನಾಗರಿಕರಾಗುವಂತೆ ಮಾಡುವದಾಗಿದೆ; ಅವರ ಶಾರೀರಿಕ, ಮಾನಸಿಕ, ನೈತಿಕ ಉನ್ನತಿಯನ್ನು ಸಾಧಿಸುವದಾಗಿದೆ. ಆದರೆ ಶಿಕ್ಷಣವೆಂಬುದು ಹೇಗೆ ಬೇಕೋ ಹಾಗೆ, ಯಾವುದಕ್ಕೆ ಬೇಕೋ ಅದಕ್ಕೆ ಉಪಯೋಗಿಸಲಿಕ್ಕೆ ಬರುವ ಒಂದು ಅಸ್ತ್ರದಂತಿರುವದು. ಜರ್ಮನಿಯು ಶಿಕ್ಷಣವೆಂಬ ಈ ಅಸ್ತ್ರವನ್ನು ನಾಗರಿಕರ ಬೆಳವಣಿಗೆಗೂ ಜನಾಂಗದ ಶಾರೀರಿಕ ಮಾನಸಿಕ, ನೈತಿಕ ಉನ್ನತಿಗೂ ಉಪಯೋಗಿಸುವುದರ ಬದಲಿಗೆ ತನ್ನ ಯಾವುದೋ ಒಂದು ಪ್ರಕಾರದ ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ಪ್ರಪಂಚದ ಜನಾಂಗಗಳೊಳಗೆ ತನ್ನ ಬೇಳೆಯನ್ನು ಬೇಯಿಸುವುದಕ್ಕಾಗಿ ಉಪಯೋಗಿಸುತ್ತಿದೆ.

ಕಳೆದ ಮಹಾಯುದ್ಧದಲ್ಲಿ ಜರ್ಮನಿಯು ಸೋತುಸುಣ್ಣವಾಯಿತು. ಅದು ಮುಂದೆಂದೂ ಎದ್ದುನಿಲ್ಲದ ಹಾಗೆ ಮಿತ್ರಪಕ್ಷದವರು, ಬಗ್ಗಿದ ಅದರ ಬೆನ್ನಿನ ಮೇಲೆ ಒಂದೊಂದು ಗುದ್ದು ಕೊಟ್ಟು ಅದು ಮುಗ್ಗರಿಸಿಬೀಳುವಂತೆ ಮಾಡಿದರು. ಕೆಲವು ವರ್ಷಗಳ ತನಕ ಅದು ಅಚೇತನವಾಗಿ, ಆ ಮೇಲೆ ಚೇತರಿಸಿಕೊಂಡಿದ್ದರೂ ಎದ್ದು ನಿಲ್ಲಲಾರದಷ್ಟು ದುರ್ಬಲವಾಗಿ ಹೇಗೋ ಹಾಗೆ ತನ್ನ ಜೀವನವನ್ನು ಕಳೆಯಿತು. ಆದರೆ, ಎಷ್ಟುದಿನ ಇಂಥ ದೀನ ಹೀನ ಜೀವನವನ್ನು ನಡೆಯಿಸಿಕೊಂಡು ಇರಬಲ್ಲುದು? ಅಧೀರ ವೀರ ಜರ್ಮನಿ, ಹಾಗೆ ಎಷ್ಟು ಕಾಲ ಇದ್ದೀತು?

ಮುಂದೆ ಜರ್ಮನಿಯ ರಾಜಕೀಯರಂಗದಲ್ಲಿ ಹೆರ್ ಹಿಟ್ಲರನ ಪ್ರವೇಶವಾಯಿತು. ಅವನು ನಿರ್ಜೀವನ್ಮೃತವಾದ ಜರ್ಮನಿಯಲ್ಲಿ ಹೊಸ ಜೀವವನ್ನು ಊದಿದನು; ಜರ್ಮನರಿಗೆ ಹೊಸ ಸ್ಫೂರ್ತಿ ಉತ್ಸಾಹಗಳನ್ನು ಕೊಟ್ಟನು ಹಿಟ್ಲರನು ಜರ್ಮನಿಯ ಸರ್ವಾಧಿಕಾರಿಯ ಪಟ್ಟವನ್ನು ಏರಿದನು.

ಈಗ ಜರ್ಮನಿ ಎಂದರೆ ಹಿಟ್ಲರ-ಹಿಟ್ಲರ ಎಂದರೆ-ಜರ್ಮನಿ ಎಂದಾಗಿದೆ; ಹಿಟ್ಲರನ ಮಾತು ಜರ್ಮನರಿಗೆ ವೇದವಾಕ್ಯವಾಗಿದೆ, ಬ್ಯಾಬಲ ವಚನವಾಗಿದೆ. ಹಿಟ್ಲರನ ವಿಚಾರವೇ ಅವರ ವಿಚಾರ, ಅವನ ನುಡಿಯೇ ಅವರ ನುಡಿ, ಅವನ ಆಚಾರವೇ ಅವರ ಆಚಾರವಾಗಿದೆ. ಹಿಟ್ಲರನನ್ನು ಬಿಟ್ಟು ಜರ್ಮನರಿಗೆ ಪ್ರತ್ಯೇಕ ವ್ಯಕ್ತಿತ್ವವಿಲ್ಲ. ಅವನನ್ನು ಬಿಟ್ಟು ಅವರು ಸ್ವತಂತ್ರವಾಗಿ ವಿಚಾರಿಸಲಾರರು, ನುಡಿಯಲಾರರು, ಆಚರಿಸಲಾರರು. ಹೀಗೆ ಜರ್ಮನರು ಹಿಟ್ಲರನೊಂದಿಗೆ ತಮ್ಮ ಪೂರ್ಣವ್ಯಕ್ತಿತ್ವವನ್ನು ಕಳಕೊಂಡಿದ್ದಾರೆ. ಹೀಗಾಗಲಿಕ್ಕೆ ಕಾರಣ? ಹಿಟ್ಲರನು ಶಿಕ್ಷಣವೆಂಬ ಅಸ್ತ್ರವನ್ನು ತನ್ನಮನೋಇನುಕೂಲವಾಗಿ ಉಪಯೋಗಿಸುತ್ತಿದ್ದಾನೆ; ಹೊರತು ಆ ಅಸ್ತ್ರದ ಉದ್ದೇಶವನ್ನು ಸಾಧಿಸುತ್ತಿರುವುದಿಲ್ಲ. ಪ್ರಪಂಚದಲ್ಲಿ ಹಿಂದೆ ಹೇಗೋ ಇಂದು ಹಾಗೆಯೇ ಬಲವಿದ್ದಲ್ಲಿ ನ್ಯಾಯವಿರುವುದನ್ನು ಹಿಟ್ಲರನು ಚೆನ್ನಾಗಿ ಮನಗಂಡಿರುವುದರಿಂದ ಸಾಧ್ಯವಿದ್ದ ಎಲ್ಲ ಉಪಾಯಗಳಿಂದ ಜರ್ಮನಿಯ ಬಲವನ್ನು ಹೆಚ್ಚಿಸುವ ಮಹತ್ಕಾರ್ಯದಲ್ಲಿ ಅವನು ತೊಡಗಿದ್ದಾನೆ. ಜರ್ಮನಿಯು ಬಲವನ್ನು ಹೆಚ್ಚಿಸಿಕೊಳ್ಳುವದು ಹೇಗೆ? ಜರ್ಮನಿಯ ಪ್ರತಿಯೊಬ್ಬನೂ ಯುದ್ಧಕಲೆಯಲ್ಲಿ ನುರಿತಿರುವುದರಿಂದ, ಅಲ್ಲಿಯ ಪ್ರತಿಯೊಬ್ಬನೂ ಯುದ್ಧಾತುರನಾಗುವದರಿಂದ. ಆಗ ಮಾತ್ರ ಜರ್ಮನಿಯು ಬಲಿಷ್ಠವಾಗುವದು. ಆಗಮಾತ್ರ ಅನ್ಯಾಯಹೊಂದಿದ ಜರ್ಮನಿಗೆ ನ್ಯಾಯ ದೊರೆಯುವದು–ಹೀಗೆಂದು ಹಿಟ್ಲರನು ಹೇಳುತ್ತಾನೆ. ಆದಕಾರಣ ಜರ್ಮನಿಯ ಲೋಕಶಿಕ್ಷಣವೆಂದರೆ ಬೇರೇನಿಲ್ಲ; ಶಾಲೆಗೆ ಸೇರಿದಂದಿನಿಂದ ಶಾಲೆಯನ್ನು ಬಿಟ್ಟುಹೋಗುವ ತನಕ ಮಕ್ಕಳು ಯುದ್ಧಕಲೆಗೆ ಸಂಬಂಧಪಟ್ಟುಕೊಂಡು ಓದಬೇಕು, ಬರೆಯಬೇಕು, ಲೆಕ್ಕಮಾಡಬೇಕು; ಇತಿಹಾಸ, ಭೂಗೋಳ, ಪ್ರಾಣಿಶಾಸ್ತ್ರ, ಸಸ್ಯ ಶಾಸ್ತ್ರ ರಸಾಯನ ಶಾಸ್ತ್ರ, ಪ್ರಕೃತಿಶಾಸ್ತ್ರ ಮೊದಲಾದ ಪ್ರತಿಯೊಂದು ವಿಷಯವನ್ನು ಕಲಿಯಬೇಕು— ಇದುವೇ ಅಧುನಿಕ ಜರ್ಮನಿಯ ಲೋಕ ಶಿಕ್ಷಣವೆನ್ನಿಸುತ್ತದೆ.

—ಜರ್ಮನಿಯ ಸರ್ವಾಧಿಕಾರಿ ಹೆರ್ ಹಿಟ್ಲರ್.

ಜರ್ಮನ ಜನಾಂಗದ ಶ್ರೇಷ್ಠತೆ, ಉಚ್ಚತೆಯನ್ನು ತಿಳಿಸುವುದಕ್ಕಾಗಿ ಜರ್ಮನಿಯ ವಿದ್ಯಾರ್ಥಿಗಳಿಗೆ ಇತಿಹಾಸವನ್ನು ಕಲಿಸುತ್ತಿದೆ. ಜರ್ಮನಿಯ ಒಂದು ಪರ್ವತ ಮಾಲೆಯು ಶತ್ರುಗಳ ಆಕ್ರಮಣವನ್ನು ತಡೆಯಲಿಕ್ಕೆ ಹೇಗೆ ಸಹಕಾರಿಯಾಗಿದೆ ಎಂಬ ತಿಳುವಳಿಕೆ ಮಹತ್ವದ್ದೆಂದು ಎಣಿಸಲ್ಪಡುತ್ತದಲ್ಲದೆ, ಆದರ ಭೌಗೋಲಿಕ ಜ್ಞಾನವು ಅಷ್ಟು ಮಹತ್ವದ್ದೆಂದು ತಿಳಿಯಲ್ಪಡುವುದಿಲ್ಲ. ಪ್ರಕೃತಿಶಾಸ್ತ್ರವನ್ನು ಕಲಿಸುವುದರ ಉದ್ದೇಶವು—ಪ್ರಕೃತಿಯ ಬೇರೆ ಬೇರೆ ಗುಣಸ್ವಭಾವಾದಿಗಳಿಂದ ಯುದ್ಧಕಾರ್ಯವು ಹೇಗೆ ಸುಲಭವಾಗುತ್ತದೆಂದು ಹೇಳಿಕೊಡುವದಾಗಿದೆ. ಪಾಠ್ಯಪುಸ್ತಕಗಳು ಸಹ ಇದೇ ದೃಷ್ಟಿಯಿಂದ ಬರೆಯಲ್ಪಟ್ಟಿರುತ್ತವೆ. ಪ್ರತಿಯೊಂದು ತರಗತಿಯ, ಪ್ರತಿಯೊಂದು ಪಾಠಪುಸ್ತಕದ ಪ್ರತಿಯೊಂದು ಪಾಠದಲ್ಲಿ ಯುದ್ಧಕಲೆಗೆ ಸಂಬಂಧಪಟ್ಟ ಚಿತ್ರಗಳೂ ಮಾತುಗಳೂ ಬಾರದೇ ಇರುವುದಿಲ್ಲ. ಅಂಥ ಪುಸ್ತಕಗಳನ್ನು ಯಾರು ಓದಿದರೂ, ಅವರಲ್ಲಿ ತಾವು ವೀರಧೀರ ಯೋದ್ಧರಾಗಬೇಕು, ಯುದ್ಧಶಿಕ್ಷಣದಲ್ಲಿ ಪ್ರವೀಣರಾಗಿ ದೇಶಮಾತೆಯನ್ನು ಪರಕೀಯರ ಧಾಳಿಯಿಂದ ರಕ್ಷಿಸಬೇಕು ಎಂಬ ಭಾವವು ಜಾಗೃತವಾಗುವದು ಮಾತ್ರವಲ್ಲದೆ, ಯುದ್ಧಾತುರವು ಸಹ ಪ್ರಬಲವಾಗಿ ಕಾಣಿಸಿಕೊಳ್ಳುವದು. ಪಠ್ಯಪುಸ್ತಕಗಳ ಗದ್ಯಭಾಗವು ಮಾತ್ರವಲ್ಲ; ಪದ್ಯಭಾಗವು ಕೂಡಾ ಸಾಹಸಕೃತ್ಯಗಳ ಬಣ್ಣನೆಯಿಂದಲೂ ಯುದ್ಧಪ್ರಸಂಗಗಳ ವರ್ಣನೆಯಿಂದಲೂ ಕೂಡಿಕೊಂಡು, ಪಾಠಕರ ರಕ್ತವು ವೀರಾವೇಶದಿಂದ ಕುದಿಯುವಂತೆ ಮಾಡುವಂಥವು ಆಗಿರುತ್ತವೆ.

ಈಗ ವಿದೇಶೀಯರ ಆಕ್ರಮಣದ ಭಯವಿರುವುದರಿಂದ ಮಕ್ಕಳಿಗೆ ಆದಿಯಿಂದ ಅಂತ್ಯದವರೆಗೆ ಯುದ್ಧಕಲೆಯನ್ನೇ ಕಲಿಸುತ್ತಿರುವುದಲ್ಲ. ಸಂಘರ್ಷವೇ ಜೀವನದ ಲಕ್ಷಣ. ಸಂಘರ್ಷವಿಲ್ಲದಿದ್ದರೆ ಮೃತ್ಯುವುಂಟೆಂದು ಹಿಟ್ಲರನ ಭಾವನೆಯಾಗಿದೆ. ಲೋಕಶಾಂತಿಯುಂಟಾಗ ಬೇಕಾದರೆ ಪ್ರಬಲ ಸಂಘರ್ಷವಿರಬೇಕು. ಆದ್ದರಿಂದ ಶಾಂತಿಸ್ಥಾಪನೆಗಾಗಿ ಜರ್ಮನರೆಲ್ಲರೂ ಸೈನಿಕರಾಗಿ, ಸ್ವಯಂಸೇವಕರಾಗಿ ಜೀವನವನ್ನು ಸಾಗಿಸಬೇಕೆಂದು ಹಿಟ್ಲರನ ಆಗ್ರಹವಿರುತ್ತದೆ. ಆದರೆ ಇದೆಲ್ಲ ಬರೇ ನೆವನ. ನಿಜವಾದ ಉದ್ದೇಶ ಜರ್ಮನಿಯನ್ನು ಇನ್ನೊಂದು ಯುದ್ಧಕ್ಕೆ ಸಿದ್ಧಮಾಡುವುದಾಗಿದೆ. ಅಂತಹದೊಂದು ಮಹಾಯುದ್ಧವು ಸದ್ಯದಲ್ಲಿಯೆ ಆಗಿಯೆ ಆಗುವದೆಂದು ಹಿಟ್ಲರನ ವಿಶ್ವಾಸವಿರುತ್ತದೆ.

ಗಣಿತವನ್ನು ಸಹ ಜರ್ಮನಿಯ ಶಾಲೆಗಳಲ್ಲಿ ಯುದ್ಧಕಲೆಗೆ ಸಂಬಂಧಪಟ್ಟು ಕಲಿಸುತ್ತಾರೆಂಬುದು ಕೇಳಿದರೆ ನೀವು ಆಶ್ಚರ್ಯಪಟ್ಟೀರಿ. ಆದರೆ, ಜರ್ಮನ ಶಾಲೆಗಳಲ್ಲಿ ಕಲಿಸುವ ಒಂದು ಗಣಿತಪ್ರಶ್ನೆಯ ಮಾದರಿ ಇದು: ಒಂದು ವಿಮಾನವು ಒಂದು ಮಿನಿಟಿನಲ್ಲಿ ಇಂತಿಷ್ಟು ಬಾರಿ ಬಾಂಬುಗಳನ್ನು ಸುರಿದರೆ ಇಂತಿಷ್ಟು ವಿಮಾನಗಳು ಇಂತಿಷ್ಟು ಗಂಟೆಗಳಲ್ಲಿ ಎಷ್ಟು ಬಾಂಬುಗಳನ್ನು ಸುರಿಸುವವು? ಇಂಥ ಅನೇಕ ಲೆಕ್ಕಗಳನ್ನು ಮಾಡಿದ ಮೇಲೆ ವಿದ್ಯಾರ್ಥಿಯು ರಸಾಯನಶಾಸ್ತ್ರವನ್ನು ಕಲಿಯಲಿಕ್ಕೆ ಹೋಗುವನು. ಅಲ್ಲಿಯೂ ಅವನಿಗೆ ರಸಾಯನಶಾಸ್ತ್ರಕ್ಕೆ ಸಂಬಂಧಪಟ್ಟ ಬಾಂಬು ಇತ್ಯಾದಿ ಮಾಡುವ ಕ್ರಮವನ್ನು ಕಲಿಸುವರು. ಅಲ್ಲಿ ಇತಿಹಾಸವನ್ನು ಕಲಿಸುವುದರ ಉದ್ದೇಶವು ಲೋಕಶಾಂತಿಯಿಂದ ಇತಿಹಾಸನಿರ್ಮಾಣವಾಗಲಿಲ್ಲ; ಇತಿಹಾಸವೆಂದರೆ ಜನಾಂಗ ಜನಾಂಗಗಳೊಳಗಿನ ಸಂಘರ್ಷದ ವಿವರಣೆ; ರಾಷ್ಟ್ರದ ಉನ್ನತಿಯು ಯುದ್ಧ ಮತ್ತು ಹಿಂಸೆಯಿಂದಲೇ ಸಾಧ್ಯವೆಂಬುದನ್ನು ಇತಿಹಾಸವನ್ನೇ ಉದಾಹರಣೆಯಾಗಿಟ್ಟು ಕಲಿಸಿಕೊಡುವದಾಗಿದೆ. ಹೀಗೆ ಜರ್ಮನಿಯ ಶಿಕ್ಷಣಾಲಯಗಳು ಹಿಟ್ಲರ ಮತ್ತು ಅವನ ರಾಷ್ಟ್ರೀಯ ಸಮಾಜವಾದದ ಪ್ರಚಾರ ಸಂಸ್ಥೆಗಳಾಗಿ ಪರಿಣಮಿಸಿವೆ. ಅವುಗಳಿಗೆ ಶೈಕ್ಷಣಿಕ ಮಹತ್ವವು ಒಂದಿಷ್ಟೂ ಇರುವುದಿಲ್ಲ. ಯುದ್ಧ, ಯುದ್ಧದ ಮೂಲಕ ದೇಶದ ರಕ್ಷಣೆ, ದೇಶದ ರಕ್ಷಣೆಯಾದ ಮೇಲೆ ಸಾಮ್ರಾಜ್ಯವಿಸ್ತರಣೆ, ಇವಿಷ್ಟೇ ಜರ್ಮನಿಯ ಲೋಕಶಿಕ್ಷಣದ ಉದ್ದೇಶಗಳಾಗಿವೆ. ಜರ್ಮನಿಯಲ್ಲಿ ಲೋಕಶಿಕ್ಷಣವು ಹೀಗೆಯೇ ನಡೆದರೆ ಇನ್ನೊಂದು ಯುದ್ಧದಲ್ಲಿ ಜರ್ಮನಿಯು ಭೂಒಂದೇ ಮಣ್ಣುಪಾಲಾಗುವದು, ಅಥವಾ ಏಶ್ಯಾ ಯೂರೋಪ್ ಆಫ್ರಿಕಗಳಲ್ಲಿ ಅದರ ಸಾಮ್ರಾಜ್ಯವು ನಮ್ಮಿಂದ ಊಹಿಸಲಿಕ್ಕಾಗದಷ್ಟು ವಿಸ್ತಾರವಾಗಿ ಅದೇ ಒಂದು ಜಗತ್ತಿನ ಪ್ರಬಲಶಕ್ತಿಯಾಗಿ ಉಳಿಯುವದು.

ಭಾರತಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದ ಮಹೋಪಕಾರ?

ಪ್ರತಿಯೊಬ್ಬ ಪ್ರಜೆಯೂ ವಿದ್ಯಾವಂತನೆಂದಾಗಬೇಕಾದರೆ ಅದು ೪೦೦೦ನೇ ಇಸವಿಯಲ್ಲಿ ಆಗಬಹುದು.

ಇಂದಿನ ಭಾರತೀಯರ ಈ ತೆರನ ಎಲ್ಲಾ ದುರ್ದಿಗೆ ಕಾರಣವು ಬ್ರಿಟಿಷ್ ಚಕ್ರಾಧಿಪತ್ಯ. ಹೊಲಸು, ಕೊಳಕು, ಬಡತನ, ವಿದ್ಯಾವಿಹೀನತೆ ರೋಗರುಜೆಗಳು, ಅನ್ಯಾಯಕೃತ್ಯಗಳು ಇವುಗಳೆಲ್ಲಾ ಇಂದು ಹಿಂದೂದೇಶದಲ್ಲಿನ ಮಹಾಮಾರಿಗಳೆಂದರೆ ಅದು ಬ್ರಿಟನ್ನಿನ ಆಳ್ವಿಕೆಯ ದೆಸೆಯಿಂದ ಎಂದು ಅಮೇರಿಕದ ಪ್ರೊಫೇಸರರಾದ ಬೆಸಿಲ್ ಮೆತ್ಯೂಸ್ ಎಂಬವರು ತಾನೊಂದು ಲೇಖನದಲ್ಲಿ ತೀಕಿಸಿರುವರು. ಇದನ್ನು ವಿಮರ್ಶಿಸುತ್ತಾ ಅಖಿಲ ಭಾರತ ಕಾಂಗ್ರೆಸ್ ತನ್ನ ವಿಚಾರವನ್ನು ತಿಳಿಸಿದೆ: “ಈ ವಿಚಾರಗಳು ಭಾರತಕ್ಕೆ ತಿಳಿದಿಲ್ಲವೆಂದಲ್ಲ. ಸಂಪೂರ್ಣವಾಗಿ ತಿಳಿದಿದೆ. ಆದರೆ ಅದನ್ನುಂಟುಮಾಡಿದ ಬ್ರಿಟನಿನೊಡನೆ ಸಹಕರಿಸದೆ ಇರುವುದೇ ಅದಕ್ಕೆ ಅತೀ ಕಷ್ಟವಾಗಿದೆ”. ಈ ಬೆಸಿಲ್ ಮೆತ್ಯೂಸರ ಲೇಖನವನ್ನು ಓದಿದವರಿಗೆ ಬ್ರಿಟಿಷ ಚಕ್ರಾಧಿಪತ್ಯವು ಅದೇಕೆ ಹಿಂದೂದೇಶಕ್ಕೆ ಮಹಾಮಾರಿಯಂತಿದೆ ಎಂಬ ವಿಚಾರವು ಸಂಪೂರ್ಣ ವ್ಯಕ್ತವಾಗದೆ ಇರದು.

ಇಂದು ಬ್ರಿಟಿಷ್ ಸರಕಾರವು, ಜಗತ್ತಿನ ಬೇರೆ ಅದಾವ ಸರಕಾರವೂ ಪಡೆಯದಷ್ಟು ಹಣವನ್ನು ಭರತಖಂಡದ ಪ್ರಜೆಗಳಿಂದ ಪಡೆಯುತ್ತಿದೆ. ಪ್ರತಿಯೊಬ್ಬ ಪ್ರಜೆಯ ಹುಟ್ಟಿನಲ್ಲಿ ಕೊಂಚವನ್ನು ತನ್ನ ಪಾಲಾಗಿ ಸರಕಾರವು ಪಡೆಯುವ ಬದಲು ಆತನ ಎಲ್ಲವನ್ನೂ ಕೊಂದು ರಕ್ತವನ್ನೂ ಕೂಡ ಹೀರಿ ಸುಖಪಡುತ್ತಿದೆ. ತನ್ನ ದೇಶದ (ಹಿಂದೂದೇಶ ಮಾತ್ರ) ಪ್ರತಿಯೊಬ್ಬ ಮಾನವ ಜೀವಿಯಿಂದ ೩ ಶಿಲ್ಲಿಂಗುಗಳಂತೆ (ಸುಮಾರು 2 ರೂಪಾಯಿ) ತೆರಿಗೆಯನ್ನು ವಸೂಲ್ಮಾಡುತ್ತದೆ. ಇದನ್ನು ಕೊಳ್ಳುವಾಗ ತಾನು ಹಿಂದೂದೇಶದಲ್ಲಿ ಸುರಿಸಿದ ಹಣವನ್ನು ಹಿಂದೆ ಕೊಳ್ಳುತ್ತೇನೆ ಎಂದು ಬ್ರಿಟಿಷ ಸರಕಾರವು ಹೇಳದೆ ಇಲ್ಲ. ಆದರೆ ತಾನು ಸುರಿಸಿದ ಹಣದ ನೂರಾರು ಪಾಲಷ್ಟು ಹಣವು ಬ್ರಿಟನ್ನಿಗೆ ಎಂದೂ ಸಂದುಹೋಗಿದೆ. ಇನ್ನು ಬ್ರಿಟನ್ನಿನ ಆಳ್ವಿಕೆಯನ್ನು ನೋಡಿರಿ. ಅದು ಹಿಂದೂದೇಶದಲ್ಲಿ ತನ್ನ ಮಂದಿಯನ್ನಿಳಿಸಿ ಅವರಿಗೆ ಸಂಬಳ ಮೂಲಕವಾಗಿ ಕೊಟ್ಟು ಖರ್ಚುಮಾಡುವ ಹಣವಾದರೂ ಅತೀ ಹೆಚ್ಚು. ಸಾಧಾರಣ ಹಿಂದೀಯನ ಹುಟ್ಟಿನ (ಆದಾಯದ) ೨೫೦೦ ಪಾಲಿನಷ್ಟು ಹೆಚ್ಚು ಹಣವನ್ನು ವೈಸ್ರಾಯರೂ, ೧೫ ಸಾವಿರ ಪಾಲಷ್ಟು ಗವರ್ನರರುಗಳೂ ಪಡೆಯುತ್ತಿದ್ದಾರೆ. ಅಲ್ಲದೆ ಹಿಂದೂದೇಶದಲ್ಲಿ ಸೈನ್ಯಕ್ಕಾಗಿ ಖರ್ಚುಮಾಡುತ್ತಿರುವ ಹಣವು ಭಯಂಕರ. ಆದರಿಂದಾಗಿ ವಿದ್ಯಾಭ್ಯಾಸ ಮತ್ತು ಆರೋಗ್ಯಗಳಿಗಾಗಿ ವೆಚ್ಚಮಾಡಲು ಅತೀ ಅಲ್ಪ ಹಣವು ಉಳಿಯುವುದು.

ನಾಣ್ಯಚಲಾವಣೆ, ಸಾಲ ಮೂಲಗಳ ಗಳ ವಿಚಾರ ಇವುಗಳು ಅತೀ ವಿಚಿತ್ರವಾದವುಗಳಿಂದ ದೇಶೀಯ ಕೈಗಾರಿಕೆಯು ಹೆಚ್ಚದಂತೆ ಅಲ್ಲದೆ ಸಾಮಾನುಗಳು ಪರರಾಷ್ಟ್ರಗಳಿಗೆ ಸಾಗಿಸಲ್ಪಡದಂತೆ ತಡೆಯುತ್ತವೆ. ಅದ್ದರಿಂದ ಇನ್ನೂ ಹಿಂದೂದೇಶವು ತನಗೆ ಬೇಕಾದ ವಸ್ತುಗಳನ್ನು ಒದಗಿಸಿಕೊಳ್ಳುವ ಕೆಲಸಕ್ಕೆ ಕೈಯಿಕ್ಕುವಬದಲು ಪರರಾಷ್ಟ್ರಗಳಿಗೆ ಕೈಗಾರಿಕೆಗೆ ಬೇಕಾದ ವಸ್ತುಗಳನ್ನು ಒದಗಿಸುವ ರಾಷ್ಟ್ರವಾಗಿ ನಿಂತಿದೆ. ಈ ವಸ್ತುಗಳೆಲ್ಲ ಬ್ರಿಟನ್ನಿಗೆ ಹೆಚ್ಚಾಗಿ ಹೋಗುವುದರಿಂದ ಬ್ರಿಟನ್ನಿನ ಕೈಗಾರಿಕೆಗಳ ಜೀವಾಳ ಭಾರತದಲ್ಲಿದೆ.

ವಿದ್ಯಾಭ್ಯಾಸದ ವಿಚಾರವಾಗಿ ತೆಗೆದುಕೊಂಡರೆ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿದ್ದ ಭಾರತದ ಪ್ರತಿಯೊಬ್ಬನೂ ಓದುಬರಹ ಅರಿತವನಾಗುವ ಕಾಲ ಇನ್ನೂ ಮುಂದೆ ಉಳಿದಿದೆ. ಅದು ಸಾಧಾರಣ ೪೦೦೦ನೇ ಇಸ್ವಿಯಲ್ಲಿ ಪೂರ್ತಿಯಾಗಬಹುದು. ಕಾರಣವೆಂದರೆ ಶಾಲೆಗೆ ಹೋಗಬೇಕಾದ ಜನಸಂಖ್ಯೆಯು ಶೇ! ೧೨!! ಯಾದರೆ ಈಗ ಹೋಗುತ್ತಿರುವ ಸಂಖ್ಯೆ ಶೇ! ೨.

ರೊಮೇನಿಯಾದ ಮಂತ್ರಿಮಂಡಲವು ರದ್ದಾಗಿರುತ್ತದೆ.

ಇಟೆಲಿಯಿಂದ ಮೈತ್ರಿ ಮಂಡಲವೊಂದು ಜಪಾನಿಗೆ ತೆರಳುವುದೆಂದು ತಿಳಿದುಬರುತ್ತದೆ.

ಮೆಕ್ಸಿಕೋವಿನಿಂದ ಸ್ಪೈಯಿನ್ ಸರಕಾರದ ಸಹಾಯಾರ್ಥವಾಗಿ ಧಾರಾಳ ಸಿದಿಮದ್ದು ತೋಪು ಇತ್ಯಾದಿಗಳು ಕಳುಹಿಸಲ್ಪಟ್ಟಿವೆ.

THE

BANK OF MANGALORE LTD.,

ESTD 1931 MANGALORE

Branches -

Panemangalore, Mudabidri & Padubidri

Chairman — **Philip J. Chandran, Esq.,**

Retd Dt Registrar of Joint Stock Companies

On & from 1st of January 1937,

Fixed Deposits will be received at following rates of interest

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly

Saving Bank deposit 3% on daily balances

All kinds of banking business transacted

U. R. PAI, N. . PAI, *Managing Director*

ದಮ್ಮು ಪೂರ್ಣ ಗುಣವಾಗುವ ಉಪಾಯವನ್ನೇ ಕೈಕೊಳ್ಳಬೇಕು.

ಕೆಮ್ಮು ಮತ್ತು ಕಫ ವಿಕಾರವಿದ್ದವರು "ಎಫೆಡ್ರಿನ್" ಮುಂತಾದ ತಾತ್ಕಾಲಿಕ ಆರಾಮವನ್ನೀಯುವ ಔಷಧಗಳನ್ನು ಎಂದೂ ಉಪಯೋಗಿಸಬಾರದು. ಈ ಔಷಧಗಳು ರೋಗವನ್ನು ಪೂರ್ಣ ಗುಣಪಡಿಸಲು ನಿರುಪಯೋಗಿ ಎಂಬುದು ನಿಶ್ಚಿತವು ಮತ್ತು ಇಂಥ ಔಷಧಗಳು ಶ್ವಾಸನಲಿಕೆಯಲ್ಲಿ ಹೆಚ್ಚಿಗೆ ಸೋವುಂಟುಮಾಡಿ ರೋಗವನ್ನು ಹೆಚ್ಚಿಸುತ್ತವೆ.

ರೋಗಲಕ್ಷಣವನ್ನು ಪೂರ್ಣ ವಿಚಾರಮಾಡಿ, ರೋಗಿಗೆ ಬೇಗನೆ ಮತ್ತು ಸಾವಧಾನವಾಗಿ ಪೂರ್ಣ ಗುಣಮಾಡುವ ಔಷಧವೇ ನಿಜವಾದ ಉಪಾಯವು ಮತ್ತು ಇದೇ ದೃಷ್ಟಿಯಿಂದ **ಡಾ॥ ಪುರೋಹಿತ** ಇವರ **"ಶ್ವಾಸಹಾರಿ ಪ್ಲೇನ" ಮತ್ತು "ಶ್ವಾಸಹಾರಿ ಕಾಂಪಾವುಂಡ"** ಈ ಎರಡೂ ಔಷಧಗಳು ದಮ್ಮು ವಿಕಾರವನ್ನು ಪೂರ್ಣ ಗುಣಪಡಿಸುವ ದಿವ್ಯೌಷಧಿಯಲ್ಲಿ ಅಗ್ರೇಸರವೆನಿಸಿವೆ. ದಮ್ಮು, ಶ್ವಾಸ ಮುಂಜಾನೆಯ ಏಳಕಿ ಗಂಟಲು ಕೆರೆಯುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗ ಗುಣಪಡಿಸಲು "ಶ್ವಾಸಹಾರಿ ಪ್ಲೇನ" ಉಪಯೋಗಿಸಬೇಕು. ಅಮ್ಲಪಿತ್ತವಿದ್ದವರು "ಶ್ವಾಸಹಾರಿ ಕಂಪಾವುಂಡ" (ಕೆಂಪು ಪ್ಯಾಕಿಂಗ) ಉಪಯೋಗಿಸುವುದು ಹೆಚ್ಚು ಲಾಭಕರ. ಬಹುತರವಾಗಿ ಎಲ್ಲಾ ಶಹರುಗಳಲ್ಲಿ ಕೆಮಿಸ್ಟ ಸ್ಟೋರ್ಸ ಮತ್ತು ಅಂಗಡಿಗಳಲ್ಲಿ ಈ ಔಷಧಗಳು ರೂ 2, 3, 8, 0 ಮತ್ತು 6 ಹೀಗೆ ಬೇರೆ ಬೇರೆ ಬೆಲೆಯ 9 ಪ್ಯಾಕಿಂಗ್ ಮಾರಲಿಕ್ಕೆ ಸಿಗುತ್ತವೆ.

ಮಂಗಳೂರು — ದಿ ಪೊಪ್ಯುಲರ್ ಸ್ಟೋರ್ಸ್ ರಥಬೀದಿ.

ವಿಜಾಪುರ { ಬಾಯೋಕೆಮಿಕಲ ಫಾರ್ಮಸಿ, ಯು ಬಿ ಬಜಾರ

ಹುಬ್ಬಳ್ಳಿ, ಗದಗ, ಧಾರವಾಡ } ಹುಬ್ಬಳ್ಳಿ ಫಾರ್ಮಸಿ

ಡಾ॥ ಪುರೋಹಿತ ಫಾರ್ಮಸಿ, ಕೊಲ್ಹಾಪುರ



Distributors for South Kanara—

Raghavera Ranga Pai, Car Street Mangalore

ಕುಂದಾಪ್ರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

S. U. N. & Co.,

Silk Merchants,

Chaukhamba BENARES CITY.

ಜಗಿ ಜರಿಯ (ಕಾಶಿ) ಬನಾರಸ್ ಸೀರೆ ತಮಗೆ ಬೇಕಾದರೆ ನಮ್ಮನ್ನು ಕೇಳಿರಿ. ಒಳ್ಳೇ ಜರಿ ಕಾಗದ ತುಂಬ ಸಲಭ ಮಾತ್ರ ರೂ 18 ಮೊಳದ 2 ಅಗಲದ ಸಣ್ಣ ಬುಟ್ಟಿ ಸೀರೆಗಳು 1ಕ್ಕೆ ರೂ 40 ರಿಂದ 150 ಸಾಧಾರಣ ಜರದ 18 ಮೊಳ ಸಣ್ಣ ಬುಟ್ಟಿ ಸೀರೆಗಳು ರೂ. 35 ರಿಂದ ರೂ 55 ವರೆಗೆ ಸಾದಾ ಸೀರೆ 18 ಮೊಳ ರೂ 32 ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35 ರ ವರೆಗೆ ಬೇರೆ ಮಾಲುಗಳ ಪಟ್ಟಿ ಬೇಕಾಗು ಉಚಿತವಾಗಿ ಕಳುಹಿಸಲಾಗುವದು.

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,

ಚೌಕಂಬಾ, ಬೆನಾರೆಸ್ ಸಿಟಿ

ನೋಟೀಸು.

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ, ದ. ಕ.

ಮೇಲಿನ ಹೆಸರಿನಿಂದ ಕಟಪಾಡಿಯಲ್ಲಿ ಸ್ಥಾಪಿಸಲ್ಪಟ್ಟ ಔಷಧಾಲಯವು ದಿನೇ ದಿನೇ ಜನ ಕೃಪೆಗೆ ಪಾತ್ರವಾಗಿ ನಿರೀಕ್ಷೆಗಿಂತಲೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿರುವುದರಿಂದ ಸದ್ರಿ ಸಂಸ್ಥೆಯಿಂದ ಜನಸಮುದಾಯವು ಇನ್ನೂ ಹೆಚ್ಚಿನ ಪ್ರಯೋಜನ ಪಡೆಯುವಂತೆ ಅದನ್ನು 'ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್' ಎಂಬ ಹೆಸರಿನಿಂದ ಲಿಮಿಟೆಡ್ ಕಂಪೆನಿಯಾಗಿ ಪರಿವರ್ತಿಸಿರುತ್ತೇವೆ. ನಮ್ಮ ಯಾವತ್ತು ಏಜಂಟರು, ಸ್ಟೋಕಿಸ್ಟರು, ಪ್ರತಿನಿಧಿಗಳು ಮತ್ತು ಗಿರಾಕಿಗಳು ಇನ್ನು ಮುಂದೆ "ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್" ಕಟಪಾಡಿ ದಕ್ಷಿಣ ಕನ್ನಡ, ಎಂಬ ಹೆಸರಿಗೆನೇ ಪತ್ರವ್ಯವಹಾರ ನಡೆಸಬೇಕು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ

[illegible]

... 'ಅಥರ್ವ' ಅಥ ಸಂಪೂರ್ಣ ಶಕ್ತಿಯು. ಮನುಷ್ಯನ ಶ್ರೇಷ್ಠತೆಗೆ ಅವನಲ್ಲಿ ಅಡಗಿರುವ ಅವನ ಆ ವಿಚಿತ್ರ ವಿದ್ಯುತ್ ಶಕ್ತಿಯೇ ಕಾರಣವಾಗಿದೆ. ಅವನ ಸ್ಥೂಲ ಶರೀರವು ಮಾಡುವ ಬೇರೆ ಚಿತ್ರವಿಚಿತ್ರ ಅದ್ಭುತ ಕಾರ್ಯಗಳಿಗೆ ಕೂಡ ಆ ಶಕ್ತಿಯು ಕಾರಣವಾಗಿದೆ. ಅದನ್ನೇ ಮನೋಬಲವೆಂದು ಕರೆಯುವರು. ಮನೋಬಲದಿಂದಾಗಿಯೇ ಮನುಷ್ಯನು ಮನುಷ್ಯನೆನ್ನಿಸಿಕೊಳ್ಳುತ್ತಾನೆ. ಅದಿಲ್ಲದಿರುತ್ತಿದ್ದರೆ ಅವನೂ ಎರಡು ಕಾಲಿನ ಒಂದು ಮೃಗವಾಗುತ್ತಿದ್ದನು.

ಈ ವಿಷಯವನ್ನು ನಾವು ಈಗ ತಿಳಿದುಕೊಳ್ಳುವುದಕ್ಕೆ ಸಾವಿರಾರು ವರ್ಷಗಳ ಮೊದಲು ನಮ್ಮ ಪ್ರಾಚೀನ ಮಹರ್ಷಿಗಳು ಕಂಡುಕೊಂಡಿದ್ದರು. ಎಷ್ಟೋ ಸಹಸ್ರ ವರ್ಷಗಳ ಮೊದಲು ಅವರು—'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ'—ಅಂದರೆ ಮನುಷ್ಯನ ಬಂಧನಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣವೆಂದು ಹೇಳಿ ಮನಸ್ಸಿನ ಮಹಾತ್ಮೆಯನ್ನು ತೋರಿಸಿಕೊಟ್ಟಿದ್ದರು. ನಮ್ಮ ಈಗಿನ ಪರಿಸ್ಥಿತಿ, ವಾತಾವರಣಕ್ಕೆ ನಾವು—ನಮ್ಮ ಮನಸ್ಸು ಕಾರಣವಾಗಿದೆ. ನಮ್ಮ ಮನಸ್ಸಿನ ಆಲೋಚನೆಗಳು ನಮ್ಮ ಕಾರ್ಯದ ಕಾರಣಗಳಾಗುತ್ತವೆ. ಆ ಆಲೋಚನೆಗಳ ಪರಿಣಾಮವು ನಾವು ಮಾಡುವ ಕಾರ್ಯಗಳಾಗುತ್ತವೆ. ಹೀಗೆ ನಮ್ಮ ಆಲೋಚನೆಗಳಿಗೂ ನಾವು ಮಾಡುವ ಕಾರ್ಯಗಳಿಗೂ ಕಾರ್ಯಕಾರಣ ಸಂಬಂಧವು ಇರುತ್ತದೆ. ಹೀಗೆ ನಮ್ಮ ಮನೋಬಲದ ಮಹತ್ವವನ್ನು ನಾವು ತಿಳಿಕೊಂಡದ್ದಾದರೆ ನಮ್ಮ ಉನ್ನತಿಯು ಬಹು ಸುಲಭಸಾಧ್ಯವಾಗುವುದು.

ಮನಸ್ಸಿನ ಚಿಂತನೆಯಿಂದ ಸಜೀವ ನಿರ್ಜೀವ ಎಲ್ಲ ಪದಾರ್ಥಗಳ ಮೇಲೆ ಪರಿಣಾಮವಾಗುತ್ತದೆ. ಸಜೀವ ನಿರ್ಜೀವ ಎಂಬ ಭೇದವಿಲ್ಲದೆ ಎಲ್ಲ ಸೃಷ್ಟಪದಾರ್ಥಗಳು ಚೇತನಮಯವಾಗಿರುವುದು ಶೋಧನೆಗಳಿಂದ ಸತ್ಯವೆಂದು ಕಂಡು ಬಂದಿದೆ. ಆದ್ದರಿಂದ ಮನಸ್ಸಿನ ಆಲೋಚನೆಯ ಪರಿಣಾಮವು ಎಲ್ಲ ಸೃಷ್ಟ ಪದಾರ್ಥಗಳ ಮೇಲೆ ಉಂಟಾಗುವುದು ಆಶ್ಚರ್ಯಕರವಲ್ಲ. ಮನಸ್ಸಿನ ಶಕ್ತಿಯು ಅಪೂರ್ವವಾದದ್ದು. ಯಾವಾಗಲೂ ಒಂದೇ ಸ್ವಭಾವದ ಮನಸ್ಸುಗಳು ಒಂದಾಗುತ್ತವೆ; ಭಿನ್ನ ಸ್ವಭಾವದ ಮನಸ್ಸುಗಳು ದೂರದೂರವಾಗುತ್ತವೆ; ಮನಸ್ಸುಗಳ ಈ ಚಟುವಟಿಕೆಗಳು ಯಾವಾಗಲೂ ನಡೆಯುತ್ತ ಇರುತ್ತವೆ. ಬೇರೆ ಬೇರೆ ಮನಸ್ಸುಗಳು ತಮ್ಮ ಸ್ವಭಾವಾನುಗುಣವಾಗಿ ತಮಗನುಕೂಲವಾದ ಬೇರೆ ಬೇರೆ ಮನಸ್ಸುಗಳ ಮೇಲೆ ತಮ್ಮ ಪ್ರಭಾವವನ್ನು ಹಾಕುತ್ತಲೇ ಇರುತ್ತವೆ. ಇದು ಸಾಧಾರಣವಾಗಿ ನಮ್ಮ ಅನುಭವಕ್ಕೆ ಬರುವುದಿಲ್ಲ. ಆದರೆ ಅಭ್ಯಾಸದಿಂದ ತನ್ನ ಮನೋಬಲವನ್ನು ಬಹಳವಾಗಿ ಬೆಳೆಸಿಕೊಂಡ ಯೋಗಿಯು ತನ್ನ ಮನಸ್ಸಿನ ಪ್ರಭಾವದಿಂದ ಅದ್ಭುತ ಕಾರ್ಯಗಳನ್ನು ಸಾಧಿಸುವಾಗ ನಾವು ಬೆರಗಾಗುತ್ತೇವೆ. ಅದರಲ್ಲಿ ಬೆರಗಾಗುವ ಸಂಗತಿಗಳೇನೂ ಇರುವುದಿಲ್ಲ. ಅಭ್ಯಾಸದಿಂದ ನಾವು ಇತರರಿಗೆ ತೋರುವ ರೀತಿಯಲ್ಲಿ ಇತರರ ಮೇಲೆ ನಮ್ಮ ಮನಸ್ಸಿನ ಪ್ರಭಾವವನ್ನು ಬೀರಿಸಬಹುದು.

[illegible] ... ನಿಗ್ರಹಿಸುವುದು ಸಾಧ್ಯವಾಗುತ್ತದೆ. ಅದರ ಶಕ್ತಿಗಳು ಚೆದರಿಹೋಗುವುದರಿಂದ ... ಮನುಷ್ಯನು ದುರ್ಬಲನಾಗುತ್ತಾನೆ. ಪರಂತು ಮನುಷ್ಯನು ಸಬಲನಾಗಬೇಕಾದರೆ, ತನ್ನ ಮನೋಬಲವನ್ನು ಬೆಳೆಸಿಕೊಳ್ಳಬೇಕಾದರೆ ಮನಸ್ಸನ್ನು ಅಂತರ್ಮುಖ ಮಾಡಿ ನಿಗ್ರಹಿಸಬೇಕು; ಧಾರಣ ಧ್ಯಾನಗಳ ಮೂಲಕ ಅದಕ್ಕೆ ಅಭ್ಯಾಸ ಕೊಡಬೇಕು, ಮನಸ್ಸಿನ ವ್ಯಾಯಾಮ ಮಾಡಬೇಕು. ಆಗ ಅದರ ಶಕ್ತಿಯು ಬೆಳೆಯುವದು; ಮನುಷ್ಯನು ನಿಜಕ್ಕೂ ಮನುಷ್ಯನಾಗುವನು.

ಮನಸ್ಸನ್ನು ನಿಗ್ರಹಿಸುವುದು ಸುಲಭವಲ್ಲ. ಸತತ ಅಭ್ಯಾಸದಿಂದ ಮಾತ್ರ ಅದು ಸಾಧ್ಯ. ಪ್ರತಿದಿನವೂ ಸ್ವಲ್ಪ ಹೊತ್ತಿನ ತನಕ ಕ್ರಮಪ್ರಕಾರ ಒಂದು ಕಡೆ ಶಾಂತವಾದ ಸ್ಥಳದಲ್ಲಿ ಕೂತು, ಪ್ರಪಂಚವನ್ನೆಲ್ಲ ಮರೆತು ಪರಮಾತ್ಮ ಸ್ವರೂಪವನ್ನು ಮನಸ್ಸಿನಲ್ಲಿ ಧಾರಣ ಮಾಡಿ ಧ್ಯಾನಿಸುವದರಿಂದ ಮಾತ್ರ ಇದು ಸಾಧ್ಯವಾಗುವುದು. ಇದನ್ನೇ ಯೋಗವೆನ್ನುತ್ತಾರೆ. ಯೋಗವನ್ನು ಯೋಗದ ಪುಸ್ತಕಗಳಲ್ಲಿ ವಿವರವಾಗಿ ವರ್ಣಿಸಿದ್ದಾರೆ.

ಪ್ರಪಂಚದ ಹಿಂದಿನ ಈಗ ಈಗಿನ ಎಷ್ಟು ಮಂದಿ ಪ್ರಸಿದ್ಧಪುರುಷರು ಯೋಗಸಾಧನೆಯಿಂದ ಪ್ರಸಿದ್ಧರಾದರು, ಪುರುಷೋತ್ತಮರೆನ್ನಿಸಿಕೊಂಡವರು ಎಂಬ ಸಂಗತಿಯು ಎಲ್ಲರಿಗೆ ತಿಳಿದಿರುವುದಿಲ್ಲ. ಇದುವರೆಗೆ ಅದು ಬಹಳ ಮಟ್ಟಿಗೆ ಗುಪ್ತವಾಗಿಯೇ ಇದೆ. ಯೋಗವನ್ನು ಕಂಡುಕೊಂಡವರು ಭಾರತದ ಕೃತಯುಗದ ಮಹರ್ಷಿಗಳು. ಆದರೆ ಕಲಿಯುಗದ, ಅಲ್ಲ—೨೦ನೇ ಶತಮಾನದ ಪಾಶ್ಚಾತ್ಯರು ಕೂಡ ಯೋಗಾಭ್ಯಾಸ ಮಾಡುತಿದ್ದರೆಂಬುದನ್ನು ಕೇಳಿ ನೀವು ಆಶ್ಚರ್ಯಪಡುವಿರಿ. ನಾವು ಮರೆತಿರುವುದನ್ನು ಅವರು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆ? ಅಂದರೆ ಅವರು ಗುಣಗ್ರಾಹಿಗಳು. ಉತ್ತಮವಾದುದನ್ನು ಗ್ರಹಿಸಿಕೊಳ್ಳಲಿಕ್ಕೆ—ಅದು ಎಲ್ಲಿಂದ ಯಾವಾಗ ಬಂದುದಾದರೂ ಆಗಲಿ—ಅವರು ಹಿಂದೆ ಮುಂದೆ ನೋಡುವದಿಲ್ಲ.

ಬರೇ ಇಪ್ಪತ್ತು ವರ್ಷಗಳ ಹಿಂದಿನ ಕಥೆ. ಇಂಗ್ಲಿಷ ಜರ್ಮನ ಯುದ್ಧದ ಕಾಲದಲ್ಲಿ ಇಂಗ್ಲಿಷರ ಕಡೆಯ ಪ್ರಧಾನ ಸೇನಾಧಿಪತಿಗಳಾಗಿದ್ದ ಕಿಚನರ ಪ್ರಭುಗಳ ಹೆಸರನ್ನು ನೀವು ಕೇಳಿರಬಹುದು. ಪ್ರಧಾನ ಸೇನಾಧಿಪತಿಗಳಾಗಿ ಅವರು ಎಷ್ಟು ಪ್ರಸಿದ್ಧರೋ ಯೋಗಿಗಳಾಗಿ ಅವರು ಅಷ್ಟು ಪ್ರಸಿದ್ಧರಲ್ಲ. ಆದರೂ ಕೂಡ ಅವರೂ ಒಬ್ಬ ಯೋಗಿಗಳಾಗಿದ್ದರು. ಹಿಂಪಶಾಯರ ಯುದ್ಧದ ಹಡಗಿನೊಂದಿಗೆ ಅವರೂ ಮುಳುಗಿ ಸತ್ತ ವಿಷಯವು ಒಂದು ಆಶ್ಚರ್ಯವಾಗಿಯೇ ಉಳಿದಿದೆ. ಆದರೆ ಹಾಗೆ ಅವರು ಸಾಯುವ ಮೊದಲು, ಹಿಂದುಸ್ಥಾನ ಮತ್ತು ಈಜಿಪ್ತದ ಇಂಗ್ಲಿಷರ ಸೇನಾಧಿಪತಿಗಳಾಗಿದ್ದಾಗ ಭಾರತದ ಯೋಗಶಾಸ್ತ್ರದ ಅಧ್ಯಯನ ಮಾಡಿ ಯೋಗದ ಅಭ್ಯಾಸ ಮಾಡುತಿದ್ದರೆಂಬುದು ಅವರ ಸಾವಿಗಿಂತ ಆಶ್ಚರ್ಯಕ್ಕಿಂತಲೂ ದೊಡ್ಡ ಆಶ್ಚರ್ಯವಾಗಿದೆ. ಆದರೆ ಅದು ಪೂರ್ಣ ಸತ್ಯ. ಆ ಕಾಲದಲ್ಲಿ ನೈಲ ನದಿಯಲ್ಲಿ ಆಸ್ವಾನ ಆಣೆಕಟ್ಟಿಗೆ ಸಮೀಪದಲ್ಲಿರುವ ಒಂದು ದ್ವೀಪದಲ್ಲಿ ಅವರು ಬಿಡುವಿದ್ದಾಗಲೆಲ್ಲ ಹೋಗಿ ಸಾಧಿಸುತಿದ್ದರು. ಕಿಚನರರ ಜೀವಮಾನ ಕಾಲದಲ್ಲಿ ಆ ದ್ವೀಪವನ್ನು ಕೇವಲ ಅವರ ಉಪಯೋಗಕ್ಕಾಗಿಯೇ ಬಿಟ್ಟುಕೊಟ್ಟಿದ್ದರು. ಆ ದ್ವೀಪದಲ್ಲಿ ಒಂದು ತೋಟ, ತೋಟದೊಳಗೊಂದು ಪರ್ಣಶಾಲೆಯನು ಕಟ್ಟಿಕೊಂಡು

[illegible] ... ಈ ಕಲ ... ೫ನೇ ಅಧಿವೇಶನ ... ಕೂಡುವ ... ಪಲ್ಲೀಗ್ರಾಮದಲ್ಲಿಯೇ ... ತಾರೀಖುಗಳಲ್ಲಿ ಸೇರುವುದು ನಿಶ್ಚಯವಾಗಿದೆ. ಪರಿಷತ್ತು ಇನ್ನು ಸ್ವಲ್ಪ ದಿನಗಳಲ್ಲಿಯೇ ಕೂಡಲಿರುವುದರಿಂದ ಪ್ರಾಂತಿಕ ಪ್ರತಿನಿಧಿಗಳನ್ನು ಜಾಗ್ರತೆಯಾಗಿ ಚುನಾಯಿಸಿ ಕಳುಹಿಸಬೇಕು. ಆ ಸಂದರ್ಭದಲ್ಲಿ ಕರ್ನಾಟಕ ಪ್ರಾ. ಕಾ. ಕಮಿಟಿಯ ಘಟನೆಯ ಕಟ್ಟಳೆಯ ಕಲಮು ೪ರ ಪ್ರಕಾರ ಯಾರೇ ಕಾಂಗ್ರೆಸ್ ಸದಸ್ಯರು ತಾವು ವಾಸಿಸುತ್ತಿರುವ ಪ್ರಾಂತದ ಕಾ. ಕಮಿಟಿಯವರು ಆರಿಸಿಕೊಟ್ಟಲ್ಲಿ ಪ್ರತಿನಿಧಿಯಾಗಬಲ್ಲರು. ಅದೇ ಕಲಮಿನ ಪ್ರಕಾರ ಪ್ರತಿನಿಧಿಯ ಫೀಯು ಪ್ರತಿಯೊಬ್ಬನಿಗೆ ೨ ರೂಪಾಯಿಗಿಂತ ಕಡಿಮೆ ಇರಲಾರದು. ಇನ್ನು ಕಟ್ಟಳೆಯ ೮ನೇ ಕಲಮಿನಂತೆ ಪ್ರತಿಯೊಂದು ಜಿಲ್ಲೆಯವರು ತಮ್ಮಲ್ಲಿ ಆದ ಕಾಂಗ್ರೆಸ್ ಸದಸ್ಯರ ಪ್ರಮಾಣದ ಮೇರೆಗೆ ೧೦೦ಕ್ಕೆ ಒಬ್ಬರಂತೆ ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಅವಕಾಶವಿದೆ. ಕಾರಣ ಆಯಾ ಜಿಲ್ಲಾ ಕಾ. ಕಮಿಟಿಯವರು ಈ ಕೆಳಗೆ ಕಾಣಿಸಿದ ಸಂಖ್ಯೆಯ ವರೆಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡಬಹುದು:—

ಧಾರವಾಡ	೨೫[illegible]
ಬೆಳಗಾವಿ	೨೬೩
ಕಾರವಾರ	೧೯೦
ಮಂಗಳೂರು (ದ. ಕ.)	೧೬೪
ವಿಜಾಪುರ	೯[illegible]
ಬಳ್ಳಾರಿ	೨[illegible]
ಕೊಡಗು	೧[illegible]
ಚಿತ್ರದುರ್ಗ	೩
ಬೆಂಗಳೂರು	೩
ಮೈಸೂರು	[illegible]
ಶಿವಮೊಗ್ಗಾ	[illegible]
ಬೆಂಗಳೂರು ದಂಡು	೩
ಕಡೂರು	೦
ಹಾಸನ	[illegible]
ತುಮಕೂರು	[illegible]
ಕೋಲಾರ	[illegible]
ಪ್ರತಿನಿಧಿಗಳ ಒಟ್ಟು ಸಂಖ್ಯೆ	೧೧[illegible]

ಆಯಾ ತಾಲೂಕು ಕಾಂಗ್ರೆಸ್ ಕಮಿಟಿಯವರು ತಮ್ಮ ಕಮಿಟಿಗೆ ಸದಸ್ಯರನ್ನು ಚುನಾಯಿಸುವಾಗ್ಗೆ ಈ ಚುನಾವಣೆಯನ್ನೂ ಮುಗಿಸುವುದು ಉತ್ತಮ. ವೇಳೆಯ ಅಭಾವದ ಮೂಲಕ

ಕಿಚನರರು ಅಲ್ಲಿ ಪ್ರಾಚೀನ ಋಷಿಮುನಿಗಳ ಜೀವನಕ್ರಮವನ್ನನುಸರಿಸಿ ಯೋಗಾಭ್ಯಾಸ ಮಾಡುತ್ತಿದ್ದರು. ಅವರ ಮೆಚ್ಚುಮೆಚ್ಚಿನ ಅಭ್ಯಾಸವು — ಯಾವುದಾದರೊಂದು ವಸ್ತುವನ್ನು ನಟ್ಟದೃಷ್ಟಿಯಿಂದ ದಿಟ್ಟಿಸಿ ನೋಡುತ್ತ ಧ್ಯಾನಮಾಡುವುದಾಗಿತ್ತಂತೆ. ಈ ಅಭ್ಯಾಸದಿಂದ ಅವರು ಮನಸ್ಸನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಅಪೂರ್ವ ಯೋಗಶಕ್ತಿಯನ್ನು ಸಂಪಾದಿಸಿಕೊಂಡಿದ್ದರಂತೆ.

ಸೃಷ್ಟಿಪತಿ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯುವ ಆಸೆ ಪ್ರತಿಯೊಬ್ಬನಿಗೂ ಇದೆ. ಆದರೆ ಅವರವರ ಹೃದಯದಲ್ಲಿಯೇ ವಾಸ ಮಾಡಿಕೊಂಡಿರುವ ಆ ಪರಮಾತ್ಮನನ್ನು ಧಾರಣ ಧ್ಯಾನಗಳ ಮೂಲಕ ಗುರುತಿಸಿಕೊಂಡು ಪುರುಷೋತ್ತಮರಾಗುವ ಭಾಗ್ಯವು ಎಷ್ಟು ಮಂದಿಯ ಹಣೆಯಲ್ಲಿ ಬರೆದಿರುತ್ತದೆ! ಇಲ್ಲಿ ಅಂಥವರು ಕಿಚನರ ಪ್ರಭುಗಳಂತೆ ಕೆಲವೇ ಮಂದಿಯಾದರೂ ಇವರು ಉಳಿದವರಿಗೆ ಮಾರ್ಗದರ್ಶಕರಾಗಿರುವರು; ಆ ದೇಶ ಈ ದೇಶದವರೆಂಬುದಿಲ್ಲದೆ ಇಡೀ ಜಗತ್ತಿಗೆ ಸೇರಿದ ವಿಭೂತಿ ಪುರುಷರಾಗಿರುವರು.

[illegible] ... ಶ್ರೀ ... ದ್ರಾ. ... ಶ್ರೀಕೃಷ್ಣಕೇಸರಿ,

ಗೌ. ಕಾರ್ಯದರ್ಶಿ.

ಹೊಟ್ಟೆಹುಣ್ಣುಗಳು ಗುಣವಾದುವು

ಮಿಸೆಸ್ ನೊರ್ಮನಳು, ಈಗ ಸಂತುಷ್ಟ ಹೊಂದಿದವಳಾಗಿದ್ದಾಳೆ. ಬಹಳ ಸಮಯ, ಸಂಕಟ ಅನುಭವಿಸಿದ ಬಳಿಕ, ಕೊನೆಗೆ ಗುಣಹೊಂದಿದಳು. "ಹೊಟ್ಟೆ ಹುಣ್ಣುಗಳಿಂದ ಹೇಗೆ ಗುಣಹೊಂದಿದೆನೆಂಬುದಾಗಿ, ನಿಮಗೆ ತಿಳಿಸಬೇಕೆಂದು ನನಗೆಣಿಸುತ್ತದೆ.

"ಅನೇಕ ವರ್ಷಗಳಿಂದ ಹೊಟ್ಟೆವ್ರಣಗಳಿಂದ ಪೀಡಿತನಾಗಿದ್ದೆನು. ಅನೇಕ ಔಷಧಿಗಳನ್ನು ಸೇವಿಸಿದರೂ, ಶಮನವಾಗಲಿಲ್ಲ. ಕಳೆದ ಒಕ್ಟೋಬರದಲ್ಲಿ ಹೊಟ್ಟೆ ವ್ರಣಗಳಿಂದ, ನಾನು ಅತ್ಯಂತ ಸಂಕಟವನ್ನು ಹೊಂದುವವಳಾದೆ. ಪರೀಕ್ಷಾರ್ಥವಾಗಿ ಮೆಕ್ಲೀನ್ ಬ್ರೇಂಡ್ ಹುಡಿಯನ್ನು ತರಲು, ನನ್ನ ಪತಿಯೊಡನೆ ಹೇಳಿಕೊಂಡೆನು. ಬರೇ ಎರಡು ಡೋಸುಗಳ ಸೇವನೆಯಿಂದ, ನನಗೆ ಶಮನವು ದೊರಕಿತು. ನಂತರ, ಪ್ರತಿರಾತ್ರೆ ಮಲಗುವ ಮೊದಲು, ಒಂದಿಷ್ಟು ಮೆಕ್ಲೀನ್ ಹುಡಿಯನ್ನು ಸೇವಿಸುವುದು ನನ್ನ ಕ್ರಮವು. ಅಲ್ಲದೆ ಸಂಕಟವು ತಲೆ ಎತ್ತಿದರೆ, ಆಗಲೂ ಮೆಕ್ಲೀನ್ ಹುಡಿಯನ್ನು ಸೇವಿಸಿದರೆ ಸಂ-ಕೂಡಲೆ ಶಮನವು ದೊರಕುವುದು. ಹೊಟ್ಟೆ ಸಂಕಟ ಪೀಡಿತರೆಲ್ಲರೂ ಈ ಪುಡಿಯನ್ನು ಉಪಯೋಗಿಸಬಹುದಾಗಿ ಈ ಮೂಲಕ ನನ್ನ ಶಿಫಾರಸು."

ಹೊಟ್ಟೆಯ ಪೀಡೆಗಳು ಯಾವುದೇ ತರದ್ದಾಗಿರಲಿ, ಮೆಕ್ಲೀನ್ ಬ್ರೇಂಡಿನ ಶ್ರೇಷ್ಠ ಗುಣಗಳಿಂದಾಗಿ ಒಡನೆ ಸುಖದಾಯಕ ಶಮನವು ದೊರಕುವುದು. ಅನೇಕರು ಅತ್ಯಂತ ಭಯಂಕರ ಹೊಟ್ಟೆ ಪೀಡೆಗಳನ್ನು ಪೆಟ್ಟಿಗೆಯ ಮೇಲೆ ಮತ್ತು ಬಾಟ್ಲಿಯ ಮೇಲೆ

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆ ಯಾ ಪೆಟ್ಟಿಗೆಯನ್ನೇ ಪಡಕೊಳ್ಳಿರಿ.

ಅಂತಹ ನಮೂನೆಯ ಕಡಿಮೆ ದರದ ಪರ್ಯಾಯ ಪುಡಿಗಳನ್ನು ಪಡೆದು ಮೋಸಹೋಗಬೇಡಿ. ಇದು ಬಿಲ್ಲೆಯಾಗಿ ದೊರಕುವುದಿಲ್ಲ. ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಪಡೆಯಲು ಕಷ್ಟವಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಜೆ. ಎಲ್. ಮೋರಿಸನ್, ಸನ್ ಎಂಡ್ ಜೋನ್ಸ್, (ಇಂಡಿಯಾ) ಲಿಮಿಟೆಡ್

ಫೋರ್ಬ್ಸ್ ಬಿಲ್ಡಿಂಗ್, ಹೋರ್ನಬಿ ರೋಡ್, ಮುಂಬಯಿ.

S. No. 73.